# ಹರಿದಾಸರು ಕಂಡ ಶ್ರೀನಿವಾಸ



46969

# ಹರಿದಾಸರು ಕಂಡ ಶ್ರೀನಿವಾಸ

ಸಂಪಾದಕರು
ಹೊ. ರಾ. ಸತ್ಯನಾರಾಯಣ ರಾವ್
ವೈ. ಎನ್. ಗುಂಡೂರಾವ್

ವಿಜಯ ಪ್ರಕಾಶನ
೧೨೩೧(೬೮೩), ೧೩ನೇ ಅಡ್ಡ ರಸ್ತೆ
ಗಿರಿನಗರ, ಬೆಂಗಳೂರು-೮೫.

"This book is published with the Financial assistance of Tirumala Tirupathi Devasthanams under their scheme aid to publish religious books"

**HARIDASARU KANDA SRINIVASA** : A collection of Devotional songs collected by Sri.Ho.Ra.Sathyanarayana Rao and Sri.Y.N.Gundu Rao, published by Vijaya Prakashana, 1231 (683), 13th cross, II Phase, Girinagar, Bangalore-560 085. Ph:(080) 6722731.

First Edition : 1998

NR44
35N98

Pages : 16 + 232

Price : Rs.75/-

SRI VENKATESWARA
CENTRAL LIBRARY &
RESEARCH CENTRE
Acc. No..............................
Date.............................
TIRUPATI

ಹಕ್ಕುಗಳು : ಸಂಪಾದಕರು

ಮುಖಪುಟ : ಶ್ರೀ ವಾದಿರಾಜ್ ಒಡೆಯರ್

ಡಿ.ಟಿ.ಪಿ : ಶ್ರೀಮತಿ ಸವಿತಾ ಶರತ್

ಮುದ್ರಣ : ಸುಪ್ರೀಮ್ ಆಫ್‌ಸೆಟ್ ಪ್ರಿಂಟರ್ಸ್
ಜೆ.ಪಿ. ನಗರ, ಬೆಂಗಳೂರು-೭೮
ದೂರವಾಣಿ : ೬೬೩೯೯೦೦

# ಪ್ರಸ್ತಾವನೆ

ಕನ್ನಡ ಹರಿದಾಸ ಸಾಹಿತ್ಯ, ಇಡೀ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಅತ್ಯಂತ ಮಹತ್ವದ ಸ್ಥಾನ ಪಡೆದಿದೆ. ಮಧ್ವಾಚಾರ್ಯರೇ ಹರಿದಾಸ ಸಾಹಿತ್ಯಕ್ಕೆ ಮೂಲಪ್ರೇರಣೆ. ಗೋಪೀಚಂದನದಲ್ಲಿದ್ದ ಕೃಷ್ಣನನ್ನು ಮಧ್ವಾಚಾರ್ಯರು ಎತ್ತಿಕೊಂಡು ಭಕ್ತಿಪುಳಕದಿಂದ ಭಾವತನ್ಮಯರಾಗಿ ಹಾಡುತ್ತಾ, ಕುಣಿಯುತ್ತಾ ಸ್ತುತಿಸಿದ ಭಾವಗೀತಾಂಜಲಿಯೇ ದ್ವಾದಶಸ್ತೋತ್ರವಾಗಿ, ಅದೇ ಮುಂದೆ, ಗೀತ ನರ್ತನದಿಂದ ಕೃಷ್ಣನನ್ನು ಪೂಜಿಸುವ ಪುಣ್ಯಾತ್ಮ ಪುರಂದರದಾಸರಂತಹವರಿಗೆ ರಾಜಮಾರ್ಗವಾಯಿತು.

ದಾಸಸಾಹಿತ್ಯ 'ಇಂದು ನಿನ್ನೆಯ ಕಥೆಯಲ್ಲ. ರಾವಣನ ಆಸ್ಥಾನದಲ್ಲಿ ಹನುಮಂತನನ್ನು ನೀನು ಯಾರೆಂದು ಕೇಳಿದೊಡನೆಯೇ 'ದಾಸೋಹಂ ಕೋಸಲೇಂದ್ರಸ್ಯ' ಎಂದು ಉತ್ತರಿಸಿದಾಗಲೇ ದಾಸಭಾವ ಪ್ರಕಟವಾಯಿತು. ದಾಸಸಾಹಿತ್ಯ ಗುರುಮಧ್ವರಿಂದ ಗೀತಗತಿ ಪಡೆಯಿತು. ನರಹರಿತೀರ್ಥರಿಂದ ನಾದಸುಧೆಯಾಯಿತು. ಶ್ರೀಪಾದರಾಜರಿಂದ ಶ್ರೀಕಾರಪಡೆದು ವ್ಯಾಸರಾಜ, ವಾದಿರಾಜರಿಂದ ವ್ಯಾಪಕ ದಾಸಕೂಟವಾಗಿ ಭಕ್ತಿ ಸಾಹಿತ್ಯದ ರೂಪದಲ್ಲಿ ಉತ್ತಮ ಜ್ಞಾನವನ್ನು ಕನ್ನಡ ಜನಮನಕ್ಕೆ ಮುಟ್ಟಿಸಿತು. ಪುರಂದರದಾಸರಂತಹ ಪುಣ್ಯಪುರುಷರಿಂದ ಈ ಸಾಹಿತ್ಯಗಂಗೆ ಪ್ರಬುದ್ಧ ಪಾತ್ರ ಪಡೆಯಿತು. ಕನಕದಾಸರಿಂದ ಕನ್ನಡಭಾಷೆ ಜಾನಪದದ ಸೊಗಡನ್ನು ಮೈಗೂಡಿಸಿಕೊಂಡು ಜ್ಞಾನ–ಭಕ್ತಿ–ವೈರಾಗ್ಯಗಳ ತ್ರಿವೇಣಿ ಸಂಗಮವಾಗಿ ಹರಿಯ ತೊಡಗಿತು. ಮಹೀಪತಿದಾಸರಿಂದ ಮಹಾ ಅಪರೋಕ್ಷ ಜ್ಞಾನದ ನೂರಾರು ಕೀರ್ತನೆಗಳು ಮೂಡಿಬಂದು ಯೋಗ ಶಕ್ತಿಯ ಮಹತ್ವವೂ ಪ್ರಕಟವಾಯಿತು. ಬೆಳದಿಂಗಳಭಾಷೆಯ ಪ್ರಸನ್ನವೆಂಕಟದಾಸರು ಪ್ರಶಾಂತತೆ, ಪ್ರಸನ್ನತೆಗಳ ಸುಂದರ ಬಂಧುರ ಸಾಹಿತ್ಯವನ್ನು ನೀಡಿದವರು. ವಿಜಯದಾಸರಿಂದ ದಾಸಸಾಹಿತ್ಯ ವ್ಯಾಪಕವಾದ ತಾತ್ವಿಕ–ಸಾತ್ವಿಕ ಯಶಸ್ಸು ಸಾಧಿಸಿತು. ಗೋಪಾಲದಾಸರಿಂದ ಗಾಂಭೀರ್ಯ ಮಾಧುರ್ಯಗಳ ಭಕ್ತಿ ಪುಳಕವಾಗಿ ತುಳುಕಿತು. ಜಗನ್ನಾಥದಾಸರಿಂದ ಜಯಪ್ರದ ಸಾಹಿತ್ಯದ ಉತ್ತುಂಗ ಶೃಂಗವೆನಿಸಿ ಹರಿಕಥಾಮೃತಸಾರದಲ್ಲಿ ಅದು ಸಿದ್ಧಿಪಡೆಯಿತು. ಗುರುಶ್ರೀಶವಿಠಲದಾಸರಿಂದ ಗುರುತ್ವಾಕರ್ಷಣೆಯ ಪದ–ಪದ್ಯಗಳ ಮೂಡಿಸಿತು. ಹರಪನಹಳ್ಳಿ ಭೀಮವ್ವನಂತಹ, ಹೆಳವನಕಟ್ಟೆ ಗಿರಿಯಮ್ಮನಂತಹ ಹಳ್ಳಿಯ ಹೆಣ್ಣುಮಕ್ಕಳಿಂದ ಹಾಡಿನ ಹೊಳೆಯಾಗಿ ಹರಿಯಿತು. ಗುರುಜಗನ್ನಾಥದಾಸರಿಂದ ಗುರು ಪರಂಪರೆಗೆ ಸಲ್ಲಬೇಕಾದ ಗೌರವ ಸಂಪ್ರದಾಯದ ಸಾಹಿತ್ಯ ಸಾಕ್ಷಾತ್ಕಾರವಾಯಿತು.

ಉರಗಾದ್ರಿವಾಸ ವಿಠಲದಾಸರಿಂದ ಉತ್ಕೃಷ್ಟ ಸಾಧನ ಸಾಹಿತ್ಯ ಲಭ್ಯವಾಯಿತು. ಗುರುಗೋವಿಂದವಿಠಲದಾಸರಿಂದ ಗುಪ್ತವಾಗಿದ್ದ ದಾಸಸಾಹಿತ್ಯ ಸಂಘಟನೆ ಬೃಹತ್ ಆಂದೋಲನದ ಸ್ವರೂಪವನ್ನೇ ಪಡೆದುಕೊಂಡಿತು. ರಾಮದಾಸರಂತಹ ರಾಮಾವಧೂತ ಶಿಷ್ಯರಿಂದ ರಾಮನಾಮ ರಸವಾಗಿ ಹರಿಯಿತು.

ಹರಿದಾಸರ ಪದ-ಪದ್ಯಗಳು ಸಾಧಕನ ಮಾರ್ಗದ ದೀವಟಿಗೆಗಳಿದ್ದಂತೆ. ಅವು ಸಾಮೂಹಿಕ ಬದುಕಿಗೆ ಜೀವಂತ ಶಕ್ತಿಯಾಗಿ ಭಕ್ತಿಪಂಥದ ಸಂಘಟನೆಗೆ ಬಹುದೊಡ್ಡ ಸಾಧನವಾಯಿತು. ಸರಳ ಕನ್ನಡ ಕೀರ್ತನೆಗಳ ಮೂಲಕ ಹರಿದಾಸರು ಸುಜ್ಞಾನವೆಂಬ ಅಮೃತದ ಗುಟುಕುಗಳನ್ನು ಕುಡಿಸಿ ಹೊಸದೊಂದು ಸಜ್ಜನ ಸಮಾಜದ ನಿರ್ಮಾಣಕ್ಕೆ ಕಾರಣರಾದರು. 'ಈಸಬೇಕು ಇದ್ದು ಜೈಸಬೇಕು' ಎಂದು ಧೈರ್ಯಸ್ಥೈರ್ಯಗಳ ಉತ್ಸಾಹೀ ಬದುಕಿನತ್ತ ಜನರನ್ನು ತಿರುಗಿಸಿದರು. 'ಮಾನವಜನ್ಮ ದೊಡ್ಡದು ಇದ ಹಾನಿ ಮಾಡಲಿಬೇಡಿ ಹುಚ್ಚಪ್ಪಗಳಿರಾ' ಎಂದು ಮಾನವ ಜೀವನದ ಮಹತ್ವ ಸಾರ್ಥಕತೆಯನ್ನು ಮನನ ಮಾಡಿಕೊಟ್ಟರು.

ದಾಸರು ನುಡಿದದ್ದೆಲ್ಲಾ ನರಹರಿಯ ಹಾಡು. ಅವರು ನಡೆದದ್ದೆಲ್ಲಾ ತೀರ್ಥಯಾತ್ರೆ. ಅವರ ದೃಷ್ಟಿಯಲ್ಲಿ ಮದಮತ್ಸರಗಳ ಬಾಳು ನಿರರ್ಥಕ. ಹರಿಸ್ಮರಣೆಯ ಬದುಕೊಂದೇ ಸಾರ್ಥಕ. ಅವರ ಮತ ಭಕ್ತಿಯ ಪಥ. ಅರ್ಥವರಿತ ಕರ್ಮ ಅವರ ಸಾಧನೆಯ ಮರ್ಮ. ಜೀವನವನ್ನು ಆಪ್ತವಾಗಿ ಅರಿತುಕೊಂಡಿದ್ದ ಅನುಭವಿಗಳು, ಅನುಭಾವಿಗಳು ಹರಿದಾಸರು. ಅವರ ದೃಷ್ಟಿಯಲ್ಲಿ ಸರ್ವದೇಶವು ಪುಣ್ಯದೇಶವು; ಸರ್ವಕಾಲವು ಪರ್ವಕಾಲವು; ಸರ್ವಜೀವರು ದಾನಪಾತ್ರರು; ಸರ್ವಮಾತುಗಳೆಲ್ಲಾ ಮಂತ್ರವು; ಸರ್ವಕೆಲಸಗಳೆಲ್ಲ ಪೂಜೆಯು, ಸದಾ ಪರಮಾತ್ಮನ ಧ್ಯಾನ ಮಾಡುವವರಿಗೆ.

ಹರಿದಾಸರ ಪ್ರತಿಹಾಡಿಗೂ ಅಂಕಿತವೊಂದಿರುತ್ತದೆ. ಇದು ಮಧ್ವಾಚಾರ್ಯರು ದ್ವಾದಶಸ್ತೋತ್ರದ ಪ್ರತಿ ಅಧ್ಯಾಯದ ಕಡೆಯಲ್ಲೂ 'ಆನಂದತೀರ್ಥ' ಎಂಬ ಅಂಕಿತ ಹಾಕಿದಂದಿನಿಂದಲೂ ಪರಿಪಾಠವಾಗಿದೆ. 'ಅಂಕಿತವಿಲ್ಲದ ದೇಹನಿಷಿದ್ಧ, ಅಂಕಿತವಿಲ್ಲದ ಕಾವ್ಯಶೋಭಿಸದು'. ಅಂಕಿತವನ್ನು ಮುದ್ರಿಕೆಯೆಂದೂ ಕರೆಯುತ್ತಾರೆ. ಅಂಕಿತವನ್ನು ಶಿಷ್ಯನಿಗೆ ಗುರುಗಳು ನೀಡುವಾಗ, ಗುರುಗಳು ಶಿಷ್ಯನಿಗೆ ನೀಡಲಾಗುವ ಅಂಕಿತದಿಂದ ಹಾಡು ಪ್ರಾರಂಭಿಸಿ, ಗುರುಗಳ ಅಂಕಿತ ಕಡೆಯಾಗುವಂತೆ ಅಂಕಿತಪದ ರಚಿಸುವುದು ರೂಢಿ. ಹರಿದಾಸರು ಅಂಕಿತ, ಹರಿದಾಸದೀಕ್ಷೆ, ತಪ್ತಮುದ್ರಾಂಕನ ಸ್ವೀಕರಿಸಬೇಕು. ಶ್ರುತಿ-ಸ್ಮೃತಿ ಇತಿಹಾಸಗಳಲ್ಲಿ ನಂಬಿಕೆಯಿಡಬೇಕು. ಏಕಾದಶಿ ಮುಂತಾದ ವ್ರತಗಳನ್ನು ಆಚರಿಸಬೇಕು. ಹರಿಭಜನೆ ನಿರಂತರ ಮಾಡಬೇಕು. ಸಾಲಮಾಡಬಾರದು, ಸಾಲದೆನ್ನಬಾರದು, ನಾಳೆಗೇನೆಂಬ ಚಿಂತೆ ಮಾಡಬಾರದು. ಕೊರಳಲ್ಲಿ ತುಳಸೀಮಾಲೆ, ಊರ್ಧ್ವಪುಂಡ್ರ, ದಂಡಿಗೆ ಬೆತ್ತ, ಗೋಪಾಲ ಬುಟ್ಟಿ, ಚಿಟಿಕೆ, ಗಾಯನ,

ನರ್ತನ ಪರಿವಾಣಸೇವೆ, ನಿತ್ಯ ಯಾಯಿವಾರ ವೃತ್ತಿ ಇಷ್ಟೆಲ್ಲಾ ಹರಿದಾಸ ಸಂಸ್ಕೃತಿಯಾಗಿ ರೂಪುಗೊಂಡಿತು. ಸ್ವರೂಪೋದ್ಧಾರ ಹಾಗೂ ಲೋಕೋಪಕಾರ ಹರಿದಾಸ ವ್ಯಕ್ತಿತ್ವದ ಎರಡು ಮುಖಗಳು.

ಹರಿದಾಸಸಾಹಿತ್ಯ ಕರ್ನಾಟಕಸಂಗೀತದ ವ್ಯಾಪಕತೆಗೆ, ಜನಪ್ರಿಯತೆಗೆ ಮುಖ್ಯ ಕಾರಣವಾಯಿತು. ಕೇವಲ ರಾಜಸ್ಥಾನಗಳ, ವಿದ್ವಾಂಸರ, ಶ್ರೀಮಂತರ ಸೊತ್ತಾಗಿದ್ದ ಸಂಗೀತಕಲೆ ಶ್ರೀಸಾಮಾನ್ಯನ ಮನೆಬಾಗಿಲು ತಲುಪಿದ್ದೇ ಹರಿದಾಸರಿಂದ. ರಾಗಲಯಬದ್ಧ ರಚನೆಗಳಲ್ಲಿ ಹಿತಮಿತವಾದ ಉತ್ತಮ ಬೋಧೆ ನೀಡಿದ್ದಾರೆ. ಅವು ಜನಮನದಲ್ಲಿ ನಿಲ್ಲಬಲ್ಲವು ಎಂಬುದನ್ನರಿತ ದಾಸರು ಮಾತಾಡುವ ಬದಲು ಹಾಡತೊಡಗಿದರು.

ಹರಿದಾಸರು ಓಡಾಡಿದ್ದೇ ಜನಸಾಮಾನ್ಯರ ನಡುವೆ . ಅದಕ್ಕೇ ಜನಪರವಾದ, ಜನಹಿತವಾದ ಸಾಹಿತ್ಯ ಅವರಿಂದ ತುಂಬಿ ತುಳುಕಿತು. ಅವರ ಹೃದಯ ಬಡಜನತೆಗಾಗಿ ಮರುಗುತ್ತಿತ್ತು. ಹಾಗಾಗಿಯೇ 'ಬಲ್ಲಿದನು ನೀನೆಂದು ಬಡವರ ಬಾಯಿ ಬಡಿಯದಿರೆಚ್ಚರಿಕೆ' ಎನ್ನುವ ಧೈರ್ಯ ಅವರಿಗಿತ್ತು. 'ರಾಗಿಯ ತಂದೀರಾ ಭಿಕ್ಷಕೆ ರಾಗಿಯ ತಂದೀರಾ' ಎಂದು ಬಡಜನರ ಧ್ವನಿಯಾಗಿ ದಾಸರು ಸಮಾಜದಲ್ಲಿ ಓಡಾಡಿದರು.

ಹರಿಕಥಾಮೃತಸಾರ, ಹರಿಭಕ್ತಿಸಾರ, ಮುಂತಾದ ಕಾವ್ಯಗಳಿಂದ, ಕೀರ್ತನೆ, ದೇವರನಾಮ, ಸುಳಾದಿ, ಉಗಾಭೋಗ, ವೃತ್ತನಾಮ, ದಂಡಕ ಮುಂತಾದ ವಿಶಿಷ್ಟ ಪ್ರಕಾರಗಳ ದಾಸಸಾಹಿತ್ಯ ಲಾವಣಿ, ಕೋಲುಹಾಡು, ಜೋಗುಳ, ಲಾಲಿ, ಶೋಭಾನೆ ಮುಂತಾದ ಜಾನಪದ ಹಿನ್ನಲೆಯಿಂದ ಸಮೃದ್ಧವಾಗಿದೆ. ದಾಸಸಾಹಿತ್ಯದಲ್ಲಿ ಹರಿಸ್ತುತಿ, ಗುರುಸ್ತುತಿ, ತತ್ವಪದಗಳು, ಉಪದೇಶ, ಅನುಭವ ಪ್ರಕಟನೆ, ಅನುಭಾವನಿರೂಪಣೆ, ತೀರ್ಥಕ್ಷೇತ್ರಮಹಿಮಾ, ಪುರಾಣಪ್ರಸಂಗಗಳು ನಿರೂಪಿತವಾಗಿವೆ. ದಾಸಸಾಹಿತ್ಯದ ಭಾಷೆ ಕನ್ನಡವಿದ್ದರೂ ಸಂಸ್ಕೃತ, ತೆಲುಗು, ತಮಿಳು, ಉರ್ದು, ಮರಾಠಿ ಭಾಷೆಗಳಿಗೂ ಕನ್ನಡದೊಡನೆ ಹಾಸುಹೊಕ್ಕಾಗಿದ್ದು ಭಾವೈಕ್ಯತೆಗೆ ಇದು ನಿದರ್ಶನವಾಗಿದೆ.

ದಾಸಸಾಹಿತ್ಯ ಆಚಾರ್ಯ ಮಧ್ವರಿಂದ ಪ್ರೇರಣೆ ಪಡೆದರೂ, ಪ್ರಾರಂಭ ಪಡೆದದ್ದು ಅವರ ಸಾಕ್ಷಾತ್ ಶಿಷ್ಯರಾದ ನರಹರಿತೀರ್ಥರಿಂದ ಎಂದೇ ಸಂಪ್ರದಾಯ. ಶ್ರೀಪಾದರಾಜರು ಜನರ ಆಡುಭಾಷೆಯಾದ ಕನ್ನಡದಲ್ಲೇ ಕಾವ್ಯ ರಚಿಸಿ, ಯುಗಯುಗಳಿಂದ ಗಾಢ–ಗೂಢವಾಗಿದ್ದ ಸಂಸ್ಕೃತದ ಮಹಾಮಂತ್ರಗಳನ್ನು, ಕಾವ್ಯಗಳನ್ನು, ವೇದೋಪನಿಷತ್ತುಗಳನ್ನು ಸಾಮಾನ್ಯಜನರಿಗೂ ಅರ್ಥವಾಗುವ ತಿಳಿಗನ್ನಡದಲ್ಲಿ ತಿಳಿಸಿಕೊಟ್ಟರು. ಸೂಕ್ಷ್ಮ ಭಾವನೆಗಳನ್ನು ಸಂವೇದನೆಗಳನ್ನು ಅಭಿವ್ಯಕ್ತಿಸಲು ಸಂಗೀತವೇ ಸಮರ್ಥ ಮಾಧ್ಯಮ ಎಂಬ ಸಂಗತಿಯನ್ನು ಅರಿತಿದ್ದ ಶ್ರೀಪಾದರಾಜರು, ಪಲ್ಲವಿ ಅನುಪಲ್ಲವಿಗಳನ್ನು, ಚರಣ ವ್ಯವಸ್ಥೆಯ ಕೀರ್ತನೆಗಳನ್ನು ಮೊಟ್ಟ ಮೊದಲಬಾರಿಗೆ ಕನ್ನಡದಲ್ಲಿ ರಚಿಸಿ ಪ್ರಚಲಿತಗೊಳಿಸಿದರು. ಪ್ರತಿಯೊಬ್ಬರಿಗೂ ಭಕ್ತಿ ಬೇಕು,

ವಿರಕ್ತಿಬೇಕು, ಸರ್ವಶಕ್ತಿಬೇಕು, ಮುಕ್ತಿಯ ಅಗತ್ಯವಿದ್ದಲ್ಲಿ ಹಂಬಲವಿದ್ದಲ್ಲಿ ಎಂಬುದನ್ನು ಸ್ಪಷ್ಟವಾಗಿ ಪ್ರಕಟಿಸುವ ಶ್ರೀಪಾದರಾಜರು ಸತಿ ಅನುಕೂಲವಾಗಿರಬೇಕು, ಸುತನಲ್ಲಿ ಗುಣಬೇಕು, ಮತಿವಂತನಾಗಿರಬೇಕು, ಮತ ಒಂದಾಗಿರಬೇಕು, ಜಪದ ಜಾಣುವೆ ಬೇಕು, ತಪ ನೇಮವು ಬೇಕು, ಉಪವಾಸವ್ರತಬೇಕು, ಉಪಶಾಂತವಿರಬೇಕು, ಸತ್ಸಂಗಬೇಕು, ದುಸ್ಸಂಗ ಬಿಡಬೇಕು, ರಂಗವಿಠಲನ್ನ ಬಿಡದೆ ನೆರೆನಂಬಿರಬೇಕು ಎಂದು ಸಾತ್ವಿಕ ಬದುಕಿನ ರೀತಿನೀತಿಗಳನ್ನು ನಿರೂಪಿಸಿದರು.

ಶ್ರೀಪಾದರಾಜರ ಶಿಷ್ಯರಾದ ವ್ಯಾಸರಾಜರು ವ್ಯಾಸಕೂಟ, ದಾಸ ಕೂಟಗಳ ಪ್ರವರ್ತಕರು. ನ್ಯಾಯಾಮೃತ, ತರ್ಕತಾಂಡವ, ಚಂದ್ರಿಕಾದಂತಹ ಉದ್ಗ್ರಂಥಗಳನ್ನು ರಚಿಸಿಯೂ ಸರಳಗನ್ನಡದಲ್ಲಿ ಹಾಡುಗಳನ್ನು ರಚಿಸಿ ದಾಸಸಾಹಿತ್ಯ ಪ್ರಸರಣ ಮಾಡಿದರು. ೧೭೩೮ರ ಸುಮಾರಿಗೆ ತಂಜಾವೂರಿನ ದೊರೆ ತುಳಜಾಜಿ 'ಸಂಗೀತಸಾರಾಮೃತ' ರಚಿಸಿದ್ದು, ಅದರಲ್ಲಿ ಅವನು ವ್ಯಾಸರಾಜರನ್ನು 'ಪ್ರಸಿದ್ಧ ಸಂಗೀತ ವಿದ್ಯಾ ಸಂಪ್ರದಾಯ ಪ್ರವರ್ತಕ' ಎಂದೇ ಕೊಂಡಾಡಿದ್ದಾನೆ.

ಧರ್ಮಸ್ಥಳದಲ್ಲಿ ಮಂಜುನಾಥನ ಪ್ರತಿಷ್ಠೆಮಾಡಿ, ಉಡುಪಿಯಲ್ಲಿ ಕೃಷ್ಣನ ಪೂಜೆಗೆ ಪರ್ಯಾಯ ವ್ಯವಸ್ಥೆ ಮಾಡಿದ ವಾದಿರಾಜರು ದಕ್ಷಿಣಕನ್ನಡದಿಂದ ಹರಿದಾಸ ಸಾಹಿತ್ಯದ ಮಹಾನ್ ಕೊಡುಗೆಯಾಗಿ ಮೂಡಿಬಂದವರು. ವೈಕುಂಠವರ್ಣನೆ, ಲಕ್ಷ್ಮೀಶೋಭಾನೆ, ಗುಂಡಕ್ರಿಯ, ಸ್ವಪ್ನಪದ, ಭ್ರಮರಗೀತೆ, ನಾರದಕೊರವಂಜಿ, ಕೀಚಕವಧೆ, ಸುಳಾದಿ, ಉಗಾಭೋಗ, ಕೀರ್ತನೆಗಳು ಹೀಗೆ ವ್ಯಾಪಕವಾಗಿ ಅವರು ದಾಸಸಾಹಿತ್ಯ ರಚನೆ ಮಾಡಿದರು.

ಪುರಂದರದಾಸರಂತೂ ಕರ್ನಾಟಕ ಸಂಗೀತ ಪಿತಾಮಹರು. ಲೋಕನೀತಿಯ ಮಾರ್ಗದರ್ಶಿಗಳಾಗಿ, ತತ್ವಶೋಧನೆ ಆತ್ಮನಿರೀಕ್ಷಣೆಯ ಮೂಲಕ ಹರಿನಾಮ ಸ್ಮರಣೆಯ ಸಂಜೀವಿನಿಯನ್ನು ಸಜ್ಜನ ಸಮುದಾಯಕ್ಕೆ ಹಂಚುತ್ತಾ ಹೊರಟು 'ದಾಸರೆಂದರೆ ಪುರಂದರದಾಸರಯ್ಯಾ' ಯನ್ನುವುದಕ್ಕೆ ಅನ್ವರ್ಥವಾಗಿ ನಾಲ್ಕು ಲಕ್ಷದ ಎಪ್ಪತ್ತೈದು ಸಹಸ್ರ ಕೃತಿಗಳನ್ನು ಅವರು ರಚಿಸಿದರು.

ಜೀವನಾನುಭವಕ್ಕೆ ವಿವೇಕ ಶೀಲತೆಗೆ ಜಾನಪದ ಮೊರೆತಕ್ಕೆ ಅಪೂರ್ವ ನಿದರ್ಶನವಾಗಿರುವ ದಾಸಸಾಹಿತ್ಯ ಕನಕದಾಸರಿಂದ ಮೂಡಿಬಂದಿದ್ದು ಕೀರ್ತನೆ, ಷಟ್ಪದಿ, ಸಾಂಗತ್ಯ, ಕಾವ್ಯ, ಮುಂಡಿಗೆಗಳು ಅವರಿಂದ ಓತಪ್ರೋತ ಹೊಮ್ಮಿವೆ. ಗ್ರಾಮ್ಯದ ಗಮ್ಮತ್ತಿಗೆ, ವಿದ್ವಾಂಸರ ಪಾಂಡಿತ್ಯಕ್ಕೆ, ರಸಿಕರ ನವರಸಗಳಿಗೆ, ಭಗವದ್ಭಕ್ತಿಗೆ ಮತ್ತು ಅಪರೋಕ್ಷ ಜ್ಞಾನಕ್ಕೆ ಅಮೋಘವಾದ ದೃಷ್ಟಾಂತವೆಂದರೆ ಕನಕದಾಸರ ಸಾಹಿತ್ಯ.

ವಿಜಯದಾಸರಿಂದ ವೇದ ಉಪನಿಷತ್ತು, ಭಾರತ, ಭಾಗವತ, ಪುರಾಣ, ಸೂತ್ರಗಳೆಲ್ಲಾ ಸುಳಾದಿ, ದೇವರನಾಮವಾಗಿ ಪ್ರವಹಿಸಿದವು. ಪುರಂದರ ಪ್ರಭಾವಕ್ಕೆ ಸಿಕ್ಕ ವಿಜಯದಾಸರು

ಚೈತನ್ಯದ ಜಲಪಾತವಾದರು. ಭಕ್ತಿಯ ಉಪಾಸನಾ ಮಾರ್ಗದಲ್ಲಿ ಕಾವ್ಯಶಕ್ತಿ ಭೋರ್ಗರೆದಿರುವ ಪದ–ಪದ್ಯಗಳು ಗೋಪಾಲದಾಸರಿಂದ ಬಂದಿದ್ದು 'ಭಕ್ತಿಯಲಿ ಭಾಗಣ್ಣ' ಎಂದೇ ಅವರು ಪ್ರಸಿದ್ಧರಾಗಿದ್ದಾರೆ ಸಾಹಿತ್ಯಶಕ್ತಿಯಾಗಿ ಹರಿಕಥಾಮೃತಸಾರ, ಕನ್ನಡ ಸಾಹಿತ್ಯ ತತ್ತ್ವ ಸಂಸ್ಕೃತಿಯ ದಾರಿಯಲ್ಲಿ ಒಂದು ಪ್ರಮುಖ ಮೈಲಿಗಲ್ಲಾಗಿದ್ದು, ಅದು ಜಗನ್ನಾಥದಾಸರೆಂಬ ಅನರ್ಘ್ಯರತ್ನವನ್ನು ಆನಂದತೀರ್ಥಸಾಗರದಿಂದ ಮೇಲೆತ್ತಿ ತಂದು ಸುಜೀವಿಗಳಿಗೆ ನೀಡಿತು.

ಕಾಖಂಡಕಿಯ ಮಹಿಪತಿದಾಸರು ಬಿಜಾಪುರ ಸುಲ್ತಾನನಲ್ಲಿ ಅಧಿಕಾರಿಗಳಾಗಿದ್ದು ವೈರಾಗ್ಯ ಅಂಕುರಿಸಿ, ಹರಿದಾಸರಾಗಿ ಯೋಗಮಾರ್ಗದಿಂದ ಅಪರೋಕ್ಷ ಜ್ಞಾನಿಗಳಾಗಿ ನೂರಾರು ಕೀರ್ತನೆಗಳನ್ನು ರಚಿಸಿದರು. ಜಗನ್ನಾಥದಾಸರಿಂದ ಅನುಗ್ರಹೀತರಾಗಿ ಅವರ ಶಿಷ್ಯ ಹುಂಡೇಕಾರದಾಸರಿಂದ ದೀಕ್ಷೆಪಡೆದು ಗುರುಶ್ರೀಶವಿಠಲರೆಂದೇ ಖ್ಯಾತರಾದ ದಾಸರು ಅನೇಕ ಕೃತಿಗಳನ್ನು ರಚಿಸಿದರು.

ಕೊನೆಗೆ ಸ್ವಾಮಿರಾಯಾಚಾರ್ಯರೆಂದೇ ಖ್ಯಾತರಾದ ಗುರು ಜಗನ್ನಾಥವಿಠಲದಾಸರು ಸಂಸ್ಕೃತ, ಕನ್ನಡ ಎರಡು ಭಾಷೆಗಳಲ್ಲೂ ಅಪ್ರತಿಮ ಪಾಂಡಿತ್ಯ ಹೊಂದಿದ್ದು, 'ರಾಘವೇಂದ್ರವಿಜಯ' ವೆಂಬ ವಿಶಿಷ್ಟ ಕನ್ನಡ ಕಾವ್ಯ ಒಂದನ್ನು ಇವರು ರಚಿಸಿದ್ದಾರೆ. ಗಾಂಭೀರ್ಯ, ಪ್ರಾಸ, ತಾತ್ವಿಕ ಮಹತ್ತಿಗೆ ಇವರ ಕೃತಿಗಳು ಹೆಸರಾಗಿವೆ. ಹೆಳವನಕಟ್ಟೆ ಗಿರಿಯಮ್ಮನ ಮುಗ್ಧಭಕ್ತಿ ಪ್ರಾಸಾದಿಕವಾಣಿ ಹರಪ್ಪನಹಳ್ಳಿ ಭೀಮವ್ವನವರ ತತ್ತ್ವಭರಿತ, ಪ್ರಮೇಯಭರಿತ ಕೃತಿಗಳು ದಾಸ ಸಾಹಿತ್ಯಕ್ಕೆ ಕಳಸಪ್ರಾಯವಾಗಿವೆ.

ಮುಸಲ್ಮಾನ ಪಂಥದಿಂದ ದಾಸಪಂಥಕ್ಕೆ ಪರಿವರ್ತನ ಶೀಲರಾಗಿ ಬಂದ ರಾಮದಾಸರು ತಾದಾತ್ಮ್ಯಚಿತ್ತದಿಂದ ರಾಮಧ್ಯಾನಪರರಾಗಿ ರಚಿಸಿರುವ ರಾಘವಗೀತ ಹಾಡುಗಳು ಒಂದು ಸಹಸ್ರದಷ್ಟಿದ್ದು, ಕನ್ನಡ ದಾಸ ಸಾಹಿತ್ಯಕ್ಕೆ ಇವು ವಿಶಿಷ್ಟ ಕೊಡುಗೆಯಾಗಿವೆ.

ಈ '' **ಹರಿದಾಸರು ಕಂಡ ಶ್ರೀನಿವಾಸ** '' ಕೃತಿಯಲ್ಲಿ ಅಪರೋಕ್ಷ ಜ್ಞಾನಿಗಳಾದ ಹರಿದಾಸರ ಪರಂಪರೆಯ ಅನೇಕ ಹಾಡುಗಳಿದ್ದು, ಅವರ ಬಗ್ಗೆ ಸಂಕ್ಷಿಪ್ತ ಪರಿಚಯವನ್ನು ನೀಡಿದ್ದು, ದಾಸಸಾಹಿತ್ಯಾಸಕ್ತರಿಗೆ ಹಾಗು ಶ್ರೀನಿವಾಸನ ಭಕ್ತರಿಗೆ ಇದು ಅತ್ಯಂತ ಉಪಯುಕ್ತ ಕೃತಿಯಾಗಿದೆ. ಈ ದಾಸರೆಲ್ಲಾ ಅನೇಕ ಕೃತಿಗಳನ್ನು ರಚಿಸಿದ್ದರೂ ಶ್ರೀನಿವಾಸನನ್ನು ಕುರಿತು ಹಾಡುವಾಗ ಮೈ ಪುಳಕಗೊಂಡು, ರೋಮಾಂಚಿತ ಹರ್ಷರಾಗಿ ಭಕ್ತಿಯುದ್ರೇಕದಿಂದ ಹಾಡಿ ಕುಣಿದಿರುವುದನ್ನು ಈ ಕೃತಿಯಲ್ಲಿ ಕಾಣಬಹುದು.

ಇಂಥದೊಂದು ಅಪೂರ್ವ ಕೃತಿಯನ್ನು ಹೊರತರುತ್ತಿರುವ ಸಂಪಾದಕರಾದ ಶ್ರೀ.ಹೊ.ರಾ. ಸತ್ಯನಾರಾಯಣರಾವ್ ಹಾಗೂ ಶ್ರೀ.ವೈ. ಎನ್. ಗುಂಡೂರಾವ್‌ರವರು

ದಾಸಸಾಹಿತ್ಯ ಕ್ಷೇತ್ರಕ್ಕೆ ಒಳ್ಳೆಯ ಕೊಡುಗೆ ನೀಡಿದ್ದಾರೆ. ಇವರಿಬ್ಬರೂ ಈಗಾಗಲೇ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಚಿರಪರಿಚಿತರು. ಇವರು ದಾಸಸಾಹಿತ್ಯದಲ್ಲಿ ವಿಶೇಷ ಆಸ್ಥೆ ವಹಿಸಿ, ಈ ಕೃತಿಯ ಪ್ರಕಟಣೆಗೆ ಶ್ರಮಿಸಿದ್ದಾರೆ.

ತಿರುಪತಿ ದೇವಸ್ಥಾನದ ದಾನ ಸಾಹಿತ್ಯ ಪ್ರಾಜೆಕ್ಟ್ ಹಾಗೂ ಬೆಂಗಳೂರಿನ ಹರಿದಾಸ ಅಕಾಡೆಮಿಯು ದಾಸಸಾಹಿತ್ಯದ ಕಾರ್ಯಕ್ರಮಗಳನ್ನು ವ್ಯಾಪಕವಾಗಿ ವಿಸ್ತರಿಸುತ್ತಾ, ದಾಸಸಾಹಿತ್ಯವನ್ನು ಜನಪರ ಹಾಗೂ ಜನಪ್ರಿಯವನ್ನಾಗಿ ಮಾಡುತ್ತಿರುವ ಸಂದರ್ಭದಲ್ಲಿ ಈ ಕೃತಿ ಪ್ರಕಟವಾಗುತ್ತಿರುವುದು ತುಂಬಾ ಔಚಿತ್ಯಪೂರ್ಣ ಹಾಗೂ ಶುಭ ಸಂಕೇತವಾಗಿದೆ.

ಶ್ರೀ ಹೊ. ರಾ. ಸತ್ಯನಾರಾಯಣರಾವ್ ಹಾಗೂ ಶ್ರೀ ವೈ. ಎನ್. ಗುಂಡೂರಾವ್‌ರವರಿಗೆ ಹೃದಯತುಂಬಿದ ಅಭಿನಂದನೆಗಳೊಡನೆ, ಇಂತಹ ಅನೇಕ ಕೃತಿಗಳು ಇವರಿಂದ ಹೊರಬರಲಿ ಎಂದು ಹಾರೈಸುತ್ತೇನೆ.

***– ವಿದ್ಯಾವಾಚಸ್ಪತಿ ಡಾ|| ಅರಳುಮಲ್ಲಿಗೆ ಪಾರ್ಥಸಾರಥಿ.***

# ನಮನ

ಕನ್ನಡ ಸಾಹಿತ್ಯಕ್ಕೆ ಹರಿದಾಸರ ಕೀರ್ತನೆಗಳ ಕೊಡುಗೆ ಅನನ್ಯ. ಸಂಸ್ಕೃತ ಕಾವ್ಯಗಳನ್ನೋದಿ ಅರ್ಥಮಾಡಿಕೊಳ್ಳಲಾರದಂತಹ ಸಾಮಾನ್ಯ ಜನರನ್ನು ದೃಷ್ಟಿಯಲ್ಲಿಟ್ಟುಕೊಂಡು ಸಂಸ್ಕೃತ ವಿದ್ವಾಂಸರೆನಿಸಿದ್ದ ವ್ಯಾಸರಾಯರು, ವಾದಿರಾಜರಾದಿಯಾಗಿ ದಾಸಪಂಥವನ್ನು ಬೆಳೆಸಿದ ಹಲವಾರು ಹರಿದಾಸರು ಕನ್ನಡದಲ್ಲಿ ಭಕ್ತಿಪ್ರಧಾನವಾದ, ನೀತಿಬೋಧಕವಾದ, ತಾಳ ಲಯಬದ್ಧವಾದ ಕೀರ್ತನೆಗಳನ್ನು ರಚಿಸಿ ಜನಾದರಣೀಯವಾಗಿಸಿದ್ದಾರೆ.

ಈ ಹರಿದಾಸರ ಕೀರ್ತನೆಗಳಲ್ಲಿ ಭಾಷೆಯ ಸತ್ವವನ್ನು ಹೀರಿಕೊಂಡು, ಜಾನಪದ ಸೊಗಡನ್ನು ತುಂಬಿಕೊಂಡು, ಆಡುಮಾತಿನ ಅಂತಃಸತ್ವವನ್ನು ಮೈಗೂಡಿಸಿಕೊಂಡು, ಭಕ್ತಿ-ಜ್ಞಾನ-ವೈರಾಗ್ಯಗಳನ್ನು ಆಡು ಭಾಷೆಯ ಮೂಲಕ ಜನ ಸಾಮಾನ್ಯರಿಗೆ ತಲುಪಿಸಿದ್ದು ಸಾಮಾನ್ಯದ ಕೆಲಸವೇನಲ್ಲ. ಹೀಗೆ ಹರಿದ ಭಕ್ತಿಸಾಹಿತ್ಯವು ಹದಿನೈದನೆಯ ಶತಮಾನದಲ್ಲಿ ದಾಸಸಾಹಿತ್ಯ ಸುಧೆಯಾಗಿ ಭಕ್ತಿ, ವೇದಾಂತ, ತತ್ವ ಮತ್ತು ಸಮಾಜದ ಅಂಕುಡೊಂಕುಗಳನ್ನು ತಿದ್ದುವ ಗಾನವಾಗಿ ಹರಿದು ಜನಸಾಮಾನ್ಯರಿಗೂ ಆಧ್ಯಾತ್ಮಿಕ ತೃಷೆಯನ್ನು ಹಿಂಗಿಸಿ ಮುಕ್ತಿ ಮಾರ್ಗವನ್ನು ತೋರಿಸಿತು. ಸುಮಾರು ಐದು ಶತಕಗಳನ್ನು ದಾಟುವಷ್ಟು ಮಂದಿ ಹರಿದಾಸರು ಕನ್ನಡ ಸಾಹಿತ್ಯಕ್ಕೆ ತಮ್ಮ ಕೊಡುಗೆಯನ್ನು ನೀಡಿದ್ದಾರೆ; ಇವರು ರಚಿಸಿರುವ ಕೀರ್ತನೆಗಳ ಸಂಖ್ಯೆಯೇ ಲಕ್ಷಲಕ್ಷ.

ಆಚಾರ್ಯ ಮಧ್ವರಿಂದ ಪ್ರೇರಣೆ ಪಡೆದು, ನರಹರಿತೀರ್ಥರಿಂದ ಪ್ರಾರಂಭವಾಗಿ, ತಮ್ಮ ಪೂಜಾ ಸಮಯದಲ್ಲಿ ಸಣ್ಣಸಣ್ಣ ಕೀರ್ತನೆಗಳನ್ನು ರಚಿಸಿ ಹಾಡಿದ ಶ್ರೀಪಾದರಾಜರಿಂದ ಹರಿದಾಸಸಾಹಿತ್ಯಕ್ಕೆ ನಾಂದಿಯಾಯಿತು. ಹೀಗೆ ಆರಂಭವಾದ ಹರಿದಾಸಸಾಹಿತ್ಯವು ಆರಂಭದ ಘಟ್ಟದಲ್ಲಿ ಶ್ರೀಪಾದರಾಜರು, ವ್ಯಾಸರಾಯರು, ವಾದಿರಾಜರು, ಪುರಂದರ-ಕನಕದಾಸರಿಂದ ಪ್ರಾರಂಭವಾಗಿ ಉಚ್ಛ್ರಾಯ ಸ್ಥಿತಿಗೇರಿತು. ವಿಜಯನಗರದ ಪತನದ ನಂತರ ಸುಮಾರು ನೂರು ವರ್ಷ ಕಾಲ ಮರೆಯಾಗಿದ್ದು ನಂತರ ವಿಜಯದಾಸರ ನೇತೃತ್ವದಲ್ಲಿ, ಶ್ರೀ ಗೋಪಾಲದಾಸರು, ಶ್ರೀ ಮೋಹನದಾಸರು, ಶ್ರೀ ಜಗನ್ನಾಥದಾಸರು ಮುಂತಾದವರಿಂದ ಮುಂದುವರೆಯಿತು.

ಇಪ್ಪತ್ತನೆಯ ಶತಮಾನದಲ್ಲಿಯೂ ಹರಿದಾಸಸಾಹಿತ್ಯವು ವೈವಿಧ್ಯಮಯವಾಗಿ, ವಿಶಿಷ್ಟವಾಗಿ ಬೆಳೆಯುತ್ತಾ ಬಂದಿದೆ. ದಾಸ ಪೀಳಿಗೆಯ ಪರಂಪರೆಯನ್ನನುಸರಿಸಿ, ಸಂಗೀತ ಶಾಸ್ತ್ರವನ್ನನುಸರಿಸಿ, ಛಂದೋಬದ್ಧವಾಗಿ, ರಾಗ-ತಾಳ-ಲಯಗಳನ್ನೊಳಗೊಂಡು ಹಾಡಲು ಅನುಕೂಲವಾಗಿ ಕೀರ್ತನೆಗಳು ಒಂದೆಡೆ ರಚಿತವಾಗುತ್ತಿದ್ದರೆ ಮತ್ತೊಂದೆಡೆ ಹರಿದಾಸಸಾಹಿತ್ಯದ ವಿಚಾರ-ವಿಮರ್ಶೆಗಳು, ಹರಿದಾಸರ ಜೀವನ ಚರಿತ್ರೆಗಳು ಪ್ರಕಟಗೊಳ್ಳುತ್ತಾ ಬಾಳಿ-ಬೆಳಗಿದ ಹರಿದಾಸರ ಬಗ್ಗೆ ಇಂದಿನ ತಲೆಮಾರಿಗೆ ತಿಳಿಸಿಕೊಡಲು ಹಲವಾರು ಸಂಸ್ಥೆಗಳು ಅಹರ್ನಿಶಿ ದುಡಿಯುತ್ತಿವೆ.

ಹರಿದಾಸರ ಮಾತೇ ಹಾಡಾಯಿತು ಇಟ್ಟ ಹಜ್ಜೆಯೇ ತೀರ್ಥಯಾತ್ರೆಯು ಹಾದಿಯಾಯಿತು ಸಂದರ್ಶಿಸಿದ ಪುಣ್ಯ ಕ್ಷೇತ್ರಗಳ ಮಹಿಮೆಯನ್ನು ಹಾಡಿ ಹೊಗಳಿದರು. ಭೂವೈಕುಂಠವೆಂದೇ ಪ್ರಸಿದ್ಧವಾದ ತಿರುಪತಿಯನ್ನು ಸಂದರ್ಶಿಸದ ಹರಿದಾಸರಿಲ್ಲವೆಂದೇ ಹೇಳಬಹುದು ಶ್ರೀನಿವಾಸನನ್ನು ಕುರಿತು ರಚಿಸಿರುವ ಕೀರ್ತನೆ, ಸುಳಾದಿಗಳನ್ನು ಒಂದೆಡೆ ಸಂಗ್ರಹಿಸಿ ಪುಸ್ತಕರೂಪದಲ್ಲಿ ಪ್ರಕಟಿಸಿದರೆ ಹಾಡುವವರಿಗೆ ಮತ್ತು ಸಾಹಿತ್ಯ ಪ್ರೇಮಿಗಳಿಗೆ ಅನೂಕೂಲವಾದೀತೆಂಬ ದೃಷ್ಟಿಯಿಂದ ಈ ಕೆಲಸಕ್ಕೆ ಕೈ ಹಾಕಿದ್ದೇವೆ. ಆದರೆ ಇದು ಸಮಗ್ರವಲ್ಲವೆಂಬ ಅರಿವು ನಮಗಿದೆ. ಆರ್ಥಿಕ ಮಿತಿ, ಪುಸ್ತಕ ಪುಟ ಮಿತಿ, ಕಾಲ ಮಿತಿಯ ಚೌಕಟ್ಟಿಗೊಳಪಟ್ಟಿದ್ದರಿಂದ ಸಂಗ್ರಹಿಸಿರುವ ಮಾಹಿತಿ ಮತ್ತೊಂದು ಸಂಪುಟಕ್ಕಾಗುವಷ್ಟಿದ್ದು ಮುಂದೆ ಪ್ರಕಟಿಸುವ ಆಶಯವೂ ಇದೆ.

ಈ ಕೃತಿ ಪ್ರಕಟವಾಗಲು ಕಾರಣರಾಗಿ ಆರ್ಥಿಕ ನೆರವನ್ನು ನೀಡಿದ ತಿರುಮಲ ತಿರುಪತಿ ದೇವಸ್ಥಾನದ ಆಡಳಿತ ಮಂಡಳಿಯವರಿಗೆ ವಿಶೇಷವಾಗಿ ನಮ್ಮ ಕೃತಜ್ಞತೆಗಳನ್ನು ಸಲ್ಲಿಸಲೇಬೇಕು.

ತಮ್ಮ ಕಾರ್ಯ ಬಾಹುಳ್ಯದ ನಡುವೆಯೂ ಕೇಳಿದೊಡನೆಯೇ ಒಪ್ಪಿ ಈ ಪುಸ್ತಕಕ್ಕೊಂದು ಪ್ರಸ್ತಾವನೆಯನ್ನು ಬರೆದುಕೊಟ್ಟ ಡಾ|| ಅರಳುಮಲ್ಲಿಗೆ ಪಾರ್ಥಸಾರಥಿಯವರಿಗೆ ನಮ್ಮ ಸ್ನೇಹಪೂರ್ವಕ ನಮಸ್ಕಾರಗಳು.

ಪುಸ್ತಕ ಪ್ರಕಟಣೆಗೆ ಆರ್ಥಿಕವಾಗಿ ಬೆನ್ನೆಲುಬಾಗಿನಿಂತ ಶ್ರೀ ಎ.ಎಚ್. ರಾಮರಾವ್ ಮತ್ತು ಶ್ರೀಮತಿ ಸುಧಾ.ಆರ್.ರಾವ್, ಶ್ರೀ ಕೆ.ಟಿ. ಚಂದ್ರಶೇಖರ್, ಶ್ರೀ ನರಸಿಂಗಪ್ಪ, ಶ್ರೀ ಸ. ಜಗನ್ನಾಥ್ ಮತ್ತು ಎಚ್. ಜಿ. ಪುಟ್ಟಣ್ಣ ಇವರುಗಳಿಗೆ ಋಣಿಗಳಾಗಿದ್ದೇವೆ.

ಈ ಕೃತಿ ಪ್ರಕಟಣೆಗೆ ಹಲವು ವಿಧದಲ್ಲಿ ನೆರವು ನೀಡಿದ ಶ್ರೀ ಆನಂದಆಚಾರ್ಯ, ಶ್ರೀ ಪ್ರಹ್ಲಾದರಾವ್, ಶ್ರೀ ಎಂ.ಆರ್ ಗೋಪಾಲಕೃಷ್ಣ, ಶ್ರೀ ಎಂ.ಆರ್. ಗುರುರಾಜ್, ಶ್ರೀ. ಬಿ.ಎನ್. ಸತ್ಯನಾರಾಯಣ ರಾವ್ ಮತ್ತು ಶ್ರೀ ವೆಂಕಟೇಶ ಪ್ರಸಾದ್‌ರವರುಗಳಿಗೆ –

ಈ ಪುಸ್ತಕಕ್ಕೊಂದು ಅಂದವಾದ ಮುಖಚಿತ್ರ ಬಿಡಿಸಿದ , ಶ್ರೀವಾದಿರಾಜ್ ವಡೆಯರ್ ರವರಿಗೆ –

ಕೀರ್ತನೆಗಳನ್ನು ಕಂಪ್ಯೂಟರಿಗೆ ತುಂಬಿಸಿದ ಶ್ರೀಮತಿ ಸವಿತಾ ಶರತ್‌ರವರಿಗೆ –

ಮುದ್ರಣದ ಹೊರೆಹೊತ್ತು ಅತ್ಯಲ್ಪ ಕಾಲದಲ್ಲಿ ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟ ಸುಪ್ರೀಮ್ ಆಫ್‌ಸೆಟ್ ಪ್ರಿಂಟರ್ಸ್‌ನ ಶ್ರೀ ಅರುಣ್ ಕುಮಾರ್ ಮತ್ತು ಸಿಬ್ಬಂದಿಯವರಿಗ –

ಮತ್ತು 'ಕೊಂಡು ಓದುವ, ಹಾಡುವ' ನಿಮಗೆಲ್ಲರಿಗೂ ನಮ್ಮ ಕೃತಜ್ಞತೆಗಳು.

**ಹೊ.ರಾ. ಸತ್ಯನಾರಾಯಣ ರಾವ್**
**ವೈ. ಎನ್. ಗುಂಡೂರಾವ್**

# ಪ ರಿ ವಿ ಡಿ


| | ಹಾಡುಗಳು | ದಾಸರು | ಪುಟ |
|---|---|---|---|
| ೧ | ಅಂಜಿಕ್ಯಾಕೆನಗಂಜಿಕಿ | ಪ್ರಸನ್ನ ವೆಂಕಟದಾಸರು | ೧ |
| ೨ | ಅಂತರಂಗದೊಳು ಪೊಳೆವವನು | ವಿಜಯದಾಸರು | ೧ |
| ೩ | ಅಪ್ಪವೆಂಕೋಬನ ನೇತ್ರದಲಿ | ಹರಪನಹಳ್ಳಿ ಭೀಮವ್ವ | ೩ |
| ೪ | ಅರಸಿನ ಭೀತಿಯಿಂದ | ವಿಜಯದಾಸರು | ೬ |
| ೫ | ಅರಳಿದ ಕೆಂದಾವರೆಯ | ವಾದಿರಾಜರು | ೮ |
| ೬ | ಆ ವೆಂಕಟಗಿರಿಯನಂಘ್ರಿ | ಜಗನ್ನಾಥದಾಸರು | ೧೧ |
| ೭ | ಆದಿದೈವವೆ ನಿನ್ನ ಪಾದವೆ | ವಿಜಯದಾಸರು | ೧೩ |
| ೮ | ಆವದೇವರಿಗುಂಟೀ ವೈಭವ | ಶ್ರೀ ರಾಮದಾಸರು | ೧೫ |
| ೯ | ಇಂದಿರಾ ದೇವಿ ಗುಣಿಸಿ | ವಿಜಯದಾಸರು | ೧೬ |
| ೧೦ | ಇಂದು ನಾನೇನು ಸುಕೃತವ | ಪುರಂದರದಾಸರು | ೧೮ |
| ೧೧ | ಇನ್ನೆಂದಿಗೋ ನಿನ್ನ ದರುಶನ | ಉರಗಾದ್ರಿವಾಸ ವಿಠಲರು | ೧೯ |
| ೧೨ | ಈ ಜೀವವಿದ್ದು ಫಲವೇನು | ಪುರಂದರದಾಸರು | ೨೨ |
| ೧೩ | ಈತನಾತುಮ ಮೂರುತಿ | ವಿಜಯದಾಸರು | ೨೩ |
| ೧೪ | ಎಂದು ಕಾಂಬೆನೊ ಎನ್ನ ಸಲಹುವ | ವಾದಿರಾಜರು | ೨೪ |
| ೧೫ | ಎಷ್ಟು ಹೇಳಲಿ ವೆಂಕಟಗಿರಿಯ | ಹರಪನಹಳ್ಳಿ ಭೀಮವ್ವ | ೨೫ |
| ೧೬ | ಎಸವೊ ಪೊಸರತುನ ರಂಜಿಸುವ | ವಿಜಯದಾಸರು | ೨೬ |
| ೧೭ | ಕಂಡೆ ಕಂಡೆ ಸ್ವಾಮಿಯ ಬೇಡಿಕೊಂಡೆ | ಪುರಂದರದಾಸರು | ೨೯ |
| ೧೮. | ಕಂಡೆ ಕರುಣಾಕರನ ಕಣ್ಣಾರೆ | ವಿಜಯದಾಸರು | ೩೦ |
| ೧೯ | ಕಂಡೆನಾ ಬ್ರಹ್ಮಾಂಡದೊಡೆಯ ಶ್ರೀ | ಉರಗಾದ್ರಿವಾಸ ವಿಠಲರು | ೩೨ |
| ೨೦ | ಕಂಡು ಧನ್ಯನಾದೆ ನಂದ ತನಯನ | ಹರಪನಹಳ್ಳಿ ಭೀಮವ್ವ | ೩೩ |
| ೨೧ | ಕನಸು ಕಂಡೆನೆ ಮನದಲ್ಲಿ | ಪುರಂದರದಾಸರು | ೩೩ |
| ೨೨ | ಕಮಲಾ ಕಮಲಾಸನದಿಂದೊಪ್ಪುವ | ವಿಜಯದಾಸರು | ೩೪ |
| ೨೩ | ಕಾಯದಿಂದಲಿ ಭಕ್ತ ಮಾಡೀದಪರಾಧ | ವಿಜಯದಾಸರು | ೩೬ |
| ೨೪ | ಕೆಂದಳವ ಸೋಲಿಸುವ ನಖಗಳಾನಂತ | ವಿಜಯದಾಸರು | ೩೮ |
| ೨೫ | ಕೇವಲ ಕೈವಲ್ಯ ಇಲ್ಲೀದೊರೆವುದು | ಮಹಿಪತಿದಾಸರು | ೪೨ |
| ೨೬ | ಕೊಡು ಸುಖವ ಜಗಪಾಲಯ | ಶ್ರೀ ರಾಮದಾಸರು | ೪೨ |

| | ಹಾಡುಗಳು | ದಾಸರು | ಪುಟ |
|---|---|---|---|
| ೨೭ | ಕೋಮಲತಿ ಶುಭಗಾತ್ರನ | ಪ್ರಸನ್ನವೆಂಕಟದಾಸರು | ೪೩ |
| ೨೮ | ಕೋಲು ಕೋಲನ್ನೆ ಕೋಲು | ಅನಂತಾದ್ರೀಶವಿಠಲರು | ೪೪ |
| ೨೯ | ಗಿರಿಯ ತಿಮ್ಮಪ್ಪ ವಾಹನಗಳೇರಿ ನಿತ್ಯಾ | ವಿಜಯದಾಸರು | ೪೫ |
| ೩೦ | ಗಿರಿಯ ಶಿಖರವ ಕಂಡೆ | ವಿಜಯದಾಸರು | ೪೬ |
| ೩೧ | ಗಿರಿಯ ಶಿಖರವ ನೋಡಿ | ವಿಜಯದಾಸರು | ೪೮ |
| ೩೨ | ಗಿರಿರಾಜ ಗಿರಿರಾಜ ತರಣಿಶತ | ಜಗನ್ನಾಥದಾಸರು | ೫೧ |
| ೩೩ | ಗಿರಿರಾಜ ಚಿತ್ತ ಉದಾರ ಜೀಯಾ | ವಿಜಯದಾಸರು | ೫೨ |
| ೩೪ | ಗಿರಿರಾಯಾ ಗಿರಿರಾಯಾ | ಗುರುಜಗನ್ನಾಥದಾಸರು | ೫೨ |
| ೩೫ | ಗೋವಿಂದ ನಿನ್ನಾನಂದದಲ್ಲಿಡೊ | ಉರಗಾದ್ರಿವಾಸ ವಿಠಲರು | ೫೩ |
| ೩೬ | ಚಿಂತೆಯಾ ಪರಿಹರಿಸೋ ತಿಮ್ಮಯ್ಯಾ | ಪ್ರಸನ್ನವೆಂಕಟದಾಸರು | ೫೫ |
| ೩೭ | ಚಿಕ್ಕ ತಿರುಪತಿವಾಸ–ಶ್ರೀವೆಂಕಟೇಶ | ಗುರುಗೋವಿಂದವಿಠಲರು | ೫೬ |
| ೩೮ | ಜಗದಾದಿವಂದ್ಯನಿಗೆ ಶರಣು | ಉರಗಾದ್ರಿವಾಸ ವಿಠಲರು | ೫೭ |
| ೩೯ | ಜಯ ಜಯ ವೆಂಕಟರಮಣ | ವ್ಯಾಸವಿಠಲದಾಸರು | ೬೬ |
| ೪೦ | ಜಯ ಜಯಾ ಶ್ರೀ ವೆಂಕಟೇಶ | ಉರಗಾದ್ರಿವಾಸ ವಿಠಲರು | ೭೦ |
| ೪೧ | ಜಯಭೋ ಜಯಭೋ ಜಯ | ಪ್ರಸನ್ನವೆಂಕಟದಾಸರು | ೭೧ |
| ೪೨ | ಜೈ ಜೈ ವೆಂಕಟರಾಯ ಸಲಹು | ಶ್ರೀ ರಾಮದಾಸರು | ೭೧ |
| ೪೩ | ಜೈ ತಿರುಪತಿ ವೆಂಕಟರಮಣ | ಶ್ರೀ ರಾಮದಾಸರು | ೭೩ |
| ೪೪ | ತಪ್ಪುಗಳೆಲ್ಲ ನೀನೊಪ್ಪಿ ಕೊಳ್ಳೋ | ಪುರಂದರದಾಸರು | ೭೪ |
| ೪೫ | ತಿಮ್ಮಯ್ಯಾ ನಿನ್ನ ಪಾದವ | ವಿಜಯದಾಸರು | ೭೬ |
| ೪೬ | ತಿರುಪತಿ ವೆಂಕಟರಮಣ ನಿನಗೇತಕೆ | ಪುರಂದರದಾಸರು | ೭೮ |
| ೪೭ | ದಣಿಯ ನೋಡಿದೆನೋ ವೆಂಕಟನ | ಪುರಂದರದಾಸರು | ೮೦ |
| ೪೮ | ದಾಸ ಶೇಷಾದ್ರಿವಾಸ ತಿಮ್ಮಪ್ಪನ | ಪುರಂದರದಾಸರು | ೮೧ |
| ೪೯ | ದೇವ ದೇವೇಶ ವೆಂಕಟೇಶ | ಪ್ರಸನ್ನವೆಂಕಟದಾಸರು | ೮೩ |
| ೫೦ | ದೇವ ಬಾರೋ ಶ್ರೀನಿವಾಸ ದೇವನೆ | ಪ್ರಸನ್ನವೆಂಕಟದಾಸರು | ೮೪ |
| ೫೧ | ಧ್ವಜದ ತಿಮ್ಮಪ್ಪ ಪಲ್ಲಕ್ಕಿಯೇರಿ | ಪುರಂದರದಾಸರು | ೮೫ |
| ೫೨ | ಧೊರೆ ಧೊರೆ ವೆಂಕಟೇಶ ನೀನೆ | ಶ್ರೀನಿಧಿವಿಠಲರು | ೮೫ |
| ೫೩ | ನಂಬಿದೆ ನಿನ್ನ ಪಾದವ | ಪುರಂದರದಾಸರು | ೮೬ |
| ೫೪ | ನಡೆದು ಬಾರಯ್ಯ ನೀನು ವೆಂಕಟರಾಯ | ಗೋಪಾಲದಾಸರು | ೮೭ |

| | ಹಾಡುಗಳು | ದಾಸರು | ಪುಟ |
|---|---|---|---|
| ೫೫ | ನಾನೇನು ಮಾಡಿದೆನೋ ವೆಂಕಟರಾಯ | ಪುರಂದರದಾಸರು | ೮೮ |
| ೫೬ | ನಮಿಸುವೆ ನಾ ನಿನ್ನ ಚರಣ ಕಮಲಕ್ಕೆ | ಶ್ರೀಪತಿವಿಠಲದಾಸರು | ೮೯ |
| ೫೭ | ನಾರಾಯಣಾದ್ರಿಕೃತವಾಸ ಶರಣು | ಜಗನ್ನಾಥದಾಸರು | ೯೦ |
| ೫೮ | ನಿನಗ್ಯಾಕೆ ದಯ ಬಾರದೊ ಶ್ರೀ | ರಘುನಾಥವಿಠಲರು | ೯೧ |
| ೫೯ | ನಿನ್ನ ಅರಸುತನಕ್ಕೇನೆಂಬೆನೊ ವೆಂಕಟೇಶಾ | ವಿಜಯದಾಸರು | ೯೨ |
| ೬೦ | ನಿನ್ನ ದಿವ್ಯ ಮೂರುತಿಯ | ಪುರಂದರದಾಸರು | ೯೩ |
| ೬೧ | ನಿನ್ನ ನಾನೇನೆಂದೆನೋ ವೆಂಕಟರಾಯ | ಕನಕದಾಸರು | ೯೪ |
| ೬೨ | ನಿನ್ನ ನೋಡಿ ಧನ್ಯನಾದೆನೊ | ಪುರಂದರದಾಸರು | ೯೫ |
| ೬೩ | ನಿನ್ನ ಮಹಿಮೆಯನಾರು ಬಲ್ಲರು | ಪ್ರಸನ್ನವೆಂಕಟದಾಸರು | ೯೬ |
| ೬೪ | ನೋಡಿದೆ ವೇಂಕಟ ನಿನ್ನ ನೋಡಿದೆ | ಗುರುಜಗನ್ನಾಥದಾಸರು | ೯೭ |
| ೬೫ | ನೋಡಿರಮ್ಮ ವೆಂಕಟೇಶ ಹೂಡಿದಾಟವ | ತಂದೆ ವೆಂಕಟೇಶವಿಠಲರು | ೯೯ |
| ೬೬ | ನೋಡು ನೋಡು ವೆಂಕಟೇಶ | ಪುರಂದರದಾಸರು | ೧೦೦ |
| ೬೭ | ಪನ್ನಗಾದ್ರಿನಿವಾಸ ಸುದರ್ಶನ | ಜಗನ್ನಾಥದಾಸರು | ೧೦೫ |
| ೬೮ | ಪನ್ನಗಾದ್ರಿಪತಿ ನಮಗೆ ನೀಗತಿ | ಪುರಂದರದಾಸರು | ೧೦೭ |
| ೬೯ | ಪಾದಕಂಡು ಪಾವನಾದೆನೊ | ಶ್ರೀ ರಾಮದಾಸರು | ೧೦೮ |
| ೭೦ | ಪಾದವ ತೊಳೆದ ಗಗನ ರಾಜನು | ವೆಂಕಟವಿಠಲರು | ೧೧೦ |
| ೭೧ | ಪಾಪೋಸು ಪೋದವಲ್ಲ ಸ್ವಾಮಿ | ಪುರಂದರದಾಸರು | ೧೧೦ |
| ೭೨ | ಪಾಲಿಸಯ್ಯ ಪವನನಯ್ಯ | ಗೋಪಾಲದಾಸರು | ೧೧೧ |
| ೭೩ | ಪೊರೆ ಸುರೇಶ ಶ್ರೀಶ ಶ್ರೀನಿವಾಸ | ಶ್ರೀ ರಾಮದಾಸರು | ೧೧೨ |
| ೭೪ | ಪೋಷಿಸೆನ್ನ ವೆಂಕಟೇಶ | ಶ್ರೀ ರಾಮದಾಸರು | ೧೧೩ |
| ೭೫ | ಪ್ರಾತಃಸ್ಮರಾಮಿ ರಮಯಾ ಸಹ | ವ್ಯಾಸರಾಯರು | ೧೧೩ |
| ೭೬ | ಬಂದು ನಿಂದಿಹ ನೋಡಿ | ಪುರಂದರದಾಸರು | ೧೧೪ |
| ೭೭ | ಬಂದೆವಯ್ಯ ಗೋವಿಂದ ಶೆಟ್ಟಿ | ಕನಕದಾಸರು | ೧೧೫ |
| ೭೮ | ಬಂದೇ ಬಂದೆ ಬಂದೆ ಸ್ವಾಮಿ | ಗೋಪಾಲದಾಸರು | ೧೧೬ |
| ೭೯ | ಬಣ್ಣಿಸಲಳವೆ ನಿನ್ನ ವೆಂಕಟರನ್ನ | ಪುರಂದರದಾಸರು | ೧೧೭ |
| ೮೦ | ಬಣ್ಣಿಸಾಲೆಮ್ಮಾ ನಾನು | ಪ್ರಸನ್ನವೆಂಕಟದಾಸರು | ೧೨೦ |
| ೮೧ | ಬಾ ವೆಂಕಟ ಶೈಲಾಧಿಪ | ಜಗನ್ನಾಥದಾಸರು | ೧೨೩ |
| ೮೨ | ಬಾರಯ್ಯ ಬಾ ಬಾ ಭಕುತರ | ಗೋಪಾಲದಾಸರು | ೧೨೪ |

| | ಹಾಡುಗಳು | ದಾಸರು | ಪುಟ |
|---|---|---|---|
| ೮೩ | ಬಾರಯ್ಯ ವೆಂಕಟರಮಣ | ಪುರಂದರದಾಸರು | ೧೨೫ |
| ೮೪ | ಬಾರೊ ಗೋವಿಂದ ಮನೆಗೆ | ಶ್ರೀಪಾದರಾಜರು | ೧೨೬ |
| ೮೫ | ಬಾರೋ ವೆಂಕಟೇಶ ಮನೆಗೆ | | ೧೨೭ |
| ೮೬ | ಬಾರೋ ವೆಂಕಟಗಿರಿನಾಥ ದಯ | ಲಕ್ಷ್ಮೀನಾರ್ಣಪ್ಪಯ್ಯ | ೧೨೮ |
| ೮೭ | ಬಿಡೆನೋ ನಿನ್ನಂಘ್ರಿ ಶ್ರೀನಿವಾಸಾ ಎನ್ನ | ಪ್ರಸನ್ನವೆಂಕಟದಾಸರು | ೧೩೦ |
| ೮೮ | ಬೆಟ್ಟದೊಡೆಯ ಶ್ರೀನಿವಾಸಗೆ | | ೧೩೨ |
| ೮೯ | ಭಾನುಕೋಟಿ ತೇಜ ಲಾವಣ್ಯ | ಗುರುಶ್ರೀಶವಿಠಲರು | ೧೩೨ |
| ೯೦ | ಭೂಷಣಕೆ ಭೂಷಣ | ಶ್ರೀಪಾದರಾಜರು | ೧೩೫ |
| ೯೧ | ಮಧ್ವಾಂತರ್ಗತ ಶ್ರೀನಿವಾಸಾ | ವ್ಯಾಸವಿಠಲದಾಸರು | ೧೩೫ |
| ೯೨ | ಮನ್ನಿಸೋ ಶ್ರೀ ವೆಂಕಟೇಶಾ | ವಾದಿರಾಜರು | ೧೩೭ |
| ೯೩ | ಮನುಷ್ಯನಾದ ಫಲವೇನು | ಪ್ರಸನ್ನವೆಂಕಟದಾಸರು | ೧೩೮ |
| ೯೪ | ಮೂರುನಾಮಗಳ ಧರಿಸಿದ | ಗೋಪಾಲದಾಸರು | ೧೩೯ |
| ೯೫ | ಯಾಕೆ ನಿನ್ನ ಮನಕೆ ಬಾರೆನೊ | ಗುರುಜಗನ್ನಾಥದಾಸರು | ೧೪೦ |
| ೯೬ | ಯಾಕೆ ನಿನ್ನ ಮನಕೆ ಬಾರೆನೊ | ಗುರುಜಗನ್ನಾಥದಾಸರು | ೧೪೦ |
| ೯೭ | ರಂಗನ ನೋಡಿರೆ | ಪುರಂದರದಾಸರು | ೧೪೧ |
| ೯೮ | ರಕ್ಷಿಸೋ ವೆಂಕಟಗಿರಿರಾಜ ರವಿಶತ | ಗುರುಗೋಪಾಲದಾಸರು | ೧೪೨ |
| ೯೯ | ರಕ್ಷಿಸೋ ಶ್ರೀಶ ಶ್ರೀನಿವಾಸ | ಜಗನ್ನಾಥದಾಸರು | ೧೪೫ |
| ೧೦೦ | ಲಾಲಿ ಪಾವನ ಚರಣ ಲಾಲಿ | ಕನಕದಾಸರು | ೧೪೬ |
| ೧೦೧ | ವಂಚನೆಲ್ಲಿಹ್ಯದಯ್ಯ ವೈಕುಂಠಪತಿ | ಶ್ರೀ ರಾಮದಾಸರು | ೧೪೭ |
| ೧೦೨ | ವರಮಣಿಗಳ ಕೆತ್ತಿಸಿದ ಮುಕುಟದ | ಪುರಂದರದಾಸರು | ೧೪೮ |
| ೧೦೩ | ವರ ವೈಕುಂಠದಿ ಬಂದವಗೇ | ಅನಂತಾದ್ರೀಶವಿಠಲರು | ೧೪೯ |
| ೧೦೪ | ವಸುದೇವ ಅತ್ರಿಸುತಪ | ವಿಜಯದಾಸರು | ೧೫೦ |
| ೧೦೫ | ವಿಗ್ರಹವನೆ ನಿಲ್ಲಿಸೋ | ವಿಜಯದಾಸರು | ೧೫೪ |
| ೧೦೬ | ವೆಂಕಟಪತಿ ಶರಣು ಹಾಹಾ | ಪ್ರಸನ್ನವೆಂಕಟದಾಸರು | ೧೫೪ |
| ೧೦೭ | ವೆಂಕಟರಮಣ ವೇದಾಂತ | ಪುರಂದರದಾಸರು | ೧೫೫ |
| ೧೦೮ | ವೆಂಕಟರಮಣನೆ ಬಾರೋ | ಪುರಂದರದಾಸರು | ೧೫೬ |
| ೧೦೯ | ವೇಂಕಟಾಚಲನಿಲಯಂ ವೈಕುಂಠ | ಪುರಂದರದಾಸರು | ೧೫೬ |
| ೧೧೦ | ವೆಂಕಟಾಚಲನಿಲಯಾ ಎನ್ನ ಒಡೆಯಾ | ವಿಜಯದಾಸರು | ೧೫೭ |

| | ಹಾಡುಗಳು | ದಾಸರು | ಪುಟ |
|---|---|---|---|
| ೧೧೧ | ವೆಂಕಟಾಚಲ ನಿವಾಸ ಜಗದೀಶ | | ೧೫೮ |
| ೧೧೨ | ವೆಂಕಟಾಚಲವಾಸ ವೇದಾಂತ ವೇದ್ಯಾ | ವ್ಯಾಸವಿಠಲರು | ೧೫೯ |
| ೧೧೩ | ವೆಂಕಟಾದ್ರಿ ವರದಾ | ಪ್ರಸನ್ನವೆಂಕಟದಾಸರು | ೧೬೦ |
| ೧೧೪ | ವೆಂಕಟೇಶ ಕಾಯೋ | ಜಗನ್ನಾಥದಾಸರು | ೧೬೧ |
| ೧೧೫ | ವೆಂಕಟೇಶ ದಯಮಾಡೋ | ಪುರಂದರದಾಸರು | ೧೬೧ |
| ೧೧೬ | ವೆಂಕಟೇಶ ನಮೋ ವೆಂಕಟೇಶ | ಮಹಿಪತಿದಾಸರು | ೧೬೨ |
| ೧೧೭ | ವೆಂಕಟೇಶ ನಿನ್ನ ನಾಮಕ್ಕೆ | ಪುರಂದರದಾಸರು | ೧೬೨ |
| ೧೧೮ | ವೆಂಕಟೇಶ ಬೇಡಿಕೊಂಬೆ | ಪುರಂದರದಾಸರು | ೧೬೩ |
| ೧೧೯ | ವೆಂಕಟೇಶ ಭವ ಸಂಕಟ ಕಳೆ ವೆಂಕಟೇಶ | ಗುರುಗೋವಿಂದವಿಠಲರು | ೧೬೪ |
| ೧೨೦ | ವೆಂಕಟೇಶ ಭವ ಸಂಕಟ ಪರಿಹರಿಸೋ | ಶ್ರೀಪತಿವಿಠಲರು | ೧೬೫ |
| ೧೨೧ | ವೆಂಕಟೇಶ ಮಂತ್ರ ಒಂದೇ | ವಿಜಯದಾಸರು | ೧೬೫ |
| ೧೨೨ | ವೆಂಕಟೇಶ ವೆಂಕಟನಾಯಕ | | ೧೬೬ |
| ೧೨೩ | ವೆಂಕಟೇಶನ ಮಹಿಮೆಯ ಹೊಗಳುವಾ | ಪ್ರಸನ್ನವೆಂಕಟದಾಸರು | ೧೬೭ |
| ೧೨೪ | ವೆಂಕಟೇಶ ಶ್ರೀ ವೆಂಕಟೇಶ ಪಾಲಿಸು | ಪ್ರಸನ್ನವೆಂಕಟದಾಸರು | ೧೭೦ |
| ೧೨೫ | ವೇಣುನಾದ ಬಾರೋ ಶ್ರೀ | ಪುರಂದರದಾಸರು | ೧೭೧ |
| ೧೨೬ | ಶರಣ ಜನರ ಪಾಲ ಹರಿ ದಯಾಸಿಂಧುವೆ | ಶ್ರೀ ರಾಮದಾಸರು | ೧೭೨ |
| ೧೨೭ | ಶರಣು ವೆಂಕಟರಮಣ ನಿನ್ನ ಚರಣವ | ಪುರಂದರದಾಸರು | ೧೭೩ |
| ೧೨೮ | ಶರಣು ವೆಂಕಟರಮಣ ಭಕ್ತ | ಕೃಷ್ಣರಾಯರು | ೧೭೩ |
| ೧೨೯ | ಶರಣು ಶರಣು ನಿನಗೆಂಬೆನೊ ವಿಠಲ | ಪುರಂದರದಾಸರು | ೧೭೪ |
| ೧೩೦ | ಶ್ರೀನಿವಾಸನಂಘ್ರಿಯ ಸೇವೆಯ | ಪುರಂದರದಾಸರು | ೧೭೪ |
| ೧೩೧ | ಶ್ರೀನಿವಾಸ ನೀನೇ ಪಾಲಿಸೊ ಶ್ರಿತಜನ | ಪುರಂದರದಾಸರು | ೧೭೫ |
| ೧೩೨ | ಶ್ರೀನಿವಾಸ ನಿಮಿಷಮುನಿ | ಪ್ರಸನ್ನವೆಂಕಟದಾಸರು | ೧೭೬ |
| ೧೩೩ | ಶ್ರೀನಿವಾಸ ಬಾರೋ ಮನಕೆ ನೀ ಬೇಗನೆ | ವರದಗೋಪಾಲವಿಠಲರು | ೧೭೬ |
| ೧೩೪ | ಶ್ರೀನಿವಾಸ ಶ್ರೀನಿವಾಸ ದೀನರಕ್ಷಕ | ಉರಗಾದ್ರಿವಾಸವಿಠಲರು | ೧೭೭ |
| ೧೩೫ | ಶ್ರೀನಿವಾಸಾ ನಿನ್ನಯಾಟ ಏನು ಪೇಳಾಲಿ | ಗುರುಜಗನ್ನಾಥದಾಸರು | ೧೭೮ |
| ೧೩೬ | ಶ್ರೀನಿವಾಸನ ಕ್ಷೇತ್ರ ಎಂಥದೊ | ವಿಜಯದಾಸರು | ೧೭೯ |
| ೧೩೭ | ಶ್ರೀನಿವಾಸನೆ ಏನು ಬೇಡಲಿ ನಿನ್ನ | ಗುರುಶ್ರೀಶವಿಠಲರು | ೧೮೦ |
| ೧೩೮ | ಶ್ರೀನಿವಾಸನೆ ನಿನಗೇನು ಬಿನ್ನೈಸಲೊ | ಗುರುಶ್ರೀಶವಿಠಲರು | ೧೮೧ |

| | ಹಾಡುಗಳು | ದಾಸರು | ಪುಟ |
|---|---|---|---|
| ೧೩೯ | ಶ್ರೀನಿವಾಸನೆ ನಿನ್ನ ಧ್ಯಾನವ | ಶ್ರೀನಿವಾಸಮೂರ್ತಿ | ೧೮೪ |
| ೧೪೦ | ಶ್ರೀನಿವಾಸನು ಒಲಿಯನು ಕೇಳೊ | ಪುರಂದರದಾಸರು | ೧೮೪ |
| ೧೪೧ | ಶ್ರೀನಿವಾಸನು ಬಂದ ಕೋನೇರಿ ತಿಮ್ಮಪ್ಪ | ಪುರಂದರದಾಸರು | ೧೮೫ |
| ೧೪೨ | ಶ್ರೀರಮಣ ಸರ್ವೇಶ ಸರ್ವಗ | ಗುರುಜಗನ್ನಾಥದಾಸರು | ೧೮೬ |
| ೧೪೩ | ಶ್ರೀವೆಂಕಟೇಶ ಎನ್ನ ಸಲಹಲ್ಯಾಕೆ | ಹೆಳವನಕಟ್ಟೆ ಗಿರಿಯಮ್ಮ | ೧೯೦ |
| ೧೪೪ | ಶ್ರೀವೆಂಕಟೇಶನ ಬಿಡಬ್ಯಾಡಿ | ಪ್ರಸನ್ನವೆಂಕಟದಾಸರು | ೧೯೦ |
| ೧೪೫ | ಶ್ರೀ ವೆಂಕಟೇಶಾ ಸಲಹು ವೆಂಕಟೇಶ | ಪ್ರಸನ್ನವೆಂಕಟದಾಸರು | ೧೯೧ |
| ೧೪೬ | ಶ್ರೀಶ ನೀನಹುದೋ ಶೇಷಾಚಲ | ವಾದಿರಾಜರು | ೧೯೧ |
| ೧೪೭ | ಶ್ರೀಶ ಶ್ರೀನಿವಾಸ ಎನ್ನ ದ್ಯಾಸದೀ | ಶ್ರೀ ರಾಮದಾಸರು | ೧೯೨ |
| ೧೪೮ | ಶ್ರೀಶೈಲದೊಳಗಿಪ್ಪ ಸ್ವಾಮಿಪುಷ್ಕರಣಿ | ಜಗನ್ನಾಥದಾಸರು | ೧೯೩ |
| ೧೪೯ | ಸಕಲ ದುರಿತಗಳ ಪರಿಹಾರ | ವರದಪುರಂದರವಿಠಲರು | ೧೯೭ |
| ೧೫೦ | ಸಪ್ತಗಿರಿಯವಾಸ ಶ್ರೀ ವೆಂಕಟೇಶ | ಗುರುಗೋವಿಂದವಿಠಲರು | ೧೯೭ |
| ೧೫೧ | ಸಲಹು ವೆಂಕಟರಮಣ | ಪ್ರಸನ್ನವೆಂಕಟದಾಸರು | ೧೯೮ |
| ೧೫೨ | ಸಾಗಿ ಬಾರಯ್ಯಾ ಭವರೋಗದ ವೈದ್ಯನೆ | ವಿಜಯದಾಸರು | ೧೯೯ |
| ೧೫೩ | ಸಾರಿದೆನೊ ನಿನ್ನ ವೆಂಕಟರನ್ನ | ವಾದಿರಾಜರು | ೨೦೧ |
| ೧೫೪ | ಸಿಂಗನ ಯೇರಿದ ನರಸಿಂಗ | ವಿಜಯದಾಸರು | ೨೦೧ |
| ೧೫೫ | ಸ್ತ್ರೀಯರೆಲ್ಲರು ಬನ್ನಿರೆ | ವಾದಿರಾಜರು | ೨೦೨ |
| ೧೫೬ | ಸ್ಮರಿಸಿದವರನು ಕಾಯ್ವ | ಶ್ರೀಪಾದರಾಜರು | ೨೦೫ |
| ೧೫೭ | ಸ್ವಾಮಿ ಪುಷ್ಕರ ತೀರ ನಿಲಯ ನಮೋ | ಪ್ರಸನ್ನವೆಂಕಟದಾಸರು | ೨೦೬ |
| ೧೫೮ | ಹರೇ ವೆಂಕಟಶೈಲ ವಲ್ಲಭ | ಶ್ರೀಪಾದರಾಜರು | ೨೦೭ |
| ೧೫೯ | ಜಯ ಮಂಗಳಂ ನಿತ್ಯ ಶುಭ ಮಂಗಳಂ | ವಾದಿರಾಜರು | ೨೦೭ |
| ೧೬೦ | ಜಯ ಮಂಗಳಂ ನಿತ್ಯ ಶುಭ ಮಂಗಳಂ | ವಿಜಯದಾಸರು | ೨೧೧ |

★ ಹರಿದಾಸರ ಪರಿಚಯ ೨೧೩–೨೩೦

೧

ಪೂರ್ವಿ ಅಟ್ಟ

ಅಂಜಿಕ್ಯಾಕೆನಗಂಜಿಕಿ
ಕಂಜನಾಭ ಶ್ರೀನಿವಾಸನ ದಯವಿರಲು ಪ

ಅಶನವಸನವನ್ನು ಕುಳತಲ್ಲೆ ನಡೆಸುವ
ನಿಶಿದಿನ ನೀಚರಾಧೀನ ಮಾಡದೆ
ಹಸನಾಗಿ ತನ್ನಂಘ್ರಿ ನೆಳಲೊಳು ಬಚ್ಚಿಟ್ಟು
ಕುಶಲದಿ ಸಾಕುವ ಧೊರೆಯ ನಂಬಿದ ಬಳಿಕ ೧

ಹುಲ್ಲುಕಚ್ಚಿ ಕಲ್ಲುಹೊತ್ತು ಧನವನುಳ್ಳ
ಕ್ಷುಲ್ಲಕ ಚಿತ್ತವ ಕಾಯುವಾಸಕ್ತಿ
ಎಲ್ಲ ವ್ಯವಹಾರವ ಮಾಡುವ ಬಲ ನನ -
ಗಿಲ್ಲೆಂದು ಆಯಾಸಬಡಲೀಸದವನಿರೆ ೨

ಆವ ದೇಶದಲಿರೆ ಆವ ಕಾಲದಲಿರೆ
ಸೇವೆಗೆ ನಾ ತಪ್ಪೆ ಕೃಪೆ ತಪ್ಪಿಸಾ
ಭಾವಿಕರೊಡೆಯಾ ಶ್ರೀಪ್ರಸನ್ವೆಂಕಟಾದ್ರೀಶಾ
ಸಾವು ಕಳೆದು ಜೀವಕಾಶ್ರಯನಾಗಿರೆ ೩

೨

ಭೈರವಿ ಧ್ರುವ

ಅಂತರಂಗದೊಳು ಪೊಳೆವವನು ಶ್ರೀ
ಕಾಂತನೊ ಬೊಮ್ಮನ ಪಡದ ದೇವಾನೊ
ಕಂತುಜನಕಾನೊ ಅನಂತನದಿಯಪಿತನೊ
ಅಂತಕಾಂತಕನ ಪೆತ್ತಯ್ಯನೊ ಅಯ್ಯನೊ
ಸಂತತಚಿಂತಿಪ ಭಕ್ತರ ಮನೋಹರನೊ
ಅಂತಕನೊ ದೈತ್ಯಸಂತತಿಗೆ
ದಂತಿಯ ಪಾಲಿಸಿದ ಪರಮಪವಿತ್ರನೊ
ಕುಂತಿಯ ಮಕ್ಕಳಿಗೆ ಬಿಡದೆ ಬೆಂಬಲನೊ

ದಂತವಕ್ತ್ರಾದಿಯ ಕೊಂದ ಬಲವಂತನೊ
ಹೊಂತುಕಾರನೊ ಜಗದಂತರಿಯಾಮನೊ
ತಂತುಗಾರನೊ ಶೃಂಗಾರವರನೊ
ಪಂಥದ ದೈವಾವೆ ವಿಜಯವಿಠಲರೇಯಾ
ಎಂಥಾವರನ ಭ್ರಾಂತಿಗೊಳಿಸುವ ಧಿಟ್ಟನೊ ೧

### ಮಟ್ಟ

ಶ್ರೀಶ ಈಶ ಶೇಷ ಭೂಷಾಧೀಶ ದಾಸ
ರಾಶ ಪಾಶ ಕ್ಲೇಶನಾಶ ದಾಶವೇಷ ದಾಶರ್ಧೀಶಾ
ಕಾಶವಾಸ ಹೃಷಿಕೇಶ ವಿಜಯವಿಠಲ
ಶೇಷಪೋಷ ಲೇಶವೆನಿಸ ೨

### ತ್ರಿವಿಡಿ

ಅಲೌಕೀಕ ವಸ್ತುವೊ ಅಮಂದನಂದಾನೊ
ಮೂಲಾಧಾರನೊ ಸಕಲಗುಣಪರಿಪೂರ್ಣನೊ
ಕಾಲಾದಿಗಳಧಿಷ್ಠಾನವಾದ ಮಹಿಮನೊ
ಮೂಲೋಕದಲಿ ಮೆರೆವ ಮುದ್ದುಲಾವಣ್ಯನೊ
ಬಾಲಕ್ರೀಡೆಯತೆರದಿ ಆಡುವ ಅಗಣಿತನೊ
ಏಳು ಕಮಲದಲ್ಲಿ ವಾಸವಾಗಿದ್ದವನೊ
ಏಳು ಗೂಳಿಯನು ವಂದೇಬಾರಿ ಬಿಗಿದವನೊ
ಲಾಲಿಪಾಡಿಸಿಕೊಂಡ ನಾಗಾರಿಗಮನನೊ
ಮೇಲುಗಿರಿಯವಾಸ ವಿಜಯವಿಠಲ ವೆಂಕಟ
ಶೈಲದಲ್ಲಿ ಇಪ್ಪ ಸರ್ವರಾಭೀಷ್ಟನೊ ೩

### ಅಟ್ಟ

ವೀರಮುದ್ರಿಕೆ ಬೆರಳರವಿಂದ ಪಾದನೊ
ಘೋರಗರುವಗೆಜ್ಜೆ ಚಾರುಹೇಮಪೆಂಡೆ
ವಾರಣ ಜಾನುಜಂಘೆವುಳ್ಳ ಚಲುವಾನೊ
ಊರರಂಭ ಉಡದಾರ ಪೀತಾಂಬರ
ಧಾರನೊ ನಾಭಿಕಮಲ ವೈಯಾರನೊ

ಹಾರಕೌಸ್ತುಭ ಹೀರತಾರಾದಿಸರನೊ
ಶ್ರೀರಮಣಿವಕ್ಷ ಸಿರಿಗಂಧಲೇಪ ಶೃಂ
ಗಾರದ ದರಹಸ್ತ ಸಾರಿಕಂಬುಧರನೊ
ಚಾರುಮೊಗದಂತ ನಾಸನಯನ ಕರ್ನಾ
ಪಾರಭೂಷಣವಾದ ಕಿರೀಟಾಂಗದ ನೂ
ಪೂರ ತಿರುಗಿ ತಿರುಗಿ ತೋರುವ ಜಾಣನೋ
ಸಾರ ಹೃದಯವಾಸ ವಿಜಯವಿಠಲ ಕಂ
ಸಾರಿ ಸಾರಿ ಸಾರಿಗೆ ಪೊರೆವವನೊ ೪

ಆದಿ

ಮಸ್ತಕದಲ್ಲಿ ಅಭಯಹಸ್ತವನು ಇಟ್ಟಬಲು
ಅಸ್ತಮಾನ ಉದಯದಾವಸ್ತಿಯನು ಹರಿಸುತ್ತಾ
ಸ್ವಸ್ಥಾನದಲ್ಲಿ ಯೆನ್ನ ಪ್ರಸ್ತುತವನ್ನು ನಡಿಸಿ
ಹಸ್ತಕನ್ನ ಮಾಡು ಪರವಸ್ತವೆ ವಿಜಯವಿಠಲ
ವಿಸ್ತಾರಮಹಿಮನೊ ಕಸ್ತೂರಿಮೃಗದಂತಂ
ತಸ್ತವಾಗಿ ಪೊಳವಾನೊ ೫

ಜತೆ

ಇಂದು ಸುಳಿದಂತೆ ಅನುಗಾಲ ಎನ್ನೊಳಗೆ
ಬಂದು ಉದ್ಧರಿಸೋದು ವಿಜಯವಿಠಲರೇಯಾ

೩

ಅಪ್ಪವೆಂಕೋಬನ ನೇತ್ರದಲಿ ನೋಡಿ ಪವಿತ್ರಳಾದೆನೋ ಇಂದಿಗೆ
ತಪ್ಪುಗಳೆಲ್ಲ ನಿನಗರ್ಪಿಸುವೆ ನಾನೀಗ
ಒಪ್ಪಿಕೋಬೇಕೊ ತಿಮ್ಮಪ್ಪ ಕರುಣಾನಿಧಿಯೆ ಪ

ಹೆದರದೆ ಭೃಗುಋಷಿಯು ಒದೆಯೆ ಪಾದಗಳಿಂದ
ಎದೆಯಮೇಲಿರುವ ಲಕ್ಷ್ಮಿ
ಕದನಮಾಡುತವೆ ಕೊಲ್ಲಾಪುರಕೆ ನಡೆತರಲು
ಒದಗಿ ವೈಕುಂಠ ಬಿಟ್ಟು

ಯದುನಾಥ ಯಾರಿಲ್ಲದಂತೆ ಗುಡ್ಡವ ಸೇರೆ
ಇದು ನಿನಗೆ ಸದನಾಯಿತೊ ದೇವ ೧

ಹುತ್ತಿನೊಳಗಡಗಿ ನೀ ಗುಪ್ತದಿಂದಿರುತಿರಲು
ಉತ್ತಮ ಗೋವು ಬಂದು
ನಿತ್ಯದಲಿ ಕ್ಷೀರವನು ಕರೆಯೆ ಗೋವಳನಿಂದೆ
ನೆತ್ತಿಯನೊಡೆದುಕೊಂಡು
ಸಿಟ್ಟಿನಿಂದಲಿ ಚೋಳರಾಯಗೆ ಶಾಪವನು
ಕೊಟ್ಟು ಕಿರೀಟವನು ಇಟ್ಟು ಮೆರೆಯುವ ದೇವ ೨

ಮಾಯಾರಮಣನೆ ನಿನ್ನ ಗಾಯದೌಷಧಕ್ಹೋಗಿ
ಭೂರಮಣನ್ವರಾಹನಿಂದ
ನೂರುಪಾದ ಭೂಮಿಕೊಟ್ಟರೆ ಸಾಕೆಂದು-
ಪಾಯದಿಂದದನ್ವ್ಯಾಪಿಸಿ
ತಾಯಿ ಬಕುಳಾದೇವಿಯಿಂದ ಪೂ-
ಜೆಯಗೊಂಬೊ ಶ್ರೀಯರಸು ನಿನಗೆ ಸರಿಯೆ ದೇವ ೩

ನಾಟಕಧಾರಿ ಕಿರಾತರೂಪವ ಧರಿಸಿ
ಬೇಟೆಗೆನುತಲಿ ಪೋಗಲು
ತೋಟದಲಿ ಚೆಲ್ವೆ ಪದ್ಮಾವತಿಯ ಕಡೆಗಣ್ಣ
ನೋಟದಿ ಮನಸೋಲಿಸಿ
ಬೂಟಕತನದಿ ಜಗಳಾಟವನ್ನೆ ಮಾಡಿ
ಪಾಟುಬಟ್ಟು ಕಲ್ಲಲೇಟುತಿಂದೆಯೋ ದೇವ ೪

ಗದಗದನೆ ನಡುಗುತಲಿ ಕುದುರೆಯನು ಕಳಕೊಂಡು
ಪದ್ಮಾವತಿ ವಾರ್ತೆಯನ್ನು ಬಳಿಯ-
ಲಿದ್ದ ಬಕುಳಮಾಲಿಕೆಗೆ ಬೋಧಿಸಿ ಕಳಿ-
ಸಿದಾಕಾಶನಲ್ಲಿ ಚದುರಮಾತಿನ
ಚಪಲಕೊರವಂಜಿ ನೀನಾಗಿ ಕಣಿಯ
ಹೇಳಲು ಎಲ್ಲಿ ಕಲಿತೆಯೊ ಮಹದೇವ ೫

ಬಂಧುಬಳಗವ ಕೂಡಿ ಭಾರಿ ಸಾಲವ ಮಾಡಿ
ಕೊಂಡು ಕರವೀರದಿಂದೆ

ಅಂಡಲೆದು ಕರೆಸಿ ಕಾಣುತಲಿ ಲಕ್ಷ್ಮಿಯನಪ್ಪಿ
ಕೊಂಡು ಪರಮ್ಹರುಷದಿಂದ
ಮಂದಗಮನೆಯೆ ನಿನ್ನ ಮಾತುಲಾಲಿಸಿ ಮಾಡಿ
ಕೊಂಡೆ ಪದ್ಮಾವತಿಯ ಅಂದೆಯೊ ಎಲೆ ದೇವ ೬

ಆಕಾಶರಾಜ ಅನೇಕ ಹರುಷದಿ ಮಾಡೆ
ತಾ ಕನ್ಯಾದಾನವನ್ನು
ಹಾಕಿದ ರತ್ನಮಾಣಿಕ್ಯದ ಕಿರೀಟವನು
ಬೇಕಾದಾಭರಣ ಭಾಗ್ಯ
ಸಾಕಾಗದೇನೊ ಬಡವರ ಕಾಡಿ ಬೇಡುವುದು
ಶ್ರೀಕಾಂತ ನಿನಗೆ ಸರಿಯೆ ದೇವ ೭

ಹೇಮಗೋಪುರದಿ ವಿಮಾನ ಶ್ರೀನಿವಾಸ
ದೇವರನು ನೋಡಿ ನಮಿಸಿ
ಕಾಮಿಸಿ ಕಂಡೆ ಹೊನ್ನೊಸ್ತಿಲು ಗರುಡ
ಗಂಬದ ಸುತ್ತ ಪ್ರಾಕಾರವೊ
ಸ್ವಾಮಿಪುಷ್ಕರಣಿಯಲಿ ಸ್ನಾನ ಪಾನವ ಮಾಡಿ
ನೋಡಿದೆನು ನಿನ್ನ ಭಕುತರ ದೇವ ೮

ಪನ್ನಗಾದ್ರಿ ವೆಂಕಟನ್ನ ರಥ ಶೃಂಗಾರ
ವರ್ಣಿಸಲಳವೆ ನಮಗೆ
ಕಣ್ಣಾರೆಕಂಡೆ ಗರುಡೋತ್ಸವದಲಂಕಾರ
ಇನ್ನೆಲ್ಲು ಕಾಣೆ ಜಗದಿ
ಅನ್ನಪೂರ್ಣೆಯ ನೋಡೆ ಅಧಿಕ ಗಂಟೆಯ ನಾದ
ಎನ್ನ ಕಿವಿಗಾನಂದವೊ ದೇವ ೯

ಪಾದದಲ್ಲೊಪ್ಪೋ ಪಾಗಡಾರುಳಿ ಕಿರುಗೆಜ್ಜೆ
ಮೇಲಲೆವೊ ಪೀತಾಂಬರ
ನೀಲಮಾಣಿಕದ ಉಡಿದಾರವೊ ವೈಜಯಂತಿ-
ಮಾಲೆ ಶ್ರೀವತ್ಸದ್ಹಾರ
ಮೇಲಾದ ಸರಿಗೆ ಸರ ಪದಕವೊ ಕಮಲ-
ದಳಾಯತಾಕ್ಷನ ನೋಡಿದೆ ದೇವ ೧೦

ಕರಗಳಲ್ಲಿಟ್ಟು ಕಂಕಣ ಕಡಗ ಭುಜಕೀರ್ತಿ
ವರ ಶಂಖ ಚಕ್ರ ಧಾರಿ

ಗಿರಿಯ ಭೂವೈಕುಂಠವೆಂದು ತೋರುತ ನಿಂತ
ಶಿರದಿ ಕಿರೀಟ ಧರಿಸಿ
ಬಿಳಿಯ ತ್ರಿನಾಮ ಭೀಮೇಶಕೃಷ್ಣನ ಮುಖದಿ
ಹೊಳೆವ ಮೂರ್ತಿಯ ನೋಡಿ ಹೇ ದೇವ ೧೧

೪

## ಧ್ರುವ

ಅರಸಿನ ಭೀತಿಯಿಂದ ಆತನ ಪಾದರಕ್ಷ
ಪರಿಚಾರಕನೊಬ್ಬ ಸತತ ಬಿಡದೇ
ಪರಮ ವಿಶ್ವಾಸದಲ್ಲಿ ಜೋಕೆ ಮಾಡಿದಂತೆ
ಹರಿ ನಿನ್ನ ಶರಣಾರ ಸರಸಿಜ ಭವಾದ್ಯರು
ನಿರತರವಂದಡಿ ತೊಲಗಿ ಪೋಗಾದೆ
ಪೊರವಾರು ಪರಿಪರಿ ಬಗೆಯಿಂದೊಲಿದೂ
ದುರಿತದ ಕಡಿಗೆ ನಿನ್ನ ನಂಬಿದವನ
ಕರಣಗಳೆರಗಗೊಡದೆ ಆವಾಗ
ಹರಿಭೀತಿ ನರನಿವ ನೀಚಾನಾದಾಡಾಗಲಿ
ಕರುಣಪಯೋನಿಧಿ ಭಕ್ತರಾಧೀನವಾದ
ಧೊರಿಯೆ ನಿನ್ನಾ ಬಲು ಲೀಲಿಗೆ ನಮೊನಮೊ
ಮರದೊಮ್ಮೆ ನೆನದಾಡೆ ಚನ್ನಾಗಿ ಚನ್ನಾಗಿ
ಬರುವ ಸ್ವಾತಂತ್ರ ಚಿನ್ಮಾತ್ರ ಮುನಿಸ್ತೋತ್ರ
ಧರೆಯೊಳು ನಿನ್ನಾ ಸರಿಯಾದ ದೈವವ
ಕುರುಹ ಕಾಣೆಸೊ ಕುಜನರಿಗೆ ಕುಠಾರ
ತಿರುವೆಂಗಳಪ್ಪ ತಿಮ್ಮಪ್ಪ ಶ್ರೀನಿವಾಸ
ಗಿರಿವಾಸ ವಿಜಯವಿಠಲ ವೆಂಕಟತಂದೆ
ಶರಣಾರು ಕರೆವ ಸೊಲ್ಲಿಗೆ ಸೋಲುವ ಮಹಿಮ ೧

## ಮಟ್ಟ

ಹುಲ್ಲಸರಿವೆ ರುಚ್ವಿಗೆ ಸಲ್ಲಾದು ಬೆಲೆಮಾಡಲು
ಮಲ್ಲನರನ ಪಾದದಲ್ಲಿ ಕಟ್ಟಿರಲದೆ
ಸಲ್ಲುವದು ಬಿರಿದು ಎಲ್ಲ ಲೋಕದ ಮಧ್ಯ
ಹುಲ್ಲಿಗೆಯಾದರೂ ಬಲ್ಲಿದನ ಬಳಿ

ಯಲ್ಲಿ ಸೇರಿದರಿಂದ ಬಲ್ಲಿದತಸವದಕೆ ಬರುವುದು ಕಾಣೆರೊ
ಕಲ್ಲು ನಾರಿಯ ಮಾಡಿದ ವಿಜಯವಿಠಲ ರೇಯ
ಎಲ್ಲಿದ್ದರು ನಿನ್ನವಗೆ ಭೀತಿ ಇಲ್ಲ ೨

## ತ್ರಿವಿಡಿ

ನಾನಾ ಯೋನಿಗಳಲ್ಲಿ ಬಂದು ಬೆಳೆದುಬಿಡದೆ
ನಾನಾ ದೇಶದ ಮ್ಯಾಲೆ ತಿರಗಿ ತಿರಗೀ
ನಾನಾ ಠಾವಿನಲಿ ವಾಸವಾಗಿ ಇದ್ದು
ನಾನಾ ಉದಕ ಧಾನ್ಯಾ ಸವಿದು ಉಂಡು
ನಾನಿದ್ದರು ದೇವ ಅಲ್ಲೆಲಿ ಪೊಂದಿದ
ಆ ನಿರ್ಜರರು ನಿನ್ನ ಪೊಂದಿದವ
ಜ್ಞಾನವೆ ಕೆಡದಂತೆ ರಕ್ಷಿಸುವರು ಸತತಾ
ಏನೆಂಬೆನ್ನೈ ನಿನ್ನ ಧೊರೆತನಕೇ
ನಾನೆಲ್ಲಿ ಸರಿಗಾಣೆ ತ್ರಿಲೋಕದಲ್ಲಿ ಜಗ
ಪ್ರಾಣನ್ನಾ ವಡಿಯಾನೆ ದಿವ್ಯಕಾಯ
ಜ್ಞಾನಾದ್ರಿ ವೆಂಕಟ ವಿಜಯವಿಠಲರೇಯಾ
ನೀನೆಂದವನಿಗೆ ನಿತ್ಯ ನೀನೆ ಬೆನ್ನು ೩

## ಅಟ್ಟ

ಕಾಮಂಜುತಲಿದೆ ಕ್ರೋಧಂಜುತಾಲಿದೆ
ಆಮದ ಮೋಹ ಮತ್ಸರ ವಂಜುತಲಿದೆ
ತಾಮಸ ಜನಗಳು ವಮ್ಯಾದರೂ ನಿನ್ನ
ನಾಮಾವ ಕೇಳುತಲಂಜುತಲಿಪ್ಪರು
ಸ್ವಾಮಿ ತೀರ್ಥವಾಸಾ ವಿಜಯವಿಠಲ ವೆಂಕಟ
ಈ ಮಹಿಯೊಳು ನಿನ್ನ ಧೊರೆತನಮಿಗಿಲೊ ೪

## ಆದಿ

ಜಗತ್ಪಾವನ ಜಗಜ್ಜೀವನ
ಜಗತ್ಕವನ ಕಾವನ್ನೈಯ್ಯಾ
ಜಗದ ಜಗದ ಜೀವನ
ಜಗವ ಸೃಜಿಸಿ ಜಗವ ನಿಲಿಸಿ

ಜಗವ ಆಡಿಸುವೆ ಜಗವೆ ನಿನ್ನ ಭೀತಿಯಲ್ಲಿ ಚಲಿಸುತಿಪ್ಪ
ಜಗವ ಬಲ್ಲಿ ನಿನ್ನಾ ಸರ್ವ ಜಗವರಿಯದು
ಜಗವೆಲ್ಲ ನಿನ್ನ ಭಕ್ತನ ಪಾಲಿಸುತಿಪ್ಪದು
ಜಗವೆ ನಿನ್ನಯ ಗುಣಂಗಳೆಣಿಸುವದೂ
ಜಗದಾ ಧೊರಿಯೆ ಖಗಗಿರಿ ವೆಂಕಟವಿಜಯವಿಠಲ ಪರಮದಯಾನಿಧಿ
ಜಗವೇ ನಿನ್ನಾಧೀನವಯ್ಯಾ ೫

## ಜತೆ

ಅರಸಿನಿಂದಲಿ ಅಧಿಕ ಭೃತ್ಯನಿಗೆ ಪಾಲಿಸುವ
ಹಿರಿಯಾರಿಪ್ಪರು ಬಿಡದೆ ವಿಜಯವಿಠಲ ಧೊರಿಯೆ ೬

## ೫

**ನೀಲಾಂಬರಿ** **ಧ್ರುವ**

ಅರಳಿದ ಕೆಂದಾವರೆಯ ಇರವ ಧಿಕ್ಕರಿಸುವ
ಗಿರಿಯ ತಿಮ್ಮಪ್ಪರಾಯನ ಚರಣಗಳ ಕಂಡೆನಾ
ಅರುಣ ತಳದಲಿಪ್ಪ ಅಂಕುಶ ಧ್ವಜವಜ್ರಾದಿ
ಸುರುಚಿರ ರೇಖೆಗಳ ಸೊಬಗ ಕಂಡೆ ನಾ
ಬೆರಳ ಸಾಲ್ಗಳ ಮೇಲೆ ಬೇರೆ ಬೇರೆ ತೋರುವ ಭಾ
ಸುರ ನಖಾಮಣಿಗಳ ಕಿರಣಗಳ ಕಂಡೆ ನಾ
ಕಿರುಗೆಜ್ಜೆ ಕಡೆಯ ಪೆಂಡೆಯದ ಪ್ರಭೆಯ ಕಂಡೆನಾ
ಕರಿಯ ದಂತವ ಪೋಲ್ವ ಜಂಘೆಗಳ ಕಂಡೆನಾ
ಎರಡು ರನ್ನದ ಕನ್ನಡಿಯ ತೆತ್ತಿಸಿದವೋಲು
ಮುರಹರನ ಮೋಹನದ ಜಾನುದ್ವಯವ ಕಂಡೆನಾ
ಉರುಟು ಕದಳಿಯ ಕಂಬದಂತೆ ವರ್ತುಳವಾದ
ಹರಿಯ ಪೀವರ ತೊಡೆಗಳ ಕಂಡೆ ಕನಸಿನಲಿ
ವರ ಪೀತಾಂಬರ ಕಾಂಚಿ ಕಿಂಕಿಣಿ ಜಾಲಗಳಿಂದ
ಮೆರೆವ ವೆಂಕಟೇಶನ ಕಟಿಯ ಕಂಡೆನಾ
ಕಿರುಡೊಳಿನುದರದ ನಾಭಿಯ ತ್ರಿವಳಿಯ ಇಂ
ದಿರೆಯಪ್ಪಿಕೊಂಬ ಮಧ್ಯದ ಚೆಲುವ ಕಂಡೆನಾ
ಸಿರಿದೇವಿ ಸಿರಿವತ್ಸ ಕೊರಳ ಕೌಸ್ತುಭಹಾರ

ಸರದಿಂ ಮಿಂಚುವ ಪಿತಾಂಬರಸ್ಥಳವ ಕಂಡೆನಾ
ತ್ರಿರೇಖೆಗಳಿಂದೊಪ್ಪುವ ಶಂಖದಂದದ
ಕರುಣಿ ವೆಂಕಟೇಶನ ಕಂಧರವ ಕಂಡೆನಾ
ಕರಚತುಷ್ಟಯದಲ್ಲಿ ಶಂಖಚಕ್ರಗಧೆ ಪದುಮ
ವರ ಅಭಯಗಳ ಕಂಡೆ ಕರ್ಣಕುಂಡಲವ ಕಂಡೆ ನಾ
ಸರಸ ಬಿಂಬಾಧರ ಸುಸ್ಮಿತ ನಾಸಪುಟದ ಕ
ಸ್ತುರಿ ನಾಮದ ಸರಸಿಜನಯನಗಳಿಂದೆಸೆವ ಸಿರಿಮೊಗವ ಕಂಡೆ ನಾ
ಕುರುಳು ಕೂದಲು ಫಾಲ ಸಿಂಗಾಡಿಯಂತಿಪ್ಪ ಪುರ್ಬು
ಕೂರ್ಮನಂದದಿ ಗಲ್ಲ ಚುಬುಕ ಚುಬುಕಾಗ್ರದಿಂ
ಸಿರಿಯರಸ ಹಯವದನ ಶೇಷಗಿರಿ ಅರಸನ ಕಿರೀಟವ
ಪರಿಪರಿಯ ಸೊಬಗ ನಾ ಕಂಡು ಕೃತಾರ್ಥನಾದೆ ನಾ ೧

### ಮಟ್ಟ

ಇಂದಿನ ದಿನ ಸುದಿನ ಗೋವಿಂದನ ಕಂಡ ಕಾರಣ
ಹಿಂದಿನ ಪಾಪ ವೃಂದವು ಬೆಂದುಹೋಯಿತು ಎನಗೆ
ಮುಂದಿನ ಮುಕುತಿ ದೊರಕಿತು
ತಂದೆ ಹಯವದನನೊಲವಿಂದ ೨

### ತ್ರಿಪುಟ

ಪಾಪಕಂಜೆನೊ ಸಂತಾಪಕಂಜೆನೊ ನಾನು
ಪಾಪಿಜನರ ಬಲು ಕೋಪಕಂಜೆನೊ ನಾನು
ಆಪತ್ತಿಗಂಜೆ ಯಮನ ಪಾಶಕಂಜೆನೊ
ಶಾಪಕಂಜೆನೊ ಅನ್ಯರ ಪಾಟಿಮಾಡೆನೊ
ತಾಪಸರಿಗೊಲಿದ ಶ್ರೀಪತಿ ಹಯವದನ
ಆ ಪಾದ ಪದುಮದ ನೆನಹೊಂದಿದ್ದರೆ ಸಾಕು ೩

### ರೂಪಕ

ಗುರು ಭಕುತಿಯಿರಬೇಕು ಹಿರಿಯರ ಕರುಣವು ಬೇಕು
ಹರಿಕಥೆಗಳ ನಿತ್ಯದಲಿ ಕೇಳುತಿರಬೇಕು
ವಿರಕುತಿ ಬೇಕು ವಿಷ್ಣುವಿನಾರಾಧನೆಬೇಕು
ವರಮಂತ್ರ ಜಪಬೇಕು ತಪಬೇಕು ಪರಗತಿಗೆ

ಪರಿಪರಿಯ ವ್ರತಬೇಕು ಸಿರಿಪತಿ ಹಯವದನನ
ಪರಮಾನುಗ್ರಹಬೇಕು ವಿಷಯನಿಗ್ರಹಬೇಕು ೪

**ಝಂಪೆ**

ಹರಿ ಸಗುಣ ಸಾಕಾರ ಸಕಲ ಸುರರೊಡೆಯ ನಿ–
ರ್ಜರರೆಲ್ಲ ಹರಿಯ ಕಿಂಕರರೆಂದರಿಯ ಬೇಕು
ಮರಣಜನನ ದೋಷಗಳಿಗತಿ ದೂರತರನೆನಿಪ
ಸ್ಮರಣೆ ಸಂತತಬೇಕು ದುರಾಚಾರ ಬಿಡಬೇಕು
ಸಿರಿ ಹಯವದನ ಶೇಷಗಿರಿ ಅರಸನ
ಸ್ಮರಣೆಯಿದ್ದವನು ಸಂಸಾರ ಭಯವನುತ್ತರಿಸುವ ೫

**ಆದಿ**

ಶ್ರೀನಾಥ ಪ್ರಭುವೆತ್ತ ಹೀನಯೋನಿಗಳೊಳು
ನಾನಾದುಃಖಗಳುಂಬ ಹೀನ ಮಾನವನೆತ್ತ
ಭಾನುಮಂಡಲವೆತ್ತ ಶ್ವಾನನುಬ್ಬರವೆತ್ತ
ಮಾನವ ಹರಿ ನಾನೆಂಬುದ ನೆನೆಯದಿರು
ದಾನವಕುಲವೈರಿ ಹಯವದನ ವೆಂಕಟ
ಶ್ರೀನಿವಾಸನ ದಾಸರ ದಾಸನೆನಿಸಿಕೊ ೬

**ಏಕ**

ಕೈವಲ್ಯವನೀವ ನಮ್ಮ
ಶ್ರೀವಲ್ಲಭನ ಕೈಯಿಂದ
ನೀವೆಲ್ಲ ಕ್ಷುದ್ರವ ಬೇಡಿ
ಗಾವಿಲನ ಪೋಲದಿರಿ
ಸಾವಿಲ್ಲದ ಮುಕುತಿ ಪಥವ
ಬೇಡಿಕೊಳ್ಳಿರೊ
ನೋವಿಲ್ಲದಂತೆ ಸುಖಿಸಬಲ್ಲ
ಕೋವಿದರೆಲ್ಲರು
ಪೂವಿಲ್ಲನಯ್ಯ ವೆಂಕಟಪತಿ ಹ–
ಯವದನನ್ನ ಪ–
ದವಲ್ಲದನ್ಯತ್ರ ದಾವಲ್ಲಿ ಭಯತಪ್ಪದು ೭

**ಅಟ್ಟ**

ಗಾತ್ರವ ಬಳಲಿಸಿ ಸ್ತೋತ್ರವ ಪಾಡುತ್ತ
ಯಾತ್ರೆಯ ಮಾಡಿ ವೆಂಕಟೇಶನ ಮೂರ್ತಿಯ
ನೇತ್ರದಿ ನೋಡಿ ತಮ್ಮಿಷ್ಟವ ಪಡೆವ ಸ–
ದ್ಭಕ್ತರ ಕಂಡು ನಿನ್ನಮನದ ಭ್ರಮೆಯ ಬಿಡು
ದೈತ್ಯ ಪೌಂಡ್ರಕನ ಮತವ ನೆಚ್ಚಿ ಕೆಡಬೇಡ
ಚಿತ್ರ ಚರಿತ್ರ ಹಯವದನನೊಲಿಸಿಕೊ ೮

**ಆದಿ**

ಡಿಳ್ಳಿಯರಾಯನ ಕಂಡು ಪುಲ್ಲಿಗೆಯ ಬೇಡುವರೆ
ತಲೆಯೂರಿ ತಪಸು ಇದ್ದಲ್ಲಿ ಸಾಧಿಸಿಕೊಳ್ಳಿರೊ
ಕ್ಷುಲ್ಲಕರೆಂಜಲುಂಡು ಬಾಳ್ವರ ನೋಡು ಲಕ್ಷುಮಿ
ವಲ್ಲಭನಲ್ಲದೆ ಹೀನ ಫಲದಾಸೆ ಸಲ್ಲದಯ್ಯ
ಚೆಲ್ವ ಹಯವದನ ತಿಮ್ಮನಲ್ಲದೆ ಕೈವಲ್ಯಕೆ
ಹಲ್ಲು ಹಂಚಿಗೆ ಬಾಯಿತೆರದಂತೆ ಅಲ್ಲಲ್ಲಿಗೆ ಪೋಗಾದಿರಿ ೯

**ರೂಪಕ**

ಹನುಮಂತನ ನೋಡು ತನುಮನಧನಂಗಳ
ಶ್ರೀನರಸಿಂಹಗರ್ಪಿಸಿದ
ಪ್ರಹ್ಲಾದನ ನೋಡು
ಅನುದಿನ ವನದಲ್ಲಿ ತಪವ ಮಾಡುವ
ಮುನಿಜನರಕಂಡು ನಿನ್ನಮನದ ಭ್ರಮೆಯಬಿಡು
ಘನಮಹಿಮ ವೆಂಕಟಪತಿ ಹಯವದ–
ನನ ಭೃತ್ಯರ ಪರಿಚಾರಕರ ಭೃತ್ಯನೆನಿಸಿಕೊ ೧೦

**ಜತೆ**

ತಿರುಮಲೆರಾಯ ತ್ರಿವಿಕ್ರಮ ಮೂರುತಿ
ಸಿರಿ ಹಯವದನನ ಚರಣವೆ ಗತಿಯೆನ್ನು ೧೧

**೬**

**ಶಂಕರಾಭರಣ** **ಆದಿ**

ಆ ವೆಂಕಟಗಿರಿನಿಲಯನಂಘ್ರಿರಾ
ಜೀವಯುಗಳಕಾ ನಮಿಸುವೆನು ಪ

ಸೇವಿಪ ಜನರಿಗಮರತರುವೆನಿಸಿ ಧ
ರಾವಲಯಾಖ್ಯ ದಿವಿಯೊಳೆಸೆವ ಅ

ಆವನಂಘ್ರಿಜಲ ನಿಖಿಲಜಗತ್ತಿಗೆ
ಪಾವನತಮವೆಂದೆನಿಸುವುದು
ಶ್ರೀವಿಧಿಭವ ಶಕ್ರಾದ್ಯರು ಅವನ
ಸೇವಕಜನರೆಂದೆನಿಸುವರು
ದೇವೋತ್ತಮ ತಾನೆನಿಸಿ ನಿಖಿಳ ಜಡ
ಜೀವ ಭಿನ್ನ ಕರ್ಮವ ಮಾಳ್ಪ
ಸ್ಥಾವರ ಜಂಗಮರೊಳಗೆ ನೆಲೆಸಿ ವೇ
ದಾವಳಿಯಿಂದ ತುತಿಸಿಕೊಂಬ ೧

ಮಾತರಿಶ್ವನೊಡನಹಿಪ ನುಡಿಯೆ ಸ
ತ್ವಾತಿಶಯವ ತೋರೆನಲಾಗ
ಜಾತರೂಪ ಶೈಲಾತ್ಮಜೆನಪ್ಪಿರೆ
ವೀತಿಹೋತ್ರಸಖ ಕಿತ್ತೊಗೆಯೆ
ವೀತಕರ್ಣನಳವಳಿದು ತುತಿಸಲು ನಿ
ಕೇತನತ್ರಯದೊಳಿಳುಹಿ ಬೇಗ
ಧಾತ ಮಹಿಳೆ ತೀರ್ಥದಿ ಭೂಲಕ್ಷ್ಮೀ ಸ
ಮೇತನಾಗಿ ಮೋದಿಸುತಿಪ್ಪ ೨

ವೃದ್ಧಭೂಸುರನ ಒಯ್ದು ಸಲಿಲದೊಳ
ಗದ್ದಿ ಕುಮಾರತ್ವವನಿತ್ತ
ಅಧ್ವರವೆಸಗುವ ಋಷಿಗಳ ವೇದಾ
ಪದ್ಧಗಳ ತಿದ್ದಿ ಮಖವಕಾಯ್ದ
ಮಧ್ಯರಾತ್ರಿಯೊಳ್ಬೆಸಗೊಂಡ ನೃಪನ ಉ
ಪದ್ರವ ಕಳೆದಾಯುಧವಿತ್ತ
ಮೃದ್ಭಾಂಡವ ರಚಿಸಿದವಗೊಲಿದು
ಚೋದ್ಯವ ನೃಪತಿಗೆ ತೋರಿಸಿದ ೩

ಭೂಸುರನೋರ್ವನು ತೋಂಡಮಾನ ಧರ
ಣೀಶನ ನಿಲಯದೊಳುಳುಹಿ ಸತಿಯ
ಕಾಶಿಗೆ ಪೋಗಲು ನೃಪತಿ ಮರೆಯೆ ನಿ
ಶ್ವಾಸವ ನೈದಿದಳಾ ಸತಿಯು

ಆ ಸಮಯದಿ ದ್ವಿಜವರ್ಯನು ಬೆಸಗೊಳೆ
ಕ್ಲೇಶದಿ ಭೂಮಿಪ ಸಂಸ್ತುತಿಸೆ
ಕೇಶವ ತಾನಸ್ಥಿಗಳ ತರಿಸಿ ಸು
ವಾಸಿನಿಶಿಶುಸಹ ಒಲಿದಿತ್ತ ೪

ಮನೋವಾಕ್ಕಾಯದಿ ಕರ್ಮಜನ್ಯಫಲ
ದಿನದಿನಗಳಲಿ ಸಮರ್ಪಿಸುವ
ಮನುಜೋತ್ತಮರಾಧಿವ್ಯಾಧಿ ದು
ರ್ಜನುಮಗಳೆಲ್ಲವ ಪರಿಹರಿಪ
ಕುನರರಿಗಲಭ್ಯನು ಕುವಲಯದೊಳು
ಘನಕಾರಣಿಕ ಧರ್ಮಕಾಮಾರ್ಥಗಳ
ಜನರಿಗೆ ಸಲಿಸುವ ಜಗನ್ನಾಥವಿಠಲ
ಮನೆಮಾಡಿದ ಶೇಷಾಚಲವ ೫

೭

**ಕಾಂಬೋಧಿ** **ಧ್ರುವ**

ಆದಿದೈವವೆ ನಿನ್ನ ಪಾದವೆ ನೆರೆನಂಬಿದೆನು ಬಿಡದಲೆ
ಆದರಿಸು ಕಾದುವಖಳರು ವಾಮದಲ್ಲಿ ಹುರಿಗೂಡಿ
ಬಾಧೆಬಡಿಸುವದು ನಾ ದಾರಿಗೆ ದೂರಲಿ
ಪೋದವನೇಕ ಜನನವಾದ ಕಾಲದಲ್ಲಿ
ಈ ದೇಹದ ಸುಖವಾದದ್ದು ಕಾಣೆನೊ
ವೇದಾರಿಸಿ ಕಾಣದ ಬಲು ಮಹಿಮಾನೆ
ಯಾದವಶಿರೋಮಣಿ ವಿಜಯವಿಠಲ ನಿನ್ನ
ಮಾಧುರ್ಯನಾಮವ ಉಣಿಸಿ ಬೀದಿ ಬಸವನ ಮಾಡೊ ೧

**ಮಟ್ಟ**

ಅಪ್ಪನ ಅಪ್ಪಾನೆ ಗಿರಿಯ ತಿಮ್ಮಪ್ಪನೆ
ಸರ್ಪನತಲ್ಪನೆ ಸರ್ವರೊಳಿಪ್ಪನೆ
ಇಪ್ಪಲುತಪ್ಪಾನೆ ಕರದರೆ ಬಪ್ಪಾನೆ
ದರ್ಪಣರೂಪನೆ ವಿಜಯವಿಠಲ ನಿನ್ನ ಕಪ್ಪನೆ ಚರಣದಲಿ
ಧೊಪ್ಪನೆ ಹೊರಹೊರಳುವೆನೊ ೨

## ತ್ರಿವಿಡಿ

ಕಟುಕನ ಕೈಯ್ಯ ಶಿಲಿಕಿದ ಗೋವೊಂದು ಸಂ
ಕಟ ಬಡುವಂತೆ ನನ್ನೊಳಗೆ ನಾನೆ ಬೀಳುವೆ ಅ
ಕಟಕಟ ನಿನಗಿನ್ನು ಕರುಣಬಾರದೆ ಸುರ
ಕಟಕದೊಡಿಯನೆ ನಿರಾಕರಿಸಿ ಎನ್ನನ್ನು ಯಿರಾ
ಕಟಕದೊಳಗೆ ಇಟ್ಟು ಯೆಳಸುವರೆ ಅ
ಕಟಕಟಾ ನಾನಾರಿ ಗಾಲವರಲಿ ಮರ
ಕಟ ಕುಣಿವಂತೆ ಮನಸು ಇಂದ್ರಿಯಗಳು ವ
ಕ್ಕಟವಾಗಿ ಕುಣಿದು ಕಂಗೆಡಿಸುತ್ತಿದೆ ವೆಂ
ಕಟಾಚಲವಾಸಾ ವಿಜಯವಿಠಲನೆ ಚೊ
ಕ್ಕಟ ಮಾರ್ಗವ ತೋರಿ ವಿಕಟಮತಿಕಳಿಯೋ ೩

## ಅಟ್ಟ

ದಾಸರ ಮನೆಯಲ್ಲಿ ವಾಸವಾಗಿದ್ದವ
ದಾಸರ ಬಳಿಯಲ್ಲಿ ಸೇರಿಕೊಂಡವನಾನೊ
ದಾಸರ ಮನೆಯಲ್ಲಿ ನೀರುಪೊತ್ತವನಾನು
ದಾಸರ ಮನೆ ಯಂಜಲೆಡೆ ತೆಗೆದವನಾನು
ದಾಸರುಂಡದ್ದು ಉಂಡುಬೆಳೆದವನಾನು
ದಾಸರ ಮನೆ ಮುಂದೆ ರಾತ್ರಿ ಜಾಗರನಾನು
ದಾಸರ ಪಂಚಿಲಿ ದಿನ ಕಳದವನಾನು
ದಾಸರ ನಂಬಿದ ದಾಸನು ನಾನು
ದೋಷಿ ನಾನಾದಡೆ ದೊಷರಹಿತಪುಣ್ಯ
ರಾಶಿ ಪುರಂದರ ದಾಸರ ಮ್ಯಾಲೆ ದಯಶರಧಿಯಿಟ್ಟು
ನೀ ಸಲಹುಯೆನ್ನ ಪಾಶವ ಬಿಡಿಸುತ್ತ
ಲೇಸುಪಾಲಿಪ ನಮ್ಮ ವಿಜಯವಿಠಲರೇಯ
ಬೀಸಿಬೀಸಾಟದಿರು ಬಿಂಕದ ದೇವ ೪

## ಆದಿ

ನಿನ್ನನೆ ಪೊಂದಿದೆ ನಿನ್ನನೆ ಸೇರಿದೆ
ನಿನ್ನನೆ ಪಾಡಿದೆ ನಿನ್ನ ಕೊಂಡಾಡಿದ
ನಿನ್ನಂಘ್ರಿಯುಗಳವನ್ನು ನಂಬಿದೆ ಪಾ

ವನ್ನ ಚರಿತ ರಂಗ ಎನ್ನ ಸಲಹದಿರೆ
ನಿನ್ನಾರು ವೊಪ್ಪುವರು ಪನ್ನಗಾರಿವಾಹನ್ನ ವಿಜಯವಿಠಲರೇಯ
ಯನ್ನಬಿಡದೆ ಕಾಯೊ ಅನ್ನಾಥರೊಡಿಯಾ ೫

ಜತೆ

ದುರುಳನೆನದೆ ದುರ್ಜನರಿಗೆ ವೊಪ್ಪಿಸದೆ
ಪರಿಪಾಲಿಸಿ ಸಾಕು ವಿಜಯವಿಠಲರೇಯಾ ೬

೮

ಆವದೇವರಿಗುಂಟೀವೈಭವ ಪ

ಸಾರ್ವಭೌಮ ನೀನೆ ಸಕಲ
ದೇವರೊಳಗೆ ಭಾವಜನಯ್ಯ ಅ

ಸಿರಿಯರೆಂಟುಮಂದಿ ನಿನಗೆ
ಅರಸಿಯರು ಕರುಣಶರಧಿ
ಸುರರು ಮೂವತ್ತುಮೂರುಕೋಟಿ
ಚರಣಸೇವಕರಯ್ಯ ಹರಿಯೆ ೧

ಅನುದಿನವು ಎಡೆಬಿಡದೆ ಮನು
ಮುನಿಗಳ ಸುಜನ ಸಂತತಿ
ಘನವೇದಘೋಷದಿಂದ
ನೆನೆದು ಪೂಜಿಪರಪರಿಮಿತ ಲೀಲೆ ೨

ಕೋಟಿಸೂರ್ಯಪ್ರಕಾಶ ನಿನ್ನ
ಆಟ ಬಲ್ಲವರಾರು ಜಗದಿ
ಆಟವಾಡುವಿ ಅಗಮ್ಯಚರಿತ
ಸಾಟಿಯಿಲ್ಲದೆ ಧನವ ಕಲಿಸಿ ೩

ಕರೆಸಿ ಅಸಮಭಕುತ ಜನರ
ವರವ ನೀಡಿ ಮುಡಿಪುಗೊಂಡು
ಮೆರೆವಿ ಪರಮ ಉತ್ಸವದೊಡನೆ
ಗಿರಿಯ ಭೂವೈಕುಂಠಮೆನಿಸಿ ೪

ಕಿಂಕರ ಜನರ ಪೊರೆಯಲೋಸುಗ
ವೆಂಕಟಾದ್ರಿಯಲ್ಲಿ ನಿಂದಿ
ವೆಂಕಟೇಶ ಕಿಂಕರಜನರ
ಸಂಕಟಹರ ಶ್ರೀರಾಮಪ್ರಭೋ ೫

೬

### ಧ್ರುವ

ಇಂದಿರಾ ದೇವಿ ಗುಣಿಸಿ ಎಣಿಸುವೇನೆಂದು
ಒಂದುಸಾರಿ ನೋಡಲು ಬೆಡಗುತೋರಿದ ನಖ
ಅಂದು ಒಂದೊಂದು ಪರಿಪರಿ ವರ್ಣಂಗಳ ತೋರಿ
ಅಂದವಾಗಿ ಪೊಳದ ಮಾಯಾ ಲೀಲಾದ ನಖ
ಮಂದಮತಿಗಳು ನಮಿಸಲವರ ಪಾಪ
ವೃಂದಾವ ಕಳೆದು ಸುಜ್ಞಾನಕೊಡುವ ನಖ
ಸುಂದರನಾಮಾ ಸಿರಿ ವಿಜಯವಿಠಲ ನಿನ್ನ
ಸುಂದರ ನಖಗಳಿಗೆ ನಮೊನಮೊ ಎಂಬೆ ೧

### ಮಟ್ಟ

ಬಲಿಯಮನಿಗೆ ಪೋಗಿ ನೆಲನ ದಾನವಬೇಡಿ
ಜಲಜಾಂಡಕೆ ಬೆಳೆದು ಬಲಿದ ಖರ್ಪರವನ್ನ
ಪ್ಪಳಸಿ ಸೀಳಿದ ನಖ
ಕಿಲಿಕಿಲಿನಗುತ ಗೋವಳ ಸತಿಯರ ಮೊಗ್ಗ
ಮೊಲೆಯಮೇಲೆ ತುಳಿವುತ್ತವಲಿದು ವತ್ತಿದ ನಖ
ಕಲಕಾಲ ಮುನಿಗಳು ಪೊಲಿಸಿಪೊಲಿಸಿ ನೋಡೆ
ನೆಳಲಗಾಣದೆ ಪೋಗಿ ತೊಳಲಿ ತುತಿಪ ನಖ
ಸುಲಭ ಮಹಾವೀರ್ಯ ವಿಜಯವಿಠಲ ನಿನ್ನ
ಪೊಳೆವನಖಗಳಿಗೆ ಗೆಲುವದಾವದು ಇಲ್ಲ ೨

### ರೂಪಕ

ಬಣ್ಣಾ ಬಣ್ಣಾವಾಗಿ ಬಲುಸೋಜಿಗದ ನಖ
ಕಣ್ಣಿಂದನೋಡಲು ಥಳಥಳಿಸುವ ನಖ
ಚೆಣ್ಣತನದಲಿ ಗೋಮಕ್ಕಳ ವೊಡಗೂಡಿ

ಚಿಣ್ಣಾಟಿಕೆ ಗೋಲಿ ನೆಗದು ಚಿಮ್ಮಿದ ನಖ
ಪನ್ನಗಶಯನ ವ್ಯಕ್ತ ವಿಜಯವಿಠಲ
ಚನ್ನಿಗನವಾದ ಪಾವನ್ನವಾದ ನಖ ೩

### ಝಂಪೆ

ನಕಲ ಬೊಮ್ಮಾಂಡಗಳ ವ್ಯಾಪಿಸಿಕೊಂಡ ನಖ
ಅಕಳಂಕ ಚರಿತವಾದ ಆದಿಅನಾದಿ ನಖ
ಭುಕುತಿಭಕುತಿ ಯುಕುತಿಶಕುತಿ ಕೊಡುವ ನಖ
ಮುಕುತಿಬೇಡಿದರೆ ಚಚ್ಚಾರದಲ್ಲಿ ನೀವ ನಖ
ಕಕುಭಾ ಹತ್ತಕೆ ಮೀರಿ ಬೆಳಗುತೋರುವ ನಖ
ನಕಲೇಶ ಚತುರ್ಭುಜ ವಿಜಯವಿಠಲರೇಯನ
ವಿಕಸಿತ ಕೆಂದಳಕೆ ನದೃಶವಾದ ನಖ ೪

### ತ್ರಿವಿಡಿ

ಮಂದಾಕಿನಿಯ ಪಡದು ಮಹ ವೇಗದಿಂದಲಿ
ಇಂದುಮೌಳಿಯ ಕಾಯ ಪಾವನ್ನ ಮಾಡಿದನಖ
ಹಿಂದೆ ಕುರುರಣದಲ್ಲಿ ಸುತ್ರಾಮನಂದನನ
ಶ್ಯಂದನ ಎಳೆವ ವಾಜಿಯ ನಡಿಸಿದ ನಖ
ನಂದೋಹ ಭಕ್ತರು ನಮಿಸಿ ಸ್ತೋತ್ರವಮಾಡೆ
ಚಂದದಿಂದಲಿ ಕೇಳಿ ಹಿಗ್ಗಿ ನಗುವ ನಖ
ಕುಂದನಾಮಾ ಸಿರಿ ವಿಜಯವಿಠ್ಠಲ ನಿನ್ನ
ನಂದದಾ ನಖದ ಲೀಲೇನೆಂದು ಬಣ್ಣಿಸುವೇ ೫

### ಅಟ್ಟ

ಗೋಕುಲ ಭೂಮಿಯ ಯಮುನಾನದಿಯತೀರ
ನೋಕಿ ರಜದಿ ಪಾವನ್ನ ಮಾಡಿದ ನಖ
ಆ ಕಮಲಾಜಾಂಡವನಂತಾನಂತಾ
ನೇಕಬಗೆಯಿಂದ ಪೊಳಗೆತೋರುವ ನಖ
ಪಾಕಶಾಸನಾದಿ ಮಕುಟಮಣಿಯ ಶಾಂತಿ
ನೂಕಿ ಹಿಂದುಮಾಡಿ ಧಿಕ್ಕರಿಸುವ ನಖ
ನೈಕಾದ ವಿಜಯವಿಠಲ ಗುಣಪೂರ್ಣ ರ
ತ್ನಾಕರವಾಗಿ ರಂಜಿಸುವ ಭದ್ರನಖ ೬

ಆದಿ

ಮುಕ್ತಾಮುಕ್ತಾ ಬೊಮ್ಮಾದಿಗಳು
ಸಿಕ್ಕಾದೆಂದು ಜಪಿಸುವನಖಿ
ಅರ್ಕಾಸೋಮ ಕೋಟಿಕಿರುಣಾ
ನಕ್ಕುಹಾಸ್ಯ ಮಾಡುವನಖಿ
ರಕ್ಕಸರ ಸಮುದಾಯದಾಯದಾ
ಸೊಕ್ಕುಮುರಿದು ಕಳವನಖಿ
ಅರ್ಕನಾಮಾ ವಿಜಯವಿಠಲ
ಭಕ್ತರಿಗೆ ವೊಲಿದನಖಿ ೭

ಜತೆ

ಅರ್ಚಿಪರ ಹೃದಯದೊಳಗೆ ಮಿನಗುವನಖಿ
ಅರ್ಚಿತ ವಿಜಯವಿಠಲರೇಯನ ನಖಿ ೮

## ೧೦

**ಮಧ್ಯಮಾವತಿ** **ಆದಿ**

ಇಂದು ನಾನೇನು ಸುಕೃತವ ಮಾಡಿದೆನೋ ಪ

ಮಂಗಳ ಮಹಿಮ ವೇಂಕಟ ಬಂದ ಮನೆಗೆ ಅ

ಹಾರ ಕೇಯೂರ ಹೊನ್ನುಂಗುರ ಬೆರಳು
ಹಾರದ ನಡುವೆ ಹಾಕಿದವೇಳು ಪದಕ
ತೋರಮುತ್ತಿನ ಕಂಠಮಾಲೆ ಸರಿಗೆಯು ಕೋ
ನೇರಿವಾಸ ವೇಂಕಟ ಬಂದ ಮನೆಗೆ ೧

ಕಾಲಪೆಂಡಿಗೆಯು ರಕ್ಕಸರ ಹಾವಿಗೆಯು
ಮೇಲಾದ ವಜ್ರನವರತ್ನದ ಮಕುಟ
ವೀಳ್ಯದ ಬಾಯಿ ಕರ್ಪೂರದ ಕರಡಿಗೆಯು
ಮೇಲುಗಿರಿವಾಸ ವೇಂಕಟ ಬಂದ ಮನೆಗೆ ೨

ಬಿಗಿದು ಸುತ್ತಿದ ವಲ್ಲಿ ಬಿಡಿಮುತ್ತಿನ ಕಂಠಿ
ಬಿಗಿ ಮುಗುಳುನಗೆ ದಂತ ಎಸೆವಂಥ ಪಂಜ್ತಾ

ತೆಗೆದುಟ್ಟ ಪೀತಾಂಬರ ಉಡುಗೆ ಕಠಾರಿ
ಯದುಗಿರಿವಾಸ ವೇಂಕಟ ಬಂದ ಮನೆಗೆ ೩

ನೊಸಲ ಸುತ್ತಿದ ಪಟ್ಟೆ ಎಸೆವೊ ಕಸ್ತುರಿಯು
ವಶವಾದ ಅಮೃತದ ರಸ ಸವಿಮಾತು
ಎಸಳುಕಂಗಳ ನೋಟ ಹೊಸ ಪಂಚಬಾಣ
ಸುಕುಮಾರ ಸೊಬಗು ವೇಂಕಟ ಬಂದ ಮನೆಗೆ ೪

ಕಲಿಯುಗದಲಿ ಶಂಖಚಕ್ರವ ಧರಿಸಿ
ಹದಿನಾಲ್ಕು ಲೋಕ ತನ್ನುದರದಲ್ಲಿಟ್ಟು
ಗರುಡನ ಏರಿ ಮೂರ್ಜಗವ ಮೋಹಿಸುವ
ಪುರಂದರವಿಠಲ ವೇಂಕಟ ಬಂದ ಮನೆಗೆ ೫

## ೧೧

**ತೋಡಿ** **ಆದಿ**

ಇನ್ನೆಂದಿಗೋ ನಿನ್ನ ದರುಶನ ಶೇಷಾದ್ರಿವಾಸ ಪ

ಪನ್ನಂಗಶಯನ ಪ್ರಸನ್ನರ ಪಾಲಿಪ
ಘನ್ನಮಹಿಮ ನೀನೆನ್ನನುದ್ಧರಿಸೊ ಅ

ವರಸುರಮುನಿಗಳ ವೃಂದನೆರಹಿದ ಯಾಗಗಳಿಂದ
ಪರಮಾದರದಿಂದಿರುವ ಸಮಯದಿ
ನಾರದಮುನಿ ಬಂದೊದಗಿ ನಿಂದ ಇ–
ದಾರಿಗರ್ಪಿತವೆಂದರುಹಿ ಮರಳೀತೆರಳಿದ
ಸುರಮುನಿವಚನದಿ ಭೃಗುಮುನಿವರ ಪೋಗಿ
ಹರವಿರಿಂಚಿಯರ ನೋಡಿದಾ ಉರುತರ ಕೋಪದಿ ನಿಲ್ಲುತ
ಪರಮ ಪುರುಷರಲ್ಲೆಂದೆನ್ನುತ – ವೈಕುಂಠವನ್ನೇ ಸಾರುತ
ಹರುಷದಿ ಶ್ರೀಹರಿ ಉರಗಶಯನನಾಗಿ
ಪರಮ ಯೋಗನಿದ್ರೆ ಮಾಡುತಾ–ಅರಿಯದಂತೆ ತಾ ನಟಿಸುತ
ಇರೆ ಮುನಿ ಪದದಿಂದೊದೆಯುತ–ತ್ವರಿತದಿಂದ ತಾನೇಳುತ
ಹರುಷದಿ ಮುನಿಪಾದ ಕರದಲಿ ಒತ್ತುತ
ಕರುಣದಿ ಸಲಹಿದೆ ದುರಿತವ ಹರಿಸಿ

ಹರಿಭಕುತರ ಅಘ ಹರಿಸಿ ಕಾಯುವಂಥ
ಕರುಣೆಗಳುಂಟೇ ಶ್ರೀಹರಿ ಸರ್ವೋತ್ತಮಾ ೧

ಸ್ವಾಮಿ ನೀ ನಿಜಧಾಮವನೆ ತೊರೆದೂ
ಸ್ವಾಮಿಕಾಸಾರ ತೀರದಿನಿಂದೂ ಧಾಮವನರಸಿ
ವಲ್ಮೀಕವನೆ ನೋಡಿ
ವಿಮಲ ಸ್ಥಳವಿದೆಂದು ಮನದಲಿ ಆನಂದದಿಂದಲಿ ಬಂದು ನಿಂದೆ
ಸನ್ಮುದವನ್ನೆ ತೋರುತ
ಕಮಲಭವ ಶಿವ ತುರು ಕರು ರೂಪದಿ
ಈ ಮಹಗಿರಿಯನ್ನ ಅರಸುತ–ಸ್ವಾಮಿ ನೀನಿಲ್ಲಿಹೆನೆಂದೆನ್ನುತ
ಕಾಮಧೇನು ಪಾಲ್ಗರೆಯುತಾ– ಈ ಮಹಿಮೆಯನ್ನೇ ಬೀರುತಾ
ಭೂಮಿಗೊಡೆಯ ಚೋಳನೃಪ ಸೇವಕನು
ಧೇನುವನು ತಾ ಹೊಡೆಯಲು
ಕಾಮನಯ್ಯ ನೀನೇಳಲು–ಭೀಮ ವಿಕ್ರಮವ ತೋರಲು
ಕ್ಷಮಿಸಿದೆ ನೃಪನದಯಾಳು
ಅಮಿತ ಸುಗುಣಪೂರ್ಣ ಅಜರಾಮರಣ
ನೀ ಮಸ್ತಕ ಸ್ಫೋಟನ ವ್ಯಾಜವ ತೋರಿ
ಪ್ರೇಮದಿ ಗುರು ಪೇಳ್ದೌಷಧ
ಕಾಮಿನೀ ಮೋಹವ ತೋರಿದೇ ವಿಡಂಬನ ಮೂರ್ತಿ ೨

ಮಾಯಾರಮಣನೆ ಜೀಯಾ ಕಾಯುವೆ ಜೀವನಿಕಾಯಾ
ತೋಯಜಾಂಬಕ ಹಯವನೇರಿ ಭರದಿ ತಿರುಗಿ ತಿರುಗೀ
ವನವನೆಲ್ಲ ಮೃಗನೆವನದಿ ನಿಂದು ನೋಡಿದೇ
ಪ್ರಿಯಸಖಿಯರ ಕೂಡಿ ಪದುಮಾವತಿಯು ತಾ
ಹಯದಿ ಕುಳಿತ ನಿನ್ನ ನೋಡಲು
ಪ್ರಿಯಳಿವಳೆನಗೆಂದು ಯೋಚಿಸಿ
ಕಾಯಜಪಿತ ನಿನ್ನ ಹಯವನೆ ಕಳಕೊಂಡು
ಮಾಯದಿಂದ ನೀ ಮಲಗಿದೆ
ತಾಯಿ ಬಕುಳೆಯೊಳು ಪೇಳಿದೇ
ತೋಯಜಮುಖಿಯಳ ಬೇಡಿದೇ
ಆ ಯುವತಿಯನ್ನೇ ಸ್ಮರಿಸುತಾ
ಶ್ರೀಯರಸನೆ ನೀನು ಸ್ತ್ರೀ ರೂಪದಿ ಪೋಗಿ

ಶ್ರೀಯಾಗಿಹಳಿನ್ನು ಶ್ರೀಹರಿಗೀಯಲು
ಶ್ರೇಯವೆಂದು ಆಕಾಶನನೊಪ್ಪಿಸಿ
ತಾಯಿಯಭೀಷ್ಟವನಿತ್ತೆ ಸ್ವರಮಣಾ ೩

ಸಕಲ ಲೋಕೈಕ ನಾಥಾ–ಭಕುತರಭೀಷ್ಟಪ್ರದಾತಾ
ಭಕುತನಾದ ಆಕಾಶನೃಪತಿಯು ಬಕುಳೆ ಮಾ–
ತ ಕೇಳಿ ಅಭಯವಿತ್ತು ಮನ್ನಿಸಿ ಪದುಮಾವತಿಯ ಪರಿಣಯ
ಶುಕರ ಸನ್ಮುಖದಲ್ಲಿ ಅಕಳಂಕ ಮಹಿಮ–
ಗೆ ಕೊಟ್ಟನು ತಾ ಲಗ್ನಪತ್ರಿಕಾ
ಸ್ವೀಕರಿಸುವುದೀಕನ್ನಿಕಾ ಈ ಕಾರ್ಯಕೆ ನೀನೆ ಪ್ರೇ
ರಕಾ ತಾ ಕಳುಹಿದ ಪುಣ್ಯ
ಶ್ಲೋಕನು ಶೋಕರಹಿತ ಜಗ–
ದೇಕವಂದ್ಯ ಅವಲೋಕಿಸಿ ಪತ್ರಿಕವನ್ನು
ಸಕಲ ಸಾಧನವಿಲ್ಲಿನ್ನು
ಲೋಕೇಶ ಗರುಹ ಬೇಕಿನ್ನು
ಏಕಾಂಗಿ ನಾನು ಎನ್ನಲು
ಲೋಕಪತಿಯೆ ಸುರಕೋಟಿಗಳಿಂದಲಿ
ಈ ಕುವಲಯದಿ ನಿನ್ನಯ ಪರಿಣಯವೆಸಗಲು
ಲೋಕ ಜನಕೆ ಕಲ್ಯಾಣವ ತೋರಿದೆ
ಭಕುತ ಜನಪ್ರಿಯ ಶ್ರೀವತ್ಸಾಂಕಿತ ೪

ಖಗವರವಾಹನ ದೇವಾ
ತ್ರಿಗುಣರಹಿತ ಜಗಕಾವಾ
ಅಗಣಿತ ಮಹಿಮ ಗೋಮಯನೆನಿಸಿ
ಬಗೆಬಗೆ ರೂಪವಧರಿಸಿ ಪರಮಾದರದಲಿ ಸುರರ ಪೊರೆಯುತಾ
ನಗಧರ ನೀನೀಗಿರಿಯೊಳು ನೆಲೆಸಿಹೆ
ಅಗಣಿತ ಸುರಗಣಕಿನ್ನರರು ಸಾಧ್ಯರು ತರುಫಲ
ಖಗ ಮೃಗ ರೂಪವ ಬಗೆಬಗೆ ಇಹೆ
ಪೊಗಳಲಳವೇ ಗಿರೀವರವು
ಹಗಲು ಇರುಳು ಭಗವಂತನೆ ನಿನ್ನನ್ನು
ಪೊಗಳುತಿಹರು ನಿನ್ನ ಭಕುತರು
ನಿಗಮವ ಪಠಿಸುತ ನಡೆವರು ನಗೆ

ಮೊಗದಲಿ ನಿನ್ನ ದಾಸರು ಗೋವಿಂದ ಮುಕುಂದ ಎನ್ನುತಾ
ಯುಗ ಯುಗದೊಳು ನೀ ನಗದೊಳು ನೆಲೆಸಿಹೆ
ಜಗದದೇವ ರಾಜಿಸುವವನಾಗಿಹೆ
ಮಿಗಿಲೆನಿಸಿದ ಶ್ರೀ ವೆಂಕಟೇಶ
ಸದ್ಗುಣ ಸಚ್ಚಿದಾನಂದ ಮುಕುಂದ ಗೋವಿಂದಾ ೫

## ೧೨

**ಉದಯರಾಗ** **ಝಂಪೆ**

ಈ ಜೀವವಿದ್ದು ಫಲವೇನು, ಚೆಲುವ ಪ

ರಾಜೀವಲೋಚನನ ನೆನೆಯದ ಪಾಪಿ ತನುವಿನಲಿ ಅ

ಅರುಣ ಉದಯದಲೆದ್ದು ಹರಿಯ ಸ್ಮರಣೆಯ ಮಾಡಿ
ಗುರುಹಿರಿಯರನು ಮನದಿ ನೆನೆದು ನೆನೆದು
ಪರಮ ಸುಖಿಯಾಗಿ ನದಿಯೊಳು ಮಿಂದು ರವಿಗರ್ಘ್ಯ
ವೆರೆಯದ ಕಡು ಪಾಪಿಯಾದ ಈ ತನುವಿನಲಿ ೧

ಹೊನ್ನ ಕಲಶದಲಿ ಅಗ್ರೋದಕವ ಶ್ರೀ ಹರಿಗೆ
ಚೆನ್ನಾಗಿ ಅಭಿಷೇಕವನ್ನು ಮಾಡಿ
ರನ್ನದುಡಿಗೆಗಳುಡಿಸಿ ರತ್ನಗಳನಳವಡಿಸಿ
ಕಣ್ಣಿನಲಿ ನೋಡಲರಿಯದ ಕಪಟಿ ತನುವಿನಲಿ ೨

ತುಲಸಿ ದಳಗಳು ಪುಷ್ಪಮಾಲಿಕೆಯು ನವರತ್ನ
ಹೊಳೆವ ಕೌಸ್ತುಭವು ಕೊರಳಲ್ಲಿ ಪದಕ
ನಳಿನಾಕ್ಷಗಿಟ್ಟು ಕರ್ಪೂರದಾರತಿಯೆತ್ತಿ
ಕಣ್ಣಿನಲಿ ನೋಡಲರಿಯದ ಕಪಟ ತನುವಿನಲಿ ೩

ಪರಿಪರಿಯ ಭಕ್ಷ್ಯ ಪಾಯಸ ಶಾಕ ಶಾಲ್ಯಾನ್ನ
ಹರುಷದಿಂ ದಧಿಖಂಡ ಕ್ಷೀರ ಘೃತವು
ಪರಮಪುರುಷಗೆ ತಂದು ನೈವೇದ್ಯವನೆ ಮಾಡಿ
ಹರುಷದಲಿ ಕೈಮುಗಿಯಲರಿಯದ ಕಪಟ ತನುವಿನಲಿ ೪

ಉರಗಾದ್ರಿಯಲಿ ಚಂದ್ರ ಪುಷ್ಕರಣಿ ಮೊದಲಾದ
ಪರಿಪರಿ ತೀರ್ಥದಲಿ ಮುಣುಗಿ ಮುಣುಗಿ

ತಿರುವೆಂಗಳಪ್ಪ ಶ್ರೀ ಪುರಂದರವಿಠ್ಠಲನ
ಕಣ್ಣಿನಲಿ ನೋಡಲರಿಯದ ಕಪಟ ತನುವಿನಲಿ ೫

೧೩

ಸಾರಂಗ ಧ್ರುವ

ಈತನಾತುಮ ಮೂರುತಿ ಈತನಂತರಾತುಮಾ
ಈತನೆ ಪರಮಾತುಮ ಈತನೆ ಜ್ಞಾನಾತುಮ ಪ

ಈತನೆ ಅನ್ನಯಾದಿ ಮೂರುತಿ
ಈತನೆ ಪ್ರಾಜ್ಞಾದಿ ಮೂರುತಿ ಕಾಣೊ
ಈತನೆ ಅಂಗುಷ್ಟ ಪರಿಮಿತ ಮೊದಲಾತ
ಈತನೆ ಹೃದಯಾಂಬುಜ ನಿವಾಸ ಪ್ರ
ಖ್ಯಾತ ಮೂರುತಿ ಜಗದಾಶ್ಚರ್ಯ ಮೂರುತಿ
ಈ ತಿರುವೆಂಗಳ ತಿಮ್ಮಪ್ಪ ಎನ್ನಪ್ಪ
ವಾತವಂದಿತ ಸಿರಿ ವಿಜಯವಿಠಲ ಪರಮಾ
ಪ್ರೀತನು ಸಕಲಸುರ ವ್ರಾತಕನುದಿನ ೧

ಮಟ್ಟ

ಹರಣದೊಳಗೆ ನೀನು ಇರಳುಹಗಲು ಬಿಡದೆ
ತರುಣಿ ಪುರುಷವೇಷ ಧರಿಸಿದೆ ಪ್ರತಿದಿನ
ಮೆರೆದು ಉನ್ನತದಲ್ಲಿ ಸುರರೊಳು ಪೆಸರಾದ
ವರಗಿರಿಯ ವಾಸ ತಿರುವೆಂಗಳೇಶ ವಿಜಯವಿಠಲಧೀಶಾ
ಕರುಣಾಕರ ಸುಜನರ ಮನೋರಥ ದೇವಾ ೨

ತ್ರಿವಿಡಿ

ಅನಿರುದ್ಧಾದಿ ಮೂರುತಿ ಅಜಾದಿ ಮೂರುತಿ
ಅನಿಮಿಷರೊಳಗೆ ಬಲುಪೊಳವ ಮೂರ್ತಿ
ಮನ ಮೊದಲಾದ ಇಂದ್ರಿಯಂಗಳವರಲ್ಲಿ
ಮಿನಗುವ ಮೂರುತಿ ಪರಿಪೂರ್ಣ ಮೂರುತಿ
ಪುನಗು ಮಘಮಘಿಸುವ ತಿರುವೆಂಗಳೇಶ ಸಾ
ಧನ ತೋರಿಕೊಡುವ ವಿಜಯವಿಠಲರೇಯಾ ೩

ಬೆಟ್ಟದೊಡೆಯನ ಚರಣಕಮಲಕೆ ಶಿರ –
ವಿಟ್ಟು ಕರಗಳ ಮುಗಿವೆ ನಾ ಕವಕವ ನಗುವೆ ನಾ
ಎನ್ನೊಡೆಯ ಪೊಗಳಿ ನಾ ೨

ಸ್ವಾಮಿ ಪುಷ್ಕರಣಿಯಲಿ ಸ್ನಾನ ನೇಮ –
ವ ಮಾಡುವೆ ಪುಣ್ಯಕ್ಷೇತ್ರವ ನೋಡುವೆ
ಹಯವದನನ ಕೊಂಡಾಡುವೆ ೩

## ೧೫

ಎಷ್ಟು ಹೇಳಲಿ ವೆಂಕಟಗಿರಿಯ
ದೃಷ್ಟಿಗೆ ಬಹು ಸಿರಿಯ
ಬೆಟ್ಟವನೆ ಮನಸಿಟ್ಟೇರಲು ಬೇಡಿದ
ಇಷ್ಟಾರ್ಥಗಳ ಈಡಾಡುವ ದೊರೆಯ ಪ

ಚಿತ್ರವಿಚಿತ್ರದ ಮಹಾದ್ವಾರ
ಚೆನ್ನದ ಗೋಪುರ
ಸ್ವಚ್ಛವಾದ ಸ್ವಾಮಿ ಪುಷ್ಕರಣಿಯ ತೀರ
ಸುತ್ತಲು ಪ್ರಾಕಾರ
ಹೆಚ್ಚಿನತೀವ್ರತವೆ ಮನೋಹರ
ಮಾರುವ ವಿಸ್ತಾರಸ
ಚಿತ್ತಜನಯ್ಯನ ಶೈಲವೆ ದೂರದಿಂ –
ದ್ಧತ್ತಿ ಬರುವುದೀತನ ಪರಿವಾರ ೧

ರತ್ನಮಾಣಿಕ್ಯದ ಕೇಯೂರ
ಕಟ್ಟಿದ ಉಡಿದಾರ
ಉಟ್ಟಿದ್ದ ನಿರಿಜರಪೀತಾಂಬರ
ಕೌಸ್ತುಭ ಮಣಿಹಾರ
ಗಟ್ಟಿ ಕರಕಂಕಣ ಕುಂಡಲಧರ
ಚತುರ್ಭುಜದಲಂಕಾರ
ವಕ್ಷಸ್ಥಳದಲ್ಲಿ ಹೊಂದಿದ ಶ್ರೀಮಹಾ–
ಲಕ್ಷ್ಮೀದೇವಿಯರಿಂದೊಲಿವ ಶೃಂಗಾರ ೨

ಆಕಾಶರಾಜನ ಕಿರೀಟ
ಚಿತ್ರವು ಬಹುಮಾಟ

ಬೆಟ್ಟದೊಡೆಯನ ಚರಣಕಮಲಕೆ ಶಿರ –
ವಿಟ್ಟು ಕರಗಳ ಮುಗಿವೆ ನಾ ಕವಕವ ನಗುವೆ ನಾ
ಎನ್ನೊಡೆಯ ಪೊಗಳಿ ನಾ ೨

ಸ್ವಾಮಿ ಪುಷ್ಕರಣಿಯಲಿ ಸ್ನಾನ ನೇಮ –
ವ ಮಾಡುವೆ ಪುಣ್ಯಕ್ಷೇತ್ರವ ನೋಡುವೆ
ಹಯವದನನ ಕೊಂಡಾಡುವೆ ೩

೧೫

ಎಷ್ಟು ಹೇಳಲಿ ವೆಂಕಟಗಿರಿಯ
ದೃಷ್ಟಿಗೆ ಬಹು ಸಿರಿಯ
ಬೆಟ್ಟವನೆ ಮನಸಿಟ್ಟೇರಲು ಬೇಡಿದ
ಇಷ್ಟಾರ್ಥಗಳ ಈಡಾಡುವ ದೊರೆಯ ಪ

ಚಿತ್ರವಿಚಿತ್ರದ ಮಹಾದ್ವಾರ
ಚೆನ್ನದ ಗೋಪುರ
ಸ್ವಚ್ಛವಾದ ಸ್ವಾಮಿ ಪುಷ್ಕರಣಿಯ ತೀರ
ಸುತ್ತಲು ಪ್ರಾಕಾರ
ಹೆಚ್ಚಿನತೀವ್ರತವೆ ಮನೋಹರ
ಮಾರುವ ವಿಸ್ತಾರಸ
ಚಿತ್ತಜನಯ್ಯನ ಶೈಲವೆ ದೂರದಿಂ –
ದ್ಹತ್ತಿ ಬರುವುದೀತನ ಪರಿವಾರ ೧

ರತ್ನಮಾಣಿಕ್ಯದ ಕೇಯೂರ
ಕಟ್ಟಿದ ಉಡಿದಾರ
ಉಟ್ಟಿದ್ದ ನಿರಿಜರಪೀತಾಂಬರ
ಕೌಸ್ತುಭ ಮಣಿಹಾರ
ಗಟ್ಟಿ ಕರಕಂಕಣ ಕುಂಡಲಧರ
ಚತುರ್ಭುಜದಲಂಕಾರ
ವಕ್ಷಸ್ಥಳದಲ್ಲಿ ಹೊಂದಿದ ಶ್ರೀಮಹಾ–
ಲಕ್ಷ್ಮೀದೇವಿಯರಿಂದೊಲಿವ ಶೃಂಗಾರ ೨

ಆಕಾಶರಾಜನ ಕಿರೀಟ
ಚಿತ್ರವು ಬಹುಮಾಟ

ಹಾಕಿದ್ದ ಹರಿ ಕಡೆಗಣ್ಣಿನ ನೋಟ
ಭಕ್ತರ ಕುಣಿದಾಟ
ಬೇಕಾದ ಭಜಕರ ಭವ ಪಡಿಪಾಟ
ಬಿಡಿಸುವ ಯಮಕಾಟ
ಕೋಟಿಜನರ ಓಡ್ಯಾಟವೆ ನಮ್ಮ ಕಿ –
ರೀಟಿಯ ಸಖ ಕೇಶವನ ಮಂದಿರದೊಳ್ ೩

ತಪ್ಪುಗಾಣಿಕೆಯ ಬೇಡುವ ಸರ್ಪ
ಶೈಲದ ತಿಮ್ಮಪ್ಪ
ಕಪ್ಪವ ಕಾಸು ಕವಡೆ ಮುಡುಪು
ಹಾಕದೆ ತಾನೊಪ್ಪ
ಜಪ್ತಿಸಿ ನೋಡುವ ಜನರ ತಪ್ಪ
ಹುಡಿಕ್ಯಾಡುತಲಿಪ್ಪ
ಅಪ್ಪ ಮಹಿಮಾನಂತ ಮೂರುತಿ ತಾ–
ನೊಪ್ಪಿದರೊಲಿದುಕೊಡುವ ಸಾರೂಪ್ಯ ೪

ದೇಶದೇಶ್ಗದೊಳು ಈತನ ವಾರುತೆಯು
ತುಂಬಿದ ಕೀರುತಿಯು
ಆಸೆಯ ದೈವ ಈ ಮೂರುತಿಯು
ಫಲ್ಗುಣ ಸಾರಥಿಯು
ಲೇಸಾಗಿ ಜನರ ನೋಡುವ ರತಿಯು
ಕರ್ಪೂರದಾರತಿಯು
ವಾಸವಾಗಿರುವ ಈ ಶೇಷಾದ್ರಿಯಲಿ ಭೀ–
ಮೇಶ ಕೃಷ್ಣ ಶ್ರೀನಿವಾಸ ಕೃಪಾಳು ೫

## ೧೬

ಭೈರವಿ ಝಂಪೆ

ಎಸವೊ ಪೊಸರತುನ ರಂಜಿಸುವ ಮಕುಟಮೌಳಿ
ಅಸಿತ ಸುಳಿಗುರುಳ ಶೋಭಿಸುತಿರೆ ಮಧುಪನಂತೆ
ನೊಸಲಲ್ಲಿ ಮೃಗನಾಭಿ ತಿಲುಕ ತಿದ್ದಿದ ಸೊಬಗು
ದಶಕಕುಭಕಾಂತಿ ಧಿಕ್ಕರಿಸುವ ಕುಂಡಲ ಛವಿ

ಯಸಳು ಕಂಗಳು ಕುಸುಮಾ ಚಂಪಕನಾಸನ ಕಂಡೆ
ಶಶಿವದನ ನಸುನಗೆ ರಸಸುರಿವ ಮಾತು
ಮಿಸುಣಿಪಾವಳಿದಂತ ಕಂಬುಕೊರಳ ರೇಖೆ
ಹಸನಾದ ಉರನಾಭಿ ನಡಿವೆ ಸರ್ವಲೋಕ
ಬಸುರೊಳಗೆ ವೊಪ್ಪುತಿರೆ ಕಂಡೆ ಕಟಿಕರ ಯುಗ್ಮಾ
ಪಸರಿಸೂವ ಊರು ಜಾನುಜಂಘೆ ಪದನಖಾ
ನಿಶಿಚರನಾಶಾ ಲೋಕಾತ್ರಯಾಶ್ರಯಾ ನಾಮಾ
ಝುಷಕೇತನಯ್ಯಾ ಸಿರಿ ವಿಜಯವಿಠಲನ
ಅಸಮಸ ಮೂರ್ತಿಯಾ ಕನಸಿನಲ್ಲಿ ಕಂಡೆ ೧

## ಮಟ್ಟ

ವೀರಮುದ್ರಿಕೆ ಬೆರಳ ಚಾರು ಶೋಭಿತಪೆಂಡೆ
ಘೋರಗರವ ಗೆಜ್ಜೆ ತಿರಿತಿರಿಲಿ ಝೇಂಕಾರದನೂಪೂರ
ಗಾರಾದ ಉಡುದಾರ ಹೀರ ಕೌಂಸ್ತುಭ ತುಲಸೀ
ಹಾರಾ ಪುಲಿಯುಗುರು ಹೇರೂರಾದಲ್ಲಿ ಕೇಯೂರ ಸಿರಿದೇವಿ
ವಾರಣದಿಂದ ಬಂಗಾರ ಕಂಕಣ ಮುದ್ರೆ
ತೋರುವ ಸರ್ವಾಲಂಕಾರ ಚಲುವನಾ
ಪಾರಾನೋಡಿದೆ ನಖಾ ಶಿರಸ ಪರಿಯಂತಾ
ಪಾರಮಹಿಮಾ ಸಮೀರಣ ನಾಮಕನು ವಿಜಯವಿಠಲವನ್ನು
ಪಾರನನೋಡಿದೆ ಸಂಸಾರಹರ ವಾಗಿ
ಸೇರುವೆ ಗತಿಯಲ್ಲಿ ಆರಾಧನೆಯೀಯಿಂದ ೨

## ತ್ರಿವಿಡಿ

ಪೊಂಬಟ್ಟೆ ವಸನವ ನಂದಮಹಿಮಷವ ಕೈಯ್ಯ
ಕೊಂಬು ಕೊಳಲು ಕೋಲು ತುತ್ತುರಿ ಮವ್ವುರಿ
ಭೊಂ ಭೊಂ ಭೋಂ ಎಂದು ಧ್ವನಿ ಮಾಡಿ ಊದುವ ರತ್ನ
ಗಂಬಳಿ ಕೊಪ್ಪಲಿ ತ್ರಿಭಂಗಿಯನ್ನು ಹೂಡಿ
ತುಂಬಿದ ಗೋವಿಂಡಿನೊಳು ನಿಂದು ನಲಿದೊಲಿದು
ರಂಭೆರಾಮನೆ ಕಾಲಾರಂಭಾ ತೊ ರವಾ ಪೆಚ್ಚಿಸಿ
ಹಂಬಲಾಗೊಳಿಸಿದ ಗಂಭೀರ ಪುರುಷ ಕು

ಟುಂಬ ಪಾಲಕ ಪಿಶ್ವನಂಬೋದು ಶತಸಿದ್ಧ
ನಂಬಲು ಬೆಂಬಲವಾಗಿ ಪಾಲಿಪ ಪ್ರತಿ
ಬಿಂಬ ಹೇಮಾಂಗ ಶ್ರೀ ವಿಜಯವಿಠಲರೇಯಾ ೩

ಅಟ್ಟ

ಗಿರಿಯ ಧರಿಸಿ ನಿರ್ಜರರ ಪೊರೆದಾ ನೀತ
ಗಿರಿಜೇಶಗೆ ಬಂದ ಉರಿಯ ಕಳದ ನೀತ
ಗಿರಿಯ ಬೆರಳಲೆತ್ತಿ ತುರವ ಕಾಯಿ
ಗಿರಿಯ ವೈರಿಯ ನಂದನನ ಪ್ರೀತ ನೀತ
ಗಿರಿಯ ತಂದವಗತಿ ಕರುಣ ಮಾಡಿದ ನೀತ
ಗಿರಿಯ ಬಾಯಲಿಕಟ್ಟಿ ಜಗವ ಸಾಕುವ ನೀತ
ಗಿರಿಯ ಸುತ್ತುವನ ವಸರೊಳೊಬ್ಬಾ ನೀತ
ಗಿರಿ ಪಾಶಾ ಶಾಯಿ ಶ್ರೀ ವಿಜಯವಿಠಲ ನೀತ
ಗಿರಿಯಾ ಕಿತ್ತಿದವ ನಳಿದನಂದ ಧೀರ ನೀತ ೪

ಆದಿ

ಶ್ಯಾಮವರ್ನ ಕೋಮಲಾಂಗ
ಸಾಮಗಾಯನ ವಿಲೋಲ
ಕಾಮ ಪರಿಪೂರ್ಣ ತಿರ್ಮ ಮೇಲಗಿರಿನಿಲಯ
ರಾಮರಂಗ ರಾಜೀವಾಕ್ಷಾ ವಾಮನಾ ಇಂದಿರಾ ಪ್ರಾಣ
ಪ್ರೇಮಾ ಯದುಕುಲ ಲಲಾಮ ಭಕ್ತವಾರ್ಧಿಸೋಮ
ಭೂಮಿ ವಾಯು ತೇಜಾ ರಾಪೂ ಯೋಮಂತ ಬಾಹ್ಯದಿ
ನೇಮಕನು ಸ್ಯಾಮಕ ನೀಯಾಮಕನು ಗುಣಕರ್ಮಾ
ನಾಮಕನ ನೆನಿಯೆ ತ್ರಿಧಾಮಾದಲಿ ಸೇರಿಸುವ
ಭೀಮಾ ನಾಮಾ ದಾತಾನೀತಾ ವಿಜಯವಿಠಲ ಲೋಕ
ಸ್ವಾಮಿಯನ್ನು ಕಂಡೆ ಕಂಗಳ ಮನೋಹರವಾಯಿತು ೫

ಜತೆ

ಪಾವಿತ್ರನಾನಾದೇ ಪರಮಪುರುಷನ ನೋಡಿ
ಪಾಪಿತ್ರನಾಮಕ ವಿಜಯಪಿಠಲರೇಯಾ ೬

## ೧೭

**ಮುಖಾರಿ** **ಅಟ್ಟ**

ಕಂಡೆ ಕಂಡೆ ಸ್ವಾಮಿಯ ಬೇಡಿಕೊಂಡೆ ಪ

ಕಂಡೆ ತಿರುಪತಿ ವೆಂಕಟೇಶನ
ಕಾರಣಾತ್ಮಕ ಸಾರ್ವಭೌಮನ
ಕಾಮಿತಾರ್ಥಗಳೀವ ದೇವನ
ಕರುಣಾನಿಧಿ ಎಂದೆನಿಸಿ ಮೆರೆವನ ಅ

ಕೋಟಿ ಸೂರ್ಯಪ್ರಕಾಶವೆನಿಪ ಕಿ
ರೀಟವನು ಮಸ್ತಕದಿ ಕಂಡೆನು
ನೋಟಕಾಶ್ಚರ್ಯವಾದ ನಗೆ ಮುಖ
ನೊಸಲಿನಲಿ ತಿರುಮಣಿಯ ಕಂಡೆನು
ನಾಟಿಯಿಲ್ಲದೆ ಚತುರ ಹಸ್ತದಿ
ಶಂಖ ಚಕ್ರ ಗದಾಬ್ಜ ಕಂಡೆನು
ಬೂಟಕದ ಮಾತಲ್ಲ ಕಾಣಿರೊ
ಭೂರಿ ದೈವರ ಗಂಡನಂಘ್ರಿಯ ೧

ತಪ್ಪುಗಾಣಿಕೆ ಕಪ್ಪಗಳನು
ಸಪ್ತದ್ವೀಪಗಳಿಂದ ತರಿಸುವ
ಉಪ್ಪು ಓಗರಗಳನೆ ಮಾರಿಸಿ
ಉಚಿತದಿಂದಲಿ ಹಣವ ಗಳಿಸುವ
ಇಪ್ಪತ್ತು ದುಡ್ಡಿಗೆ ಸೇರು ತೀರ್ಥವ
ಒಪ್ಪದಲಿ ಕ್ರಯ ಮಾಡಿಕೊಡಿಸುವ
ಸರ್ಪಶಯನನ ಸಾರ್ವಭೌಮನ
ಅಪ್ಪ ವೆಂಕಟರಮಣನಂಘ್ರಿಯ ೨

ಉರದಿ ಸಿರಿದೇವಿಯಿರಲು ಕಂಡೆನು
ಉನ್ನತದಿ ಕೌಸ್ತುಭವ ಕಂಡೆನು
ಗರುಡ ಕಿನ್ನರ ನಾರದಾದಿ ಗಂ
ಧರ್ವರೆಡ ಬಲದಲ್ಲಿ ಕಂಡೆನು
ತೆರತೆರದಿ ಭಕ್ತರಿಗೆ ವರಗಳ

ಕರೆದು ಕೊಡುವುದ ನಾನು ಕಂಡೆನು
ಶರಧಿಶಯನನ ಸಾರ್ವಭೌಮನ
ವರದ ಪುರಂದರವಿಠಲನಂಘ್ರಿಯ ೩

## ೧೮

**ಕಲ್ಯಾಣಿ** **ಧ್ರುವ**

ಕಂಡೆಕರುಣಾಕರನ ಕಣ್ಣಾರೆ ಮನದಣಿಯೆ
ಮಂಡೆಯಲಿ ಮಕುಟ ಝುಗಝುಗಿಸುತಿರೆ ಬಲುಕರ್ನಾ
ಕುಂಡಲದ ಬೆಳಗು ಕುಂದದೆ ಶೋಭಿಸೆ ಎರಡು
ಗಂಡಸ್ಥಳದಲ್ಲಿ ಮಿಂಚುವ ನಯನನಾಸ
ಚಂಡಪ್ರಕಾಶ ಅಳಿಗುರುಳು ನಸಲಲಿ ತಿಲುಕ
ತಂಡ ತಂಡದ ದಂತ ಅಧರ ಕೊರಳಲಿ ತುಲಸಿ
ದಂಡೆ ಕೌಸ್ತುಭಮಣಿ ಉರದ ಸಿರಿವತ್ಸವು
ದಂಡ ಬಲುಪದಕ ಮುತ್ತಿನಸರ ರೇಶಿಮೆ
ಗೊಂಡೆ ತೋಳಲಿ ವಪ್ಪೆ ಚತುರ್ಭುಜದ ಚನ್ನಿಗ
ದುಂಡಮಲ್ಲಿಗೆ ಉಳದ ಪೂವಾದಿಗಳು ಎಸಿಯೆ
ತೋಂಡರಿಗೆ ಬಿಡದೀವ ಅಭಯಕರ ಶಂಖಚಕ್ರ
ಗಂಡುಗಲಿ ಕಟಿಕರ ಘನವುಡುಗೆ ಶೃಂಗಾರ
ಡಂಡಣದ ಘಂಟೆ ಕಿಂಕಿಣಿಜಾನು ಜಂಘೆ ವೀರ
ಪೆಂಡೆ ಪಡದಂದಿಗೆ ಛಂದವಾದದು ಕಂಡೆ
ತೊಂಡಿಗೆ ಗತಿಯನಿತ್ತ ವೆಂಕಟ ವಿಜಯವಿಠಲ
ಕುಂಡಲಗಿರಿವಾಸ ತಿರುವೆಂಗಳೇಶ ೧

**ಮಟ್ಟ**

ಗರುಡ ವಿಷ್ವಕ್ಸೇನ ವರ ಸುದರುಶನ
ಪರಮಪುರುಷನ ಎದುರಿಲಿ ಚತುರಬೀದಿ
ಮೆರೆವುತಲಿ ಸುತ್ತ ಬರುವದು ನಾನಾಕ
ಪರಿವಾರ ಕೂಡ ಭರದಿಂದಲಿ ಕಂಡು ದುರಿತದೂರನಾ
ಉರಗಗಿರಿಯ ಶ್ರೀನಿವಾಸ ವಿಜಯವಿಠಲ
ಪರಿಪರಿ ವೈಭೋಗದರಸೆ ಪರ ಬೊಮ್ಮಾ ೨

### ತ್ರಿವಿಡಿ

ಇಂದು ಧ್ವಜಾರೋಹಣವೆಂದು ತಿಳಿದು ವನಜ
ನಂದನ ಇಂದುಶೇಖರ ನಿರ್ಜರ
ಸಂದೋಹ ಸನಕಸನಂದಮುನಿ ನಾ
ರಂದ ತುಂಬರ ಗಂಧರ್ವಸೊಬಗತಿ
ಛಂದದಿಂದಲೊಪ್ಪುವ ಅಂದವಾದ ನಾರೇರು
ಬಂದಿಮಾಗದರು ನಿಸ್ಸಂದೇಹವಿಲ್ಲದೆ
ನಿಂದೆಡಬಲದಲ್ಲಿ ವಂದೆ ದೈವಾವೆಂದು
ವಂದಿಸಿ ತಮ್ಮ ತಮ್ಮ ಗಂದವಾಗಿ ಪೊಗಳೆ
ಚಂದಿರವದನ ತಿರ್ಮಲ ವಿಜಯವಿಠಲ
ತುಂದಿಯಿಂದಲಿ ನೆನಿಯೆ ಅಂದ ವರವನೀವ ೩

### ಅಟ್ಟ

ಎಲ್ಲಲ್ಲಿ ನೋಡಿದರಿಲ್ಲ ಇದರ ಸರಿ
ಎಲ್ಲ ನಿಧಿಗಳಿಗೆ ಬಲ್ಲಿದ ನಿಧಿಯನ್ನಿ
ಬಲ್ಲವನಾಗಿದ್ದು ನಿಲ್ಲದೊಂದೆ ಸಾರೆ
ಸಲ್ಲಲಿತ ಮನದಲ್ಲಿ ಯಾತ್ರೆಮಾಡೆ
ಸಲ್ಲಾನು ನರಕಕ್ಕೆ ಎಲ್ಲಾ ಜನ್ಮದ ಪಾಪ
ತಲ್ಲಣಿಸಿ ಎದ್ದುನಿಲ್ಲದೆ ಓಡೋವು
ಯಳ್ಳನಿ ತರ್ಕಿತ ಸೊಲ್ಲಿನಿಂದಲಿ ಎನೆ
ಸಲ್ಲಿಸಿ ಈ ಮಾತ ವಿಜಯವಿಠಲ ಸಿರಿ
ವಲ್ಲಭ ತಿರುವೆಂಗಳೆಲ್ಲೆಲ್ಲಿ ನಲಿವಾ ೪

### ಆದಿ

ಶ್ರೀನಿವಾಸನ ಕ್ಷೇತ್ರ ಆನಿರ್ಜರರು ಎಣಿಸಿ
ಕಾಣಾರು ಎಣಿಕೆ ಗಣಣೆ
ಕೋಣೆಯೊಳಗುಳ್ಳ ನಿಧಿಗೆ
ಮಾಣಿಕವಾಗಿದ್ದು ಮೆರದು
ಧ್ಯಾನಮಾಡಿದವನ ಮಾತಿಗೆ
ತಾನಿಲುಕ ತಿಪ್ಪದೈಯ್ಯಾ
ವಾಣಿಯರಸ ಜನಕ ತಿಮ್ಮಾ ವಿಜಯವಿಠಲ್ಲಾರತುನ
ತಾನು ತಿರುಗಿದ ಫಲವನೀವನು ಮನ್ನಿಸಲೂ ೫

ಜತೆ

ದಿಲೀಪಾ ವರದ ಪನ್ನಂಗ ಮಹಿಧರ ಧೀಶ
ಶೋಲಾ ವಿಜಯವಿಠಲ ತಿಮ್ಮರಾಯನ ಕಂಡೆ ೬

## ೧೯

ಸಾವೇರಿ ಆದಿ

ಕಂಡೆ ನಾ ಬ್ರಹ್ಮಾಂಡದೊಡೆಯ ಶ್ರೀ ವೆಂಕಟೇಶನ ಪ

ಕಂಡೆ ನಾ ಭಕುತರ ಹಿಂಡುಗಳು ನೆರೆ
ಕೊಂಡಾಡುತಲಿದೆ ಪದಪುಂಡರೀಕವನಾ ಅ

ತುಂಗಮಹಿಮ ನತ್ಸಂಗವಿತ್ತು ಮನದಂತರವರಿ–
ತಾಂಗೀರಸದೀ ಮಂಗಳ ಪೌರ್ಣಿಮೆ ಭಾರ್ಗವಾಸರದಿ
ಭಾರ್ಗವಿಪತಿ ನಿನ್ನನುಗ್ರಹದಿ ನಗದೊಡೆಯ ಭಕ್ತ–
ರಘುಹರಿಸುತ ಪನ್ನಗಗಿರಿಯೊಡೆಯ ನಿನ್ನಯ ಗುಡಿಯನ್ನು
ಬಗೆಬಗೆ ಸುತ್ತಿಪರ ಹಿಂಡನ್ನು ನಾ ಕಂಡೆನೋ
ಜಾಗುಮಾಡದೆ ಬಾಯಿ ಬೀಗವ ಕೈಕೊಂಡು
ಸಾಗಿ ಕಾಸಾರದಿ ಸ್ನಾನ ಮಾಡಿಕೊಂಡು
ಬಾಗಿ ವರಹಾದೇವರ ವಂದಿಸಿ
ಬೇಗದಿ ಹರಕೆ ಕೈಕೊಂಡಿಹ ದೇವನ ೧

ಮುಕ್ತರೊಡೆಯ ಪುರುಷೋತ್ತಮ ನಿನ್ನಯ
ಭಕ್ತರ ವಿಪತ್ತುಗಳೆಲ್ಲ ಹರಿಸಿ ಶಕ್ತ್ಯಾನುಸಾರ ತ್ವ–
ದ್ಭಕ್ತರೆಸಗುವ ಅತ್ಯಲ್ಪಭಕ್ತಿಯ ಸ್ವೀಕರಿಸಿ
ಭಕ್ತಿಯಿಂದ ಪ್ರಾಕಾರದಿ ಸುತ್ತಲು ಹೊತ್ತಗಂಡದೀಪ ಸಾರುತಲೀ
ನಿತ್ಯನೂತನ ನಿನ್ನ ಸ್ತುತಿಸುತಲೀ ಮತ್ತೆ ಉರುಳುತಲೀ
ಉತ್ತಮಗತಿಪ್ರದ ವ್ಯಕ್ತನಹುದೊ ತ್ವ–
ದ್ಭಕ್ತರ ಮನೋರಥ ಪೂರ್ತಿಮಾಡುವ
ಭಕ್ತವತ್ಸಲನೆಂಬ ಬಿರುದು ಪೊತ್ತ ಸ–
ರ್ವೋತ್ತಮ ಶ್ರೀಪುರುಷೋತ್ತಮ ನಿನ್ನನು ೨

ಬೊಮ್ಮ ಜನಕ ಪರಬೊಮ್ಮನೆ ನಿನ್ನಯ
ಸನ್ಮಹಿಮೆಯ ನಾ ಒಮ್ಮನದೀ

ಒಮ್ಮೆಯಾದರು ಮನ್ಮನದಲಿ ನಿನ್ನಯ
ಸನ್ಮಂಗಳ ರೂಪವ ನಿಲ್ಲಿಸದೆ ಸುಮ್ಮನೆ ಕುಳಿತು
ಇಮ್ಮನನಾಗಿರೆ ಘಮ್ಮನೆ ಎನ್ನನು ಒಳಕ್ಕೈದೆ
ಕಣ್ಮನದೆದುರಲಿ ನೀನಿಂದೆ ನಿನ್ನೆಯತಂದೆ ಸಮ್ಮುದದಿಂದೆ
ಪಾಮರನೆಂದೆನ್ನ ಪ್ರೇಮದಿ ಕರುಣಿಸಿ
ಸನ್ಮಹಿಮೆಯ ತೋರ್ದೆ ಜಗದೀಶ
ಕಾಮಿತಜನರ ಕಲ್ಪದ್ರುಮ ನೀನೆಲೊ
ಈ ಮೇಲುಗಿರೀಶ ಶ್ರೀವೆಂಕಟೇಶಾ ನಿನ್ನ ೩

## ೨೦

ಕಂಡು ಧನ್ಯನಾದೆ ನಂದ ತನಯನ ಕಣ್ಣಾರ
ಕಂಡು ಧನ್ಯನಾದೆ ನಂದ ತನಯನ
ಕಂಡು ಧನ್ಯನಾದೆ ದಣಿಯವೆನ್ನವೆರಡು ಕಂಗಳೀಗ
ತಿರುಗಿ ಪೋಗಲಾರೆ ತಿಮ್ಮಲಾಪುರೀಶ ದೊರೆಯ ಬಿಟ್ಟು ಪ

ನಾಲುದೀವಿಗೆ ಸಣ್ಣನಾಮ ಸರದ ಮಧ್ಯೆ ವೈಜಯಂತಿ
ಸೂರ್ಯನಂತೆ ಹೊಳೆವ ಮುದ್ದು ಮುಖವು ಮಹಾದ್ವಾರದಲ್ಲಿ ೧

ಶಂಖಚಕ್ರ ಶ್ಯಾಮವರ್ಣ ಅಂಕಿತವುಳ್ಳ ನಾಮಗಳಿಂದ
ಪಂಕಜಾಕ್ಷ ಪರಮಪುರುಷ ವೆಂಕಟನೆಂಬೊ ನಾಮಾಂಕಿತದವನ ೨

ಆ ಮಹಾ ವೈಕುಂಠದಲ್ಲಾವಾಸವಾದ ನಮ್ಮ ಕುಲ –
ಸ್ವಾಮಿ ಎನಿಸಿಕೊಂಡ ಭೀಮೇಶ ಕೃಷ್ಣನ ದಯದಿಂದೀಗ ೩

## ೨೧

**ದ್ವಿಜಾವಂತಿ** **ಅಟ್ಟ**

ಕನಸುಕಂಡೆನೆ ಮನದಲ್ಲಿ ಕಳವಳಗೊಂಡೆನೆ
ಏನು ಹೇಳಲಿ ತಂಗಿ ತಿಮ್ಮಯ್ಯನ ಪಾದವನು ಕಂಡೆ ಪ

ಪೊನ್ನದ ಕಡಗನಿಟ್ಟು ತಿಮ್ಮಯ್ಯ ತಾ
ಪೊಳ್ವ ನಾಮವ ಇಟ್ಟು ಅಂದುಗೆ ಘಲುಗೆನ್ನುತ
ಎನ ಮುಂದೆ ಬಂದು ನಿಂತಿದ್ದನಲ್ಲೆ ೧

ಮಕರಕುಂಡಲವನಿಟ್ಟು ತಿಮ್ಮಯ್ಯ ತಾ
ಕಸ್ತೂರಿ ತಿಲಕನಿಟ್ಟು ಗೆಜ್ಜೆ ಘಲುಗೆನುತ
ಸ್ವಾಮಿ ತಾ ಬಂದು ನಿಂತಿದ್ದನಲ್ಲೆ ೨

ಮುತ್ತಿನ ಪಲ್ಲಕ್ಕಿ ಯತಿಗಳು
ಹೊತ್ತು ನಿಂತಿದ್ದರಲ್ಲೆ ಛತ್ರ ಚಾಮರದಿಂದ
ರಂಗಯ್ಯನ ಉತ್ಸವ ಮೂರುತಿಯ ೩

ತಾಮರ ಕಮಲದಲಿ ಕೃಷ್ಣಯ್ಯ ತಾ
ಬಂದು ನಿಂತಿದ್ದನಲ್ಲೆ ವಾಯು ಬೊಮ್ಮಾದಿಗಳು
ರಂಗಯ್ಯನ ಸೇವೆಯ ಮಾಡುವರೆ ೪

ನವರತ್ನ ಕೆತ್ತಿಸಿದ ಸ್ವಾಮಿ ಎನ್ನ
ಹೃದಯ ಮಂಟಪದಲ್ಲಿ ಸರ್ವಾಭರಣದಿಂದ
ಪುರಂದರವಿಠಲನ ಕೂಡಿದೇನೆ ೫

## ೨೨

ಭೈರವಿ ಧ್ರುವ

ಕಮಲಾ ಕಮಲಾಸನದಿಂದೊಪ್ಪುವ ಪೊಕ್ಕಳಮಲವಾಗಿ
ಮೆರೆವ ಬಲುಕಾಂತಿಯಾದ ಉದರ
ಸಮ ವಿಷಮವಿಲ್ಲದ ನೋಳ್ಪವರ ಕಂಗಳಿಗೆ
ಸಮತಳವಾಗಿ ವಿರಾಜಿಸುವ ಉದರ
ಶಮದಮವಾನಂತ ಗುಣಪರಿಪೂರ್ಣವಾದ
ಪ್ರಮೆಗಳು ತುಂಬಿದ ಕಲುಷಹರ ಉದರ
ದಮುನಾಮ ನಮ್ಮ ವಿಜಯ ವಿಠಲೇಶನ
ನಮಿಸದವರ ಮನಕೆ ಬೆಡುಗುತೋರುವ ಉದರ ೧

ಮಟ್ಟ

ಕುವರತನದಲ್ಲಿರೆ ವಡಲ ವಳಗೆ ಅವನಿಯನ್ನು ಸವರಿದ ಉದರ
ಪವಳತಿ ಮಾಣಿಕ ನವ ಮೌಕ್ತಿಕ ಹಾರ
ರವಿಯಂದದಲಿ ತೂಗುವ ಶೃಂಗಾರುದರ

ನಿವರ್ತಾತ್ಮಾ ನಾಮಾ ವಿಜಯ ವಿಠಲರೇಯಾ
ಭುವನತ್ರಯದೊಳಗೆ ಧವಳವರ್ಣ ಉದರ ೨

**ತ್ರಿವಿಡಿ**

ಗುಣತ್ರಯಗಳ ಬಿಡದೆ ಪೊಂದಲಿಟ್ಟಾ ಉದರ
ಗಣನೆಯಿಲ್ಲದ ಜೀವರಾಶಿಗಳಿದ್ದುದರ
ಅನುವರಿತು ವೇದಗಳು ಸ್ತುತಿಸಿಕಾಣದ ಉದರ
ಮುನಿಗಳ ಮತಿಗೀಗ ನಿಲಕಾದಿಪ್ಪ ಉದರ
ಜನನಿ ಗೋಪಿಗೆ ಒಳಗೆ ಲೋಕಾತೋರಿದ ಉದರ
ಅನಿಮಿಷರು ನೋಡಿ ಬೆರಗುಬೀಳುವ ಉದರ
ಗುಣಸಾಂದ್ರ ಸಪ್ತ್ಯೈಧಾ ವಿಜಯವಿಠಲರೇಯ
ಮಣಿ ಕಾಂಚನದಂತೆ ಮಿನಗುವ ಚಲುವ ಉದರ ೩

**ಅಟ್ಟ**

ಎಂದಿಗೆಂದಿಗೆ ಕ್ಷುಧಾರಹಿತವಾದ ಉದರ
ಗಂಧಕುಸುಮದಿಂದ ಪೂಜೆಗೊಂಬ ಉದರ
ಒಂದೊಂದು ರೀತಿಯಲಿ ಬೆಳಕಾಗುವ ಉದರ
ಮಂದಮತಿಗೆ ಜ್ಞಾನವನೀವ ಉದರ
ಅಂದು ಪರ್ವತ ಪೊತ್ತು ಮೃದುವಾದ ಉದರ
ತಂದರ್ಶಿಸಿದ ಮಿತಾತನದ ಉದರ
ಸುಂದರ ಶ್ರೀರಂಗ ವಿಜಯವಿಠ್ಠಲ ನಿನ್ನ
ಚಂದಾದ ತ್ರಿವಳಿ ಎಸೆವಂಥ ಉದರ ೪

**ಆದಿ**

ಜೊಲ್ಲು ಜೊಲ್ಲು ಸುರಿವಧಾರಿಯಲ್ಲಿ ಶೋಭಿಸುವ ಉದರ
ಸಲ್ಲಲಿತವಾದ ಭಕ್ತರೆಲ್ಲರಭೀಷ್ಟಯ ಉದರ
ಕಲ್ಲಿಬೋನಾ ಸವಿದು ಸವಿದು ಡೊಳ್ಳುಬೆಳಿಸಿಕೊಂಡ ಉದರ
ಬಳಿದ ನಾಮಾ ವಿಜಯವಿಠಲ ಕರ್ತುವಿನ ಉದರ ೫

**ಜತೆ**

ಅನಂತ ಜಾಂಡದೊಳಗೆ ಬದಕುಮಾಡುವ ಉದರ
ಅನಂತ ವಿಜಯವಿಠಲರೇಯನ ಉದರ ೬

೨೩

ಕಲ್ಯಾಣಿ ಧ್ರುವ

ಕಾಯದಿಂದಲಿ ಭಕ್ತ ಮಾಡೀದಪರಾಧ
ತಾಯಿಯಂದದಿ ತಾನೆ ಕಾರುಣ್ಯದಿಂ
ಘಾಯವಾಗದಂತೆ ದಂಡಿಸಿ ಪಾಲಿಸುವ
ಶ್ರೀಯರಸನ ಗುಣಕೆ ಏನೆಂಬೆನೋ
ಸ್ತ್ರೀ ಯೋಗಾ ಮೊದಲಾದ ಪಾಪಂಗಳು ಮಾಡಿರೆ
ಕಾಯಿದು ಕೊಂಬವನ್ನೈಯ ವಾಸನಮಯದಿಂ
ಆಯಿತೆಂದೆನಿಸುವ ಸ್ವಲ್ಪಾನುಭವದಿಂದ
ನೋಯಾದಂತೆ ಪಾಪಾ ತೀರಿಸುವನು
ಈಯವನಿಯೊಳಗೆ ಎಣಿಸಿದರು ಇಂಥ ಉ
ಪಾಯ ಬಲ್ಲಂಥ ದೈವವಂದೂ ಇಲ್ಲಾ
ಬಾಯಲ್ಲಿ ಆಡಿದರು ಕೋಪದಿಂದಲಿ ಅವನ
ಸಾಯಾಬಡುವರಲ್ಲೊ ಮುಂದೋರದೆ
ಕಾಯಾಜ ಪಿತನ ಮಹಿಮೆ ಕೇಳಿರೊ ತನ್ನವರು
ಕಾಯಾದಲ್ಲಿ ಪಾಪಾಮಾಡೆ ಮನದಲ್ಲಿ ಉಣಿಪಾ
ಛಾಯಾದಂತೆ ಪುಣ್ಯ ಮನದಿಂದ ಮಾಡಿದರೆ
ಕಾಯದಲಿ ಉಣಿಸುವ ಖ್ಯಾತಿ ಇತ್ತು
ಮಾಯಾಕಾರನ ಮಾಯ ತಿಳಿದವನಾರು ದೈ
ತೇಯ ಜನರಿಗೆ ಇದರ ವಿಪರೀತವೊ
ವಾಯುವಂದಿತ ವಿಜಯವಿಠಲ ವೆಂಕಟಗಿರಿ
ರಾಯ ತನ್ನ ಶರಣರಿಗೆ ಭೀತಿಬರಗೊಡನು ೧

ಅಟ್ಟ

ಧರಣಿಯೊಳಗೆ ತನ್ನ ಶರಣರ ಸೌಭಾಗ್ಯ
ನಿರುತರ ಶ್ರುತಿತತಿ ಪರಿಪರಿಯಿಂದಲಿ
ವರದೊರದು ಪೇಳಿ ಬೆರಗಾಗುತಲಿವೆ
ಸರಿಗಾಣೇನಯ್ಯಾ ಹರಿ ತನ್ನವರನ
ಚರಣದಲಿ ಇಟ್ಟು ಪರಿಪಾಲಿಸುತಿಪ್ಪ
ದುರಿತದ ಭಯವಿಲ್ಲ ದುರುಳರಟ್ಟುಳಿ ಇಲ್ಲ

ಉರಗಗಿರಿ ವೆಂಕಟ ವಿಜಯವಿಠಲರೇಯ
ಸ್ಥಿರವಾಗಿ ನಿಂದು ಕರದು ವರವಕೊಡುವ ೨

## ತ್ರಿವಿಡಿ

ಆವಾವ ದೈವಗಳ ನಂಬಿದರೇನಯ್ಯಾ
ಭಾವದಲಿ ನೋಡಿದರು ಸುಖವೇ ಇಲ್ಲ
ನೋವಾಗುವದು ಕೇಳಿ ಬಾಯಿಲಾಡಿದದಕ್ಕೆ
ಕೇವಲ ಬಾಧಿಯ ಬಿಡಿಸುವರು
ದೇವದೇವೇಶನ ಕರುಣತ್ವ ಇಂತಲ್ಲ
ನೋವಾಗೊಡದಂತೆ ಉಣಿಪ ಪಾಪಾ
ಆವಾವಗಾದರು ಇಂಥಾ ಶಕುತಿ ಉಂಟೆ
ತ್ರಿವಿಧಗುಣದಿಂದ ಪ್ರತಿಬದ್ಧರೂ
ಭೂವಲ್ಲಭ ಚೋರರ ದಂಡಿಸಿದಂತೆ ದೈ
ತ್ಯಾವಳಿಯ ಶೀಕ್ಷಿಸುವ ನಿರ್ದೋಷನೊ
ದೇವ ನಾರಾಯಣಗಿರಿ ವಿಜಯವಿಠಲ
ಶ್ರೀ ವೆಂಕಟನಾಥ ನಮ್ಮನು ಕಾವಾ ೩

## ಅಟ್ಟ

ಭಾರವೊಹಿಸುವ ದೀನವತ್ಸಲ ಅಚ್ಯುತ
ಸಾರಿಸಾರಿಗೆ ತನ್ನ ಸಾರಿದವರು ಸಂ
ಸಾರದೊಳಗ ಇರೆ ಕರುಣದಿಂದಲಿ ಸಂ
ಸಾರಿಗ ತಾನಾಗಿ ಇವರನ್ನ ತಗದು ಉ
ದ್ಧಾರಮಾಡುವನಯ್ಯಾ ಸುಲಭ ಮೂರುತಿ ಇದು
ವಾರಿಯೊಳಗೆ ಬಿದ್ದ ಮನುಜಗಾಗಿ ತಾನು
ವಾರಿಯಾ ತುಡಿಕಿ ಪಿಡಿದೆತ್ತಿ ತಂದವನ
ತೀರದಲಿಟ್ಟು ಪಾಲಿಸಿದಂತೆ ಕಾಣಿರೊ
ಮಾರಜನಕ ನಮ್ಮನು ಭವದಿಂದಲಿ
ಪಾರುಗಾಣಿಸುವನು ಪಾವನ್ನ ಶರೀರ
ನಾರದವಂದ್ಯ ವಿಜಯವಿಠಲ ಸರ್ವಾ
ಧಾರ ವೆಂಕಟ ಉರಗಾದ್ರಿವಾಸ ೪

ಆದಿ

ವಾರಿಜಪಾದ ವಾರಿಜನಾಭ
ವಾರಿಜ ಹೃದಯ ವಾರಿಜ ಕಂಧರ
ವಾರಿಜ ಪಾಣಿಕರ ವಾರಿಜ ನಿಜ
ವಾರಿಜ ಲೋಚನ ವಾರಿಜ ಪತಿ ವಾರಿಜ
ವಾರಿಜ ಹಾರಾ ವಾರಿಜ ಮಿತಾ
ಪಾರಕೋಟಿ ತೇಜಾ ವಿಬುಧ
ವಾರಿಜ ನಮಗೆ ವಾರಿಜ ಸುರವಾರಿಜ
ವಾರಿಜಸಂಭವ ನೆನೆವರ ಹೃ
ದ್ವಾರಿಜ ಪೀಠವಾಸ ವಾರಿಜನಿಲಯ ವಿಜಯವಿಠಲ ದಯ
ವಾರಿಧಿ ವೆಂಕಟಗಿರಿ ಶ್ರೀನಿವಾಸ ೫

ಜತೆ

ಶರಣರಿಗಾಗಿ ನಿರ್ಜರರ ಪಾಲಗಬಿಟ್ಟು
ಉರಗಾದ್ರಿಯಲಿ ನಿಂದಾ ವಿಜಯವಿಠಲ ವೆಂಕಟ ೬

## ೨೪

ಭೈರವಿ ಝಂಪೆ

ಕೆಂದಳವ ಸೋಲಿಸುವ ನಖಗಳಾನಂತ
ಇಂದು ಕಾಂತಿಗಳುಳ್ಳ ಪಾದವನು ಕಂಡೆನಾ
ನಂದುಳ್ಳ ಧ್ವಜ ವಜ್ರಾಂಕುಶ ಮಂಗಳ ಸುಧಾರ
ವಿಂದ ಕುಂಕುಮ ರೇಖೆಯುಳ್ಳ ಪದತಳವಕಂಡೆ
ಒಂದೊಂದು ಬೆರಳ್ಗಳಲಿ ಎಸೆವಪಜ್ತೆ ಬೆರಳಗಳಾಧಾರ
ಸಂಧಿಯಲ್ಲಿ ಒಪ್ಪುವ ಜಗವ ಚಿತ್ರವ ಕಂಡೆ
ಅಂದಿಗೆ ಕಿರಿಗೆಜ್ಜೆ ಕಾಲುಗಗ್ಗರಿಪೆಂಡೆ
ಮುಂದೊಲಿವ ಮುಂಜರಗು ತೊಡರಬಿರುದನ ಕಂಡೆ
ಛಂದವಾದ ಜಾನು ಜಂಘೆ ಕದಳಿಯಮಾಟ
ದಂದಲಿ ವೊಪ್ಪುವ ದ್ವಯ ಉರವನು ಕಂಡೆನಾ

ಮಂದಗಮನಿಯರ ಬಲು ಸೋಲಿಸುವ ಸಂಪಿನಲಿ
ಒಂದೊಂದು ಬೆರಗಿನ ಸ್ವರಮಣನ ಕಂಡೆನಾ
ಮುಂದೆ ಪೀತಾಂಬರ ಪೊಳೆವ ವಢ್ಯಾಣಕರ
ಒಂದು ಕರ ಮತ್ತೊಂದು ಕಟಿಯು ಹಸ್ತನ ಕಂಡೆ
ಮುಂದೊಲಿವ ಹಾರಾದಿ ನಾಭಿತ್ರಿವಳಿಲೀಲೆ
ಇಂದುರತುನಾ ಕಂಕಣಕಡಗ ಪೊಳೆಯೆ ನಲು
ವಿಂದು ಉಂಗುರುಗಳ ಧರಿಸಿದ ಬೆರಳಕಂಡೆ
ಬಂದಿನಳಿ ತೋಳ ಭುಜಕೀರ್ತಿಗಳು ಗಲ್ಲದಲಿ
ಅಂದಾಗಿ ತೂಗುವತಿ ಕುರಳುಗೂದಲಿನ ಕಂಡೆ
ನಿಂದು ತ್ರಿಜಗವಿದ್ದ ಉದರ ಬದಿಯನು ಕಂಡೆ
ಸಿಂಧುನಂದನೆ ತುಲಸಿಮಾಲಿ ಕೌಸ್ತುಭ
ಸಿರಿಗಂಧಲೇಪಿಸಿದವುರ ವೈಜಯಂತಿಯ ಕಂಡೆ
ಸುಂದರ ವಂಬುಗೊರಳರ್ಯಾಖೆ ಎಡಬಲಾ
ದ್ವಂದ್ವ ಹಸ್ತಗಳಲ್ಲಿ ಶಂಖಚಕ್ರವ ಕಂಡೆ
ಚಂದ್ರುಟಿಯು ನಗೆಮೊಗ ದಂತಪಙ್ತಿಯು ನಾಸ
ಛಂದಾಗಿ ವಲಿಪ ಕುಂಡಲಕರ್ನ ಪೆರ್ಬುಬ್ಬು
ಗಂಧಕಸ್ತೂರಿತಿಲುಕ ನಸುಲಸಪ್ತದ್ವೀಪ
ಕುಂದದಲೆ ಬೆಳಗುತಿಪ್ಪ ನಯನಂಗಳನು ಕಂಡೆ
ಮಂದಾರ ಮಾಲೆಮಲ್ಲಿಗೆ ಪಾರಿಜಾತ ಸೊಬ
ಗಿಂದ ಕುಸುಮವ ಮುಡಿದ ಚಲುವಮುಡಿಯನು ಕಂಡೆ
ವಂದೊಂದು ಮಣಿಗೆ ಮೂಲೋಕ ಹರಿಗೊಂಬ ಗೋ
ವಿಂದನ ಕಿರೀಟವನ್ನು ಕಂಡು ಧನ್ಯನಾದೆ
ಇಂದೆನ್ನ ಮಂದಮತಿ ಬೆಂದುಪೋಯಿತು ನಿಲ್ಲದೆ
ಇಂದೆನ್ನ ಕುಲಕೆ ಹರಿಮಂದಿರವೆ ಫಲಿಸಿತು
ತಂದೆ ವಿಜಯವಿಠಲ ತಿರುವೆಂಗಳೇಶನಾ
ಬಂದು ಕಣ್ಣಲಿ ನೋಡಿ ನಾನಿಂದು ಕೃತಾರ್ಥನಾದೆನಾ ೧

## ಮಟ್ಟ

ಮಕುಟಮಂಡಿತ ತಿಲುಕನ ಕಂಡೆ
ಮಕರಕುಂಡಲಧಾರನ ಕಂಡೆ
ಮುಖಚಲುವನ ಕಂಡೆ ಮುಂಗುರುಳನ ಕಂಡೆ

ವಿಕಸಿತಚಕ್ಷು ನಾಶಿಕವದನನ ಕಂಡೆ
ಪ್ರಕಟಿತಕೌಸ್ತುಭ ಯಳೆದುಳಸಿ ಮೌ
ಕ್ತಿಕಹಾರನ ಕಂಡೆ ಸಿರಿದೇವಿಯ ಕಂಡೆ
ಸಂಕರುಷಣನ ಕಂಡೆ ಚತುರ್ಭುಜನನ ಕಂಡೆ
ಪೊಕ್ಕಳಮಣಿಯ ಕಂಡೆ ವರವಸನನ ಕಂಡೆ
ಸಕಲ ಭೂಷಣ ಕಂಡೆ ಭಕುತಜನಕೆ ವೇಗ
ಮುಕುತಿವೀವನ ಕಂಡೆ ಅಖಿಳ ಜೀವೇಶನ ಅನಂತವೇಶನ
ಶಿಖಿನಖ ಪರಿಯಂತ ನಖಶಿಖವನು ಕಂಡೆ
ಮಖಜವಂದಿತ ಪಾದ ವಿಜಯವಿಠಲ ಕ
ನಕಾಚಲ ತಿರುವೆಂಗಳೇಶ ತಿಮ್ಮನ ಕಂಡೆ ೨

## ರೂಪಕ

ತಿರುಮಲ ತಿರುಪತಿವಾಸ ನಿರುಮಲ ನಿಸ್ಸಂಗ ಭೂಷ
ಶರಣಜನರ ಪರಿತೋಷ ತರಣಿಪ್ರಕೋಟಿ ಸಂಕಾಶ
ಜರಮರಣ ನಿರ್ದೋಷ ಪರಿಪೂರ್ಣಗುಣ ವಿಲಾಸ
ಪರಮಮಾನಸರಹಂಸ ಹರಿ ವಿಜಯವಿಠಲೇಶ
ಸಿರಿದೇವಿಯ ಪ್ರಾಣದರಸ ಉರಗಗಿರಿಯವೆಂಕಟೇಶ
ಹರಿಯೆನಲು ದೋಷನಾಶ ೩

## ಧ್ರುವ

ಆರಿಗಂಜನೊ ನಾನು ಆರಿಗಳಿಕೆನೊ ನಾನು
ಆರನಾದರು ಲೆಕ್ಕಿಸದಿಪ್ಪೆನೊ ನಾನು
ಮಾರಿ ಮೃತ್ಯುಗಳು ಕೇಲಸಾರದಲೆ ಬಂದರೆ
ದೂರದಲ್ಲಿ ನಿಲ್ಲಿಸಿ ಮಾತಾನಾನಾಡಿಸುವೆನೊ
ಶೇರಾಗೊಡೆ ದುಷ್ಟರನ ನೂರಾರೋಜನದೊಳಗೆ
ಕಾರುಣ್ಯ ನಿಧಿಯನ್ನು ಕಂಡು ಬಳಿಕಾದಲ್ಲಿ
ಘೋರಾದೂತರು ಎನ್ನಾಕಡಿಗೆ ಬಾರದಂತೆ
ದಾರಿ ಮೆಟ್ಟಾದಂತೆ ಮಾಡಿ ಬಿಡುವೆನೊ ನಾನು
ಭೂರಿ ದೈವವ ಗಂಡ ವಿಜಯವಿಠಲ ದಿವ್ಯಾ
ಮೂರುತಿಯ ಪೊಗಳಿ ಉದ್ಧಾರನಾನಾದೆ ೪

### ತ್ರಿವಿಡಿ

ನಾರಾಯಣನನಂತ ನಿರ್ದೋಷ ಗುಣಪೂರ್ಣ
ಸಾರನಿತ್ಯ ಸ್ವಾತಂತ್ರ್ಯಸುಸ್ವರಮಣ ವೇದ
ಪಾರಾಯಣ ನಾಶರಹಿತ ಶಾಮವರ್ಣ
ಧಾರುಣಿಯೊಳಗೀತಗಧಿಕ ಸಮರಿಲ್ಲ
ತೋರುವನಲ್ಲ ಕಂಡವರ ಮನಕೆ ಭಕ್ತ
ಧಾರಾನು ಭವರೋಗ ವೈದ್ಯ ಚೈದ್ಯ ಮಥನ
ನಾರದವಂದ್ಯ ಶ್ರೀ ವಿಜಯವಿಠಲ ಉ
ದಾರಿ ಕಾಣೆಲವೊ ಸಮಸ್ತ ದೇವರೊಳಗೆ ೫

### ಅಟ್ಟ

ಶಂಕಸುರನ ಕೊಂದ ನಿಶ್ಶಂಕನೀತ
ಪಂಕಜಸುತನ ಪಡದ ದೈವನೀತ
ಶಂಕರನ್ನ ಪ್ರಾಣವನು ಕಾಯಿದನೀತ
ವೆಂಕಟಗಿರಿಯಲ್ಲಿ ಮೆರೆವಾತನೀತ
ಪಂಕಜೋದರನೀತ ಪಂಕಜಾಪತಿ ಈತ
ಲೆಂಕಪುರ ವಿಭೀಷಣಗಿತ್ತನೀತ
ಕಿಂಕರಿಗೊಲಿದಂಥ ಕೈಟಭಾರಿ ಈತ
ಓಂಕಾರನಾಮ ಉಳ್ಳಾತನೆ ಈತ
ಶಂಕಚಕ್ರಾವನ್ನು ಕೊಟ್ಟಾತನೀತ
ಬಿಂಕಾದ ಬಿರದನ್ನು ಕಟ್ಟಿದನೀತ
ಶಂಖಪಾಣಿ ನಮ್ಮ ವಿಜಯವಿಠಲರೇಯಾ
ತಂಕವಿಲ್ಲದ ಪೌರುಷದಾತನೀತ ೬

### ಆದಿ

ನಂಬೀರೈಯ್ಯ ನೀವು ಜಗದಂಬಿಕೆರಮಣನಾದ
ಅಂಬುಧಿಶಯನ ಪಾದಾಂಬುಜಾಗಳಾನುದಿನಾ
ಬೆಂಬಿಡಾದೆ ಭಜಿಸಲು ಉಂಬುವಾದಕ್ಕುಡಲುಂಟು
ಹಂಬಲೀಸಾದೀರಿ ಹೀನವೆಂಬ ದೈವಗಳಭಕುತಿ
ಡಂಬಕತನದಲಿಂದ ಡಿಂಬವನು ಕೆಡಿಸಿಕೊಳದೆ
ಗಂಭಿರನ್ನಾ ನೋಡಿ ಬಲು ಸಂಭ್ರಮದಿಂದಲಿ ಪಾಡಿ

ಇಂಬು ತೋರುವನು ದಯಾಂಬುಧಿ ವಿಜಯವಿಠಲ
ಕಾಂಚೆನಂಬಾ ದಾಸರಿಗೆ ಬೆಂಬಲವಾಗಿ ನಿಲ್ಲುವ ೭

ಜತೆ

ಆನಂದಮಯ ಸಕಲಾಮಾನಂದ ಮಹಿಮಾನೆ
ಆನಂದಗಿರಿ ವಿಜಯವಿಠಲ ತಿಮ್ಮನ ಕಂಡೆ ೮

೨೫

ಕೇವಲ ಕೈವಲ್ಯ ಇಲ್ಲೇ ದೊರೆವುದು
ಮಾಧವನಿಹನೋಡೋ ಗಿರಿನಾಥ ಪ

ಈ ವಿಷಯದಿ ನೀ ಲಂಪಟನಾಗದೆ
ದೇವದೇವನ ಭಜಿಸಿ ಸುಖಿಯಾಗೊ ಮನುಜ ಅ

ತನ್ನ ಕರದಿ ತನ್ನ ಪಾದವ ತೋರುತ
ಮುನ್ನ ಮನುಜ ಮುಕ್ತನಾಗೆನುತ
ಹೊನ್ನುಹೊಕ್ಕುಳಿಯೊಳು ರನ್ನಿಟ್ಟುನಲಿಯುವ
ಘನಮಹಿಮ ಗಿರಿವಾಸ ವೆಂಕಟನಿಂದಾ ೧

ಎಡಬಲದಲಿ ಶ್ರೀದೇವಿ ಭೂದೇವಿಯರ್
ಬಿಡದೆ ಚಾಮರವನ್ನು ಪಿಡಿದಿರಲು ಮಡದಿಯರ್ಗಡಣದಿ
ನಡುವೆ ಶೋಭಿಸುತೆ
ಕಡಲಸ್ಥಾನವ ಬಿಟ್ಟು ಗಿರಿಗೆ ಬಂದುದರಿಂದಾ ೨

ಪ್ರೇಮದಿ ಭಜಿಸುವ ಭಕ್ತಜನರಿಗೆಲ್ಲಾ
ಕಾಮಿತಾರ್ಥವನೀವ ಬಹುದಾತ
ಸ್ವಾಮಿ ಪುಷ್ಕರಿಣಿಯ ತೀರದಿ ನೆಲಸಿಹ
ಸ್ವಾಮಿ ಶ್ರೀ ಪುರಂದರವಿಠಲರಾಯನಿಂದಾ ಕೇವಲ ಕೈವಲ್ಯ ೩

೨೬

ಕೊಡು ಸುಖವ ಜಗಪಾಲಯ
ಒಡೆಯ ವೈಕುಂಠದಾಲಯ ಪ

ಕೊಡು ಸುಖ ನಿಮ್ಮಯ ಅಡಿಯದಾಸರ ಸೇವೆ
ಸಡಗರ ಸಂಪದ ಎಡೆಬಿಡದೆ ಅ

ಜಡಮತಿಯನು ಕೆಡಿಸಿ ಜಡದೇಹಮೋಹ ಬಿಡಿಸಿ
ಜಡಭವತೊಡರನು ಕಡೆಹಾಯ್ಸಿ
ಅಡಿಗಡಿಗೆ ನಿನ್ನಡಿದೃಢಭಕುತಿ ೧

ನಾಗರಸಂಸಾರಭೋಗದ ಬಲುಘೋರ
ನೀಗಿಸಿ ನಿಜಜ್ಞಾನ ಪಾಲಿಸಿ
ಬೇಗನೆ ನೀಡು ತವದರುಶನವ ೨

ಮನಸಿನ ಹರಿದಾಟ ಘನಘನ ದುಷ್ಟಟ
ವನು ಪರಿಹರಿಸಿ ದಯಮಾಡು
ಮನಶ್ಶಾಂತಿ ಸದುಗುಣವ ೩

ತನುತ್ರಯದಲಿ ನಿನ್ನ ನೆನಹನು ನಿಲಿಸೆನ್ನ
ಬಿನುಗು ತ್ರಿದೋಷ ದೂರಮಾಡಿ
ಜನನ ಮರಣಂಗಳ ಗೆಲಿಸಭವ ೪

ಭೂಮಿಯೊಳಧಿಕೆನಿಪ ಸ್ವಾಮಿ ಶ್ರೀರಾಮಭೂಪ
ನೇಮದಿ ಬೇಡುವೆ ವರ ನೀಡು
ಆ ಮಹಕೈವಲ್ಯ ಪದವಿಯ ೫

## ೨೭

ಸಾರಂಗ ಅಟ್ಟ

ಕೋಮಲತಿ ಶುಭಗಾತ್ರನ ಮಹತಾಮರಸದಳ ನೇತ್ರನ
ಸ್ವಾಮಿ ಶ್ರೀನಿವಾಸನ ಕಂಡೆ ಹೇಮಗಿರಿವರಧೀಶನಾ ಪ

ಕನ್ಯೆ ಲಕುಮಿಯನೆತ್ತಿದ ಶುಭ ಚೆನ್ನಧಕ್ಕಿಯ ಹತ್ತಿದ
ರನ್ನದುಡಿಗೆಗಳಿಟ್ಟನ ಸುವರ್ಣದಂಬರನುಟ್ಟನ
ಕರ್ಣಕುಂಡಲ ಬೆಳಗಿನ ನುಣ್ಗೆನ್ನೆಲ್ಯಲುಗುವ ಕುರುಳಿನ
ಸಣ್ಣನಾಮದ ನೊಸಲಿನ ಶ್ರೀಚಿನ್ಮಯದ ಕಾಯ ಚಲುವನ ೧

ಕುಂಧ ಕುಡ್ಮಲ ಮಾಲೆಯ ಪ್ರಭೆಗುಂದದ ಮುಕುಟ ಮೌಳಿಯ
ಶ್ಯಂದನಾಂಗ ದರಾಭಯವರ ಹೊಂದಿದಮಲ ಸುಪಾಣಿಯಾ

ಮುಂದೆ ನಾರದ ಹನುಮ ಗಾಯನ ನಂದದಲಿ ತಾ ಕೇಳುವ
ಹಿಂದೆಡ ಬಲದಿ ಛತ್ರವ ಪಿಡಿದಿಂದಿರೆಯರೊಳೊಪ್ಪುವ ೨

ಘೋರ ಮುತ್ತಿನ ಹಾರದ ಕೇಯೂರ ಕೌಸ್ತುಭ ವಕ್ಷದ
ಚಾರುಸ್ಮಿತ ಮುಖರೋಚಿಯ ದಯವಾರಿಧಿಯ ಮಹೋದಾರಿಯ
ನಾರಿದರ ಸುರತರುವಿನ ಸುರವೈರಿ ಕರಿ ಪಂಚಾನನ
ಭೂರಿ ಪ್ರಸನ್ವೆಂಕಟೇಶನ ಹೃದಯಾರವಿಂದ ನಿವಾಸನ ೩

## ೨೮

ಶಂಕರಾಭರಣ ಆದಿ

ಕೋಲು ಕೋಲೆನ್ನ ಕೋಲು ಮುತ್ತಿನ ಕೋಲು ಕೋಲೆನ್ನ ಕೋಲು
ಕೋಲನಾಡುವ ಬನ್ನಿ ಬಾಲವೇಂಕಟಪತಿ ಲೀಲೆ ಕೊಂಡಾಡುತಲೆ ಪ

ಪರಮ ದಯಾಳು ಹರಿ ಭೃಗುಮುನಿ ಭರದಿಂದೊದೆವುತಿರೆ
ತಿರುಗಿ ಕಾಲ್ಪಿಡಕೊಂಡು ಪರಿ ಪರಿ ಸ್ತುತಿಸಿದ ೧

ಪರಮ ಚಂಚಲ ಲಕ್ಷ್ಮೀ ತಾಶ್ರೀ ಹರಿ ನಡತೆಯ ನೋಡಿ
ಧರಿಸದೆ ಕೊಲ್ಲಾಪುರಕೆ ನಡೆದಳು ೨

ಸಿರಿಯಿಲ್ಲದೆ ನಾನು ಒಬ್ಬನೆ ಇರಲಾರೆನು ಎಂದು
ಹರಿ ವೈಕುಂಠದಿಂ ಧರೆಗಿಳಿದನು ೩

ಉತ್ತಮ ವೈಕುಂಠ ಇರಲು ಮತ್ತುರ ಗಾದ್ರಿಯಲಿ
ಹುತ್ತ ಮನೆಯ ಮಾಡಿ ಗುಪ್ತದೊಳಿರುತಿಹ ೪

ನಿತ್ಯ ನಿರ್ವಿಕಾರ ಶ್ರೀಹರಿ ಭಕ್ತರ ಅಭಿಮಾನಿ
ನೆತ್ತಿಯ ಒಡಕೊಂಡು ಭಕ್ತನ ಸಲಹಿದ ೫

ಭವರೋಗದ ವೈದ್ಯ ತಾನೆನಿಸುವನು ಗುರುವ ಕರೆದು
ಅವನಿಂದಲ್ಲೆ ಘಾಯವ ಕಳೆದನು ಭೂಮಿರಮಣವರಾಹ ೬

ದೇವನ ಭೂಮಿಯ ತಾ ಬೇಡಿ
ಸ್ವಾಮಿ ಪುಷ್ಕರಣೀ ಸೀಮೆ ಸಾಧಿಸಿದ ೭

ನೋಟದಿಂದ ಚೆಲುವ ತಾ ಬಹು ಮಾಟ ಕುದುರೆ ಏರಿ
ದಾಟನಿಂದ ಮೃಗ ಬೇಟೆಗೆ ನಡೆದನು ೮

ನವವನ ಸಂಚರಿಸಿ ಅಲ್ಲೊಬ್ಬ ವನಿತೆಯಳನು ಕಂಡ
ಮನಸಿಟ್ಟನು ಆ ವನಿತೆಯ ಮೇಲೆ ೯

ಆ ವನಿತೆಯು ಕನ್ಯಾ ತಾ ಪದ್ಮಾವತಿ ಯೆನಿಸುವಳು
ಹೂವಿಗೆ ಬಂದಳಾ ವನದಲಿ ೧೦

ವಾರಿಗೆ ಗೆಳತಿಯರಾ ಕೂಡಿ ವಿಹಾರ ಮಾಡುತಿಹಳು
ಸಾರೇಕ ನಡೆದನು ಶ್ರೀರಮಣನು ತಾ ೧೧

ನಾಡೊಳಗಿನ ರೀತಿ ಎಲ್ಲರು ಆಡುವಂಥ ಮಾತು
ಆಡಿದ ಕಲ್ಲೀಡಾಡಿದಳಾಕೆ ೧೨

ಪೆಟ್ಟುತಾಗಿ ಕುದುರೆ ಪ್ರಾಣವ ಬಿಟ್ಟಿತು ಆಗಲ್ಲೆ
ಬಿಟ್ಟು ಕುದುರೆಯು ಬೆಟ್ಟವನೇರಿದ ೧೩

ಆ ಮಾನಿನಿ ಅವಗೆ ಮೋಹಿಸಿ ತಾ ಮಾತಾಡದಲೆ
ಕಾಮಜ್ವರದಿಂ ತಾ ಮಲಗಿಹಳು ೧೪

ಪ್ರಾಂತಕ ನಂತಾದ್ರಿ ಯಲ್ಲಿಹ ಶಾಂತ ಮೂರುತಿ ಹೊರತು
ಅಂತರಂಗ ಜ್ವರ ಶಾಂತವಾಗಲು ಕೋಲು ಕೋಲೆನ್ನ ಕೋಲು ೧೫

## ೨೯

**ಶಂಕರಾಭರಣ** **ತ್ರಿಪುಟ**

ಗಿರಿಯ ತಿಮ್ಮಪ್ಪ ವಾಹನಗಳೇರಿ ನಿತ್ಯ
ಮೆರೆದು ಚತುರ ಬೀದಿ ತಿರುಗಿ ಬಪ್ಪದು ನೋಡೆ ಪ

ಸರಸಿಜ ಭವಾಗ್ರಜರುಳಿದವರು
ವರಸಕಲ ಮನೋಭೀಷ್ಟ ಕೈ ಕೊಳುತಾ
ನೆರೆದು ಸುತ್ತಲು ತಮ್ಮ ಭಕುತಿಯಲಿ ಸೂಸುತ್ತ
ಹರುಷ ವಾರಿಧಿಯೊಳು ಮುಳಗಿದಟ್ಟಡಿಯಿಂದಾ ೧

ಎತ್ತಿದ ಸತ್ತಿಗೆಯಿಂದ ಪೀಯೂಷ
ಸುತ್ತಲುದುರೆ ಬಿಂದುಗಳೊಂದು
ಮುತ್ತಿನ ಸೂರ್ಯಪಾನ ಪತಾಕೆಗಳು ಬೀ
ಸುತ್ತಲಿಪದು ಚಾಮರ ಪಂಜುಗಳೆಸಿಯೆ ೨

ದಂಡಿಗೆ ತಾಳ ಬೆತ್ತವ ಪಿಡಿದುನಿಂದು
ತಂಡ ತಂಡಲಿ ಮಹಿಮೆಯನ್ನು
ಕೊಂಡಾಡುತ ಮನ ಉಬ್ಬಿ ಮಹೋತ್ಸವದಲ್ಲಿ
ತೋಂಡರು ಹರಿದಾಡಿ ಪಾಡಿ ಪಾಡುತಲಿರೆ ೩

ಪವನ ಗರುಡ ಶೇಷ ಸಿಂಹ ಮಂಟಪ ಮತ್ತೆ
ರವಿ ಶಶಿ ತುರಗ ಆಂದಣ ಮಿಕ್ಕಾದ
ನವರಾತ್ರಿಯೊಳಗೆಲ್ಲ ವಾಹನ ನಾದ ಅಂ
ದವನಾರು ಬಣ್ಣಿಪರು ಸಕಲ ಭೂಷಿತವಾಗೆ ೪

ಚಿನುಮಯ ರೂಪ ವಿಚಿತ್ರ ಮಹಿಮ ದೇವ
ನೆನೆದವರ ಹಂಗಿಗೆ ಸಿಲಕುವಾ
ಘನಗಿರಿ ತಿರ್ಮಲ ವಿಜಯ ವಿಠಲರೇಯಾ
ದನುಜ ದಲ್ಲಣನೆಂಬೊ ಬಿರುದು ಪೊಗಳಿಸುತ ೫

## ೩೦

ಸಾವೇರಿ ಧ್ರುವ

ಗಿರಿಯ ಶಿಖರವ ಕಂಡೆ ಅರುಣ ಸುವರ್ಣಮಯ
ಮಿರುಗುತಿದೆ ಚತುರ್ದಶ ಧರೆಯೊಳಗೆ ಮೆರವುತಿದೆ
ಎರಗುತಿದೆ ಮನವಿರದೆ ಕರಗುತಲಿದೆ ದುರಿತಪಾಶ
ಪರಿಯುತಿದೆ ಪೀಯೂಷವು ಸುರಿವುತಿದೆ ಅನುಗಾಲ
ವರಕಲ್ಪ ಕಲ್ಪಕ್ಕೆ ಅರಿಸಿನೋಡಿದರು ಈ
ಗಿರಿಗೆ ಸಮಾನೆಂದುರು ಕಾಣೆ ನಾನಾವಲ್ಲಿ
ಪರಿಪರಿಯತೆರದಿ ಶೃಂಗಾರಲಂಕಾರ ಸುಂ
ದರಲಕ್ಷಣಗಳಿಂದ ಸರಸದಲಿ ಪೊಪ್ಪುತಿದೆ
ವರಗಿರಿಯತಿಮ್ಮ ತಿರುಮಲ ತಿರುವೆಂಗಳ
ಉರಗಗಿರಿಯವಾಸ ವಿಜಯವಿಠ್ಠಲರೇಯ
ನಿರುತ ಉತ್ಸಾಹದಲ್ಲಿ ಸುರರೊಡೆಯನಿಪ್ಪ ೧

ಮಟ್ಟ

ಧರೆಗಿದು ವೈಕುಂಠಪುರವಿದು ನಿಜವೆಂದು
ಸುರರು ಕಿನ್ನರರು ಸಿದ್ಧರು ಗರುಡರು ಸಾ

ದ್ಧರು ಗಂಧರ್ವರು ಉರಗ ಯಕ್ಷರು ಕಿಂ
ಪುರುಷರು ಚಾರಣರು ವರಮುನಿಗಳು ಭೂ
ಸುರರು ಮೊದಲಾದ ಪರಿಪರಿ ಜ್ಞಾನಿಗಳು
ಚರಿಸುವರು ವಿಸ್ತರ ವೈರಾಗ್ಯದಲಿ
ಪರಮ ಪುರುಷ ತಿಮ್ಮಾ ವಿಜಯ ವಿಠ್ಠಲನ
ಸ್ಮರಿಸಿ ಗಿರಿಯಲ್ಲಿ ಪರಗತಿ ಬಯಸುತ್ತ ೨

## ತ್ರಿವಿಡಿ

ಫಲ ಮರ ಗಿಡ ಬಳ್ಳಿ ಖಗಮೃಗ ನಾನಾಕ
ಕುಲದ ಜೀವಿಗಳೆಲ್ಲ ಚರಿಸುವರಮರಾದಿ
ಕುಲದ ಕುಲದವರೆಲ್ಲ ಜನಿಸಿ ಒಂದುರೂಪಿಲಿ
ಬಲು ಭಕುತಿಯಲ್ಲಿ ಸಾಧನ ಮಾಡುತ್ತ
ಸುಲಭರಾಗಿಪ್ಪರು ಆವಾಗ ಸುಜನಕೆ
ಪೊಳದು ಕಂಗಳಿಗೆ ಗೋಚರವಾಗುತ್ತ
ಮಲರಿಗೆ ಎಂದಿಗೆ ಕಾಣಿಸರೂ ಇದರ
ನೆಲಿಯಾ ಬಲ್ಲರು ಹರಿದಾಸರಯ್ಯಾ
ಬಲವಂತ ವೆಂಕಟ ವಿಜಯವಿಠ್ಠಲರೇಯಾ
ಸಲಹೂವ ಈ ಗಿರಿಯ ಸಾರಿದ ಜನರಿಗೆ ೩

## ಅಟ್ಟ

ಉರಗಗಿರಿಯ ಯಾತ್ರಿ ದುರುಳ ಮಾನವರಿಗೆ
ದೊರಕಾದು ದೊರಕಾದು ದೊರಿತಾರೆ ಫಲಿಸಾದು
ಹರಿಗುರು ಭುಕುತಿಲಿ ಪರನಾಗಿ ನಡೆದಾ ಜ
ನರಿಗಲ್ಲದೆ ಮತ್ತರಿಗೆ ಅತಿ ಸುಲಭವೆ
ಧರಧರ ವರ್ನಾ ಶ್ರೀ ವಿಜಯ ವಿಠ್ಠಲ ತಿಮ್ಮ
ಕರುಣ ಮಾಡಲು ಆಶ್ಚರ್ಯಾಗದು ಕಾಣೊ ೪

## ಆದಿ

ಮಾರುತನಿಂದಲಿ ನೋತು ವಾರುಣೀಲ
ಮೇರುವೆ ಕುಮಾರನೊಳು ತರಂಗಾ

ಹಾರಾಲೂದ ಇಲ್ಲಿ ಒಂದು ಮೂರು ಹತ್ತು ಯೋಜನ
ಪಾರಿಮಿತವಾಗಿ ಅದ್ರಿ ಧಾರುಣಿಯೊಳಗೆ ಸುಧಾ
ಕರಾನಂತೆ ಪೊಳವುತಿದೆ ಆರುಸಾರಿ ಗೇಲಿ ನಮ
ಸ್ಕಾರ ಪ್ರದಕ್ಷಣೆಸುತ್ತ ವಾರಣದಿಂದ ಮಾಡಲು
ದ್ಧಾರನಾಗುವ ಕುಲಸಹಿತಾ
ಶ್ರೀರಮಣ ವೆಂಕಟವಿಜಯವಿಠ್ಠಲತಿಮ್ಮ
ದೂರಮಾಡಿ ಪಾಪನಿಕರ ಬಾರದಂತೆ ಪಾಲಿಸುವ ೫

**ಜತೆ**

ಅನಂತ ಜನ್ಮದ ಪುಣ್ಯ ಫಲಿಸಿದರೆ
ಅನಂತ ಗಿರಿಯಾತ್ರಿ ನೀವ ವಿಜಯವಿಠ್ಠಲ ೬

## ೩೧

ಭೈರವಿ ಧ್ರುವ

ಗಿರಿಯ ಶಿಖರವ ನೋಡಿ ಶಿರವಾಗಿ ಕರವ ಮುಗಿದು
ಮರಳೆ ಸಾಷ್ಟಾಂಗ ನಮಸ್ಕಾರ ಮಾಡಿ
ಪರಮ ಭಕುತಿಯಿಂದ ಕೊಂಡಾಡಿ ನಲಿದಾಡಿ
ಪರಿ ಪರಿ ವಿಧದಿಂದ ನೆನಿಸಿ ನೆನಿಸೀ
ಧರೆಯೊಳಗಿದೆ ಮೇರು ಪರುವತದ ಮಗನೆನಿಸಿ
ಕರಿಸಿ ಕೊಳುತಿದೆ ವೆಂಕಟಾಖ್ಯ ನಾಮಾ
ಸ್ಮರಿಸಿ ಮನ ಬುದ್ಧಿಯಲ್ಲಿ ಪ್ರವೇಶ ಮಾಡಿ ನಿಂ
ದಿರದೆ ವಿಚಿತ್ರಮಯವಾದ ಗಿರಿಯಾ
ಮಿರಿ ಮಿರಿ ಮಿಂಚುತಿದೆ ದಶದಿಕ್ಕಿನೊಳಿದಕೆ
ಸರಿ ಸರಿ ಸರಿಗಾಣೇ ನಿಸ್ಸಂದೇಹಾ
ಸುರ ತರುವಿನಂತೆ ಬೇಡಿದ ಇಷ್ಟಾರ್ಥಗಳೆಲ್ಲಾ
ಕರವುತಿದೆ ಶಬ್ದಾರ್ಥ ತಿಳಿದ ನರಗೇ
ಸುರರು ಸನಕಾದಿ ಮುನಿ ಸಮಸ್ತ ಮುಕ್ತರು
ತರು ಗುಲ್ಮಲತೆ ಪಾರಿಚರ ಖಗ ಮೃಗ
ನರರು ಮೊದಲಾದ ರೂಪವ ಧರಿಸಿ ಸಾಧನ ಎ

ಸ್ತರವಾಗಿ ಮಾಡುವರೂ ವಿನಯಾದಿಂದಾ
ಮೂರು ಕೋಟಿ ತೀರ್ಥಂಗಳು ಉಂಟು ಸುಂ
ದರವಾಗಿ ವೊಪ್ಪುತಿವೆ ಇದರೊಳಗೆ
ಪರಮ ಮುಖ್ಯ ತೀರ್ಥಾ ಚತುರವಿಂಶತಿ ಇಪ್ಪಾವು
ನಿರಯಾ ಕಳವುತ್ತ ವಂದಿಸಿದ ಜನಕೆ
ಪರಮೇಷ್ಠಿ ಗರಡೇಂದ್ರ ತರಣಿ ನಾಲ್ವರು ಚ
ತುರ ದಿಕ್ಕಿನಲ್ಲಿ ಅನಿರುದ್ಧಾದಿ ಯಾ
ಕರುಣ ಶರಣರ ಮೇಲೆ ಮಾಡುತಾ ಪ್ರತಿ ದಿವಸ
ಸಿರಿವಂತರಾಗಿ ಪೂಜಿಸುತಿಪ್ಪರೂ
ಅರಿ ಶಂಖಾ ಗದಾ ಪದುಮಾಧರರಾಗಿ ವಿಲಿಂಗರು
ಚರಿಸುವರು ಪುಣ್ಯಕಾಮರಾಗಿ ಸಂತೋಷದಿ
ವರವೇದ ಶಾಸ್ತ್ರ ಸ್ಮೃತಿಗಳಲ್ಲಿ ನಿರುತರ
ವರ ದೊರದು ಪೇಳುತಿವೆ ವೊಲಿದೊಲಿದೂ
ಅರಸಿ ನೆಂಜಲೂ ಮರ್ಕಟ ಮೆದ್ದರಾದಡೆ ಬಾ
ಹಿರದಲ್ಲಿಪ್ಪಾ ಮದಕರಿ ಸರಿಯೆ
ಉರಗಾ ಪರಿಯಂಕ ಹರಿಗಾಗಿಹ ನೆನದೀರಿ
ಮರುತಾ ದೇವಗೆ ಸರಿ ಎನ್ನಬಹುದೆ
ತಿರುವೆಂಗಳೇಶಾ ಸಿರಿ ವಿಜಯ ವಿಠ್ಠಲರೇಯಾ
ಸ್ಥಿರವಾಗಿ ನಿಲಿಸಿಪ್ಪ ಇರಳು ಹಗಲು ಬಿಡದೆ ೧

## ಮಟ್ಟ

ಒಂದೊಂದು ಯುಗಕೆ ಒಂದೊಂದು ಪೆಸರು
ಚಂದವಾಗಿಪ್ಪವು ಪೊಗಳಿದವರಿಗೀಗಾ
ನಂದವೆ ಕೊಡುತಲಿ ಅತಿಶಯವೆನಿಸಿ ವ
ಸುಂಧರದೊಳಗೆ ಸುಲಭವಾಗಿದೆ ಕೇಳಿ
ಒಂದೆರಡು ಎರಡೂ ಯೋಜನ ವಿಸ್ತಾರ
ವಂದಿನಾದರು ಐದು ಸಾರೆ ಪ್ರದಕ್ಷಿಣೆ
ವಂದಿಸಿ ತಿರುಗಿದರೆ ತತ್ಕಾಲಕೆ ಪದವಿ
ನಂದನ ಕಂದ ಸಿರಿ ವಿಜಯ ವಿಠ್ಠಲ ವೆಂಕಟ
ನಿಂದು ಭಕುತ ಜನಕೆ ವರಗಳ ಕೊಡುತಿಪ್ಪಾ ೨

## ತ್ರಿವಿಡಿ

ಅನಂತ ಜನುಮಕೆ ಸಾಧನ ಕೂಡಾದಲ್ಲದೆ
ಈ ನಗ ದಾರಿಗೂ ದರುಶನವಾಗದು
ಏನೆಂಬೇನಯ್ಯಾ ಇದರ ಮಹಾತ್ಮೆಯನ್ನು
ಸ್ಥಾಣು ಸನಕಾದ್ಯರಿಗೆ ಪೇಳಿ ಮೈಮರೆದಾ
ಮಾನುಷ್ಯನ್ನಾ ಜನಕೆ ಯೆಣಿಸಿ ಪೇಳುವದರಿದೊ
ಆನೆಂತು ವರ್ನಿಪೆನೊ ಕೊನೆ ಮೊದಲು
ಗೆಣೆಸದನಾ ಇಲ್ಲಿ ರಚಿಸಿ ತತ್ವಾ ಬಲ್ಲ
ಜ್ಞಾನಿಗೆ ಮನಸು ಪೂರ್ವಕದಿಂದಲಿ
ದಾನಾ ವಿತ್ತವನ ವಂಶಾ ಆವಾವ ಲೋಕದಲಿ
ಆನಂದಾನಂದದಲೀ ಕ್ರೀಡಿಸುವರೂ
ಶ್ವಾನ ಸೂಕರ ದೇಹಾ ಬಂದಾರವಕೆ ಕೇಳಿ
ಹೀನಾವೆಂಬೋದೇ ಇಲ್ಲಾ ಪ್ರಬಲ ಸಂಸ್ಕಾರವೊ
ಶ್ರೀನಿವಾಸ ನಮ್ಮ ವಿಜಯ ವಿಠ್ಠಲರೇಯಾ
ಕಾಣಿಸಿ ಕೊಂಬನು ಈ ಗಿರಿಯಾ ಸ್ಮರಿಸಿದರಿಗೆ ೩

## ಅಟ್ಟ

ಬಲಬಲಿ ಬಲವೈರಿ ಕವಿ ಕವಿಗಾಳು
ಒಲಿದು ವೊಲುಮೆಯಿಂದ ಈ ಶೈಲ ಕಾಣಲು
ಬಲು ಪಂಚಾಮಹಾಪಾತಕದಿಂದ ಕಡೆಬಿದ್ದು
ಮಲರಹಿತರಾಗಿ ವೆಂಕಟನಾಥನ್ನ
ಒಲಿಸಿ ವೇಗದಿಂದ ಸಿದ್ಧರಾದರು ತಮ್ಮ
ಒಳಗಾದೊಡನೆ ಕೂಡಿ ತಾರತಮ್ಯಾದಿಂದಲಿ
ತಿಳಿವದು ಈ ಪರಿ ರಜೋತಮ ಜನರಿಗೆ
ಕಲ ಕಾಲಾ ಬಿಡದಲೆ ನೂರೆಂಟು ಸಾರಿಗೆಲಿ
ಬಳಲಿ ಯಾತ್ರಿಯಾ ಮಾಡಿದರೇನೂ ಎಂದಿಗೆ
ಫಲ ಕೊಡುವದು ಕಾಣೆ ವೃತ್ತಿಸೌಖ್ಯವೆವುಂಟು
ಜಲಜನಯನ ನಮ್ಮಾ ವಿಜಯ ವಿಠ್ಠಲ ವೆಂಕಟ
ತಿಳಿದವಗಲ್ಲದೆ ಮುಕುತಿಯಾ ಕೊಡನೊ ೪

ಆದಿ

ಮೂಜ್ಜಗದೊಳಗಿದೆ ಸರ್ವ ಯಾತ್ರಿಗೆ ಮಿಗಿಲೂ
ಸಜ್ಜನಾ ನಾದಾವ ಈ ಗಿರಿಯಲ್ಲಿ ವೊಂದು
ಹಜ್ಜೆ ಇಡಲು ಅವನ ಕುಲ ಕೋಟಿ ಉದ್ಧಾರ
ಆರ್ಜವ ಮಾರ್ಗದಲ್ಲಿ ಸಂಚರಿಸುವರು
ಮಜ್ಜನಾದಿ ಕರ್ಮ ಅಲ್ಪಮಾಡಿದರು ನಿ
ರ್ವ್ಯಾಜ್ಯವಾದ ಪುಣ್ಯ ಮೇರುತುಲ್ಯವಾಗುವದು
ದುರ್ಜನರ ಉಪಹತಿ ಲೇಶ ಮಾತುರವಿಲ್ಲ
ನಿರ್ಜರರು ಮೆಚ್ಚುವರು ಅವಲೋಕಾ ಮಾಡುತಾ
ಅರ್ಜುನ ಸಾರಥಿ ವಿಜಯವಿಠ್ಠಲ ವೆಂಕಟ
ಬೆಜ್ಜರಿಕೆ ಬಿಡಿಸುವಾ ಬಿನ್ನಪ ಕೈಕೊಂಡು ೫

ಜತೆ

ಈ ಗಿರಿ ಯಾತ್ರಿಯಾ ಮಾಡಿದಾ ಜನರಿಗೆ
ನಾಗಶಯನ ವಿಜಯ ವಿಠ್ಠಲ ವೆಂಕಟವೊಲಿವಾ ೬

## ೩೨

**ಸಾವೇರಿ** **ಛಾಪು**

ಗಿರಿರಾಜ ಗಿರಿರಾಜ ತರಣಿಶತ
ಸುರುಚಿರತೇಜ ವೆಂಕಟ ಪ

ಆರನು ಕಾಣದೆ ಸಾರಿದೆ ತ್ರಿಜಗವಿ
ಹಾರಿ ಕರಪಿಡಿ ಸಮೀರಾಶನ ಶ್ರೀ ೧

ಶ್ರೀ ಕಮಲಭವಪಿನಾಕಿಮುಖ್ಯ ಸುರಾ
ನೀಕರನಾಳಿದ ಲೋಕೈಕ ಶರಣ್ಯ ೨

ನಂಬಿದ ಭಕ್ತ ಕುಟುಂಬಿ ಅಂಬು
ಜಾಂಬಕ ಬಲ್ಲೆ ಕೃಪಾಂಬುಧಿ ಕರುಣಿಸೊ ೩

ಮನೋವಾಕ್ಕಾಯದಿ ಮನಸಿಜಪಿತ ನಿ
ನ್ನನುಧೇನಿಸುವಂತನುದಿನ ಮಾಡೋ ನೀ ೪

ಸಟೆಯಲ್ಲೀಸುಡಿ ದಿಟವೆಂಬೋದು ಬುಧ
ಕಟಕ ಜಗನ್ನಾಥವಿಠಲ ವಿಹಂಗಪ ೫

## ೩೩

**ಆನಂದಭೈರವಿ** **ಆದಿ**

ಗಿರಿರಾಜ ಚಿತ್ತ ಉದಾರ ಜೀಯಾ
ನಾ ನಿನ್ನ ಪಾದಕ್ಕೆರಗಿ ಯಾಚಿಸುತಲೆ ಮುಗಿವೆನು ಕೈಯಾ ಪ

ಅಪಾರ ಮಹಿಮಾ ಆಪದ್ಬಂಧೋ
ಆಪನ್ನರ ಪಾಲಿಪ ವ್ಯಾಪಾರ ನಿನಗಲ್ಲದೆ ಮತ್ತೆಂದು ಕಾಣೆನೊ ಜಗದೀ
ಪಾಪದ ಪರ್ವತ ಲೇಪವಾಗದಂತೇ ಪರಿಪಾಲಿಸು
ಶ್ರೀಪತಿ ಅಂಜನ ಗಿರಿರಾಜ ಅ

ಕಲಿಯುಗದೊಳಗೀ ಪರ್ವತಕೆಲ್ಲಿ ಸರಿಗಾಣೆನುಯೆಂದು
ನೆಲಸಿದೇ ನೀನೇ ಈ ಸ್ಥಳದಲ್ಲಿ ವೈಕುಂಠಕ್ಕಿಂತ
ವೆಲೆಯು ವೆಗ್ಗಳವೆಂದು ನೀ ಬಲ್ಲೀ ಆದ ಕಾರಣ ಇಲ್ಲೀ
ಜಲಜಭವಾದ್ಯರು ಒಲಿದೊಲಿಯುತ ತಲೆದೂಗುವರಯ್ಯಾ
ಭಳಿರೆ ಕಾಂಚನ ಗಿರಿರಾಜ ೧

ತರುಜಾತಿ ಮೃಗ ಪಕ್ಷಿಗಳಾಕಾರ–ಮೊದಲಾದ ರೂಪದಿ
ಸುರರು ಕಿನ್ನರರು ತಮ್ಮ ಪರಿವಾರ–ಒಡಗೂಡಿ ನಿನ್ನ
ಚರಣಾರಾಧನೆ ಮಾಡಿದ ವಿಸ್ತಾರ–ಈ ಬಗೆ ಶೃಂಗಾರ
ದೊರೆತನ ಠೀವಿಗೆ ಧರಣಿ ಮಂಡಲದಿ
ಸರಿಗಾಣೆನೊ ಹೇ ತಿರುಪತಿ ವೆಂಕಟ ೨

## ೩೪

**ನಾದನಾಮ ಕ್ರಿಯ** **ಏಕ**

ಗಿರಿರಾಯಾ ಗಿರಿರಾಯಾ ಪ

ಶರಣಾಗತರಿಗೆ ಕರುಣಾಕರ ವೆಂಕಟ ಅ

ಸ್ಮರಿಸುವೆ ನಿನ್ನನು ಸರಿಸಿಜಭವನುತ
ಸ್ಮರತಾಮರತರು ದುರಿತವಿದೂರ ೧

ಶ್ರೀಕರಭವಭಯ ನೂಕಿಸಿ ಎನ್ನನು
ಸಾಕಲೋ ಭೂಧರಸೂಕರರೂಪ ೨

ಆಪದ್ಬಾಂಧವ ಶ್ರೀಪತಿ ಎನ್ನನು
ಕಾಪಾಡೆಲೊ ಸಕಲಾಪದ್ಧರ ವೆಂಕಟ ೩

ಕಾಮಿತಫಲಪ್ರದ ಈ ಮಹೀತಳದೊಳು
ಸಾಮಜವರದ ಸುಧಾಮನ ಸಖ ಪೊರಿ ೪

ದಾತಗುರುಜಗನ್ನಾಥವಿಠಲ
ಪ್ರೀತನಾಗೊ ನಿನ್ನ ದೂತನು ನಾನೈ ೫

## ३५

ಗೋವಿಂದ ನಿನ್ನಾಂದದಲ್ಲಿಡೊ ಗೋವಿಂದ ಪ

ಗೋವಿಂದ ಹೃದಯಾರವಿಂದದಲ್ಲಿ
ಇಂದು ಮುಂದು ಚರಣಾರವಿಂದವ ತೋರೊ ಅ

ಬೆಟ್ಟದ ದರುಶನ ಲಾಭವು ಕಷ್ಟ
ಪಟ್ಟರು ದೊರೆಯಲಸಾಧ್ಯವು ನೋಡೆ
ಸುಟ್ಟು ಹೋಗುವುದಘ ರಾಶಿಯು
ಪಟ್ಟ ಶ್ರಮವು ಇಷ್ಟಾರ್ಥವು
ದಿಟ್ಟ ಮನವ ಕೊಟ್ಟು ಅಟ್ಟುಳಿಯ ಕಳೆದು
ಮೆಟ್ಟುಮೆಟ್ಟಲನೇರಿ ದಿಟ್ಟಿಪರೊ ನಿನ್ನ ೧

ಪದುಮಜಾಂಡ ಕೋಟಿ ನಾಯಕ ದೇವ
ಶ್ರೀದ ಸೃಷ್ಟ್ಯಾದ್ಯಷ್ಟ ಕರ್ತೃಕ ನೀನೆ
ಆದ್ಯಂತ ಜಗದಾಧಾರಕ ಅಂತರಾತ್ಮಕ ವಿಶ್ವವ್ಯಾಪಕ
ಆದಿಮೂಲ ಚತುಷ್ಪಾತು ಎಂದೆನಿಸಿ ತ್ರಿ–
ಪಾದ ಊರ್ಧ್ವ ಒಂದು ಪಾದ ಇಳೆಯೊಳಿಟ್ಟೆ ೨

ಸದಮಲಾತ್ಮಕನೆ ದೇವ ಸರ್ವದಾ ಎಲ್ಲ
ಹದಿನಾಲ್ಕು ಲೋಕವ ಧರಿಸಿದೆ ದಿವ್ಯ

ಸುಂದರ ವಿರಾಟನೆನಿಸಿದ ಬಂದು ನೆಲೆಸಿದ ಸರ್ವರ ಹೃದಯದ
ಪದುಮದಲಿ ಪೊಳೆದು ತ್ರಿಜಗ ವಂದಿತನಾಗಿ
ಮೇದಿನಿಯೊಳು ಮೆರೆಯುತಿಹೆ ೩

ಧ್ವಜವಜ್ರಾಂಕುಶ ಯುಕ್ತಲಾಂಛನ ಧೇವ
ಅಬ್ಜಭವಾರಾಧ್ಯ ಚರಣ ದಿವ್ಯ –
ಅಬ್ಜಸಖಕೋಟಿ ಕಿರಣ
ಪಾದಾಭರಣದಿಂದ ಕಿರಣಾ
ತಾ ಝುಗಿಝುಗಿಸುತ್ತ ನೂಪುರ ಕಾಲಂದಿಗೆ
ಗೆಜ್ಜೆ ಸಜ್ಜುಗೊಂಡಿಹ ಮೂರ್ಜಗದೊಡೆಯನೆ ಹರಿ ೪

ತಟಿತ ಕೋಟಿ ನಿಭಸಮ ಕಾಯ
ಕಟಿಯ ದಿವ್ಯ ರತ್ನ ಖಚಿತ ದಟ್ಟಿಯಾ
ತೊಟ್ಟ ಪಟ್ಟೆಪೀತಾಂಬರ ಬಟ್ಟೆಯಾ
ಸೊಂಟ ಪಟ್ಟಿಯಾ ಇಟ್ಟ ಪರಿಯಾ
ಅಟ್ಟಹಾಸದಿ ನಿಂದ ಸೃಷ್ಟಿಗೊಡೆಯ ಮನೋ –
ಭೀಷ್ಟದಾಯಕ ಬೆಟ್ಟದೊಡೆಯನೆ ೫

ಕರಚತುಷ್ಟಯದಲ್ಲಿ ಮೆರೆಯುವಾ ಶ್ರೀಸು –
ದರ್ಶನ ಶಂಖದಿಂದಿರುವಾ ದೀನ
ಶರಣ ಜನರಿಗಭಯಹಸ್ತವಾ
ಕರೆದು ನೀಡುವಾ ಕಾಮಿತಾರ್ಥವ
ಪರಿಪರಿ ಭಾಪುರಿ ಭುಜಗಾಭರಣಾದಿಗಳ
ಧರಿಸಿರುತ ಭಕ್ತಜನರಘಹರಿಸುವ ೬

ವಕ್ಷಸ್ಥಳದಲ್ಲಿ ಶ್ರೀ ವತ್ಸವೂ ಕಂಠ
ದಕ್ಷಿಣದಲ್ಲಿ ಘೋರ ನಕ್ಷತ್ರದಂತಿಹ ಹಾರವೂ
ಕುಕ್ಷಿ ಅಂದವು ಮೋಕ್ಷದಾತೃವೂ
ಅಕ್ಷರವಾಚ್ಯ ತ್ರಕ್ಷ್ಯಾದಿ ಸುರವಂದ್ಯ
ಈ ಕ್ಷಿತಿಗಿಳಿದು ಪ್ರತ್ಯಕ್ಷನಾಗಿ ನಿಂದೆ ೭

ಮಂದಹಾಸ ಮುಖ ಅರವಿಂದ ದಂತ
ಚಂದ ಕರ್ಣಕುಂಡಲದಿಂದ

ನಿಂದೆ ಕಸ್ತೂರಿ ತಿಲಕವು ಫಣೆಯಿಂದ ಕೆಂದುಟಿಯಿಂದ ಒಪ್ಪುವ ಚೆಂದ
ಪೊಂದಿ ಮಕುಟ ಸರ್ವಾಲಂಕಾರ ಪರಿಪೂರ್ಣ
ಬಂಧ ಮೋಚನ ಹರಿ ಶ್ರೀ ವೇಂಕಟೇಶನೆ ೪

ಪರಿಪರಿ ಮುಕ್ತಜೀವರುಗಳು ಇಲ್ಲಿ
ಪರಿವಾರ ತರುಲತೆ ಶಿಲೆಗಳು ಇನ್ನು
ವಿರಜೆ ಮೊದಲಾದ ಸರ್ವತೀರ್ಥವೂ ಸ್ವಾಮಿ–
ತೀರ್ಥವು ಮೋಕ್ಷದಾತೃವೂ
ಸಿರಿ ವಿರಿಂಚಿ ಈರ ಭವ ಶಕ್ರಾದಿನುತ
ಉರಗಾದ್ರಿವಾಸ ವಿಠ್ಠಲ ಜಗದೀಶನೆ ೬

## ೩೬

ಬಹಿರಿ ಆದಿ

ಚಿಂತೆಯಾ ಪರಿಹರಿಸೋ, ತಿಮ್ಮಯ್ಯಾ
ಚಿಂತಾಯಕ ಕಂತು ಕಮಲೆಯ ರಾಯಾ ಪ

ಸಾಧ್ಯವಲ್ಲದುದನ್ನು ಹಂಬಲಿಸಿ
ಬುದ್ಧಿಭ್ರಾಂತಿಲಿ ಬಲುಸುಖಬಯಸಿ
ಕದ್ದಕಳ್ಳನಂತೆ ವ್ಯಥಾ ಕುದಿದೆ
ಮದ್ದು ಮೆದ್ದವನಂತೆ ಬಳಲಿದೆ ೧

ತಿಳಿದು ಮಾಯದ ಬಲೆಗೆ ಮೈಗೊಟ್ಟೆ
ಬೆಲೆಗಟ್ಟ ವ್ಯಥಾ ಹುಚ್ಚುದೈನ್ಯ ಬಟ್ಟೆ
ಆಲಿಸಿ ಮೋಕ್ಷದ ನೆಲೆಯ ಕೇಳದೆ ನಾ
ಕಳವಳಗೊಂಬೆ ಕರುಣಾಸಂಪನ್ನ ೨

ಚಿಂತೆಗೆ ಚಿಂತೆ ಸಹಾಯವಾಗಿ
ಅಂತರಂಗದ ಕ್ಲೇಶ ಹೇಸಿತು ಬಾಗಿ
ಶಾಂತಮೂರುತಿ ಪ್ರಸನ್ವೆಂಕಟೇಶಾ ಏ–
ಕಾಂತದಾಸರಾ ನೆಳಲನೇ ತೋರಿಸೊ ೩

## ೩೭

ಕಾಂಬೋದಿ ಅಟ್ಟ

ಚಿಕ್ಕ ತಿರುಪತಿವಾಸ – ಶ್ರೀ ವೆಂಕಟೇಶ ಪ

ಅಕ್ಕರದಿ ನೀನೆನ್ನ – ತಕ್ಕೈಸಬೇಕೋ ಅ

ಕಕ್ಕಸದ ಭವದೊಳಗೆ । ಸಿಕ್ಕಿ ಬಲು ನೊಂದೆನೋ
ರಕ್ಕಸಾಂತಕ ಕೃಷ್ಣ । ಚಕ್ರ ಧರದೇವಾ
ಚೊಕ್ಕ ಮೂರುತಿ ಅಜನ । ಪೊಕ್ಕಳಿಂದಲಿ ಪಡೆದು
ಲಕ್ಕುಮಿಗೆ ಮೀರ್ದ ಪೊಂ । ಬಕ್ಕಿ ದೇರನೆ ಕಾಯೋ ೧

ಸಪ್ತ ಪ್ರಾಕಾರದಲಿ । ಆಪ್ತ ನೀ ನೆಲಿಸಿದ್ದು
ಗುಪ್ತ ಮಹಿಮನೆ ಜಗಕೆ । ವ್ಯಕ್ತನಾಗದಲೇ
ಕ್ಲುಪ್ತಿಯಂದದಿ ಹವಿ । ರ್ಭೋಕ್ತ್ರ ಯಜ್ಞನಿಗೊಲಿದು
ವ್ಯಕ್ತನಾದೆಯೊ ಜಡದಿ । ಅವ್ಯಕ್ತ ಮೂರ್ತೇ ೨

ಕ್ಷಿತಿಪ ಜನಮೇಜಯನು । ವಿಸ್ತರಿಸಿ ಮಂಟಪವ
ಕ್ಷಿತಿಯಮರರೊಡಗೂಡಿ । ಅತುಳ ವಿಭ್ರವದಲೀ
ಕೃತಿಪತಿಯೆ ನಿನ್ನನೂ । ಸ್ತುತಿಗೈದು ಗತಿ ಪಡೆದ
ವಿತತ ಮಂಗಳ ಮೂರ್ತಿ । ಪ್ರತಿರಹಿತ ದೇವಾ ೩

ಭೂಮಿಪತಿ ವರಾಹ । ಸ್ವಾಮಿ ಪುಷ್ಕರಿಣ್ಯಾದಿ
ಆ ಮಹಾ ತೀರ್ಥಗಳ । ವೀಮಾನ ಸ್ಥಿತನಾ
ಈ ಮನೋರೂಪದಲಿ । ನೇಮಾನುಸಂಧಾನ
ಕಾಮಿಸುವೆ ಶ್ರೀರಮಣ । ಭೂಮಿಗ್ವಲ್ಲಭನೇ ೪

ಸರ್ವಜಗ ಸೃಜಿಸುವನೆ । ಸರ್ವವನು ಲಯಿಸುವನೆ
ಸರ್ವಕುತ್ತಮನೆನಿಪೆ । ಶರ್ವವಂದ್ಯಾ
ಸರ್ವಪ್ರೇರಕ ನೀನೆ । ಸರ್ವಚೇಷ್ಟಕ ನೀನೆ
ಸರ್ವಸುಂದರ ಗುರೂ । ಗೋವಿಂದ ವಿಠಲಾ ೫

## ೩೮

ಜಗದಾದಿ ವಂದ್ಯನಿಗೆ ಶರಣು ಪ

ಶರಣು ಜಗದೊಡೆಯ ಶರಣು
ಪನ್ನಗಾ ನಗದೊಡೆಯ ಶರಣು ೧

ಖಗಪ ನಖಾಗ್ರದಲಿ ಮಿಗೆ ಶೋಭಿಸುವ
ತವ ಪದನಖಾಗ್ರಕ್ಕೆ ಶರಣು ೨

ಮೂಡಲಾಗಿರಿಗೆ ಶರಣು
ಗಿರಿಯ ಅಡಿದಾವರೆಗಳಿಗೆ ಶರಣು ೩

ದೃಢಮನದಿ ನಿನ್ನ ಅಡಿದರುಶನಕೆ
ನಡೆವರಡಿಗಳಿಗೆ ಶರಣು ೪

ಮೆಟ್ಟುಮೆಟ್ಟಲಿಗೆ ಶರಣು
ಮನ ಮುಟ್ಟಿ ನೆಟ್ಟನೇರುತಿಹ
ನಿನ್ನಿಷ್ಟ ಭಕುತರಿಗೆ ಶರಣು ೫

ತನು ಕಷ್ಟಹರಿಸಿ ಮನತುಷ್ಟಿಯನು ತೋರ್ವ
ಬೆಟ್ಟದಂದಕ್ಕೆಲ್ಲ ಶರಣು ೬

ಸುರಕಿನ್ನರರ ತರುಶಿಲಾಲತಾಕಾರ ತವ
ಪರಿವಾರಕ್ಕೆಲ್ಲ ಶರಣು ೭

ಶುಕ ಪಿಕನಾದ ಝೇಂಕಾರ
ಸ್ವರ ಶಬ್ದ ವಾಚ್ಯ ತವ ಶರಣು ೮

ಮೆಲ್ಲ ಮೆಲ್ಲನೆ ಭಕ್ತರುಲ್ಲಾಸವನೆ ತೋರ್ವ
ಚಲ್ವ ಗಾಳಿಗೋಪುರ ದ್ವಾರಕ್ಕೆ ಶರಣು ೯

ಲೀಲೆಯಿಂದಲಿ ನಿನ್ನನೋಲೈಪ
ಭಕ್ತರ ಪಾದಪಲ್ಲವಂಗಳಿಗೆ ಶರಣು ೧೦

ಗೋವಿಂದ ಸಚ್ಚಿದಾನಂದ ಮುಕುಂದನೆಂದು–
ಚ್ಚರಿಪ ಭಕುತರಿಗೆ ಶರಣು ೧೧

ಹರಿ ಹರೀ ಹರಿ ಎಂದು ಹರಿದಾರಿ ಹಿಡಿದ
ಹರ ಅಡಿದಾವರೆಗಳಿಗೆ ಶರಣು ೧೨

ಪರಿಪರಿ ಬಾಧೆಯಿಂ ತರಳನ್ನ ಕಾಯ್ದ ಶ್ರೀ
ನರಹರಿಯ ಚರಣಾರವಿಂದಕ್ಕೆ ಶರಣು ೧೩

ತಿರುತಿರುಗಿ ತುರುವನು ಕರುವು ಅರಸುವಂತೆ
ತಿರುದಾರಿ ಮೊಣಕಾಲಮುರಿಗೆ ಶರಣು ೧೪

ಭಕ್ತರಾಪತ್ತಳಿವ ಶಕ್ತಿ ಸಂಪತ್ತೀವ ಉತ್ತಮೋತ್ತಮ
ಭಕ್ತರಾ ಮಂಟಪಕ್ಕೆ ಶರಣು ೧೫

ಭಕ್ತಿಯಿಂದಲಿ ಸಪ್ತಗಿರಿಯ ದಾಟಿದ ಹರಿ–
ಭಕ್ತ ಜನಸಂದೋಹಗಳಿಗೆ ಶರಣು ೧೬

ಶಕ್ತಿ ರಹಿತರಾಗಿ ರಿಕ್ತಹಸ್ತದಿ ಬಂದ
ಭಕ್ತರುದ್ಧರಿಸಲು ನಿಂದ ಸಮೀರನಿಗೆ ಶರಣು ೧೭

ಜೀವರಿವರನ್ನವರು ದರುಶನವನೀಯೆಂದು ಕ–
ರವ ಮುಗಿದು ಹರಿಯ ಸ್ತುತಿಸುವಗೆ ಶರಣು ೧೮

ಪಾವನಾ ಮೂರ್ತಿಯನು ಮಾನಸದಿ ಧೇನಿಸಲು
ಭಾವಶುದ್ಧಿಯನೀವ ಜೀವೇಶನಿಗೆ ಶರಣು ೧೯

ಸಚ್ಚಿದಾನಂದಾತ್ಮ ಶ್ರೀಮುಕುಂದನ ದಿವ್ಯ
ಅರಮನೆಯ ಮಹಾದ್ವಾರಕ್ಕೆ ಶರಣು ೨೦

ಅಚ್ಯುತನ ರಾಣಿ ಸಿರಿ ಮೆಚ್ಚಿ ತುತಿಸುವ
ಅವ್ಯಾಕೃತಾಕಾಶಾವರಣಕ್ಕೆ ಶರಣು ೨೧

ತೀರ್ಥ ಮಹಿಮೋಪೇತ ಸ್ವಾಮಿ ಪುಷ್ಕರಣೀ–
ತಟ ವಿರಾಜಿತ ಅಶ್ವತ್ಥವೃಕ್ಷರಾಜನಿಗೆ ಶರಣು ೨೨

ಭೂದೇವಿಯಾರಮಣ ಆದಿ ಶ್ರೀ ಭೂವರಹ
ಮೂರ್ತಿಯ ಶ್ರೀಪಾದಯುಗ್ಮಕ್ಕೆ ಶರಣು ೨೩

ಬ್ರಹ್ಮಾಂಡದೊಡೆಯನ ದಿವ್ಯನಿಲಯದೊಳಿರುವ
ಬಹಿರಾವರಣಕ್ಕೆ ಶರಣು ೨೪

ಸರ್ವಗುಣ ಸಂಪೂರ್ಣ ವೈಕುಂಠ ಮಂದಿರನ
ಸ್ವರ್ಣಮಯ ಸುಪರ್ಣ ಸ್ತಂಭಕ್ಕೆ ಶರಣು ೨೫

ಸ್ವಾಮಿ ಸಂದರ್ಶನಕ್ಕೆ ಗಮನ ನಿರ್ಗಮನವುಳ್ಳ
ಸುಮನಸರ ಭಕ್ತಜನ ಸಂಘಕ್ಕೆ ಶರಣು ೨೬

ಅಂತರಾವರಣಕ್ಕೆ ಶರಣು ೨೭

ಕಾಂಚನರೂಪ ಸುವರ್ಣಮುಖರೀ ನದಿ ವಿ-
ರಜಾತೊಟ್ಟಿತೀರ್ಥ ಸಮಸ್ತ ತೀರ್ಥಗಳಿಗೆ ಶರಣು ೨೮

ಸುಮನಸರು ಹೃನ್ಮನದಿ ಧೇನಿಸುವ ಕಾಂಚನ
ವಿಮಾನದಲಿ ಬೆಳಗುತಿಹ ಶ್ರೀ ಶ್ರೀನಿವಾಸನಿಗೆ ಶರಣು ೨೯

ಬಗೆಬಗೆ ಭಕ್ತರಪರಾಧಗಳ ಹರಿಸೆ
ಭೂಗಿರಿಯ ಸೇರಿದ ಶ್ರೀಹರಿಗೆ ಶರಣು ೩೦

ವಾರಿಯೊಳಗ್ಯೋಲಾಡಿ ಶ್ರೀಶೈಲದೊಳು ನಿಂ-
ತ ಶ್ರೀಲೋಲನಾಗಿರ್ಪಗೆ ಶರಣು ೩೧

ಬೆಟ್ಟ ಬೆನ್ನಿಲಿ ಹೊತ್ತು ಮೆಟ್ಟಿ ಈ ಗಿರಿಯನು
ಶ್ರೇಷ್ಠನೆನಿಸಿದ ದಿಟ್ಟ ಮೂರುತಿಗೆ ಶರಣು ೩೨

ಧರೆಯ ಕದರೀ ಬಂದು ಗಿರಿಯ ವರಹನ ಬೇಡಿ
ಮರುಳುಮಾಡಿದ ಮಾಯಾರಮಣಗೆ ಶರಣು ೩೩

ತರಳರೂಪವ ಕೆಡಿಸಿ ಗಿರಿಯ ಹುದರದೊಳಡಗಿ
ಸುರಜ್ಯೇಷ್ಠನೆಂದೀಗ ಪೂಜೆಗೊಂಬುವಗೆ ಶರಣು ೩೪

ವಟಪತ್ರಶಾಯಿ ನೀ ವಟುವಾಗಿ ಬೇಡಿ ಭ-
ವಾಟವಿಯ ದಾಟಿಸಲು ನಿಂದವಗೆ ಶರಣು ೩೫

ಪೆತ್ತ ಮಾತೆಯ ಹರಿಸಿ ಮೆತ್ತನಿಲ್ಲಿಗೆ ಬಂದು
ಉತ್ತಮಾಗತಿ ಪ್ರದ ಸರ್ವೋತ್ತಮಗೆ ಶರಣು ೩೬

ಕ್ಷಿತಿಸುತೆಯ ಮಾತನು ಹಿತದಿ ಪಾಲಿಸೆ ವೇದ-
ವತಿಯ ಪತಿಯಾಗಿ ನಿಂದವಗೆ ಶರಣು ೩೭

ಗುಟ್ಟಾಗಿ ಪಾಲ್ಕುಡಿದು ಪೆಟ್ಟಿನಾ ನೆಪದಲ್ಲಿ
ದೃಷ್ಟಿ ಗೋಚರನಾದ ಬೆಟ್ಟದೊಡೆಯನಿಗೆ ಶರಣು ೩೮

ಉತ್ತಮಾ ಸ್ತ್ರೀಯರಿಗೆ ನಾಚಿ ಬತ್ತಲೆಯಾಗಿ
ಹುತ್ತದೊಳು ಅಡಗಿ ಮೆರೆದವಗೆ ಶರಣು ೩೯

ಸಿರಿಯು ಹಯವನು ಮಾಡಿ ಚರಿಸಿ
ಗಿರಿಯೊಳು ಹಯವ ಅರಸಿಯಿಂದ ಹರಿಸಿಕೊಂಡವಗೆ ಶರಣು ೪೦

ಹಿರಣ್ಯಗರ್ಭನ ಜನಕ ಸನ್ಮಹಿಮ ಸನ್ನಿಧಿಯ
ಕನಕಮಯ ಕವಾಟಕ್ಕೆ ಶರಣು ೪೧

ತಟಿತ್ಕೋಟನಿಭ ಪೂರ್ಣ ಸಂಪೂರ್ಣ ಲಕ್ಷಣ
ಸನ್ಮಂಗಳಾ ಸುಂದರ ಮೂರ್ತೇ ತವ ಶರಣು ೪೨

ಪ್ರಹ್ಲಾದ ನಾರದ ವಸು ಋಷಿ ಗಂಧರ್ವಾದಿ
ಮುಕ್ತಾ ಮುಕ್ತಗಣ ವಂದಿತಾ ತವ ಶರಣು ೪೩

ನಂದ ಸುನಂದನ ಜಯ ವಿಜಯಾದಿ ಪಾ–
ರ್ಷದ ಯುಕ್ತ ಶ್ರೀವಿರಿಂಚಿ ಶೇಷ ಶಕ್ರಾದಿ ಸಂಸೇವ್ಯಮಾನ
ತವ ಶರಣು ೪೪

ಸರ್ವಾಂಗುಳ್ಯಂಗುಷ್ಠದಳವಿಲಸಿತ ಸತ್‌ಪಾದ–
ಪಂಕಜ ಧ್ವಜ ವಜ್ರಾಂಕುಶಾದಿ ಸುಚಿನ್ಹ ಚಿನ್ಹಿತ ತವ ಶರಣು ೪೫

ಚಾರು ಜಾನುಯುಗ ಜಂಘೆಯುಗಳ ಸಂಯುಕ್ತ ತುಂಗ
ಗುಲ್ಫಾರುಣನಖ ಧೃತಾ ದೀಧಿತಿಯುಕ್ತ ತವ ಶರಣು ೪೬

ಕಂಬುಕಂಠ ನಿಮ್ನನಾಭಿವಳಿ ಮತ್ ಪಲ್ಲವೋದರ
ಬೃಹತ್ ಕಟಿ ತಟ ಶ್ರೋಣಿ ಕರಭೋರು ದ್ವಯಾನ್ವಿತ
ತವ ಶರಣು ೪೭

ವಿಭ್ರಾಜಮಾನ ಶ್ರೀವತ್ಸ ವಕ್ಷ ಕೌಸ್ತುಭ
ವೈಜಯಂತಿ ವನಮಾಲ ತವ ಶರಣು ೪೮

ಪ್ರಲಯ ಪೀವರ ಭುಜ ತುಂಗಾಂಶೋರಸ್ಥ
ಲಾಶ್ರಯ ತವ ಶರಣು ೪೯

ಅನರ್ಘ್ಯ ರತ್ನ ಮೌಕ್ತಿಕ ವ್ರಾತ ಕಿರೀಟ ಕಟಕಾಂಗದ
ಕಟಸೂತ್ರ ಬ್ರಹ್ಮಸೂತ್ರ ಹಾರ ನೂಪುರ ಕುಂಡಲಾನ್ವಿತ
ತವ ಶರಣು ೫೦

ಚಾರುಪ್ರಸನ್ನವದನ ಮಂದಹಾಸ ನಿರೀಕ್ಷಣ ಸು–
ಭದ್ರ ನಾಸ ಚಾರುಸುಕರ್ಣ ಸುಕಪೋಲ ಅರುಣ ತವ ಶರಣು ೫೧

ಸಹಸ್ರ ಫಣ ಶಿರೋಮಣಿ ಪ್ರಭಾನ್ವಿತ ಶೇಷಶೈಲಸ್ಥ
ಘನಶ್ಯಾಮ ಪೀತಕೌಶೇಯವಾಸ ಶ್ರೀಪರಮ ಪುರುಷ
ಶಾಂತ ಪದ್ಮಪತ್ರಾಯತೇಕ್ಷಣ ತವ ಶರಣು ೫೨

ಅನಂತ ವೇದೋಕ್ತ ಮಹಿಮೋಪೇತ ಸರ್ವ ಸ್ವರವರ್ಣ
ಸರ್ವ ಶಬ್ದ ವಾಚ್ಯ ಪ್ರತಿಪಾದ್ಯ ಶರಣು ೫೩

ಸಚ್ಚಿದಾನಂದಾತ್ಮ ಸರ್ವಸುಗುಣೋಪೇತ ಸರ್ವ
ಹೃತ್ಕಮಲಸ್ಥಿತ ತವ ಶರಣು ೫೪

ಅಣು ತ್ರ್ಯಣು ತೃಟಿ ಲವ ಕ್ಷಣಾದಿಕಾಲ ಮಹ–
ತ್ಕಾಲಾತ್ಮಕ ನಿತ್ಯನಿರ್ಮಲ ಮೂರ್ತೇ ತವ ಶರಣು ೫೫

ಸೃಷ್ಟ್ಯಾದ್ಯಷ್ಟಕರ್ತೃಕ ಸ್ರಷ್ಟ ಶ್ರೀ ಪರ–
ಮೇಷ್ಠಿವಂದಿತ ತವ ಶರಣು ೫೬

ವಿಶ್ವ ತೈಜಸ ಪ್ರಾಜ್ಞ ತುರ್ಯಾ
ದ್ಯಷ್ಟ ರೂಪಾತ್ಮಕ ತವ ಶರಣು ೫೭

ಭಯಕೃತ್ ಭಯಹಾರಿ ಭಕ್ತಜನಕಾಧಾರಿ
ಕಂಸಾರಿ ಮುರಾರಿ ಶ್ರೀಹರಿಯೆ ಶರಣು ೫೮

ಭವರೋಗ ಭೇಷಜ ಭಕ್ತಜನಬಂಧೋ
ಮುಚುಕುಂದ ವರದ ಗೋವಿಂದ ಶರಣು ೫೯

ಮುಕ್ತಾ ಮುಕ್ತಾಶ್ರಯ ಭಕ್ತಜನ ಸಂರಕ್ಷಣಾ
ವ್ಯಕ್ತಾವ್ಯಕ್ತ ಮಹಿಮ ತವ ಶರಣು ೬೦

ವ್ಯಾಪ್ತ ಜಗದಾದ್ಯಂತ ನಿರ್ಲಿಪ್ತ
ತತ್ತದಾಕಾರ ಜಗದಾಪ್ತ ಶರಣು ೬೧

ಚೇತನಾಚೇತನ ವಿಲಕ್ಷಣ ಸ್ವಗತ ಭೇದ ವಿವ-
ರ್ಜಿತ ಪತಿತಪಾವನ ಮೂರ್ತೇ ತವ ಶರಣು ೬೨

ಕ್ಷರಾಕ್ಷರಪುರುಷಪೂಜಿತಪಾದ
ಪುರಾಣಪುರುಷೋತ್ತಮನೆ ತವ ಶರಣು ೬೩

ರವಿಕೋಟಿಕಿರಣ ರತ್ನಕನಕಮಯ ಮಕು-
ಟಾನ್ವಿತ ತವ ಶಿರಸ್ಸೀಗೆ ಶರಣು ೬೪

ಇಂದುಮಂಡಲಭಾಸ ಮಂದಸ್ಮಿತ
ಸುಂದರಾನಂದ ಆನನಕೆ ಶರಣು ೬೫

ಲೋಲ ವಿಶಾಲಫಾಲ ಕಸ್ತೂರೀ ತಿಲಕಾಂಕಿತ
ಶ್ರೀಲೋಲ ಶರಣು ೬೬

ಪೂವಿಲ್ಲನಾಬಿಲ್ಲ ಪೋಲ್ವ ಹುಬ್ಬು ಕಂಜ-
ದಳದೋಲ್ ಚಂಪಕಾಮುಗುಳಿಗೆಣೆನಾಸಿಕಕೆ ಶರಣು ೬೭

ಕನಕರತುನ ಮಣಿಖಚಿತ ಮಕರ
ಕರ್ಣಕುಂಡಲಾನ್ವಿತ ತವ ಕರ್ಣಕ್ಕೆ ಶರಣು ೬೮

ಅಕುಟಿಲರ ನಿಷ್ಕಂಟಕ ಶ್ರೀ ವೇಂಕಟೇಶಾ ನಿನ್ನ
ಶ್ರೀಕಂಠದ ಕೌಸ್ತುಭಾಭರಣಯುಕ್ತ ಕಂಠಕ್ಕೆ ಶರಣು ೬೯

ಅಜಭವಾದಿಗಳ ಭುಜಬಲನು ನೀನು
ಭುಜಗ ಭೂಷಣ ಬಾಹು ಪರಿಯುಕ್ತ ತವ
ಭುಜಯುಗಕ್ಕೆ ಶರಣು ೭೦

ನಕ್ರಸಂಹಾರಿ ಜಗಚ್ಚಕ್ರ ನಿನ್ನದು ತ್ರಿ-
ವಿಕ್ರಮನೆ ಕರಗತ ಚಕ್ರ ಶಂಖಕ್ಕೆ ಶರಣು ೭೧

ಕುಕ್ಷಿಯೊಳು ಬ್ರಹ್ಮಾಂಡ ಕೋಟಿಯನು ಇಟ್ಟಂಥಾ
ಲಕ್ಷ್ಮೀವಕ್ಷಸ್ಥಳ ಶ್ರೀವತ್ಸಕ್ಕೆ ಶರಣು ೭೨

ಕನಕರತ್ನದಹಾರ ಪದಕ ಮೌಕ್ತಿಕಾ ಹಾರ
ಕಲ್ಹಾರ ಪುಷ್ಪ ಮಾಲಾಯುಕ್ತ ತವ ಕುಕ್ಷಿಗೆ ಶರಣು ೭೩

ಪಟ್ಟೆ ಪೀತಾಂಬರ ಉತ್ತರೀಯವು ತೋರ ನೀಳ
ತ್ರಿವಳಿಹಾರ ಭಾವಕ್ಕೆ ಶರಣು ೭೪

ರತುನ ಪದಕಾಯುಕ್ತ ಬ್ರಹ್ಮಸೂತ್ರ ನಿ-
ರುತ ಪದ್ಮಸಂಭವ ಬಂದ ಪದ್ಮನಾಭಿಗೆ ಶರಣು ೭೫

ಇಟ್ಟ ರತ್ನಾ ಪಟ್ಟಿ ತೊಟ್ಟ ಗೆಜ್ಜೆಯ ಪಟ್ಟ
ಇಟ್ಟು ಮೆರೆಯುವ ದಿಟ್ಟಕಟಿಯ ಭಾಗಕ್ಕೆ ಶರಣು ೭೬

ಉಟ್ಟ ಪೀತಾಂಬರ ನೆರಿಗೆ ತಿದ್ದಿದ ತೆರ ನೆಟ್ಟನಿಂತಿಹ
ಬಟ್ಟು ಜಾನುಜಂಘೆ ಕಟಿಗೆ ಶರಣು ೭೭

ಝುಗ ಝುಗಿಪ ರತುನ ವೈಜಂತಿಯು ಧೃತ ಕ-
ಟಕ ರತ್ನಾಭರಣಯುಕ್ತ ಕರಯುಗ್ಮಕ್ಕೆ ಶರಣು ೭೮

ಪರಿಪರಿ ಅಭಯವ ಭಕ್ತರಿಗೆ ಕೊಡುವ ಕನಕರತ್ನಾ-
ಭರಣಯುಕ್ತ ಹಸ್ತಕ್ಕೆ ಶರಣು ೭೯

ಗೆಜ್ಜೆ ಕಾಲಂದಿಗೆ ಸಜ್ಜುಗೊಂಡಿಹ ನಿನ್ನ
ಅಬ್ಜಭವಾರಾಧ್ಯ ತವ ಪಾದಕ್ಕೆ ಶರಣು ೮೦

ಧ್ವಜ ವಜ್ರಾಂಕುಶಯುಕ್ತ ಅಬುಜಾಂಡ ಕಟಹ
ಭೇದಿಸಿದ ರವಿಕೋಟಿ ಭಾಸ ತವ ಪಾದನಖಕ್ಕೆ ಶರಣು ೮೧

ಜಲದೊಳು ಹೋರಾಡಿ ಭವಜಲದಲ್ಲಿ ಬಿದ್ದವರ
ಸುಲಭದಿಂದೆತ್ತಲು ನಿಂದ ಸಿರಿವಲ್ಲಭಗೆ ಶರಣು ೮೨

ಕಮಠರೂಪದಿ ಭೂಮಿ ತಂದು ಭಕುತರ
ಕರ್ಮಭಾರ ಹರಿಸಿ ಪೊರೆವ ಧರ್ಮಮೂರುತಿಗೆ ಶರಣು ೮೩

ವರಹಮೂರುತಿ ನಿನ್ನ ಇರವನ್ನೆ ಮರೆ ಮಾಡಿ
ವರಹ ಕೊಟ್ಟವರಿಗೆ ದರುಶನವ ಕೊಡುವವಗೆ ಶರಣು ೮೪

ನಂಬಿಹರ ಬೆಂಬಲನು ಎಂತೆಂದು ಸ್ತಂಭದಲಿ
ಬಂದು ಗಿರಿಯಲಿ ನಿಂದ ಗೋವಿಂದಗೆ ಶರಣು ೮೫

ಬೇಡುವರ ಕಷ್ಟ ನೋಡಿ ಅಭಯವ ನೀಡಿ
ಬಿಡದೆ ರಕ್ಷಿಪ ಬಡವರಾಧಾರಿ ಶರಣು ೮೬

ದುಷ್ಟ ಭೂಪರುಗಳ ಅಟ್ಟುಳಿಯ ಹರಿಸಿ ನಿ-
ರ್ದುಷ್ಟ ಫಲಪ್ರದ ಶ್ರೀ ಬೆಟ್ಟದೊಡೆಯನಿಗೆ ಶರಣು ೮೭

ಶರಧಿಗೆ ಸೇತುವೆಯ ಕಟ್ಟಿ ದಶಶಿರಸ ವಧಿಸಿದ
ಕರವೀರಪುರ ಲಕ್ಷ್ಮಿಯರಸನಿಗೆ ಶರಣು ೮೮

ಗೋಕುಲದ ಕ್ರೀಡೆ ಸಾಕಾಗದಲೆ ಬಂದು ಈ
ಆಕಾಶರಾಜನ ಜಾಮಾತನಾದವಗೆ ಶರಣು ೮೯

ಬುದ್ಧಜನರ ಅಪಬುದ್ಧರನೆ ಮಾಡಿ ಜಗ
ಉದ್ಧರಿಸಲು ನಿಂದ ಶುದ್ಧಮೂರುತಿಗೆ ಶರಣು ೯೦

ಹರಿಯ ಬೆನ್ನೇರಿ ಭೂಭಾರವನೆ ಹರಿಸಿ ಮೇಲು–
ಗಿರಿಯಲಿ ನಿಂದ ಶ್ರೀಹರಿಗೆ ಶರಣು ೯೧

ವಾಸುಕೀ ಶ್ವೇತಾದಿ ಸರ್ಪಜಾತಿಗಳುಳ್ಳ ಪಾತಾಳಲೋಕ–
ಕಾಶ್ರಯ ತವ ಪಾದಮೂಲಕ್ಕೆ ಶರಣು ೯೨

ಅಶ್ವ ಗಜ ಉಷ್ಟ್ರಾದಿ ಪ್ರಾಣಿಗಳಿಗಾಗಾರ
ರಸಾತಳ ಲೋಕಕಾಶ್ರಯ ತವ ಪಾದಾಗ್ರಕ್ಕೆ ಶರಣು ೯೩

ತಕ್ಷಕ ಕಾಳಿ ಸುಷೇಣಾದಿ ಉರಗಾಧಿಪರು ವಿಹರಿಸುವ
ಮಹಾತಳ ಲೋಕಕಾಶ್ರಯ ತವ ಪಾದಗುಲ್ಫಕ್ಕೆ ಶರಣು ೯೪

ಅನಲಾಕ್ಷವೈರಿ ತ್ರಿಪುರರು ವಿಹರಿಸುವ ತಳಾ–
ತಳ ಲೋಕಕಾಶ್ರಯ ತವ ಜಂಘದ್ವಯಕ್ಕೆ ಶರಣು ೯೫

ವಾಮನನ ಪೂಜಿಸಿ ಕೃಷ್ಣಂಗೆ ಮಸ್ತಕವಿತ್ತ ಧನ್ಯ
ಬಲೀಂದ್ರ ನಿಂತ ಸುತಳ ಲೋಕಕಾಶ್ರಯ ತವ ಜಾನುಗಳಿಗೆ ಶರಣು ೯೬

ಬಲನೆಂಬ ದನುಜನಿಂ ಪುಟ್ಟಿದ ಮಾಯ್ಗಳು ಕ್ರೀಡಿಪ ವಿ–
ತಳ ಲೋಕಕಾಶ್ರಯ ತವ ಊರುದ್ವಯಗಳಿಗೆ ಶರಣು ೯೭

ಮೃಗಪಶುಜಾತಿ ದೈತ್ಯದಾನವ ಕದ್ರು ತುಂ–
ಬಿಕೊಂಡಿಹ ಅತಳಲೋಕಕಾಶ್ರಯ ತವ ಶ್ರೋಣಿ
ದೇಶಕ್ಕೆ ಶರಣು ೯೮

ಕರ್ಮಸಾಧನ ಮಾಳ್ಪ ದಿವಿಜ ದಾನವ ಮನುಜ ನವಖಂಡ
ಭೂ ಶರಧಿ ಗಿರಿ ನದಿಯುಕ್ತ ಜಂಬೂದ್ವೀಪ
ದಿಂದಾಕಾರ ಅವನಿ ಉತ್ಪಾದಕ ತವ ಮಧ್ಯಕ್ಕೆ ಶರಣು ೯೯

ಧ್ರುವದಿಕ್ಪಾಲಕರು ಋಷಿಸಪ್ತ ನವಗ್ರಹರು ಸರ್ವರೋಲೈಪ
ಸುವರ್ಲೋಕಕಾಶ್ರಯ ತವ ನಾಭಿಕಮಲಕ್ಕೆ ಶರಣು ೧೦೦

ಸುರನಿಕರಾದಿ ಪುರುಹೂತ ಕರಿಐರಾವತ ಶಚಿ ಸೂತ
ಮಾತಲಿ ನಂದನವನ ಸುಶೋಭಿತ ಸುರಲೋಕಕಾಶ್ರಯ
ತವ ಉದರ ಭಾಗಕ್ಕೆ ಶರಣು ೧೦೧

ಸರ್ವವೇದೋಚ್ಚಾರ ಗುಣಗಾನಮಾಳ್ಪ ಋಷಿಗಣಯುಕ್ತ
ಶಕ್ತ್ಯಾದಿ ದೇವತೆಗಳು ಚಿತ್ರ ವಿಚಿತ್ರ
ಸನಕಾದಿ ಮುನಿಗಳ ಮಹರ್ಲೋಕಾಶ್ರಯ ತವ ಕೌಸ್ತುಭ
ಭೂಷಿತ ಕಂಠಕ್ಕೆ ಶರಣು ೧೦೨

ಸದಮಲಾನಂದ ಸಾಧನದಿಂದ ಸರ್ವಗುಣಗಣ
ಚರಿತ ನುತಿಪ ಮುಕ್ತ ಜೀವರ ಭರಿತ ಜನ–
ಲೋಕಕಾಶ್ರಯ ತವ ದಿವ್ಯ ವದನಕ್ಕೆ ಶರಣು ೧೦೩

ನಿಟಿಲನೇತ್ರ ನಿರುತ ಸಕಲ ಋಷಿಗಣಯುಕ್ತ
ಭದ್ರಮೂರುತಿಯನು ಸ್ತುತಿಸುವ ತಪಲೋಕಾ–
ಶ್ರಯ ತವ ಲಲಾಟಕ್ಕೆ ಶರಣು ೧೦೪

ಚತುರಾನನು ಚತುರ ಮೂರುತಿಯನ್ನು ಸ್ತುತಿಸುತ್ತ
ಚತುರದಶ ಲೋಕಾಧಿಪತ್ಯವನ್ನು ಮಾಳ್ಪ ಸತ್ಯ–
ಲೋಕಕಾಶ್ರಯ ತವ ಶಿರಸ್ಸಿಗೆ ಶರಣು ೧೦೫

ಶೀರ್ಷ ಮೊದಲು ಪಾದಮೂಲ ಮಧ್ಯದ
ಸರ್ವ ಮಂಗಳಾಂಗೋಪಾಂಗಕ್ಕೆಲ್ಲ ಶರಣು ೧೦೬

ತತ್ತದಂಗಾಶ್ರಿತ ತತ್ತ್ವರಂತರ್ಯಾಮಿ ತತ್ತತ್
ಜಗತ್ಕಾರ್ಯ ಕಾರಣರೂಪಕ್ಕೆ ಶರಣು ೧೦೭

ಪಾಹಿ ಶ್ರೀ ವೇಣುಗೋಪಾಲ ಕೃಷ್ಣ ತವ ಶರಣು ೧೦೮

ಪಾಹಿ ಶ್ರೀ ಜಯತೀರ್ಥ ವಾಯುವಂತರ್ಗತ
ಕೃಷ್ಣಾಣತ್ಮಕ ನವನೀತಧರ ತಾಂಡವಕೃಷ್ಣ ವಿಠಲ ತವ ಶರಣು ೧೦೯

ಪಾಹಿ ಶ್ರೀ ವೇಂಕಟೇಶಾತ್ಮಕ ಸಿರಿ ಉರಗಾದ್ರಿ
ವಾಸ ವಿಠಲ ತವ ಶರಣು ೧೧೦

ಪಾಹಿಮಾಂ ಪಾಹಿ ಶ್ರೀ ವೇಂಕಟೇಶಾಭಿನ್ನ
ಉರಗಾದ್ರಿವಾಸ ವಿಠಲ ತವ ಶರಣು ಶರಣೂ ೧೧

## ೩೯

**ಶಂಕರಾಭರಣ** **ಆದಿ**

ಜಯ ಜಯ ವೆಂಕಟರಮಣ ಜಯತು ಪನ್ನಂಗ ಶಯನಾ
ಜಯತು ಭಾರ್ಗವಿ ರಮಣಾ ಜಗದಾಭಿ ರಮಣಾ ಪ

ಲೋಕಾನಾಯಕ ಸ್ವಾಮಿ ವೈಕುಂಠಾದಿಂದ ಬಂದೂ
ಏಕಾಂತವಾನಾಡಿದ ಲಕ್ಷ್ಮೀಯಾರೊಡನೇ ೧

ಧರೆಗೆ ವೈಕುಂಠಾದ ಚರ್ಯವ ತೋರುವೆನೆಂದು
ಶಿರಿಮಹಾಲಕ್ಷ್ಮಿಯೊಡನೆ ಸಂಧಿಸಿದಾನೂ ೨

ಸ್ವಾಮಿಕಾಸಾರದಲೀ ಧಾಮಾವಾ ರಚಿಸೂವೆ
ಆ ಮಹಾ ವೈಕುಂಠಾವ ಅಗಲೀ ಬಂದೂ ೩

ವತ್ಸರ ಕಾಲದಲೊಂದು ವುತ್ಸವ ಮಾಡುವೆನೆಂದು
ಇಚ್ಛೆ ಮಾಡಿದನೂ ವೆಂಕಟ ಇಂದಿರೆ ಗೂಡಿ ೪

ನವರಾತ್ರಿ ದಿವಸದಲೀ ವಿವಾಹಾ ಲಗ್ನವ ರಚಿಸೀ
ಅವನಿಯೊಳು ಡಂಗುರವನ್ನು ಹೊಯಿಶೀದ ಸ್ವಾಮೀ ೫

ಕಾಶೀ ಕರ್ನಾಟಕದ ದೇಶಾ ದೇಶದ ಜನರು
ಶ್ರೀಶಾನುತ್ಸವಕೇ ಜನರು ವದಗಿದರಾಗಾ ೬

ಹದಿನಾಲ್ಕು ಲೋಕಾದ ಪದುಮಜಾದಿಗಳೆಲ್ಲಾ
ಮದುವೆಯಾ ದಿಬ್ಬಣದಾ ಜನರು ಬಂದರಾಗಾ ೭

ಗರುಡಾ ಕಂಭದ ಸುತ್ತಾ ಪರಿಪರಿ ವೈಭವದಿಂದ
ಗಿರಿಯಾ ವೆಂಕಟಗೇ ಕಂಕಣ ಕಟ್ಟಿದರಾಗಾ ೮

ಆಗಾಮಾ ಪುರಾಣ ರಾಗಮದ್ದಳೆ ತಾಳ
ಭಾಗಾವತರು ಸುತ್ತ ಮಾಡುತಿರಲೂ ೯

ತಾಳ ತಮ್ಮಟೆ ಕಾಳೆ ಭೋರೆಂಬೋ ವಾದ್ಯಗಳೂ
ವರ ನಾರಿಯರು ಸುತ್ತಾ ಗ್ಹಾಡುತಿರಲೂ ೧೦

ಚಿನ್ನದ ಕರಿಮಣಿ ರನ್ನ ಮಂಗಳಸೂತ್ರ
ಹಿರಿಯಾ ವೆಂಕಟನು ಲಕ್ಷ್ಮಿಗೆ ಕಟ್ಟಿದ ನಗುತಾ ೧೧

ಮುತ್ತಿನಾ ಕರಿಮಣಿ ರತ್ನ ಮಂಗಳಸೂತ್ರಾ
ಸ್ವಾಮಿ ವೆಂಕಟ ಲಕ್ಷ್ಮಿಗೆ ಕಟ್ಟಿದ ನಗುತಾ ೧೨

ಅಂತರಾ ಮಾರ್ಗದೊಳೂ ನಿಂತು ದೇವತೆಗಾಳು
ಸಂತೋಷದಿಂದಲಿ ಜಯ ಜಯವೆಂದು ಪಾಡಿದರಾಗ ೧೩

ಅಂಗಾನೆ ಶ್ರೀಭೂಮಿ ರಂಗಾಮಂಟಪದೊಳಗೆ
ಭಂಗಾರಾ ಗಿರಿಯಾ ವೆಂಕಟ ವಪ್ಪಿದ ಸ್ವಾಮಿ ೧೪

ಅತಿರಸ ಮನೋಹರ ಮಿತಿಯಿಲ್ಲದ ಪದಾರ್ಥಗಳೂ
ಸತಿಯಾರೆಲ್ಲರು ಭೂಮಕೆ ತಂದು ಬಡಿಸಿದರಾಗ ೧೫

ಬೆರೆದ ನಾರಿಯರೆಲ್ಲ ಹರಿಭೂಮಾನಂತರದೀ
ಭರದಿ ವುರುಟಾಣಿಗೆ ಅಣಿಮಾಡಿದರಾಗಾ ೧೬

ಮಿತ್ರೆಲಕ್ಷ್ಮಿಗೆ ತಕ್ಕ ಹಿರಿಯರು ಪೇಳಲು
ಛಂದದಿಂದಲಿ ಅರಿಶಿನ ಕಲಸಿ ನಿಂತಳಾಗ ೧೭

ದೊಡ್ಡ ಪನ್ನಗ ನಗವಾ ಶೇರಿದ ಮಹರಾಯ
ದುಡ್ಡು ದುಡ್ಡಿಗೆ ಬಡ್ಡಿಯನ್ನು ದುಡಿವಾ ಲೋಭಿ ೧೮

ವಂಚಿಸಿ ಜನರನ್ನು ಲಂಚಾ ಲಾವಣಿ ತೆಗೆದು
ಹಿಂಚಾಸಿ ವರಕೊಡುವಾ ಹಿತದಾದೇವಾ ೧೯

ಬಡವ ಬಲ್ಲಿದರೆಂದು ಬಿಡದಾಲೆ ಅವರಿಂದ
ಮುಡುಪು ಹಾಕಿಸಿಕೊಂಡುಮುಂದಕೆ ಬಿಡುವೋ ದೇವಾ ೨೦

ಅನ್ನವೆಲ್ಲವ ಮಾರಿ ಹೊನ್ನುಕಟ್ಟುವೆಯಲ್ಲೊ
ಅನ್ನದಾನವ ಮಾಡಲೊಲ್ಲಿ ಅನ್ಯಾಕಾರಿ ೨೧

ಹೊನ್ನು ಸಾಲವ ತೆಗೆದು ಎನ್ನಾ ಕಟ್ಟಿಕೊಂಡು
ಮನ್ನೆ ಮನೆಗೆ ಭಿಕ್ಷವ ಬೇಡುವ ಮಾನವಂತಾ ೨೨

ಹೊನ್ನು ನಾಲದು ಯೆಂದು ಎನ್ನ ನಾಕುವೆ ಹೇಗೋ
ನಿನ್ನಾ ಕೃಪಣಾತನಕೆ ನಾನು ಎಣೆಗಾಣೆನೋ ೨೩

ಇಪ್ಪತ್ತು ದುಡ್ಡೀಗೆ ಶೇರು ತೀರ್ಥವ ಮಾರಿ
ದುಡ್ಡು ಕಟ್ಟಿ ಜಾಳಿಗೆ ಘಳಿಸುವ ಜಾಣ ನೀನೂ ೨೪

ಅಟ್ಟಾ ಮಡಿಕೆಯೆಲ್ಲಾ ಕುಟ್ಟಿ ನಾಮವ ಮಾಡಿ
ಘಟ್ಟಿಯಾಗಿ ಗಂಟು ಘಳಿಸುವ ಘನವಂತಾ ೨೫

ದೇಶದೊಳು ನಿಮ್ಮಂಥಾ ಆಶೆ ಉಳ್ಳವರಿಲ್ಲಾ
ಕಾಸುಕಟ್ಟಿ ಕವಡೆ ಗಂಟು ದುಡಿವ ಲೋಭಿ ೨೬

ಮಡದಿ ನಾನಿರಲಿಕ್ಕೆ ಕಡಿಮೆ ಯೇನಾಗೋದು
ಬಡತನ ನಿನಗೆ ಯಾತಕೆ ಬಂತೂ ಸ್ವಾಮೀ ೨೭

ನಾರೀಯಾ ನುಡಿ ಕೇಳಿ ವಾರೆ ನೋಟದಿ ನೋಡಿ
ಮೋರೆ ತಗ್ಗಿಸಿ ವೆಂಕಟ ಮುನಿದು ನಿಂತಾ ೨೮

ಕಡುಕೋಪಾ ಮಾಡುವರೇ ಹುಡುಗಾನೆಂತಾಡುವರೆ
ಕೊಡಲೀಯಾ ಪಿಡಿವಾರೆ ನಾನು ನುಡಿದಾ ನುಡಿಗೇ ೨೯

ಕಣ್ಣಾನೆ ಬಿಡಬ್ಯಾಡ ಬೆನ್ನ ತೋರಲಿ ಬ್ಯಾಡಾ
ಇನ್ನು ಮುಖವಾ ತಗ್ಗಿಸ ಬ್ಯಾಡ ಇತ್ತ ನೋಡೂ ೩೦

ಎನ್ನರಸಾ ಹೊನ್ನರಸಾ ಚೆನ್ನಿಗ ವೆಂಕಟರಾಯಾ
ನಿನ್ನ ಪೋಲುವರ್‍ಯಾರೊ ಜಗದೊಳು ನೀಲಾಗಾತ್ರಾ ೩೧

ಎನ್ನರಸಾ ಚೆನ್ನರಸಾ ಚೆನ್ನಿಗ ವೆಂಕಟರಮಣಾ
ನಿನ್ನ ಮುದ್ದು ಮುಖವ ತೋರೊ ಅರಿಶಿನ ಹಚ್ಚೇನು ೩೨

ಯೆನ್ನುತ ಅರಿಶಿನ ಹಚ್ಚಿ ಕುಂಕುಮವಿಟ್ಟು
ರನ್ನ ಹಾರವ ಹಾಕಿ ತಾನು ಕುಳಿತಳಾಗಾ ೩೩

ಮಂಥರಧರ ತಾನೂ ಛಂದದರಿಶಿನ ಪಿಡಿದೂ
ಇಂದಿರಾ ದೇವಿಯನ್ನು ಮಾತನಾಡಿಸಿದಾ ೩೪

ಎನ್ನರಸಿ ಹೊನ್ನರಸಿ ಚೆನ್ನಿಗ ಮಾಯಾದೇವಿ
ನಿನ್ನ ಮುದ್ದು ಮೊಖವಾನೆ ತೋರು ಅರಿಶಿನ ಹಚ್ಚೇನು ೩೫

ಛಿಡಿಯಾ ನೋಡದೆ ಇಂಥಾ  ನುಡಿಗಳಾಡಿದ ಮ್ಯಾಲೆ
ನಡುಗಿ ಮೋರೆಯ ತಗ್ಗಿಸಲಿಹುದೆ ನಾಚಿಕೆ ಯಾಕೆ ೩೬

ಭಾಗ್ಯಾದ ಮೊಬ್ಬೀಲಿ  ಬಾಗಿ ನೀ ನಡೆಯಾದೇ
ಅಗ್ಗಳಿಕೆ ಮಾತುಗಳನ್ನು ಆಡಿದೆಯಲ್ಲೇ ೩೭

ಮಿಂಚಿನಂದದಿ ಬಹಳಾ ಚಂಚಲ ಬುದ್ಧ್ಯವಳೇ
ವಂಚಿಸೂವೊಳೆ ಜಗವಾ ವಾರಿಜಾಕ್ಷೀ ೩೮

ಭಂಗಾರಾ ಮುಡುಪಿಗೆ  ಎನ್ನ ಕಂಗೊಳಿಸೀಗಾ
ಹಿಂಗಾದೆ ಮಂಕು ಮಾನವರ ಮಾಡುವುದರಿದೇ ೩೯

ಮುಡಿಗೆ ದಂಡೆಯ ಮುಡಿಶಿ  ಎಡದ ಕೈಯ್ಯಲಿ ಬ್ಯಾಗಾ
ತೊಡಕ ಕಂಚುಕ ವೆಂಕಟ ಬಿಗಿದಾ ನಗುತಾ ೪೦

ತಾಂಬೂಲಾವನೆ ಮೆದ್ದು  ಮಡದೀಯಾ ಮುಖಿಸೂಸೆ
ಇಂಬೀಲ್ಲಚ್ಚೆ ಬರೆದರಾಗ ಅತಿ ಸಂಭ್ರಮದೀ ೪೧

ತಿರುಮಾಲೇಶನು ತನ್ನ  ಮಡದೀಯಾಯನು ಎತ್ತಿ
ಭರದಿಂದಾ ತನ್ನರಮನೆಗಾಗಿ ತೆರಳಿದಾನು ೪೨

ದ್ವಾರದಾ ದಡಿಯಲ್ಲಿ  ನಾರೇರೆಲ್ಲರು ನಿಂತು
ವಾರಿಜಾಕ್ಷಿ ಪತಿಯ ಹೆಸರಾ ಹೇಳೆಂದರು ೪೩

ಕಿರುನಗೇಯಿಂದ ಲಕ್ಷ್ಮೀ  ಗಿರಿಯಾ ವೆಂಕಟನೆನಲೂ
ಹರಿಯೆ ನಿನ್ನ ರಮಣಿ ಹೆಸರ ಹೇಳೆಂದರೂ ೪೪

ಜಾತಿ ನಾಚಿಕೆ ತೊರೆದು  ಶ್ರೀ ತರುಣಿ ಎನುತಾಲೆ
ಪ್ರೀತಿಯಿಂದಲಿ ಸಿಂಹಾಸನದಿ ಕುಳಿತರಾಗಾ ೪೫

ಮತ್ತೆ ನಾರಿಯರೆಲ್ಲಾ  ಮುತ್ತಿನಾರತಿ ಪಿಡಿದೂ
ಸತ್ಯಭಾಮೆಗೆ ಜಯ ಜಯವೆಂದರಾಗಾ ೪೬

ವಿಭುವಿನ ಗುಣವನ್ನು ವಿಸ್ತರ ಪೇಳಿದ ಜನಕೆ
ಸಮಯದಂಥ ಭಾಗ್ಯವನಿತ್ತು ಸಲಹುವ ಸ್ವಾಮಿ ೪೭

ಮಂಗಳ ವೆಂಕಟರಾಯಾ ಮಂಗಳ ಮಾಧವರಾಯಾ
ಮಂಗಳ ಮಾನಸಗೇಯಾ ಮಂಗಳ ಮಾಧವರಾಯಾ ೪೮

ಧರೆಯೊಳಧಿಕನಾದ ದೊರೆ ವ್ಯಾಸಾವಿಠಲಾನು
ಪರಮ ಭಕ್ತಿ ಸುಜ್ಞಾನವನು ಪಾಲೀಸೂವಾ ೪೯

## ೪೦

**ಶಂಕರಾಭರಣ** **ಆದಿ**

ಜಯ ಜಯಾ ಶ್ರೀ ವೇಂಕಟೇಶ ಜೀಯ ಪ

ಜಯ ಶ್ರೀವೇಂಕಟೇಶ ಜೀಯ– ನೀಸ–
ಭಯಪ್ರದಾಯಕನಯ್ಯ– ॥ ಆಹಾ ॥
ಭಯಕೃದ್ಭಯನಾಶನ ನೀ ಎನ್ನ ಕೈ ಬಿಡದೆ
ಕಾಯೊ ಎನ್ನೊಡೆಯನೆ ವೇಂಕಟರಾಯ ಅ

ಮಂಕುಮಾನವನಾದ ಎನ್ನ ಮನದ
ಡೊಂಕುತಿದ್ದಿದಿ ಸ್ವಪನವನ್ನ – ನಿನ್ನ
ಅಂಕಿತದಂತೆ ನುಡಿಸೆನ್ನ– ಇನ್ನು
ಮಂಕು ಹರಿಸಿದೆ ಪ್ರಸನ್ನ– ॥ಆಹಾ॥
ಬಿಂಕದಿಂದ ಇಹ ಶಂಕೆ ಹರಿಸಿ ನಿನ್ನ
ಕಿಂಕರ ಕಿಂಕರ ಕಿಂಕರನೆನಿಸಿದೆ ೧

ಹಿಂದನೇಕ ಪರಿಯಿಂದ ಮನ–
ಬಂದಂತೆ ನುಡಿಸಿದ್ದರಿಂದ – ತಂದೆ
ಮುದ್ದುಮೋಹನ ವಿಠ್ಠಲಾನಂದ – ಪೊಂದಿ
ಸಂದೇಹ ಹರಿಸಿದ ಚಂದ – ॥ ಆಹಾ ॥
ಇಂದು ಮುಂದು ಎಂದೆಂದಿಗೂ ನೀ ಭವ
ಬಂಧ ಹರಿಸಿ ಕಾಯಬೇಕು ಇಂದಿರೆರಮಣ ೨

ತ್ವರಿತಾದಿ ದಯಮಾಡೊ ಹರಿಯೇ – ನೀನೆ
ನಿರುತ ಎನ್ನಯ ಕುಲದ ದೊರೆಯೇ–ಭಕ್ತ
ಪರಿಪಾಲ ಮೋಕ್ಷದ ಹರಿಯೇ – ನಿನ್ನ
ಹೊರತು ರಕ್ಷಕರ ನಾನರಿಯೆ– ॥ ಆಹಾ ॥

ಪರಮಕರುಣಿ ಶ್ರೀ ವೇಂಕಟೇಶಾಭಿನ್ನ
ಉರಗಾದ್ರಿವಾಸವಿಠ್ಠಲ ಜಗದೀಶನೆ ೩

## ೪೧

ಶಂಕರಾಭರಣ ಝಂಪೆ

ಜಯಭೋ, ಜಯಭೋ, ಜಯ ವೆಂಕಟೇಶ ಪ್ರಭೋ
ಜಯ ಕರ್ತಾ, ಭಯ ಹರ್ತಾಽ ಭಯದಾಯಕ ಮೂರ್ತೆ ಪ

ಫಣಿಗಿರಿವರ ಫಣಮಂದಿರ ಪ್ರಣತ ಮನೋಹರ
ಘನಸದ್ಗುಣಗಣಪೂರ್ಣ, ಘನಶಾಮಲವರ್ಣ
ಮನಮಾನಸ ಮುನಿತಾಪಸ ಮನೋಮಾನಸ ಹಂಸ
ದನುಸುತ ಹರ, ಧೇನು ಸಂಹರ, ದಿನಮಣೀಶ ರುಚಿರ ೧

ವನಜಾಕ್ಷಾಽವನೀಜಾಂತಕ ವನಜಾಸನಜನಕ
ಕನಕಾಕ್ಷಹ ಕನಕಾಲಯ ಕನಕಸ್ತ್ರೀಪ್ರೀಯಾ
ವನಭ್ರಮಣಾಽವನಿರಮಣಾ ವಿನತಾತ್ಮಜ ಗಮನಾ
ಅನಿಮಿತ್ತಜ ಅನುಸೂಯಜ ಅನಿಮಿಷ ಇಂದ್ರಾನುಜಾ ೨

ಅರಿದರಧರ, ಅರಿಪರಿಹರ, ಅರುಣಾಂಬರಧರ
ಚಿರಮಣಿ ರುಚಿರಾಭರಣನು ಚರಸುರತರು ವೀರ
ಸುರ ಪರಮಾಪ್ತನೇ ಸಾಸಿರ ಕ್ರೀಡಾಶ್ಚರ್ಯಾಗಾರಾ
ಕಲಿ ಕಲುಷಹರ ಕರುಣಾಕರ ಪ್ರಸನ್ವೆಂಕಟೇಶ್ವರ ೩

## ೪೨

ಜೈ ಜೈ ವೆಂಕಟರಾಯ ಸಲಹು ಗಡ ಪ

ರಾಯಚೂರು ಒಡೆಯ ಮೊರೆಯ ಕಾಯೊ ಕರುಣಿ ಶುಭ
ಕಾಯ ಐಹಿಕ ಮಹಮಾಯವ ಬಿಡಿಸಯ್ಯ ಅ

ಪಂಕಜಾಕ್ಷ ಹರಿ ಸಂಕರುಷಣ ಭವ
ಸಂಕಟ ಪರಿಹಾರ ಶುಭಕರ

ಶಂಖಚಕ್ರಧರ ಮಂಜುದನುಜಹರ
ಕಿಂಕರರಘದೂರ
ಶಂಖಸುರನ ಬಲು ಜಿಂಕಮುರಿದ
ಬಲದಂಕ ಅದಟವೀರ ಶೂರ
ಅಂಕುರಿಸೆನ್ನೊಳಾತಂಕತಾರದೆ ಪೊರೆ
ಲಂಕಾ ವಿಜಯಕಾರ ೧

ದಾತ ಮೂರುಜಗನಾಥ ಪರಮ ಅ
ಧ್ಭೂತ ಮಹಿಮೆಗಾರ ಚದುರ
ಪ್ರೀತ ಭಕುತ ಭವಭೀತರಹಿತ ಮಾಯಾ
ಪೂತನಿ ಸಂಹಾರ
ನೀತಿಕೋವಿದ ವಿಧಿತಾತ ಅಸಮ ವಿ
ಖ್ಯಾತ ಕರುಣನಿಕರ ಸುಂದರ
ಘಾತಿಸಿ ಕಂಸನ ಮಾತಾಪಿತರ ಕಾಯ್ದ
ಪಾತಕ ನಿವಾರ ೨

ಬಾಲನಂತರಿಯದೆ ಆಲಯಗಳ ಪೊಕ್ಕು
ಪಾಲು ಮೊಸರು ಕದಿದ ಸವಿದ
ಬಾಲೆರುಡುವ ದುಕೂಲ ಕದಿದು ತಾ
ಮೇಲು ಮರವನೇರ್ದ
ಕಾಲಿಂದಿ ಧುಮುಕಿದ ಕಾಳಿಯಮೆಟ್ಟಿದ
ಕಾಳರಕ್ಕಸರೊದೆದ ಸದೆದ ಲೀಲಾ
ಜಾಲ ನಂದ ಬಾಲನಾಗಿ ಬಲು
ಬಾಲಲೀಲೆಗೈದ ೩

ಪರಮ ಪರಾತ್ಪರ ಪರಮಪುರುಷ ಸಿರಿ
ಪರಮ ಪಂಚಪ್ರಾಣ ದುರಿತ
ಹರಣ ಜನನ ಮರಣ್ದೂರಸುರವಿನಮಿತ
ಧರಣೆಗಧಿಕ ತ್ರಾಣ
ಕರಿಧ್ರುವರಿರ್ವರನು ಭರದಿ ನೀಡಿ ನಿಂತು
ಪೊರೆದ ಪಾಂಚಾಲೀಮಾನ ಜಾಣ
ಶರಣಜನರ ಮೈನೆರಳು ನಿಗಮಾತೀತ
ನಿರುಪಮ ನಿರಂಜನ ೪

ಸೋಮವದನ ಸತ್ಯಭಾಮಾರಮಣ ಸುಖ
ದಾಮ ಸುಜನಹೃದಯನಿಲಯ
ಕಾಮಜನಕ ಪುಣ್ಯನಾಮ ರಕ್ಕಸಕುಲ
ಭೀಮ ಪಾಲಿಸಭಯ
ಶಾಮವರ್ಣ ಮಮಸ್ವಾಮಿ ಭಜಿಪೆ ಶ್ರೀ
ರಾಮಪಿಡಿಯೋಕಯ್ಯ ಸದಯ
ಕಾಮಿತ ವರ ಸುಪ್ರೇಮದಿ ಇತ್ತೆನ್ನ
ಪ್ರೇಮದುದ್ಧರಿಸಯ್ಯ ೫

೪೩

ಜೈ ತಿರುಪತಿ ವೆಂಕಟರಮಣ
ಕಿಂಕರಜನ ಮಹ ಸಂಕಟಹರ ಜೈ ಪ

ಶಂಖಚಕ್ರಧರ ಮಂಕುದಾನವಹರ
ಪಂಕಜಪಾಣಿಯಕಳಂಕ ಮಹಿಮ ಜೈ ೧

ಸೃಷ್ಟಿಮೇಲೆ ಪ್ರತಿಷ್ಠನಾಗಿ ಮಹ
ಬೆಟ್ಟವ ಭೂವೈಕುಂಠವೆನಿಸಿದಿ ಜೈ ೨

ತಪ್ಪದೆ ಭಕುತರಿಂ ಕಪ್ಪಗೊಳ್ಳುತ ನೀ
ಅಪ್ಪಿಕೊಂಡರಿವೀವಿ ಅಪ್ಪ ತಿಮ್ಮಪ್ಪ ಜೈ ೩

ಕೋಟಿ ಕೋಟಿ ಮಹತ್ವ ಸಾಟಿಗಾಣದೆ ತೋರಿ
ಆಟವಾಡುವಿ ಜಗನಾಟಗಾರನೆ ಜೈ ೪

ಕಪ್ಪು ವರ್ಣದಿಂದೊಪ್ಪುವಿ ಸಿರಿಯಿಂ
ದಪ್ಪಿಕೋ ದಯದೆನ್ನಪ್ಪ ಮುರಾರಿ ಜೈ ೫

ಬೇಡಿದ ವರಗಳ ನೀಡಿದೆ ದಯದಿ ಹರಿ
ಗಾಢಮಹಿಮೆ ಇಹ್ಯನಾಡಿಗರುಹಿದಿ ಜೈ ೬

ಕೋರಿದವರ ಮನಸಾರ ವರವನೀಡಿ
ಧಾರುಣಿಯೊಳಿದ್ಯಪಾರ ಮಹಿಮೆ ಜೈ ೭

ಲಕ್ಷ್ಮೀಸಮೇತನಾಗಿ ಲಕ್ಷ್ಯದಿಂ ಮೂಲೋಕ
ಕುಕ್ಷಿಯೋಳ್ ಧರಿಸಿ ನೀ ರಕ್ಷಿಸಿದೆ ಜೈ ೮

ಭಕ್ತವತ್ಸಲ ನಿನ್ನ ಭಕ್ತನೆನಿಸಿ ಎನಗೆ
ಮುಕ್ತಿ ಸಂಪದ ದೇ ಕರ್ತು ಶ್ರೀರಾಮ ಜೈ ೯

## ೪೪

**ಬ್ಯಾಗಡೆ** **ಆದಿ**

ತಪ್ಪುಗಳೆಲ್ಲ ನೀನೊಪ್ಪಿಕೊಳ್ಳೊ ನ
ಮ್ಮಪ್ಪ ಕಾಯಬೇಕು ತಿಮ್ಮಪ್ಪ ನೀನೆ ಪ

ಸತಿಸುತರಿಗೆ ಸಂಸಾರ ಬಲೆಗೆ ಅತಿ
ಮತಿಹೀನನಾಗಿ ಸಿಕ್ಕಿ ಆಸೆಗಳಿಗೆ
ಮಿತಿಗಾಣೆನಯ್ಯ ಎನ್ನ ಪಾಪಗಳಿಗೆ ಮುಂದೆ
ಗತಿ ಯಾವುದಯ್ಯ ಶ್ರೀಪತಿ ಎನಗೆ ೧

ಬಿಸಿಲು ಮಳೆ ಬಿರುಗಾಳಿಯೊಳು ಬಲು
ದೆಸೆಗೆಟ್ಟು ತಿರುಗಿ ದೇಶ ದೇಶಗಳು
ಹಸಿವು ತೃಷೆಗಳು ಬಹು ಬಾಧಿಸಲು ಬಹು
ಹುಸಿಯನಾಡಿದೆನಯ್ಯ ಹುಟ್ಟು ಮೊದಲು ೨

ಸ್ನಾನ ಸಂಧ್ಯಾನವನೊಂದನರಿಯೆ ಅನ್ನ
ಪಾನಗಳನು ನಾನೊಮ್ಮೆ ಮರೆಯೆ
ಹೀನರ ಸಂಗ ಎಂದೆಂದು ತೊರೆಯೆ ಸು
ಜ್ಞಾನಿಗಳನಿತ್ತ ಬಾ ಎಂದು ಕರೆಯೆ ೩

ಜಪತಪದಲ್ಲಿ ರೀತಿ ಭಾಷೆಯಿಲ್ಲ ಎ
ನ್ನಪರಾಧಗಳಿಗಿನ್ನು ಎಣಿಕೆಯಿಲ್ಲ
ಚಪಲತನದಿ ಕಾಲ ಕಳೆದೆನಲ್ಲ ಸ್ವಾಮಿ
ಕಪಟನಾಟಕ ನೀನೆ ಬಲ್ಲೆಯಲ್ಲ ೪

ಗಂಗೆ ಅಗ್ರೋದಕಗಳ ತಂದು ಸ್ನಾ
ನಂಗಳ ಮಾಡಿಸಲಿಲ್ಲ ಎಂದೂ
ಹೊಂಗ್ಯಾದಿಗೆ ಪುಷ್ಪವನೊಂದು ಶ್ರೀ
ರಂಗಗರ್ಪಿಸಲಿಲ್ಲ ಕಾಯೊ ಬಂದು ೫

ಗಂಧಾಕ್ಷತೆ ಪುಷ್ಪಗಳಿಂದ ದಿವ್ಯ
ಒಂದು ದಳ ಶ್ರೀ ತುಳಸಿಯಿಂದ
ಇಂದಿರೇಶನ ಅರ್ಚಿಸದನೆಂದೂ ಬಹು
ನೊಂದು ದೂರಾದೆ ಸದ್ಗತಿಯಿಂದ ೬

ಪೀತಾಂಬರಾದಿ ವಸ್ತ್ರಗಳಿಂದ ದಿವ್ಯ
ನೂತನವಾದ ಆಭರಣದಿಂದ
ಪ್ರೀತಿಪಡಿಸಲಿಲ್ಲಾದ್ದರಿಂದ ಹೇ
ಸೀತಾಪತೇ ಕೃಷ್ಣ ಹರಿ ಮುಕುಂದ ೭

ಧೂಪಾರತಿಯ ನಾ ಮಾಡಲಿಲ್ಲ ಒಂದು
ದೀಪವನಾದರು ಹಚ್ಚಲಿಲ್ಲ
ಈ ಪರಿ ಕಳೆಯಿತೀ ಜನ್ಮವೆಲ್ಲ ದೇವ
ಆಪದ್ಬಾಂಧವ ಕಾಯೊ ಲಕ್ಷ್ಮೀನಲ್ಲ ೮

ಸೋಪಸ್ಕರವನು ಒಂದು ಮಾಡದೆ ಎಲ್ಲ
ಗೋಪಾಲಕೃಷ್ಣಗೆ ಅರ್ಪಿಸದೆ
ಪಾಪಕಾರ್ಯಕ್ಕೆ ನಾ ಗುರಿಯಾದೆ ಸ್ವಾಮಿ
ಶ್ರೀಪತಿ ಕಾಯೊ ಎನ್ನ ಕೈಯ ಬಿಡದೆ ೯

ಪಾಯಸ ಪಂಚ ಭಕ್ಷ್ಯಗಳಿಂದ ಬಲು
ಆಯತವಾದ ಶಾಕಗಳಿಂದ
ತೋಯ ಶಾಲ್ಯಾನ್ನ ಗೋಘೃತದಿಂದ ಕೃಷ್ಣ
ರಾಯನನರ್ಚಿಸಲಿಲ್ಲ ಭಕ್ತಿಯಿಂದ ೧೦

ಮಂಗಳಾರತಿಯನು ಮಾಡಲಿಲ್ಲ ಜಯ
ಮಂಗಳವೆಂದು ನಾ ಪಾಡಲಿಲ್ಲ
ಕಂಗಳಿಂದಲಿ ನಿನ್ನ ನೋಡಲಿಲ್ಲ ಮುದ್ದು
ರಂಗನೆ ಬಾ ಎಂದು ಬೇಡಲಿಲ್ಲ ೧೧

ಹರಿಯ ಪ್ರದಕ್ಷಿಣೆ ಮಾಡಲಿಲ್ಲ ನರ
ಹರಿಯ ಪಾದಕೆ ನಾ ಬೀಳಲಿಲ್ಲ

ಹರಿದಿನದುಪವಾಸ ಮಾಡಲಿಲ್ಲ
ಶ್ರೀಹರಿದಾಸರೊಡನೆ ನಾ ಕೂಡಲಿಲ್ಲ ೧೨

ಅತಿಥಿಗಳೆಂದು ಬಂದರೆ ಮನೆಗೆ ನಾ
ಗತಿಯಿಲ್ಲ ಕೂಡದು ಎಂದೆ
ಯತಿಗಳ ಕೂಡ ನಿಂದಿಸಿದೆ ಕೊನೆಗೆ ಶ್ರೀ
ಪತಿ ದೃಷ್ಟಿಯಿಡು ಈ ಪಾಪಿ ಕಡೆಗೆ ೧೩

ಹೋಮಾರ್ಚನೆ ಔಪಾಸನೆಯೆಲ್ಲ ಎಂದೂ
ನೇಮದಿಂದಲಿ ನಾ ಮಾಡಲಿಲ್ಲ
ಕಾಮಾತುರದಿ ಕಂಡ ಕಂಡಲ್ಲೆಲ್ಲ ರಾಮ
ಭ್ರಾಮಕನಾಗಿ ತಿರುಗಿದೆನಲ್ಲ ೧೪

ಎಷ್ಟು ಹೇಳಲಿ ಅವಗುಣಗಳೆಲ್ಲ ಅವು
ಅಷ್ಟು ಇಷ್ಟು ಎಂದು ಎಣಿಕೆಯಿಲ್ಲ
ದೃಷ್ಟಿಯಿಂದಲಿ ನೋಡೋ ದೀನವತ್ಸಲ ಸರ್ವ
ಸೃಷ್ಟಿಗೊಡೆಯ ಪುರಂದರವಿಠಲ ೧೫

## ೪೫

**ನಾಟ** **ಧ್ರುವ**

ತಿಮ್ಮಯ್ಯಾ ನಿನ್ನ ಪಾದವ ನಮ್ಮೈಸಿದೆನೊ ನಾನು
ಸುಮ್ಮನಿರದಿರು ರಮ್ಮೆಯರಸಾ
ನಮ್ಮದು ಎಂದೆಂದು ಈ ಮನದಲಿ ಬಲು
ಹಮ್ಮಲಿ ತಿರಿಗಿದೆ ಹಿಮ್ಮಟ್ಟಿದೆ
ಹೆಮ್ಮನೆ ಹಿತ್ತಲಿ ಹೆಮ್ಮಕ್ಕಳ ಹೊನ್ನು
ಹಮ್ಮೈಣವುಳ ಸಂಭ್ರಮದಲ್ಲಿ
ಒಮ್ಮ್ಯಾದರೂ ನಿನ್ನ ನೆಮ್ಮದೆ ಆವಾಗ
ವಿಮ್ಮಡಿ ದುಷ್ಕರ್ಮ ರಮ್ಮಿಸಿದೆ
ಉಮ್ಮಡಿಕೆಯಿಂದ ಹಮ್ಮತಿಯೊಳಗಿದ್ದು
ಗಿಮ್ಮನೆ ಸುತ್ತಿದೆ ಮಮ್ಮಾಡಿಯಲಿ
ನಮ್ಮಯ್ಯಾ ಬ್ರಾಹ್ಮಣಪ್ರಿಯ ವಿಜಯವಿಠಲ
ದಮ್ಮಯ್ಯಾ ನಮಿಸುವೆ ಎಮ್ಮನುದ್ಧರಿಸೊ ೧

ಮಟ್ಟ

ನಿನ್ನ ಚರಣ ಮೋಹನ್ನ ಚರಣ ನಿನ್ನ ಚರಣ ಸಂಪನ್ನ ಚರಣ
ನಿನ್ನ ಚರಣ ಒಲುವಂತಚರಣ ನಿನ್ನ ಚರಣ ಪ್ರಸನ್ನ ಚರಣ
ನಿನ್ನ ಚರಣ ರತುನ್ನ ಚರಣ ನಿನ್ನ ಚರಣ ಪಾವನ್ನ ಚರಣ
ವನ್ನು ಧ್ಯಾನಿಸಲು ಎನ್ನಘಪಾಶ ಕಣ್ಣನ ಕುಣಿಕೆ
ತನ್ನಿಂದಲಿ ತಾನೆ ಭಿನ್ನವಾಗುವದು
ಅನಂತರೂಪ ವಿಜಯವಿಠಲ
ಕಣ್ಣಿಗೆ ತೋರೊ ನಿನ್ನ ಚರಣ ೨

ತ್ರಿವಿಡಿ

ಜಗದೊಳಗುಳ್ಳ ನದಿಗಳು ಕ್ಷೇತ್ರಂಗಳು
ಗಗನ ನಾಗಲೋಕದಲ್ಲಿದ್ದವೊ
ಅಗಣಿತಮಹಿಮ ನಿನ್ನುಂಗರಾಶ್ರಯವ ತೊ
ಲಗದೆ ಮಾಡಿಕೊಂಡಿಪ್ಪದೆಂದು
ನಿಗಮತತಿಗಳು ಪೊಗಳುತಲಿವೆ ಹಿಂ
ದೆಗಿಯದೆ ಮನಬಲು ಉಬ್ಬಿನಲ್ಲಿ
ಭಾಗಘ್ನನಾಮ ಸಿರಿ ವಿಜಯವಿಠಲ ನಾನು
ಮಿಗಿಲಾವದು ಕಾಣೆ ನಿನ್ನ ಪಾದವಲ್ಲದೆ ೩

ಅಟ್ಟ

ಮೂರುವರೆ ಕೋಟಿ ತೀರಥದಲ್ಲಿ ಪೋಗೆ
ವಾರವಾರ ಒಂದೆಸಾರಿಗೆಯಲಿ ಮುನ್ನಾರು ಕಲ್ಪದಲ್ಲಿ
ಮೀರದೆ ಸ್ನಾನಾದಿ ಪೂರೈಸಿ ಮಾಡಲು
ಧಾರುಣಿ ಸುರನಾಗಿ ನಾರಾಯಣನ ಶೃಂ
ಗಾರದ ಪಾದವ ಧಾರಣೆಯಿಂದಲಿ ಸಾರಿದ ಮಾತುರ
(ತೀರಿಥಗಳಿಗೀಗ) ಪಾರ ಫಲವುಂಟು
ಆರಾದರು ಸಾರಲೋಪರೊ ಶ್ರೀ
ನಾರಾಯಣನ ವಿಸ್ತಾರ ಮಂಗಳವಾರ್ತಿ
ಕೀರುತಿ ಸತ್ಕೀರ್ತಿ ವಿಜಯವಿಠಲ ನಿನ್ನ
ಶೇರಿದೆ ಎನ್ನಯಭಾರ ವಿನ್ನಾರದು ೪

ಆದಿ

ಅಚ್ಯುತ ನಿನ್ನ ಚರಣ ನಿಚ್ಚಬಿಡದೆ ಸ್ಮರಣೆ ಮಾಡೆ
ಬೆಚ್ಚಿಸಿದ್ದ ಪಾಪಗಳು ಕೊಚ್ಚಿ ಹರಿದುಪೋಗುವವು
ಅಚ್ಚಗತಿಗೆ ನೆನದಾಗ ನಿಚ್ಚಣಿಕೆ ಎನಿಸುವದು
ಅಚ್ಯುತ ಅಚ್ಯುತ ನಿನ್ನ ನೆಚ್ಚದಾಗದೆ ಬರಿದೆ ಪೋಪೆ
ಅಚ್ಚದೈವ ವಿಜಯವಿಠಲ ಬಚ್ಚಲಗಲ್ಲನು ಮಾಡಿ
ಮೆಚ್ಚಿನಿಂದ ನಿನ್ನ ನಿತ್ಯಮೆಚ್ಚಿ ಭಜಿಸುವಂತೆ ನೋಡೊ ೫

ಜತೆ

ತೀರ್ಥಾದಿಗಳು ನಿನ್ನ ಪಾದದಲ್ಲಿ ಉಂಟಯ್ಯಾ
ಅರ್ಥಾ ವಿಜಯವಿಠಲ ನಿನ್ನ ಚರಣ ಬಿಡೆನಯ್ಯಾ

## ೪೬

ಖರಹರಪ್ರಿಯ ಏಕ

ತಿರುಪತಿ ವೆಂಕಟರಮಣ, ನಿನಗೇತಕೆ ಬಾರದು ಕರುಣ ಪ

ನಂಬಿದೆ ನಿನ್ನಯ ಚರಣ, ಪರಿಪಾಲಿಸಬೇಕೊ ಕರುಣ ಅ

ಅಳಗಿರಿಯಿಂದಲಿ ಬಂದಾ ಸ್ವಾಮಿ
ಅಂಜನಗಿರಿಯಲಿ ನಿಂದ
ಕೊಳಲೂದೊ ಧ್ವನಿ ಚಂದಾ ನಮ್ಮ
ಕುಂಡಲರಾಯ ಮುಕುಂದ ೧

ಬೇಟೆಯಾಡುತ ಬಂದಾ ಸ್ವಾಮಿ
ಬೆಟ್ಟದ ಮೇಲೆ ನಿಂದಾ
ನೀಟುಗಾರ ಗೋವಿಂದಾ ಅಲ್ಲಿ
ಜೇನು ಸಕ್ಕರೆಯನು ತಿಂದಾ ೨

ಮೂಡಲಗಿರಿಯಲಿ ನಿಂತ ಮುದ್ದು
ವೆಂಕಟಪತಿ ಬಲವಂತ
ಈಡಿಲ್ಲ ನಿನಗೆ ಶ್ರೀಕಾಂತಾ ಈ
ರೇಳು ಲೋಕಕನಂತ ೩

ಅಡಿದರೆ ಸ್ಥಿರವಪ್ಪ ಅ
ಬದ್ಧಗಳಾಡಲು ಒಪ್ಪ
ಬೇಡಿದ ವರಗಳನಿಪ್ಪ ನಮ್ಮ
ಮೂಡಲಗಿರಿ ತಿಮ್ಮಪ್ಪ ೪

ಅಪ್ಪವು ಅತಿರಸ ಮೆದ್ದ ಸ್ವಾಮಿ
ಅಸುರರ ಕಾಲಲಿ ಒದ್ದ
ಸತಿಯರ ಕೂಡಾಡುತಲಿದ್ದ ಸ್ವಾಮಿ
ಸಕಲ ದುರ್ಜನರನು ಗೆದ್ದ ೫

ಬಗೆಬಗೆ ಭಕ್ಷ್ಯ ಪರಮಾನ್ನ ನಾನಾ
ಬಗೆಯ ಸಕಲ ಶಾಲ್ಯಾನ್ನ
ಬಗೆಬಗೆ ಸೊಬಗು ಮೋಹನ್ನ ನಮ್ಮ
ನಗೆಮುಖದ ಪ್ರಸನ್ನ ೬

ಕಾಶೀ ರಾಮೇಶ್ವರದಿಂದ ಅಲ್ಲಿ
ಕಾಣಿಕೆ ಬರುವುದೆ ಚಂದ
ದಾಸರ ಕೂಡೆ ಗೋವಿಂದ ಅಲ್ಲಿ
ದಾರಿ ನಡೆವುದೇ ಚೆಂದ ೭

ಎಲ್ಲ ದೇವರ ಗಂಡ ಅವ
ಚಿಲ್ಲರೆ ದೈವರ ಮಿಂಡ
ಬಲ್ಲಿದರಿಗೆ ಉದ್ದಂಡ ಶಿವನ
ಬಿಲ್ಲ ಮುರಿದ ಪ್ರಚಂಡ ೮

ಕಾಸು ತಪ್ಪಿದರೆ ಪಟ್ಟಿ ಬಡ್ಡಿ
ಕಾಸುಬಿಡದೆ ಗಂಟು ಕಟ್ಟಿ
ದಾಸನೆಂದರೆ ಬಿಡ ಗಟ್ಟಿ ನಮ್ಮ
ಕೇಸಕ್ಕಿ ತಿಮ್ಮಪ್ಪ ಸೆಟ್ಟಿ ೯

ದಾಸರ ಕಂಡರೆ ಪ್ರಾಣ ತಾ
ಧರೆಯೊಳಗಧಿಕ ಪ್ರವೀಣ
ದ್ವೇಷಿಯ ಗಂಟಲ ಗಾಣ ನಮ್ಮ
ದೇವಗೆ ನಿತ್ಯಕಲ್ಯಾಣ ೧೦

ಪೋಣಿಸ ಹೋಗುವನಲ್ಲಯ್ಯ ಒಂದು
ಕಾಸಿಗೆ ಒಡ್ಡುವ ಕೈಯ
ಏಸು ಮಹಿಮಗಾರನಯ್ಯ ನಮ್ಮ
ವಾಸುದೇವ ತಿಮ್ಮಯ್ಯ ೧೧

ಚಿತ್ತವಧಾನ ಪರಾಕು ನಿನ್ನ
ಚಿತ್ತದ ದಯವೊಂದೆ ಸಾಕು
ಸತ್ಯವಾಹಿನಿ ನಿನ್ನ ವಾಕು
ನೀನು ಸಕಲ ಜನರಿಗೆ ಬೇಕು ೧೨

ಅಲ್ಲಲ್ಲಿ ಪರಿಷೆಯ ಗುಂಪು ಮ
ತ್ತಲ್ಲಲ್ಲಿ ತೋಪಿನ ತಂಪು
ಅಲ್ಲಲ್ಲಿ ಸೊಗಸಿನ ಸೊಂಪು ಮ
ತ್ತಲ್ಲಲ್ಲಿ ಪರಿಮಳದಿಂಪು ೧೩

ಅಲ್ಲಲ್ಲಿ ಜನಗಳ ಕೂಟ ಮ
ತ್ತಲ್ಲಲ್ಲಿ ಬ್ರಾಹ್ಮಣರೂಟ
ಅಲ್ಲಲ್ಲಿ ಪಿಡಿದ ಕೋಲಾಟ ಮ
ತ್ತಲ್ಲಿಂದ ಊರಿಗೆ ಓಟ ೧೪

ಪಾಪ ವಿನಾಶಿನಿ ಸ್ನಾನ ಹರಿ
ಪಾದೋದಕವೇ ಪಾನ
ಕೋಪತಾಪಗಳ ನಿಧಾನ ನಮ್ಮ
ಪುರಂದರವಿಠಲನ ಧ್ಯಾನ ೧೫

೪೭

ಸಾವೇರಿ ಅಟ್ಟ

ದಣಿಯ ನೋಡಿದೆನೋ ವೆಂಕಟನ, ಮನ ಪ

ದಣಿಯ ನೋಡಿದೆ ಶಿಖಾಮಣಿಯ ನಿರ್ಮಲನ ಅ

ಕೇಸಕ್ಕಿ ಅನ್ನ ತಿಂಬುವನ, ಬಡ್ಡಿ
ಕಾಸು ಬಿಡದೆ ಹೊನ್ನು ಬಳಸಿಕೊಂಬುವನ

ದೋಸೆ ಅನ್ನವ ಮಾರಿಸುವನ, ತನ್ನ
ದಾಸರ ಮೇಳದಿ ಕುಣಿದಾಡುತಿಹನ ೧

ಗಂಟೆಸೊಲ್ಲಿಯ ಪೊದ್ದಿಹನ, ಹೊರ
ಹೊಂಟು ಹೋಗಿ ಬೇಟೆಯಾಡುತಲಿಹನ
ಘಂಟೆ ನಾದಕೆ ಒಲಿಯುವನ, ಭೂ ವೈ
ಕುಂಠವಿದೆಂದು ಹಸ್ತವ ತೋರಿದವನ ೨

ಬೆಟ್ಟದೊಳಗೆ ಇರುತಿಹನ, ಮನ
ಮುಟ್ಟಿ ಭಜಿಪ ಭಕುತರಿಗೊಲಿದವನ
ಕೊಟ್ಟ ವರವ ತಪ್ಪದವನ, ಈ
ಸೃಷ್ಟಿಗಧಿಕ ಪುರಂದರವಿಠಲನ ೩

## ೪೮

**ತೋಡಿ** **ಅಟ್ಟ**

ದಾಸ ಶೇಷಾದ್ರಿವಾಸ ತಿಮ್ಮಪ್ಪನ
ದಾಸರನ ಕರೆದೊಯ್ದು
ಸಾಸಿರನಾಮ ವಿಲಾಸಮೂರ್ತಿಯ
ಲೇಸಾಗಿ ತೋರೆನಗೆ ಪ

ಬೆರಳು ಇಲ್ಲದ ಕೈಯೊಳುಂಡು ಜೀವಿಸುವನ
ಶಿರದಲಂದದ ದೇವನ
ಉರುವ ಶಾಪಕೆ ತಾನು ಕಿರಿದಾಗಿ ಇರುವನ
ಶಿರದೊಳು ಧರಿಸಿದವನ
ಕೊರಳ ಮಾಲೆಯ ಪೆಸರೊಪ್ಪಿದ ಗಿರಿಯೊಳು
ಸ್ಥಿರವಾಗಿ ನೆಲಸಿಪ್ಪನ
ಕರುಣವಾರಿಧಿ ವೆಂಕಟೇಶನ ಚರಣವ
ಕರೆದೊಯ್ದು ತೋರೆನಗೆ ೧

ವಾರಿಯೊಳುದಿಸಿದ ನಾರಿಯ ಮಧ್ಯದಿ
ಏರಿಯೆ ಕುಳಿತವನ

ವಾರಿಜವದನದಿ ತೋರಿದ ಸಾರದ
ಮೂರೊಂದು ಪೆಸರವನ
ಮೇರುವಿನಗ್ರದಿ ಊರಿದ ಚರಣವ
ಸಾರಿದವರ ಜೀವನ
ಊರಿಗೆ ಕರೆದೊಯ್ದು ಶ್ರೀ ವೆಂಕಟೇಶ ಪ
ದಾರವಿಂದವ ತೋರೆನಗೆ ೨

ಸೋತ ಮಾನಿನಿಯೊಳು ಜಾತವಾಗಿಯೆ ಮೇಲೆ
ಮಾತೆಯ ಸಲಹಿದವನ
ನೀತಿ ತಪ್ಪಿಯೆ ನಡೆ ವಾತಭಕ್ಷಕರನ್ನು
ಘಾತಿಸಿ ತರಿದವನ
ನೂತನವಾಗಿಹ ನಾಮ ಶೈಲದ ಮೇಲೆ
ಕಾತರದೊಳು ನಿಂತವನ
ಪಾತಕನಾಶನ ಶ್ರೀ ವೇಂಕಟೇಶನ
ರೀತಿಯ ತೋರೆನಗೆ ೩

ಋಷಿಯ ಮಕ್ಕಳಿಗೆಲ್ಲ ಹಸಿವಿಗೆ ಗುರಿಯಾಗಿ
ವಶತಪ್ಪಿ ನಡೆದವಳ
ಬಸಿರೊಳಗುದಿಸಿಯೆ ಬಿಸಿಯನೆಲ್ಲವ ತಿಂದು
ಎಸೆವಂಥ ಮಹವೀರನ
ಪೆಸರೊಳಗೊಪ್ಪಿದ ಹಸನಾದ ಗಿರಿಯೊಳು
ಕುಶಲದಿ ನಿಂತವನ
ನಸುಮುದ್ದು ಶ್ರೀ ವೇಂಕಟೇಶನ ಚರಣದ
ಬಿಸರುಹ ತೋರೆನಗೆ ೪

ಪಾದ ನಾಲ್ಕನು ಮೇದಿನಿಯೊಳಗೂರಿಯೆ
ಆದರಿಸುತ ಬಪ್ಪ ಮೇ
ಲಾದ ಪಾದವ ನಾಲ್ಕು ಅಂತರಿಕ್ಷದ ಮೇಲೆ
ಕಾದುಕೊಳ್ಳುತಲಿಪ್ಪನ
ಆದಿಯ ನಾಮಕ್ಕೆ ಅದ್ರಿಯನೊಡಗೊಂಡು
ಹಾದಿಯನಿತ್ತವನ
ಸಾಧಿಸಿ ನಿಂತಿಹ ಶ್ರೀ ವೇಂಕಟೇಶನ
ಪಾದವ ತೋರೆನಗೆ ೫

ಆದಿನಾರಾಯಣನೆಂಬ ಪರ್ವತವನ್ನು
ಭೇದಿಸಿ ನಿಂತವನ
ಸಾಧಿಸಿ ಮುಂದಣ ವೇಂಕಟಾದ್ರಿಯ ಮೇಲೆ
ಪಾದವನೂರಿದನ
ಮೇದಿನಿಯೊಳಗುಳ್ಳ ಸಾಧು ಭಕ್ತರನೆಲ್ಲ
ಕಾದುಕೊಳುತಲಿಪ್ಪ ವಿ
ನೋದ ಮೂರುತಿಯಾದ ಶ್ರೀ ವೇಂಕಟೇಶನ
ಪಾದವ ತೋರೆನಗೆ ೬

ಅತ್ತೆಯ ವರಸೆಯ ಮತ್ತೆ ಅಳಿಯಗಾದ
ಪುತ್ರಿಯ ತಂದವನ
ಉತ್ತಮವಾಗಿಹ ಮಗಳ ಸನ್ನಿಧಿಯಲ್ಲಿ
ನಿತ್ಯದೊಳಿರುತಿಪ್ಪನ
ಬತ್ತಲೆಯಾಗಿಹ ಸತಿಯಳ ಸತ್ಯಕ್ಕೆ
ಪುತ್ರನೆಂದೆನಿಸಿದನ
ಹತ್ತಿರ ಕರೆದೊಯ್ಯು ಪುರಂದರವಿಠಲನ
ನಿತ್ಯದಿ ತೋರೆನಗೆ ೭

## ೪೬

ಬಹರಿ ಆದಿ

ದೇವ ದೇವೇಶ ವೆಂಕಟೇಶ
ಶ್ರೀ ವಿಧಾತಾ ವಂದ್ಯ ಭೂವೈಕುಂಠೇಶ ಪ

ಕಾಮಿತ ಫಲದಾತ ಜನದಾಧ್ಯಕ್ಷ
ಸಾಮಗಾನ ಪ್ರಿಯ ಸುರ ಸತ್ಪಕ್ಷಾ
ಶ್ರೀಮಾವಧೂಮನೋಹರ ತ್ರಿಧಾಮ ಶ್ರೀ
ರಾಮ ಸಂಪ್ರೇಮಾಬ್ಧಿ ಕೋಮಲ ಕುಕ್ಷಾ ೧

ರಾಕೇಂದುರವಿಕೋಟಿ ಸುತೇಜ, ಸ್ವಾಮಿ
ನಾಕಪಾರ್ಜಿತ ಪದಾಂಭೋಜಾ

ವ್ಯಾಕೀರ್ಣಾನೇಕಜಾಂಡಾಂಕಿತ ವ್ಯಾಕೃತ
ಶ್ರೀಕಾರಾ ಸಾಕಾರಾ ಲೋಕೇಕ ಪೂಜ್ಯಾ ೨

ಅನಂತಾ ಗುಣಪರಿಪೂರ್ಣ, ಸ್ವಾಮಿ
ಆನತ ಜನ ಬುಧಾಭರಣ
ಧೇನೂ ಗಿರಿನಾಥ ದಾನಿ ಪ್ರಸನ್ವೆಂಕಟ
ಜ್ಞಾನಾನಂದ ನಿತ್ಯಾ ತೇ ನಮೋ ಕರುಣಿ ೩

## ೫೦

**ಧನಶ್ರೀ** **ಆದಿ**

ದೇವ ಬಾರೊ ಶ್ರೀನಿವಾಸ ದೇವನೆ ಬಾರೋ ನನ್ನ –
ದಾವ ದಾವ ಪರಿ ತಪ್ಪಕಾವನೆ ಬಾರೋ ಪ

ಜೀವನ ಪಾವನವ ಮಾಡುವನೆ ಬಾರೋ ನನ್ನ –
ಭವದ ಬಯಕೆ ಪೂರೈಸುವನೆ ಬಾರೋ ೧

ಧ್ಯಾನಿಸಲೊಮ್ಮೆರೆ ದಯದಿ ನೀ ನಿಲ್ಲಿಬಾರೋ ಅ –
ಜ್ಞಾನ ನಾಶನ ಮಾಡುವ ಕೃಪಾನಿಧಿ ಬಾರೋ ೨

ಹಡೆದ ತಾಯಿ ತಂದೆ ಗುರು ಒಡೆಯನೆ ಬಾರೋ ಎನ್ನ –
ನುಡಿ ನುಡಿ ವಿಷಮೆನ್ನದೆ ಕೈವಿಡಿಯಲಿ ಬಾರೋ ೩

ತೆರ ತೆರ ಬಪ್ಪಾಶೆಯ ಚರಿಸಲಿ ಬಾರೋ ಆ –
ತುರದ ಕಾಮಾದ್ಯರ ನೀನೊರಸಲಿ ಬಾರೋ ೪

ಪುಲ್ಲನುದಾಶಿಸುವುದುಚಿತಲ್ಲ ಬಾರೊ ಪ್ರಾಣ –
ದೂಲ್ಲಭ ಬಿರಿದು ನಿನ್ನದಲ್ಲೇನೋ ಬಾರೊ ೫

ಪಾಪಗಳು ಘನ್ನವಾದರೇನಯ್ಯ ಬಾರೋ ಕೃ –
ಪಾಪಾಂಗದಲ್ಲಿವು ಉಳಿಯಲಾಪವೆ ಬಾರೋ ೬

ಶ್ರೀರಮಣ ಇಂದು ಗೋಪ್ತರಾರಿಲ್ಲ ಬಾರೋ ಸುಖ –
ತೀರಥೇಶ ಪ್ರಸನ್ವೆಂಕಟರಾಯ ಬಾರೋ ೭

೫೧

**ಶಂಕರಾಭರಣ** **ಅಟ್ಟ**

ಧ್ವಜದ ತಿಮ್ಮಪ್ಪ ಪಲ್ಲಕ್ಕಿಯೇರಿ ತನ್ನಯ
ನಿಜಗಿರಿ ಯಾತ್ರೆಗೈದಿದ ಹರುಷವ ಕೇಳಿ ಪ

ಬಲದಲಭುಜ ಭವ ಭವಾದಿಗಳೆಡದಲಿ
ಉಳಿವ ವೇದ – ಉಪನಿಷದುಗಳು
ಸಲುಗೆಯಲಿ ಸನಕಾದಿಗಳು ಸೇವಿಸೆ ಮುನ್ನ
ಹಲವು ಋಷಿ–ಮನಿನಿಕರ ಹಿಂದೆ ಬರುತಿರಲು ೧

ಛತ್ರವ ಶಚಿ ಚಾಮರವ ಢಾಳಿಸೆ ಇಂದ್ರ
ಚಿತ್ತಜಾತನು ವ್ಯಜನವ ಬೀಸಲು
ಹೊತ್ತು ಮಾರುತಿ ಹಡಪ ಹೋಳೆವೆಲೆಗಳ ಕೊಡಲು
ಹಸ್ತದ ಕಾಳಂಜಿ ಹರಿಣಾಂಕನು ಬರೆ ೨

ವರುಣನು ಸ್ವಾದು ಜಲವ ಪಿಡಿದು ಬರೆ
ತರುಣಿ ತನಗೆ ಆಧಾರದಂತಿರಲು
ಸುರರು ಸುಮನಗಳಿಂದ ಸರ್ವರೂ ತಮ್ಮ ತಮ್ಮ
ಪರಿಪರಿ ಆಯುಧಗೊಂಡು ಬಳಸಿಬರೆ ೩

ಮಂದರ ಮಧ್ಯಮ ತಾರಕ ಮೋಹನ –
ದಿಂದ ಗಂಧರ್ವರು ಗಾನ ಮಾಡೆ
ತೋಂ ಧಿಮಿ ಧಿಮಿಕೆಂದು ತಾಳ ಮೇಳದಿ ನಾ –
ರಂದಪಾಡಲು ಆಡುತಾಡುತ ಬರುತಿರೆ ೪

ಲೋಕನಾಯಕ ಲೋಕೈಕ ರಕ್ಷಾಮಣಿ
ಸಾಕಾರರೂಪ ಸದ್ಗುಣಭರಿತ
ವೆಂಕಟೇಶ ವ್ಯಾಸಮುನಿ ವರದನಾದ ಕರು –
ಣಾಕರ ಪುರಂದರವಿಠಲನು ಗರುಡ ೫

೫೨

**ಪಂತುವರಾಳಿ** **ಆದಿ**

ಧೊರೆ ಧೊರೆ ವೆಂಕಟೇಶ ನೀನೆ
ಧೊರೆ ಧೊರೆ ವೆಂಕಟೇಶ ಪ

ಸಂಕಟವೆಲ್ಲವ ಪರಿಹರಿಸು
ವೆಂಕಟೇಶಾ ಧೊರೆ ಧೊರೆ ಅ

ಎತ್ತಿನ ಪೆಸರುಳ್ಳ ಮತ್ತೆ ರಕ್ಕಸ ತನ್ನ
ಕುತ್ತಿಗೆ ತೆಗೆದಿಡಲುತ್ತಮ ಗತಿಯಿತ್ತೆ ೧

ಅಂಜನೆ ಎಂಬುವಳ್ಕಂಜು ಬಿಸಲಿಗೆ
ಅಂಜದೆ ತಪಿಸಲು ಸಂಜೀವನ ಕೊಟ್ಟ ೨

ಸಾಸಿರ ಮುಖವುಳ್ಳ ಶೇಷನಹಂಕಾರ
ಶ್ವಸನನ ಕೈಯಿಂದ ನಾಶ ಮಾಡಿಸಿದಂಥ ೩

ಮಾಧವ ಮಾದಿಗ ಹಾದಿಯ ಮೆಟ್ಟಲು
ಮೋದದ್ಯುದ್ಧರಿಸಿದ ಮಾಧವ ಸಲಹೆನ್ನ ೪

ಮೇರು ಗಿರಿಯ ಮಗನೀರೆರಡ್ಯುಗದಲಿ
ಮೂರೊಂದಭಿಧ ಜೀರಿದ ಶ್ರೀನಿಧಿ ವಿಠಲ ೫

## ೫೩

**ನವರೋಜು** **ಆದಿ**

ನಂಬಿದೆ ನಿನ್ನ ಪಾದವ
ವೆಂಕಟರಮಣ ನಂಬಿದೆ ನಿನ್ನ ಪಾದವ ಪ

ನಂಬಿದೆ ನಿನ್ನ ಪಾದಾಂಬುಜಯುಗಳವ
ಚಂದದಿ ಸಲಹೋ ಮಂದರಧರನೆ ಅ

ತಂದೆಯು ನೀನೆ, ತಾಯಿಯು ನೀನೆ
ಬಂಧುವು ಬಳಗವು ನೀನೆ
ಬಂದ ದುರಿತವೆಲ್ಲ ಹೊಂದಿಕೊಳ್ಳದಂತೆ
ಬಂದೆನ್ನ ಸಲಹೊ ಮುಕುಂದ ಮುರಾರಿ ೧

ಚಿಕ್ಕಂದು ಮೊದಲು ನಾನು ನಿನ್ನಯ ಪಾದ
ಹೊಕ್ಕು ಜೀವಿಸುತಿಹೆನು
ಫಕ್ಕನೆ ಜ್ಞಾನವಕ್ಕರದಿಂದಲಿ ಕೊಡು
ಮಕ್ಕಳ ಮಾಣಿಕ್ಯ ರುಕ್ಮಿಣಿಯರಸ ೨

ಮರೆತು ನಾ ಮಾಯದೊಳು, ಮುಳುಗಿದ ಮಾಯ
ಪರಿತು ಅರಿಯದಾದೆ
ಮರೆಯದೆ ಎನ್ನನು ಸಲಹೊ ಕೃಪಾನಿಧಿ
ವರದ ಶ್ರೀ ವೇಂಕಟ ಪುರಂದರವಿಠ್ಠಲ ೩

## ೫೪

**ಸಾವೇರಿ** **ಆದಿ**

ನಡೆದು ಬಾರಯ್ಯ ನೀನು ವೆಂಕಟರಾಯ ಪ

ನಡೆದು ಬಾರಯ್ಯ ಭವಕಡಲಿಗೆ ಕುಂಭಸಂಭವ
ಸಡಗರದಿಂದ ನೀ ಮೆಲ್ಲಡಿಯನಿಡುತ ಬೇಗ
ಎಡಬಲದಲಿ ನಿನ್ನ ಮಡದೇರಿಂದೊಪ್ಪುತ
ತಡಮಾಡದೆ ಬಾ ಮೃಡಸಖ ವೆಂಕಟ ಅ

ವಿಜಯದಶಮಿ ಆಶ್ವೀಜಮಾಸ ಶುದ್ಧದಲಿ
ನಿಜರಥರೂಢನಾಗಿ ಸುಜನರಿಂದೊಡಗೂಡಿ
ಗಜ ಹಂಸ ಮಯೂರ ದ್ವಿಜ ಸಿಂಗ ಸಾರಂಗ
ಮಜ ಭಾಪುರೆ ಎನಲು ತ್ರಿಜಗವು ತಲೆದೂಗೆ
ಅಜನು ಸ್ತುತಿಯ ಮಾಡೆ ಋಜುಗಣಾಧಿಪ ಪಾಡೆ
ಗಜಮುಖನಯ್ಯನು ನಿಜಾನಂದದಲಾಡೆ
ಭುಜಗಶ್ರೇಷ್ಠನು ದ್ವಿಜರಾಜ ಜಯವೆನ್ನೆ
ಕುಜನರೆದೆಯ ಮೆಟ್ಟಿ ರಜತಮ ಕಳೆಯುತ ೧

ದಕ್ಷಿಣದಿಕ್ಕಿನಲ್ಲಿ ರಾಕ್ಷಸ ಸಮೂಹ ಒಂ–
ದಕ್ಷೋಹಿಣಿ ಬಲ ನಿನ್ನುಪೇಕ್ಷೆ ಮಾಡುತಲಿರೆ
ಪಕ್ಷಿವಾಹನ ದೇವ ನೀನಾಕ್ಷಣದಿ ಖಳರ
ಶಿಕ್ಷಿಸಿ ಸುಜನರ ರಕ್ಷಿಸಿ ಮೆರೆದ
ತಕ್ಷಕ ನರನ ಭಕ್ಷಿಸಬರುತಿರೆ ಈಕ್ಷಿಸಿ ರಥವ
ತಕ್ಷಣ ನೆಲಕೊತ್ತಿದೆ ಲಕ್ಷ್ಮೀಶನೆ ಅಕ್ಷಯಫಲದಾಯಕ
ಕುಕ್ಷಿಯೊಳಗೆ ಜಗರಕ್ಷಿಪ ವಿಶ್ವನೆ ೨

ಅಂಬುಜಾಕ್ಷನೆ ಬಾರೊ ಅಂಬುಜವದನನೆ
ಅಂಬುಜಾಲಯಪತಿ ಅಂಬುಜನಾಭನೆ

ಅಂಬುಜಜನಕ ಅಂಬುಜಾರಿಧರಹೃದ –
ಯಾಂಬುಜನಿವಾಸ ಅಂಬುಜಮಿತ್ರ ಅನಂತಾನಂತತೇಜ
ಕೊಂಬು ಕಹಳೆಗಳು ಭೋಂಭೋರಿಡುತಿರೆ
ತುಂಬುರನಾರದರಿಂಬಾಗಿ ಪಾಡಲು
ಅಂಬರದಲಿ ವಾದ್ಯ ಧಂಧಣರೆನೆ
ಸಂಭ್ರಮದಲಿರೊ ಶಂಭುವಂದಿತನೆ ೩

ಮನಕೆ ಬಾರಯ್ಯ ಸುಧಾಮನ ಸಖ ಹರಿಯೆ ಸೋ –
ಮನ ಧರಿಸಿದವನ ಮನ ಕುಮುದಕೆ ಚಂದ್ರ –
ಮನೆ ಕೇಳೊ ಎನ್ನ ದುಮ್ಮಾನ ಪರಿಹರಿಸೋ ಒ –
ಮ್ಮನ ಕೊಡು ಅಹಿಗಿರಿ ತಿಮ್ಮನೆ ಕೇಳೆನ್ನ ಬಿನ್ನಪವ
ಮನ ನಿನ್ನದು ಹೇ ಮನಸಿಜಪಿತ ಸುಮನಸರೊಡೆಯ ಬೊ –
ಮ್ಮನ ಪೆತ್ತವನೆ ಸುಮ್ಮನೆ ತಡವ್ಯಾಕೊ ನಿ –
ಮ್ಮನೆಯವರೊಡನೆ ಇಮ್ಮನಮಾಡದೆ ಗಮ್ಮನೆ ಬಾ ವೆಂಕಟ ೪

ಪರಿಪರಿಯಿಂದಲಿ ಕರವ ಮುಗಿದು ಸ್ತುತಿಸಿ
ಕರೆದರೆ ಬಾರದ ಗರ್ವತನವು ಯಾಕೊ
ಕರಿಯ ಮೊರೆಯ ಕೇಳಿ ಸಿರಿಗೆ ಹೇಳದೆ ಬಂದೆ
ಕರಿರಾಜ ಅವ ನಿನ್ನ ಕಿರಿಯಪ್ಪನ ಮಗನೇನೊ
ಶರಣಾಗತರಕ್ಷವರಮಣಿ ಎಂಬೊ
ಬಿರುದು ಬೇಕಾದರೆ ಸರ್‍ರನೆ ಬಾರಯ್ಯ
ಗರುಡಗಮನ ಗೋಪಾಲವಿಠಲರೇಯ
ಕರುವಿನ ಮೊರೆಗಾವು ನೆರೆದಂತೆ ಪೊರೆಯುತ ೫

## ೫೫

**ಮೋಹನ** **ಅಟ್ಟ**

ನಾನೇನು ಮಾಡಿದೆನೋ ವೆಂಕಟರಾಯ
ನೀನೆನ್ನ ಕಾಯಬೇಕೋ ಪ

ಮಾನಾಪಮಾನವು ನಿನ್ನದು ಎನಗೇನು
ದೀನರಕ್ಷಕ ತಿರುಪತಿಯ ವೆಂಕಟರಾಯ ಅ

ರಕ್ಕಸನಲ್ಲವೇನೋ ಪ್ರಹ್ಲಾದನು
ಚಿಕ್ಕವ ಧ್ರುವನಲ್ಲವೆ
ಉಕ್ಕಿ ಬರುವ ಕರ್ಮ ಮಾಡಿದಜಮಿಳ ನಿಮ್ಮ
ಅಕ್ಕನ ಮಗನೇನೋ ವೆಂಕಟರಾಯ ೧

ಕರಿರಾಜ ಕರೆಸಿದನೆ ದ್ರೌಪದಾದೇವಿ
ಬರೆದೋಲೆ ಕಳುಹಿದಳೆ
ವರಋಷಿ ಪತ್ನಿ ಕಲ್ಲಾಗಿ ಸ್ತ್ರೀಯಾದದ್ದು
ಧರೆಯೆಲ್ಲ ಅರಿಯದೇನೋ ವೆಂಕಟರಾಯ ೨

ಒಪ್ಪಿಡಿಯವಲಕ್ಕಿಯ ತಂದವನಿಗೆ
ಒಪ್ಪಿ ಕೊಟ್ಟೆಯೊ ಭಾಗ್ಯವ
ಸರ್ಪಶಯನ ಶ್ರೀ ಪುರಂದರವಿಠಲ
ಅಪ್ರಮೇಯನೆ ಸಲಹೋ ವೆಂಕಟರಾಯ ೩

೫೬

ಕಾಂಬೋದಿ ಅಟ್ಟ

ನಮಿಸುವೆ ನಾನಿನ್ನ ಚರಣ ಕಮಲಕ್ಕೆ ವೆಂಕಟೇಶ
ಶ್ರಮಿಸುವೆ ಭವದೊಳು ಶಮದಮೆಯಿಲ್ಲದೆ ವೆಂಕಟೇಶ ಪ

ಜನನವಾದಾರಭ್ಯ ಮುಂದಿನ ಪರಿಯಂತ ವೆಂಕಟೇಶ
ಬಿನಗು ಜನರ ಅನುಸರಿಸಿ ಆಯೂ ಕಳದೆ ವೆಂಕಟೇಶ ೧

ಧನ ಮಾನ ವಿಷಯ ಚಿಂತನೆಯಿಂದ ಬಳಲೂವ ವೆಂಕಟೇಶ
ಕ್ಷಣ ನಿನ್ನ ನೆನೆಯಲು ಹೊತ್ತಿಲ್ಲವಾಯಿತು ವೆಂಕಟೇಶ ೨

ಓದು ಕೇಳಿಕೆಯಲ್ಲಾ ವೋದನಕಾಯಿತು ವೆಂಕಟೇಶ
ಸಾಧು ಜನರಲ್ಲಿ ಯೆಲ್ಲಿ ನಿಂತಿಲ್ಲವೊ ವೆಂಕಟೇಶ ೩

ಮೋದಿಸುವೆನೊ ದುರ್ವಿಷಯ ಭುಂಜಿಸುತಲಿ ವೆಂಕಟೇಶ
ಸಾಧನವೆಂತಪ್ಪ ಯನಗಿನ್ನು ಧರೆಯೊಳು ವೆಂಕಟೇಶ ೪

ಆವನಾದರು ಕಾಸು ಕೊಡುತಿಹಲದು ಕೇಳಿ ವೆಂಕಟೇಶ
ನಾವು ಅಂಜಿಕೆಯಿಲ್ಲದೆರಗುವೆ ಅವರಲ್ಲಿ ವೆಂಕಟೇಶ ೫

ಕಾವ ಕರುಣಿ ನೀನು ಯೆಂಬುವ ಸ್ಮೃತಿಯಿಲ್ಲ ವಂಕಟೇಶ
ಹ್ಯಾವ ಇಲ್ಲದೆ ಎರಗುವೆನೊ ಧರೆಯೊಳು ವೆಂಕಟೇಶ ೬

ಆಡುವ ಮಾತೊಂದು ಮಾಡುವ ಕ್ರಿಯೆಯೊಂದು ವೆಂಕಟೇಶ
ನೀಡುವಿ ಯಂತು ಸುಫಲವ ಕುಮತಿಗೆ ವೆಂಕಟೇಶ ೭

ಬೇಡುವೆ ಕಂಡದ್ದಂಬಲಿಸಿ ಬಳಲುತ್ತ ವೆಂಕಟೇಶ
ನೋಡುಕರುಣದಿ ಚಿತ್ತಕೆ ಬಂದ ಪರಿ ವೆಂಕಟೇಶ ೮

ಏನೇನು ಬಗೆಯಿಂದ ತಿರಿತಂದ ಧನದಿಂದ ವೆಂಕಟೇಶ
ಈ ಸತಿಸುತರು ಸಂತೋಷಪಟ್ಟದ್ದು ಕಾಣೆ ವೆಂಕಟೇಶ ೯

ಹೇಸಿಕೆ ಜನರೊಳು ಹೇಳಿಕೊಂಡರಿದು ವೆಂಕಟೇಶ
ದೂಷಿತನಾದೆ ದೋಷ ಸಂಪಾದಿಸಿ ವೆಂಕಟೇಶ ೧೦

ಘಾಳಿಯ ಗುದ್ದಿ ಕೈನೋಯಿಸಿಕೊಂಡಂತೆ ವೆಂಕಟೇಶ
ಬಾಳಿದೆ ಭವದೊಳು ಬಾಲೀಶತನದಿಂದ ವೆಂಕಟೇಶ ೧೧

ಆಳಿದನೊಳು ಪೇಳಿ ದಾರಿಗುಸುರಲಿನ್ನು ವೆಂಕಟೇಶ
ಪಾಲಿಸು ಶಿಕ್ಷಿಸು ಸೊಲ್ಲು ನಿನ್ನದು ಶಿರಿ ವೆಂಕಟೇಶ ೧೨

ವಿರಕ್ತಿಪುಟ್ಟದು ಕಾಣೊ ಅರೆಮರೆ ಮಾತೇನು ವೆಂಕಟೇಶ
ಶರಣು ಶರಣು ಶಾಶ್ವತ ಫಲದಾಯಕ ವೆಂಕಟೇಶ ೧೩

ಕರಪಿಡಿದಪರಾಧ ಕ್ಷಮಿಸಿ ಸಲಹ ಬೇಕು ವೆಂಕಟೇಶ
ಪರತರ ಶ್ರೀಪತಿವಿಠಲ ದಯಾನಿಧೆ ವೆಂಕಟೇಶ ೧೪

## ೫೭

**ತೋಡಿ** **ಝಂಪೆ**

ನಾರಾಯಣಾಡ್ರಿಕೃತವಾಸ ಶರಣು
ತೋರಯ್ಯ ತವರೂಪ ರವಿಕೋಟಿಭಾನ ಪ

ಆನತಜನರಾಪ್ತ ನೀನೆಂದು ಕೇಳಿ ಮಿಗೆ
ನಾನುರಾಗದಲಿ ನಡೆತಂದೆ ನಿನ್ನಯ ಬಳಿಗೆ
ಮೀನಾಂಕಜನಕ ತವಪದಯುಗಾರ್ಚನೆ ಹೀಗೆ

ಜ್ಞಾನಪೂರ್ವಕದಿಂದಲೆನಗೆ ದಯದಿ
ಪಾನೀಯಜಾಂಬಕನೆ ಪೊರೆಯೆಂದೆ ನಿನಗೆ ೧

ವಾಸುಕೀತಪಕೆ ಸಲೆ ಮೆಚ್ಚಿ ಗಿರಿಯಲಿ ನಿಂದೆ
ಆ ಸಲಿಲದೊಳು ಮಿಂದು ಕರಿವರಕರೆಯೆ ಬಂದೆ
ವಾಸವಾತ್ಮಜನು ಬಿನ್ನೈಸೆ ನಿನ್ನಯ ಮುಂದೆ
ಆ ಸಮರದೊಳಗೊಲಿವೆನೆಂದೆ ನಿನಗೆ
ಪಾಸಟಿಯಾರು ನೀರಜಭವನ ತಂದೆ ೨

ಪೊಗಳಲರಿಯರು ಸುರರು ನಿನ್ನ ಮಹಿಮಾತಿಶಯ
ಬಗೆಯನರಿಯಳು ಲಕುಮಿ ಬದರಸನ್ನಿಭಕಾಯ
ಮುಗುಧಮಾನವ ತಿಳಿವನೇನೋ ತಿರುಮಲರಾಯ
ಖಗರಾಜಗಮನ ಕಮನೀಯ ಪಾಹಿ
ಜಗನ್ನಾಥವಿಠಲ ವಿಗತಾಘ ಕವಿಗೇಯ ೩

## ೫೮

ನಿನಗ್ಯಾಕೆ ದಯಬಾರದೊ ಶ್ರೀ ಶ್ರೀನಿವಾಸ ಪ

ಅನುದಿನ ನಿನ್ನ ಪಾದ ವನರುಹ ನೆನೆಯುವ
ಘನದಾಸರ ದಾಸ್ಯವ ನೀಡುವುದಕಿನ್ನು ಅ

ನೀನು ಕುಣಿಸಿದಂತೆ ಕುಣಿಯುವೆ ಎನ್ನ
ಸ್ವಾಧೀನ ವೆಲ್ಲಿಹುದೈ ಲೇಶವಾದರು ದೇವ
ಮಾನಾಭಿಮಾನ ಸರ್ವವೂ ನಿನಗೊರುವಿಸಿ
ಧ್ಯಾನವ ಮಾಡುವೊ ದೀನನಾಮ್ಯಾಲಿನ್ನು ೧

ಧ್ರುವ ಗಜ ದ್ರೌಪದಿ ಪಾಪಿ ಅಜಾಮಿಳ
ಇವರೆಲ್ಲ ನಿನಗುಪಕಾರ ಮಾಡಿದುದೆಂತೋ
ಕವಿಗೇಯ ಭಕ್ತವತ್ಸಲನೆನಿಸಿ ಅವರಂತೆ
ಅನುದಿನ ಪೊರೆಯಾಲೆನ್ನೊಳು ೨

ಸಿಂಧುಶಯನ ಭವಬಂಧ ಮೋಚನ
ಸುರವೃಂದವಿನುತ ರಘುನಾಥ ವಿಠಲರೇಯ

ಮಂದಮತಿಯು ನಾನು ಕುಂದುಗಳೆಣಿಸದೆ
ಎಂದು ಪಾಲಿಸೊ ಎಂದು ಬೇಡಿಕೊಳುತಲಿರೆ ೩

೫೯

ವರಾಳಿ ಆದಿ

ನಿನ್ನ ಅರಸುತನಕ್ಕೇನೆಂಬೆನೊ ವೆಂಕಟೇಶಾ
ಘನ್ನ ಗಿರಿಯ ವಾಸ ಕಮಲಾಸನ ಜನಕ ತಿರುಮಲೇಶಾ ಪ

ಹರುವ ಸರ್ಪಯಿರುವ ಚೋರ
ಮುರುವ ಮೀರಿ ಒರುವ ಶರಧಿ ಉರೆವ ಕಿಚ್ಚು
ಕರುವು ಮೃತ್ಯು ಸರುವ ಮಳೆ ಬಿರುವನೆಲ್ಲ
ಹೊಡವ ದೈತ್ಯಾ ತೊರೆವ ಸನ್ಯಾವ
ಮೇರೆತಪ್ಪಿ ಭರದಿ ತನಗೆ ಇದರು
ಬಂದವ ಕಾಣುತತಿ ಹರಿಯ
ನಾಮ ಮುಟ್ಟುವ ದೇವ ಶ್ರೀನಿವಾಸಾ ೧

ಸೃಷ್ಟಿ ಜನರಿಗೊಂದು ಆಳು
ಕೊಟ್ಟು ವೇಗದಿಂದ ಕರಿಯ ಲಟ್ಟಿದವರ ಕಾಣೆನಯ್ಯಾ
ಎಷ್ಟೆಷ್ಟು ದೂರದಿಂದಲಿ ಕಟ್ಟಿಕೊಂಡು ಹೊನ್ನು ಹಣ
ಗಳ ತಮಗೆ ತಾವೆ
ಅಟ್ಟಹಾಸದಿಂದ ಮಂಗಳವ ಪಾಡಿ
ಪೂರ ಮಟ್ಟು ಒಪ್ಪ ತಿರುವೆಂಗಳಾ ೨

ಹದಿನೆಂಟು ಜಾತಿಯವರು ಒದಗಿ ಮುದದಿಂದ ಕುಣಿದು
ಪದೋಪದಿಗೆ ಹಾಡಿ ಪಾಡುತ
ಹದುಳವಾದ್ಯ ಪಂಚವಾದ್ಯ
ಎದುರು ನಿಂದು ಧ್ವನಿಯ ಮಾಡುತಾ
ದಾಸರೆಂಬೊ ಅಟ್ಟಹಾಸದ ಮಾತು ನುಡಿಯುತ್ತ
ನಿತ್ಯ ನಿನ್ನ ಮದುವೆಯೆಂದು ಸುಖವು ಸುರಿಯುತಾ ೩

ಎಲ್ಲರಿಲ್ಲಿಗೆ ಬಂದರೇನು ಯಿಲ್ಲ ಪುಣ್ಯ
ಲೇಶ ಮಾತ್ರ ಸಲ್ಲದಯ್ಯಾ ಮುಕ್ತಿಗವರು

ಇಲ್ಲಿ ಸುಖವು ಬಟ್ಟು ಕಡಿಗೆ
ಎಲ್ಲೆಲ್ಲಿ ಜನಿಸಿ ಬಹು ಭವದ
ಪಲ್ಲಡಿಯೊಳಗೆ ಜನಿಸಿ ಜ್ಞಾನ
ವಿಲ್ಲದೆ ನಲ್ಲುವರು ದುರಿತವ ವಹಿಸಿ ೪

ಮನುಜರೆಣಿಕೆ ಏನು ಮತ್ತೆ ವನಜ ಸಂಭವ
ಈಶ ಮುಖ್ಯ ಅನಿಮಿಷರೆಲ್ಲ ಬಂದು ಭಯದಿ
ಮನಸಿನಲಿ ನಿನ್ನ ಅರಸುತನದ ಶೌರ್ಯವನ್ನು ಎಣಿಸುತ
ನೆಲೆಗಾಣದೆ ಮಣಿದು ಮಣಿದು ನಮಸ್ಕರಿಸುತಾ ವಾಲ್ಗೈಸುತಾ
ಹೊಣೆಯೊ ವಿಜಯ ವಿಠಲ ಎನುತಾ ೫

೬೦

**ಮೋಹನ** **ಅಟ್ಟ**

ನಿನ್ನ ದಿವ್ಯ ಮೂರುತಿಯ ಕಣ್ಣುದಣಿಯ ನೋಡಿ
ಧನ್ಯನಾದೆನೋ ಧರೆಯೊಳು ಪ

ಇನ್ನು ಈ ಭವ ಭಯಕೆ ಅಂಜಲೇತಕೊ
ಚೆನ್ನ ಸಿರಿ ವೇಂಕಟೇಶ ಶ್ರೀಶ ಅ

ಏಸುಜನ್ಮದ ಪುಣ್ಯ ಬಂದೊದಗಿತೋ ಶ್ರೀ ಸ್ವಾಮಿ ಪುಷ್ಕರಿಣಿಯ
ಲಿ ಸ್ನಾನ ಜಪತಪವ ಮಾಡಿ ವರಹ ದೇವರ ನೋಡಿ
ಶ್ರೀ ಸ್ವಾಮಿ ಮಹಾದ್ವಾರಕೆ
ಈ ಶರೀರವನು ಈಡಾಡಿ ಪ್ರದಕ್ಷಿಣೆಮಾಡಿ ಲೇನಾಗಿ ಪೊಗಳುತಲಿ
ಆ ಸುವರ್ಣದ ಗರುಡಗಂಭವನೆ ನೋಡಿ ಸಂತೋಷದಲಿ
ಕೊಂಡಾಡಿದೆ ಬಿಡದೆ ೧

ನೆಟ್ಟನೆರಡನೇ ದ್ವಾರವನೆ ದಾಂಟ ಪೋಗುತಲಿ ದಟ್ಟಣೆಯು
ಬಹು ಜನದಲಿ
ಘಟ್ಟಿಮನದಲಿ ತಲೆಯ ಚೆಟ್ಟಿಡುತ ನೆಟ್ಟನೇ ಕಟ್ಟಾಂಜನಕೆ
ತಾ ಬರುತಲಿ
ಕೃಷ್ಣಾಜಿನದವರ ಪೆಟ್ಟುಗಳ ಕಾಣುತಲಿ ಕಂಗೆಟ್ಟು ಹರಿಯೆನುತಲಿ

ಬೆಟ್ಟದಧಿಪತಿ ನಿನ್ನ ದೃಷ್ಟಿಂದ ಕಾಣುತಲಿ ಸುಟ್ಟಿತೆನ್ನಯ
ದುರಿತವು ಸರ್ವವು ೨

ಶಿರದಲ್ಲಿ ರವಿಕೋಟಿ ತೇಜದಿಂದೆಸವಂಥ ವರ ಕಿರೀಟವು ಕುಂಡಲ
ಕೊರಳೊಳಿಹ ಸರಿಗೆ ವೈಜಯಂತಿಯ ಮಾಲೆ ಪರಿಪರಿಯ ಹಾರಗಳನು
ಉರದಿ ಶ್ರೀವತ್ಸವನು ಕರದಿ ಶಂಖಚಕ್ರಗಳು ವರನಾಭಿ ಮಾಣಿಕವನು
ನಿರುಪಮ ಮಣಿಖಚಿತ ಕಟಿಸೂತ್ರ ಪೀತಾಂಬರ ಚರಣದ್ವಯ
ದಂದುಗೆಯನು ಇನ್ನು ೩

ಇಕ್ಷುಚಾಪನ ಪಿತನೆ ಪಕ್ಷೀಂದ್ರವಾಹನನೆ ಲಕ್ಷ್ಮೀಪತಿ ಕಮಲಾಕ್ಷನೆ
ಅಕ್ಷಯ ಅಜ ಸುರೇಂದ್ರಾದಿ ವಂದಿತನೆ ಸಾಕ್ಷಾಜ್ಜಗನ್ನಾಥನೆ
ರಾಕ್ಷಸಾಂತಕನೆ ನಿರಪೇಕ್ಷ ನಿತ್ಯತೃಪ್ತನೆ ನಿರುಪಮ ನಿಸ್ಸೀಮನೆ
ಕುಕ್ಷಿಯೊಳಗೀರೇಳು ಲೋಕವನು ತಾಳ್ದವನೆ ರಕ್ಷಿಸುವುದೆಂದು
ದಯದಿ ಮುದದಿ ೪

ಉರಗಗಿರಿ ಅರಸು ನಿಮ್ಮ ಚರಣಗಳ ಕಂಡಮೇಲೆ ಉರಗ
ಕರಿವ್ಯಾಘ್ರ ಸಿಂಹ
ಅರಸು ಚೋರಾಗ್ನಿ ವೃಶ್ಚಿಕ ಮೊದಲಾದ ಪರಿಪರಿಯ ಬಹಳ ಭಯವು
ಪರಮ ವಿಷಲಂಪಟದೊಳಗೆ ನಾ ಸಿಗದಂತೆ ಕರುಣಿಸುವುದೊಲಿದು ದಯದಿ
ಸ್ಮರಗಧಿಕಲಾವಣ್ಯ ತಂದೆ ಪುರಂದರ ವಿಠಲ ಶರಣಜನ
ಕರುಣಾರ್ಣವ ದೇವ ೫

## ೬೧

**ಕಲ್ಯಾಣಿ** **ಅಟ್ಟ**

ನಿನ್ನ ನಾನೆಂದೆನೋ ವೆಂಕಟರಾಯ
ಎನ್ನ ನೀ ಸಲಹಬೇಕೋ ಪ

ನಿನ್ನ ನಾನೇನೆಂದೆ ನಿಗಮಗೋಚರ ಸ್ವಾಮಿ
ಪನ್ನಂಗ ಶಯನ ಪಾಲ್ಗಡಲೊಡೆಯನೆ ಕೃಷ್ಣ ಅ

ಘೋರ ಸೋಮಕ ವೇದ ಚೋರ ತಮನ ಸೀಳಿ
ವಾರಿಧಿಗಿಳಿದು ಪರ್ವತವನೆತ್ತಿ

ಧಾರುಣಿಯನು ಕದ್ದ ದನುಜದಲ್ಲಣನಾದ
ನಾರಸಿಂಹ ನಿನಗೆ ಶರಣೆಂದೆನಲ್ಲದೆ

ನೀರ ಪೊಕ್ಕವನೆಂದನೆ – ಬೆನ್ನಿಲಿ ಘನ
ಭಾರಪೊತ್ತವನೆಂದನೆ – ಮಣ್ಣನಗೆದು
ಬೇರ ಮೆದ್ದವನೆಂದೆನೆ – ಹಿರಣ್ಯಕನು
ದರ ಬಗೆದ ನರಹರಿಯೆಂದೆನಲ್ಲದೆ ೧

ಧರೆಯ ದಾನವಬೇಡಿ – ಶಿರವ ಅಡಿಯೊಳೊತ್ತಿ
ಪರಶುಪಿಡಿದು ಕ್ಷತ್ರಿಯರ ಸವರಿ
ಚರಣದಿ ಪಾಷಾಣ ಪೆಣ್ಣುಮಾಡಿದ ಪುಣ್ಯ
ಚರಿತಯಾದವಪತಿ ಶರಣೆಂದೆನಲ್ಲದೆ

ತಿರುಕಹಾರುವನೆಂದೆನೆ – ಹೆತ್ತತಾಯ
ಕೊರಳಕೊಯ್ದುವನೆಂದೆನೆ – ವನವಾಸಕ್ಕೆ
ಭರದಿ ಚರಿಸಿದನೆಂದನೆ – ಪೂತನಿಯನು
ಸರಕು ಮಾಡದೆ ಕೊಂದ ಹರಿಯೆಂದೆನಲ್ಲದೆ ೨

ಚಿತ್ತಜಕೋಟಿ ಲಾವಣ್ಯ ತೇಜದಿಬಂದು
ಉತ್ತಮ ಸ್ತ್ರೀಯರ ವ್ರತವಳಿದು
ಮತ್ತೆ ಕಲ್ಕಿಯಾಗಿ ಯವನರ ಕೆಡಹಿದ
ಹತ್ತಾವತಾರದ ಹರಿಯೆಂದೆನಲ್ಲದೆ

ಬತ್ತಲಿದ್ದವನೆಂದೆನೆ – ತೇಜಿಯನೇರಿ
ಒತ್ತಿ ಆಳ್ದವನೆಂದೆನೆ – ಬಾರಿಬಾರಿಗು
ಮತ್ತೆ ಪುಟ್ಟಿದನೆಂದೆನೆ – ಆದಿಕೇಶವ
ಭಕ್ತವತ್ಸಲನೆಂದು ಪೊಗಳಿದೆನಲ್ಲದೆ ೩

## ೬೨

**ಶಂಕರಾಭರಣ** **ರೂಪಕ**

ನಿನ್ನ ನೋಡಿ ಧನ್ಯನಾದೆನೊ, ಹೇ ಶ್ರೀನಿವಾಸ ಪ

ನಿನ್ನ ನೋಡಿ ಧನ್ಯನಾದೆ ಎನ್ನ ಮನೋನಯನಕೀಗ
ಲಿನ್ನು ದಯಮಾಡು ಸುಪ್ರಸನ್ನ ಸ್ವಾಮಿ ಪಾಂಡುರಂಗ ಅ

ಪಕ್ಷಿವಾಹನ ಲಕ್ಷ್ಮೀರಮಣ
ಲಕ್ಷ್ಮಿ ನಿನ್ನ ವಕ್ಷದಲ್ಲಿ
ರಕ್ಷ ಶಿಕ್ಷಣದಕ್ಷ ಪಾಂಡವ
ಪಕ್ಷ ರಕ್ಷ ಕಮಲಾಕ್ಷ ೧

ದೇಶದೇಶ ತಿರುಗಿ ನಾನು
ಆಶಾಬದ್ಧನಾದೆ ಸ್ವಾಮಿ
ದಾಸನು ನಾನಲ್ಲವೆ ಜಗ
ದೀಶ ಶ್ರೀಶ ಶ್ರೀನಿವಾಸ ೨

ಕಂತುಜನಕ ಕೇಳೊ ನೀ ನಿ
ರಂತರದಿ ನಿನ್ನ ಸೇವೆ
ಅಂತರಂಗದಿ ಪಾಲಿಸಯ್ಯ
ಹೊಂತಕಾರಿ ಪುರಂದರವಿಠಲ ೩

## ೭೩

ಬಹರಿ ಝಂಪೆ

ನಿನ್ನ ಮಹಿಮೆಯನಾರು ಬಲ್ಲರು
ಚಿನ್ಮಯಾತ್ಮಕನಂತರೂಪನೆ
ಮುನ್ನೆ ಕಮಲಜ ನಿನ್ನ ನಾಭಿಯೊಳುನ್ನತೋನ್ನತದಿ
ಘನ್ನ ತಪವಂಗೈದು ಕಾಣನು
ಇನ್ನು ಶ್ರುತಿ ಸ್ಮೃತಿ ಅರಸಿ ಅರಿಯವು
ಪನ್ನಗೇಂದ್ರನು ಪೊಗಳಲರಿಯ ಪ್ರಸನ್ನವೆಂಕಟನೆ ೧

ಹರಿಯೆ, ತ್ರಿದಶರ ಧೊರೆಯೆ, ಭಕುತರ
ಶಿರಿಯೆ, ದಿತಿಜಾರರಿಯೆನವರತ
ಮರಿಯದಿಹ ಅಜ ಹರಯತೀಶ್ವರರರಿಯರಿನ್ನುಳಿದ
ಇರವು ಮನುಜ ನಾ ಕರಿಯ ಲಾಪಿಸೆ
ಪೊರಿಯೊ ಬಿಡದೆ ಪ್ರಸನ್ನವೇಂಕಟ
ಗಿರಿಯರಸೆ ಜಗಧೊರೆಯೆ ಸುರವರವರಿಯ ಮಾಸಹನೇ ೨

ನಾಗರಿಪುಗಮ ನಾಗಭೃತಶುಭ
ನಾಗಪಕ್ಷಘನಾಗಮ ನಿಗಮ

ನಾಗಪತಿವದನೈಕಸ್ತುತ ಸುಗುಣಗುಣಾರ್ಣವನೆ
ನಾಗಹರ ಸಖ ನಾಗಗಗನ ಮಣಿ
ನಾಗಗ್ರಸಿತಭಾ ನಾಗದ್ವಿಟ ಮುಖ ನಾಗಧರಸುತ
ನಾಗಮದಹ ಪ್ರಸನ್ವೆಂಕಟೇಶಾ ೩

೭೪

ಶಂಕರಾಭರಣ ಆದಿ

ನೋಡಿದೆ ವೇಂಕಟ ನಿನ್ನ ನೋಡಿದೆ ಪ

ನೋಡಿದೆ ವೇಂಕಟ ನಿನ್ನ
ಕೊಂಡಾಡಿ ಬೇಡಿದೆ ವರವನ್ನ ಆಹಾ
ರೂಢಿಯೊಳಗೆ ನಿನಗೆ ಈಡುಗಾಣೆನೊ ದೇವ
ನಾಡುದೈವಗಳೆಲ್ಲ ಓಡಿಪೋದವೊ ಸ್ವಾಮಿ ಅ

ಮಣಿಗಣಮಯದ ಕಿರೀಟ, ಕಪ್ಪು ವ
ರಣಕುಂತಲದ ಲೋಲ್ಯಾಟ, ಯುಗ ಕ
ರಣಕುಂಡಲ ಬಹು ಮಾಟ ಅರ
ಗಿಣಿ ಶಶಿಪ್ರೊಲ್ವ ಲಲಾಟ ಆಹಾ
ಎಣೆಗಾಣೆ ಕಸ್ತೂರಿ ಮಣಿರ್ದಿಪ ಭ್ರೂಯುಗ
ಕುಣಿಯುತ ಸ್ಮರಧನು ಗಣಿಸದೊ ಎಲೋದೇವ ೧

ವಾರಿಜಯುಗಸಮನಯನ, ನಾಸ
ಚಾರುಚಂಪಕ ತೆನೆ, ವದನದೊಳು
ತೋರುವ ಸುಂದರದನ ಪಂಕ್ತಿ
ಸಾರಿದಾಧರ ಬಹು ಅರುಣ, ಆಹಾ
ಸಾರಸಮುಖದೊಳು ಸೇರಿ ಶೋಭಿಪ ಚುಬಕ
ಕೂರುಮಯುಗಕದಪು ಸಾರಕಟಾಕ್ಷವ ೨

ಕಂಧರಾಂಕಿತ ಸತ್ರಿರೇಖಾ ಕಂಠ
ಪೊಂದಿಪ್ಪೊದ್ವರ್ತುಲ ಕ್ರಮುಕ, ಕೊರಳ
ಸುಂದರಕೌಸ್ತುಭಪದಕ, ಬಹು
ಬಂಧುರ ಚೈತ್ರ ಸುರೇಖ ಆಹಾ

ಹಿಂದೆ ಸಿಂಹದ ಹೆಗಲಿನಂದದಲೊಪ್ಪಿದ
ಸ್ಕಂಧದಿ ಶೋಭಿಪ ಒಂದು ನರಿಗೆಯನ್ನು ೩

ಸ್ವನ್ನ ಪಕುವಳಿಹಾರಾ, ಬಾ
ಪನ್ನ ಪುತ್ಥಳಿ ಸಿರಿಯಾಕಾರ, ಬಹು
ಚನ್ನವಾಗಿಹ ನಾನಾಹಾರ, ಶುಭ್ರ
ವರ್ಣಶೋಭಿಪ ಜನಿವಾರ ಆಹಾ
ಇನ್ನು ಗುಂಡಿನಮಾಲೆ, ಘನ್ನ ಜಲಸರಪಳಿ
ಉನ್ನತದಾನರ್ಘ್ಯ ರನ್ನ ಜಯಂತಿಯಾ ೪

ಶ್ರೀವತ್ಸಲಾಂಛನಹೃದಯ, ಸುರ
ಕರಿಕರತೆರ ಬಾಹು ಶಿರಿಯಾ, ನಾಲ್ಕು
ಕರಗಳೊಪ್ಪುವಪೀಪರಿಯು, ಮೇಲಿ
ನ್ನೆರಡು ಹಸ್ತದಿ ಶಂಖ ಅರಿಯು ಆಹಾ
ವರರತ್ನ ಮುದ್ರಿಕೆ ಧರಿಸಿದ ಬೆರಳುಳ್ಳ
ಕರತೋಡ ಕಡಗಕ್ಕೆ ಸರಿಗಾಣೆ ಧರೆಯೊಳು ೫

ಪರಮವೈಕುಂಠದಕಿಂತ ಈ
ಧರಿತಳವಧಿಕವೆನ್ನು ತಾ ಬಲ
ಕರದಿಂದ ಜನಕೆ ತೋರುತಾ ಬಾಹು
ಎರಡು ಆಜಾನುಪೂರಿತಾ ಆಹಾ
ಸ್ವರಣರತ್ನ ಖಚಿತ ವರನಾಗಭೂಷಣ
ಧರಿಸಿ ಟೊಂಕದಿ ವಾಮಕರವಿಟ್ಟು ಮೆರೆವ್ಪೋದು ೬

ಹಸ್ತಯುಗದಿ ತೋಡ್ವ ಕಡಗ, ಪ್ರ
ಶಸ್ತ ರತ್ನದ್ಹರಳಸಂಘ ರಚಿತ
ಸಿಸ್ತಾದ ಉಂಗುರ ಬೆಡಗ, ಬಹು
ವಿಸ್ತರಾಂತರ ಭುಜಯುಗ ಆಹಾ
ಹಸ್ತಿವರದ ಸಮಸ್ತಲೋಕಕೆ ಸುಖ
ವಿಸ್ತಾರ ನೀಡುತ ಸಿಸ್ತಾದ ದೇವನ ೭

ಉದರ ತ್ರಿರೇಖ ರೋಮಾಳಿ, ನಾಭಿ
ಪದುಮ ಶೋಭಿಪ ಗುಂಭನುಳಿ, ಮೇಲೆ
ಉದಯಾರ್ಕ ಪೋಲುವ ಕಲೆ ಇಂದ

ಸದಮಲಾಂಬರಪಟಾವಳಿ ಆಹಾ
ಚಿಮರಶೋಭಿತ ಮಹಾಚದುರದೊಡ್ಯಾಣವು
ಪದಕ ಮುತ್ತಿನ ತುದಿ ವಿಧವಿಧ ಪೊಳೆವೋದು ೮

ಕುಂಭಿಮಸ್ತಕದೋಲ್ಲಿತಂಬ ದಿಂದ
ರಂಭೆ ಪೋಲುವ ಊರುಸ್ತಂಭ, ಇಂದು
ಬಿಂಬವೆನಿಪ ಜಾನು, ಡಿಂಬ ಭಕ್ತ ಕ
ದಂಬ ಮೋಹಿಪ ವಿಡಂಬ ಆಹಾ
ಅಂಬುಜಾಸನಪಿತನ ತುಂಬಿದ ಮೀನ್ಜಂಘೆ
ನಂಬಿದ ಜನರನ್ನ ಇಂಬಾಗಿ ಸಲಹೋನಾ ೯

ಪರಡೆರಡು ಮಾಣಿಕ್ಯಾವರಣ, ಪೊಳೆವ
ಕಿರುಗೆಜ್ಜೆನೂಪುರಾಭರಣ ಇಟ್ಟು
ಮೆರವೊ ಗಂಗೆಯ ಪೆತ್ತ ಚರಣ ಯುಗ
ನಿರುತ ಭಜಿಪರೊಳತಿ ಕರುಣ ಆಹಾ
ಮರೆಯದೆ ಮಾಡುತ ಪರಿಪರಿ ಸೌಖ್ಯವ
ಕರೆದುನೀಡುವನಹಿಗಿರಿವಾಸ ಶ್ರೀಶನ್ನ ೧೦

ಪೋತೇಂದು ನಖಯುತ ಬೆರಳ ಸಾಲು
ದೂತತತಿಗೆ ಸುಖಗಳ ನಿತ್ತು
ನೀತಜ್ಞಾನ ಭಕ್ತಿಗಳ ನಿತ್ತ
ಪ್ರೀತಿಪಡೆಯೆ ಮುಕ್ತಿಗಳ ಆಹಾ
ವಾತಗುರುಜಗನ್ನಾಥವಿಠಲನತಿ
ಪ್ರೀತಿಂದ ಪುರುಷಾರ್ಥದಾತನಾದುದು ನಿತ್ಯ ೧೧

## ೬೫

**ಅಸಾವೇರಿ** **ಆದಿ**

ನೋಡಿರಮ್ಮ ವೆಂಕಟೇಶ ಹೂಡಿದಾಟವಾ
ಹುಡುಗರಾಟವಾ ಮದುವೆ ಕೂಟವಾ ಪ

ಆಡಾಲರಿದು ನೋಡೀದವರ ಕೇಡೀನೋಟವಾ ಅ

ಬಿಡುವಳಲ್ಲದ ಮಡದಿಯು ಬಿಟ್ಟ ಬೆಡಗಿನ ಭಾವವಾ
ಹೊಡೆದುಬಿಟ್ಟವನಡಿ ಪಿಡಿದು ಕಣ್ಣೊಡೆದ ಮೋಸವಾ

ಪೊಡವಿಯ ಸುತ್ತುವ ಹೆಡೆಯುಳ್ಳನ ಗಿರಿ ಮುಡಿಯಲಿ ತೋರುವಾ
ತುಡುದನ ಕಾಯುವ ನಡುನೆತ್ತಿಗೆ ಬಿಡೆ ಕಡು ಗೋಳಾಡುವ ಮೋಹಕವಾ ೧

ತನ್ನನು ತಾನೇ ಬೇಡೀದಂಥಾ ಗನ್ನಗತಕಾವಾ
ಹುಣ್ಣಿಗೆ ಹತ್ತಿಹಾಲನ್ನಿಟ್ಟಾ ಚಿನ್ಮಯ ಕೈತವಾ
ಕನ್ಯೆಯರಲ್ಲಿ ತನ್ನಯ ಮನದ ಬನ್ನವ ಪೇಳುವಾ ಅನ್ಯರ
ಲೆಕ್ಕಿಸದುನ್ನತ ಮಹಿಮ ಅರಣ್ಯಕೆ ಬೇಟೆಗೆ ಹೋದನುವಾ ೨

ಕಾಮಾವಿಲ್ಲದ ಸ್ವಾಮಿ ವನದಿ ಭಾಮೆಯ ಮೋಹಿಸುವಾ
ವ್ಯೋಮರಾಜನ ಧಾಮದಿ ಭದ್ರದಿ ಸಾಮುದ್ರಿಕನೊರೆವಾ
ಸಾಮಾನ್ಯನ ತೆರಮಾಮಾನಿನಿಪತಿ ಹೇಮವ ಕಡ ತರುವಾ
ಹೇಮೋದರನ ಇಚ್ಛಾಮಾತ್ರದಿ ಪಡೆದ ಮಹಿಮನ ಕಲ್ಯಾಣಸಂಭ್ರಮವಾ ೩

ಕಲಿಯುಗ ಜನರಿಗೆ ಕಲ್ಲಿನ ಪರಿಯಲಿ ತೋರುವ ವಿಗ್ರಹನಾ
ಬಲು ಪಾತಕಿ ಹೊಲೆ ಕುಂತಳೆಪತಿಯನು ಸಲಹಿದ ವೇಂಕಟನ
ಬಾಲಕಗಾಯುಧಜಾಲವನಿತ್ತ ಕುಲಾಲೋದ್ಧಾರಕನಾ
ಬಾಲನಸಹಿತದೊಳಾ ಲಲನೆಗೆ ದೇಹಾಲಯವಿತ್ತ ವಿಶಾಲಮಹಿಮನಾ ೪

ವತ್ಸರಕೊಮ್ಮೆ ಸದುತ್ಸವದಿಂದ ಬ್ರಹ್ಮೋತ್ಸವಗೊಳ್ಳುವನಾ
ಮತ್ಸರಿಸುವ ಜನಹೃತ್ಸರಸಿಜಕತಿ ಜ್ಯೋತ್ಸ್ನವ ಬೀರುವನಾ
ಸತ್ಸಹವಾಸದಿ ಚಿತ್ತೈಸಲು ಅಘ ಭರ್ತ್ಸನೆ ಮಾಡುವನಾ
ಹೃತ್‌ಸ್ಥಿತ ತಂದೆ ವೆಂಕಟೇಶವಿಠಲ ಶ್ರೀವತ್ಸಾಂಕಿತನಾಶ್ಚರ್ಯೋತ್ಸುಕನಾ ೫

೭೭

**ಕಾಂಬೋದಿ** ಏಕ

ನೋಡು ನೋಡು ವೆಂಕಟೇಶ
ನೋಡು ನೋಟವ ಅವನು
ಆಡುವಾಟವ
ಬೇಟೆಗಾಗಿ ಹೊರಟು ಬಂದ ಪ್ರಖ್ಯಾತವ ಪ

ಡಂಗುರವ ತೀಡಿ ಮೈಯೊಳು ಗಂಧ ಪೂಸಿದ
ಸ್ವಾಮಿ ಗಂಧ ಪೂಸಿದ ೧

ಪುಣುಗು ಜವ್ವಾಜಿ ಕಸ್ತೂರಿ ಹಚ್ಚಿದ
ಸ್ವಾಮಿ ಕಸ್ತೂರಿ ಹಚ್ಚಿದ ೨

ನೊಸಲಮೇಲೆ ಮೃಗನಾಭಿ ತಿಲಕ ಧರಿಸಿದ
ಸ್ವಾಮಿ ತಿಲಕ ಧರಿಸಿದ ೩

ಓರೆ ತುರುಬ ಓರೆ ಜಡೆಯ ಗೊಂಡೆ ಕಟ್ಟಿದ
ಸ್ವಾಮಿ ಗೊಂಡೆ ಕಟ್ಟಿದ ೪

ಎಂಟು ಎಂಟು ಮುತ್ತಿನ ವಂಟಿ ಇಟ್ಟನೆ
ಸ್ವಾಮಿ ವಂಟಿ ಇಟ್ಟನೆ ೫

ಕಂಠದಲ್ಲಿ ಕೌಸ್ತುಭ ಆಭರಣವಿಟ್ಟನೆ
ಸ್ವಾಮಿ ಆಭರಣವಿಟ್ಟನೆ ೬

ಪಾದದಲ್ಲಿ ಹೊನ್ನಂದುಗೆ ನೂಪುರವಿಟ್ಟನೆ
ಸ್ವಾಮಿ ಬಾಪುರಿ ಇಟ್ಟನೆ ೭

ಕಿರುಗೆಜ್ಜೆ ಪಾಡಗ ಪೆಂಡೆ ಕಾಲಲಿಟ್ಟನೆ
ಸ್ವಾಮಿ ಕಾಲಲಿಟ್ಟನೆ ೮

ಅಂಗುಲಿಗೆ ತಕ್ಕಂಥ ಉಂಗುರವಿಟ್ಟನ
ಸ್ವಾಮಿ ಹೊನ್ನುಂಗುರವಿಟ್ಟನೆ ೯

ತೋಳರಕ್ಷಮಣಿ ಹಸ್ತಕಡಗ ಇಟ್ಟನೆ
ಸ್ವಾಮಿ ಕಡಗ ಇಟ್ಟನೆ ೧೦

ಹಾರಪದಕ ಹುಲಿಯುಗುರು ವೈಜಯಂತಿಯು
ಕೊರಳೊಳು ವೈಜಯಂತಿಯು ೧೧

ದುಂಡು ಮುತ್ತು ಕಟ್ಟಿ ಸರಿಗೆ ತಾಳಿ ಧರಿಸಿದ
ಸ್ವಾಮಿ ತಾಳಿ ಧರಿಸಿದ ೧೨

ಬಂದಿಕಂಕಣ ಬಾಪುರಿ ವಂಕಿ ಇಟ್ಟನೆ
ಸ್ವಾಮಿ ವಂಕಿ ಇಟ್ಟನೆ ೧೩

ಶೃಂಗಾರದ ಜರತರದ ಅಂಗಿ ತೊಟ್ಟನ
ಸ್ವಾಮಿ ಅಂಗಿ ತೊಟ್ಟನೆ ೧೪

ಅಂಗಳದಲ್ಲಿ ಭಂಗಾರದ ಕವಚವಿಕ್ಕಿದ
ಸ್ವಾಮಿ ಕವಚವಿಕ್ಕಿದ ೧೫

ದಿಟ್ಟ ವೇಂಕಟೇಶ ಬೇಟೆಯಾಡ ಹೊರಟನೆ
ಸ್ವಾಮಿ ಬೇಟೆಯಾಡ ಹೊರಟನೆ ೧೬

ಪಟ್ಟವಾಳಿ ಶಾಮಿಯ ಕಸೆಯ ಬಿಗಿದನೆ
ಸ್ವಾಮಿ ಕಸೆಯ ಬಿಗಿದನೆ ೧೭

ಹುಡಿಯಕಟ್ಟು ನಡುವಿಗೆ ಕಟ್ಟಾಣಿ ಹೊಗಿಸಿದ
ಸ್ವಾಮಿ ಕಟ್ಟಾಣಿ ಹೊಗಿಸಿದ ೧೮

ಓರೆ ತುರುಬಿನ ನಾಯಕ ಬಾರದ್ಹೋದನೆ
ಸ್ವಾಮಿ ಬಾರದ್ಹೋದನೆ ೧೯

ಚೆಲುವ ಚೆನ್ನಿಗರಾಯನಾಗಿ ವನಕೆ ಹೊರಟನೆ
ಸ್ವಾಮಿ ವನಕೆ ಹೊರಟನೆ ೨೦

ಜಗವೆಲ್ಲ ನೋಡುತಿರಲು ತೇಜಿಯೇರಿದ
ಸ್ವಾಮಿ ತೇಜಿಯೇರಿದ ೨೧

ತ್ರಿಜಗವನ್ನ ಪಾಲಿಸೆಂದು ತೇಜಿ ಹಿಡಿದನೆ
ಸ್ವಾಮಿ ವಾಜಿ ಹಿಡಿದನೆ ೨೨

ಗಟ್ಟಬೆಟ್ಟವನ್ನೆ ಸುತ್ತಿ ಕಷ್ಟಬಟ್ಟನೆ
ಸ್ವಾಮಿ ಕಷ್ಟಬಟ್ಟನೆ ೨೩

ವೃಕ್ಷಮೂಲದಲ್ಲಿ ಮಿಂಚುತಿಹಳ ಕಂಡನೆ
ಸ್ವಾಮಿ ಮಿಂಚುತಿಹಳ ಕಂಡನೆ ೨೪

ಸೋಲಮುಡಿಯ ಸೋಗೆಗಣ್ಣ ಓರೆನೋಟವ
ಅವಳ ಓರೆನೋಟವ ೨೫

ನೀಲವರ್ಣದ ಕೋಮಲಾಂಗಿ ಮೇಲೆ ಛಾಯವ
ಅವಳ ಮೇಲೆ ಛಾಯವ ೨೬

ಎರಳೆಗಂಗಳಂತೆ ಕಣ್ಣ ತಿರುಗುತಿರುವಳು
ಅವಳು ಹೊಳೆಯುತಿರುವಳು ೨೭

ಮೃಗವ ಕಂಡು ಶಿರವನೆತ್ತಿ ನೋಡುತಿರುವಳು
ಅವಳು ನೋಡುತಿರುವಳು ೨೮

ಕುಂಜರಗಮನೆಯಂತೆ ತಿರುಗುತಿರುವಳು
ಅವಳು ಒಲೆವುತಿರುವಳು ೨೯

ವನವ ಬಿಟ್ಟು ವನಕೆ ವನಕೆ ಹಾರುತಿರುವಳು
ಅವಳು ಹಾರುತಿರುವಳು ೩೦

ಅವಳ ಕಂಡು ವೆಂಕಟೇಶ ಭ್ರಾಂತಿಬಟ್ಟನೆ
ಸ್ವಾಮಿ ಭ್ರಾಂತಿಗೊಂಡನೆ ೩೧

ಅಡ್ಡದಾರಿಯಲ್ಲಿ ಮೋರೆ ನೋಡುತ್ತಿದ್ದನೆ
ಸ್ವಾಮಿ ನೋಡುತ್ತಿದ್ದನೆ ೩೨

ದಾರಿಗಡ್ಡ ನಿಂದಿರಲಾರ ಹೀನ ರಾವುತ
ಎಲೊ ಹೀನ ರಾವುತ ೩೩

ಪರನಾರಿಯರ ಕಂಡು ಮೋರೆ ಹೇಗೆ ಮಾಡುತಿ
ಎಲೊ ಹೇಗೆ ಮಾಡುತಿ ೩೪

ಹೀನನಲ್ಲವೆ ನಿನ್ನ ಹುಡುಕ ಬಂದೆನೆ
ನಿನ್ನ ಹುಡುಕ ಬಂದೆನೆ ೩೫

ನಿನ್ನ ಗುರುಕುಚಗಳ ಕಂಡು ಭ್ರಾಂತಿಗೊಂಡೆನೆ
ನಾನು ಭ್ರಾಂತಿಗೊಂಡೆನೆ ೩೬

ಲಂಡ ಪುಂಡರ ಮಾತು ಆಡದಿರೊ
ಎನ್ನ ಕೂಡಾಡದಿರೊ ೩೭

ಕತ್ತಿ ಕಠಾರಿ ನಿನ್ನ ಸೇನೆಗಂಜೆನೊ
ನಾನು ಸೇನೆಗಂಜೆನೊ ೩೮

ನಿನ್ನ ಬಿರುದ ಬಿಟ್ಟುಕೊಟ್ಟು ಬಾರೆ ಚುಂಚುಕಿ
ಬೇಗ ಬಾರೆ ಚುಂಚುಕಿ ೩೯

ಬಾರೆ ಹೋಗೆನ್ನಲಿಕ್ಕೆ ಭಾಮೆಯೆ ನಾನು
ಎಲೊ ಭಾಮೆಯೆ ನಾನು ೪೦

ನಿನ್ನ ಬಿಂಕ ಬಿಟ್ಟುಕೊಟ್ಟು ತಿರುಗೊ ರಾವುತ
ಅತ್ತ ಸಾರೊ ರಾವುತ ೪೧

ನೀಲವೇಣಿ ಎನ್ನ ಕೂಡೆ ನಿಲ್ಲಲಾರೆಯ
ಎನ್ನೊಳ್ ನಿಲ್ಲಲಾರೆಯ ೪೨

ನಿನ್ನ ಮುಖ ಪದ್ಮಗಳ ಕಂಡು ಭ್ರಾಂತಿಗೊಂಡೆನೆ
ನೀರೆ ಭ್ರಾಂತಿಗೊಂಡೆನೆ ೪೩

ಹೀನ ಮಾತನಾಡದಿರೊ ಹೀನ ರಾವುತ
ಎಲೊ ಹೀನ ರಾವುತ ೪೪

ವಾರಿಜಾಕ್ಷಿ ಎನ್ನ ಕೂಡೆ ವಾದವೇತಕೆ
ಎಲೆ ವಾದವೇತಕೆ ೪೫

ಪ್ರೇಮದಿಂದ ಬಂದು ತೊಡೆಯ ಮೇಲೆ ಏರೆ ಚುಂಚುಕಿ
ಮೇಲೆ ಏರ ಚುಂಚುಕಿ ೪೬

ತೊಡೆಯ ಮೇಲೆ ಏರಲಿಕ್ಕೆ ಮಡದಿಯೆ ನಾನು
ಎಲೊ ಮಡದಿಯೆ ನಾನು ೪೭

ಹೀನ ಮಾತನಾಡದಿರೋ ಹುಡುಗ ರಾವುತ
ಎಲವೊ ತುಡುಗ ರಾವುತ ೪೮

ರಾಜ್ಯಭೂಮಿಗಳನು ನಾನು ಅಷ್ಟು ಕೊಡುವೆನು
ನಿನಗೆ ಬಿಟ್ಟುಕೊಡುವೆನು ೪೯

ನಿನ್ನೊಡೆಯನೆಂದು ಪಾಲಿಸೆ ಚುಂಚುಕಿ
ಬೇಡಿಕೊಂಬೆ ನಾಯಕಿ ೫೦

ರಾಜ್ಯ ಭೂಮಿಯಾಳಲಿಕ್ಕೆ ರಾಯನೇ ನಾನು
ಎಲೊ ರಾಯನೇ ನಾನು ೫೧

ದೊಡ್ಡ ಅಡವಿ ಬೆಟ್ಟದೊಳಗೆ ಆಹಾರವೇನೊ
ಎಲೊ ಆಹಾರವೇನೊ ೫೨

ಆಲದಂತಿಹ ಹಣ್ಣು ಮುಟ್ಟಬಾರದ ಹಣ್ಣು
ಮುಟ್ಟಬಾರದ ಹಣ್ಣು ೫೩

ಮುದ್ದು ಸುರಿವ ಹೂ ಬಹಳ
ಮುದ್ದು ಸುರಿವ ಹೂ ೫೪

ಕರೆಯ ಬಾರದಾ ಹಣ್ಣು ಕೈಗೆ ನಿಲಕಾದ
ಹಣ್ಣು ಕೈಗೆ ನಿಲಕಾದ ೫೫

ಎಷ್ಟು ಪೇಳ್ದರು ಕೇಳಲಿಲ್ಲ ಏನ ಮಾಡಲಿ
ಇನ್ನೇನು ಮಾಡಲಿ ೫೬

ಅಡವಿಯೊಳಗೆ ದಾರಿಲ್ಲೆಂದು ಜುಲ್ಮಿ ಮಾಡಿದ
ಸ್ವಾಮಿ ಜುಲ್ಮಿಮಾಡಿದ ೫೭

ಸ್ವಾಮಿ ಪುಷ್ಕರಣಿಯ ತೀರದಲ್ಲಿ ವಾಸಮಾಡಿದ
ಸ್ವಾಮಿ ವಾಸಮಾಡಿದ ೫೮

ವರಹವತಾರ ತಾನೆಂದು ಅರಸನಾದನೆ
ಸ್ವಾಮಿ ಅರಸನಾದನೆ ೫೯

ಕೊಲ್ಲಾಪುರದಲ್ಲಿ ತನ್ನ ನಾರಿಯಿಟ್ಟನೆ
ಸ್ವಾಮಿ ನಾರಿಯಿಟ್ಟನೆ ೬೦

ಬೆಟ್ಟ ನಡೆವರಿಲ್ಲವೆಂದು ಕೃಷ್ಣ ನಡೆದನೆ
ಸ್ವಾಮಿ ಕೃಷ್ಣ ನಡೆದನೆ ೬೧

ಸ್ವಾಮಿ ವೆಂಕಟೇಶ ತಾನು ಬೇಟೆಯಾಡಿದ
ಸ್ವಾಮಿ ಬೇಟೆಯಾಡಿದ ೬೨

ಅಪ್ಪ ವೆಂಕಟೇಶ ತಾನು ಒಪ್ಪದಿಂದಲೆ
ಸ್ವಾಮಿಗಿರಿಗೆ ಬಂದನೆ ೬೩

ಶ್ರೀಶ ಪುರಂದರವಿಠಲನೆಂದು ಹಾಗೆ ನಿಂದನೆ
ಸ್ವಾಮಿ ಹಾಗೆ ನಿಂದನೆ ೬೪

## ೬೭

**ಮಧ್ಯಮಾವತಿ** **ಝಂಪೆ**

ಪನ್ನಗಾದ್ರಿನಿವಾಸ ಸುದರ್ಶನಪಾಂಚ
ಜನ್ಯಧರ ದೂರ್ವಾಸಪ್ರಮುಖಮುನಿಸ
ನ್ಮಾನ್ಯ ಕರುಣಾವಿಲಾಸ ಶ್ರೀ ಶ್ರೀನಿವಾಸ ಪ

ಎನ್ನ ಅವಗುಣ ಸಹಸ್ರವೆಣಿಸದೆ
ನಿನ್ನವರೊಳಗೆಣಿಸನುದಿನ
ಮನ್ಮನಾಲಯದೊಳು ನೆಲಸು ಮೈ
ಗಣ್ಣನನುಜ ವರಾಭಯ ಶ್ರೀಕರ ಅ

ಕಾಮಿತಪ್ರದ ಕೋಲ ಅಂಜನಾಧರಧಾರ
ಧಾಮ ಭೂಮಿವಿಲೋಲ ಶಂಖನೃಪವರದ
ಹೇಮಲೋಚನಕಾಲ ದ್ವಿಜಮಹಿಳೆನುಳುಹಿದ
ಶ್ಯಾಮಲಾಂಗ ಸುಶೀಲ ವೆಂಕಟಕುಲಾಲ
ಭೀಮಗೊಲಿದ ಮಹಾಮಹಿಮ ಪಿ
ತಾಮಹನ ನಾಸೋದ್ಭವ ವಿಯ
ದ್ಭೂಮಿಪತಿಜಾಮಾತ ಕಿಟಿಸು
ತ್ರಾಮಸುತಸೂತಪ್ರಮೋದ ಸು
ದಾಮಸೌಖ್ಯಪ್ರದ ವರದ ತ್ರ
ಯೀಮಯಪ್ರಣತಾರ್ತಿಹರ ಬಲ
ರಾಮನಾನುಜ ದಂಷ್ಟ್ರಿ ಸಾಲಿ
ಗ್ರಾಮಸದನ ಸಹಸ್ರನಾಮ
ಸಾಮಜಪತಿಪೋಷಕ ರಿಪುವನ
ಧೂಮಧ್ವಜವಿಧಿಭವಸೇವಿತ
ವ್ಯೋಮಾಳಕಸಖಿ ಸರ್ವಜ್ಞ ರ
ಮಾಮನೋಹರ ಮನ್ನಿಪುದೆನ್ನ ೧

ದೀನಜನಮಂದಾರ ದೇವಕೀಸುತಜಗ
ತ್ರಾಣಗುಣಗಂಭೀರ ಪೃಥ್ವೀಶತೋಂಡ
ಮಾನವರದ ಉದಾರ ಲುಬ್ಧಕನ ವಿಷ್ವ
ಕ್ಸೇನನೆನಿಸಿದಧೀರ ವೆಂಕಟವಿಹಾರ
ವೈನತೇಯವರೂಥ ಖಳಸ್ವ
ರ್ಭಾನುವಿನ ತಲೆಗಡಿದು ರವಿಶಶಿ
ಕ್ಷೋಣಿಜ ಬುಧಗುರು ಕವಿಶನಿಗಳ
ಶ್ರೇಣಿಯಲಿ ಮಾನಿಗಳ ಮಾಡಿದ ಮ
ಹಾನುಭಾವ ಮನೋಜಪಿತ ಚೆಲು
ವಾನನ ಕಲಿಮಲಾಪಹಾರಿ ಕೃ

ಶಾನುನಖಿ ಸಂಪೂಜ್ಯ ಸುಮನಸ
ಧೇನು ಶರಣಜನರ್ಗೆ ಸಂತತ
ನಾ ನಮಿಸುವೆ ನಳಿನಜಪಿತ ನಿ
ರ್ವಾಣದ ನಿರವದ್ಯ ನೀರಜಾ ಬ್ರ
ಹ್ಮಾಣಿ ಸುರನಿಕರನಿಲಯ ಆನುಸಂ
ಧಾನಕೆ ಕೊಡು ಬಹುವಿಧ ಕರ್ಮ ೨

ಸಾರಶ್ರೀಮದನಂತ ಸನಕಾದಿಸೇವ್ಯ ಪಾ
ದಾರವಿಂದ ಮಹಂತ ಸತ್ವಾದಿ ತ್ರಿಗುಣವಿ
ದೂರ ದಿತಿಜಕುಲಾಂತ ಗುಣರೂಪ ಪಾರಾ
ವಾರ ವಿಗತಾದ್ಯಂತ ಶ್ರೀಭೂಮಿಕಾಂತ
ಶೌರಿ ಶಫರ ಕಮಠ ವರಾಹ ಕ
ರ್ಬುರಕಶ್ಯಪುವಿದಾರಣನೆ ಭಾ
ಗೀರಥಿಯ ಪದನಖದಿ ಪಡೆದಂ
ಗಾರವರ್ಣನೆ ಭೃಗುಕುಲೋದ್ಭವ
ವಾರಿನಿಧಿಬಂಧನ ವನೌಕಸಪರಿ
ವಾರಪೋಷಕ ನಂದಗೋಪಕು
ಮಾರ ತ್ರಿಪುರವಿದೂರ ತುರಗವ
ನೇರಿದ ಜಗನ್ನಾಥವಿಠಲ
ಸಾರುವೆ ತವ ಪದಪಂಕಜ ಜಂ
ಭಾರಿಮದವಿಭಂಜನ ಭವಭಯ
ತಾರಕನಿನ್ನವರೊಳು ತತ್ವವಿ
ಚಾರವಕೊಡು ಚಿರಕಾಲದಲಿ ೩

## ೬೮

**ಯಮುನಾಕಲ್ಯಾಣಿ** **ಅಟ್ಟ**

ಪನ್ನಗಾದ್ರಿಪತಿ ನಮಗೆ ನೀ ಗತಿ
ಯೆಂಬುವ ಮತಿಯರಿತು ಈ ಸ್ಥಿತಿ ಪ

ವೈಕುಂಠವಾಸ ವರಮಂದಹಾಸ
ಭಕ್ತರುಲ್ಲಾಸ ಲಕ್ಷ್ಮೀವಿಲಾಸ ೧

ಮಾನವ ವೇಷ ಮಂಜುಳ ಭಾಷ
ವಿನುತ ವಿಶೇಷ ಕೌಸ್ತುಭ ಭೂಷ ೨

ಶಂಕಿಸುತಿರಲು ಸಾಕುವ ಬಾಲ
ಸಂಖ್ಯೆಯು ಬಲ್ಲ ಪುರಂದರವಿಠಲ ೩

## ೬೯

ಪಾದಕಂಡು ಪಾವನಾದೆನು ಶ್ರೀಗಿರಿಯ ನಿಲಯನ
ಪಾದಕಂಡು ಪಾವನಾದೆನು ಪ

ಪಾದಕಂಡು ಪಾವನಾದೆನು
ಮಾಧವನ ಪ್ರಸಾದ ಪಡೆದೆನು
ಹಾದಿಗಾಣದೆ ಪರಮ ದುರ್ಭವ
ಬಾಧೆಯೊಳು ಬಿದ್ದು ತೊಳಲಿ ಬಳಲುತ
ಮೇದಿನಿಯೊಳು ಜನುಮ ತಾಳಿ
ಭೇದಮತದ ಹಾದಿಬಿಟ್ಟು ಅ

ನೀಲಬಣ್ಣದೊಪ್ಪುವ ಸುಂದರ ಶುಭಕಾಯ ಇಂದಿರೆ
ಲೋಲ ತ್ರಿಜಗಮೋಹನಾಕಾರ ಕೊರಳಪದಕ
ಮಾಲ ಕೌಸ್ತುಭ ಮುಕುಟಮಣಿಹಾರ ರತ್ನದುಂಗುರ
ಕಾಲೊಳ್ಹೊಳೆಯುವ ಗೆಜ್ಜಸರಪಳಿ
ಶೀಲವೈಷ್ಣವ ನಾಮ ಪಣೆಯಲಿ
ಕಾಳರಕ್ಕಸಕುಲಸಂಹಾರನ
ಪಾಲಸಾಗರಕನ್ನೆವರನ
ಪಾಲಮೂಲೋಕಸಾರ್ವಭೌಮನ
ಮೇಲು ಭೂವೈಕುಂಠದಲ್ಲಿ ೧

ಉಟ್ಟದುಕೂಲ ಶಲ್ಯ ಜರತಾರ ಕೈಯಲ್ಲಿ ಕಂಕಣ
ಪಟ್ಟ ರತ್ನದ ನಡುವಿಗುಡಿದಾರ ವರ್ಣಿಸುವರಾರು
ಸೃಷ್ಟಿಯೊಳಗೀತ ಮೀರಿದವತಾರ ಇನಕೋಟಿ ಪ್ರಭಾಕರ
ಬಿಟ್ಟು ವೈಕುಂಠ ಇಹ್ಯಕೆ ಸಾಗಿ
ಬೆಟ್ಟದ ಮೇಲೆ ವಾಸನಾಗಿ
ಕೊಟ್ಟು ವರಗಳ ಮೂರು ಜಗಕೆ
ಶೆಟ್ಟಿಯಂದದಿ ಕಾಸುಕೊಳ್ಳುವ

ದುಷ್ಟಭ್ರಷ್ಟ ಶಿಷ್ಟರೆಲ್ಲರ
ಇಷ್ಟದಾಯಕ ದಿಟ್ಟ ದೇವನ ೨

ಒಂದೆ ಮನದಲಿ ಸಕಲ ಸೇವಕರು ಭಯಭಕುತಿಯಿಂದ
ಬಂದು ಹರಕೆಯ ತಂದು ನೀಡುವರು ತುಂಬುರನಾರದ
ರೊಂದಿಗಾನದಿಂ ಪಾಡಿ ಪೊಗಳುವರು ಆನಂದ ಕೋರುವರು
ಹೊಂದಿ ಭಜಿಸುತ ಸಪ್ತಋಷಿಗಣ
ಬಂದು ಇಳಿವರು ಬಿಡದೆ ಅನುದಿನ
ವಂದ್ಯ ನಿಗಮಾದಿಬಂಧು ಭಜಿಪರ
ಕಂದುಗೊರಳಾದಿ ಬ್ರಹ್ಮಸುರರಿಂ
ಗಂಧಪರಿಮಳ ಕುಸುಮ ದ್ರವ್ಯಗ
ಳಿಂದ ಸೇವೆಯಗೊಂಬ ದೇವನ ೩

ಉದಯಕಾಲದಿ ಬಾಲನವತಾರ ಮಧ್ಯಾಹ್ನಕಾಲದಿ
ಸದಮಲಾಂಗ ಯೌವನಾಕಾರಸುಸಂಧ್ಯಾಕಾಲದಿ
ಮುದುಕನಾಗಿ ಕಾಂಬ ಮನೋಹರ ಬಹುಮಹಿಮಗಾರ
ಪದುಮವದನ ಮದನನಯ್ಯ
ಪದುಮವತಿಯ ಪ್ರಾಣಪ್ರಿಯ
ಒದಗಿಬಂದ ಭಕುತಜನರನು
ಸುದಯದಿಂದ ಕರೆದು ಪ್ರಸಾದ
ಮುದದಿ ನೀಡುತ ಕೃಪೆಯದೋರಿ
ಸದಮಲಸಂಪದವನೀವನ ೪

ತೀರದೀತನ ಲೋಕಶೃಂಗಾರ ಏರಿನೋಡಲು
ಪಾರಗಿರಿತುದಿ ಗಾಳಿಗೋಪುರ ಮುಂದೆ ನಡೆಯಲು
ದಾರಿಯಲಿ ಕೊಳ್ಳ ಏಳು ವಿಸ್ತಾರ ಪರಮಪರತರ
ತೋರುವ ಮಹ ಗುಡಿಯು ಗೋಪುರ
ದ್ವಾರ ಚಿನ್ನದ ಕಳಸ ಬಂಗಾರ
ಗಾರು ಮಾಡದೆ ದಾಸಜನರನು
ತಾರತಮ್ಯದಿ ಪೊರೆಯಲೋಸುಗ
ಸೇರಿಧಾರುಣಿ ವೈಕುಂಠವೆನಿಸಿದ
ಧೀರ ವೆಂಕಟ ಶ್ರೀಶರಾಮನ ೫

## ೭೦

**ಮೋಹನ** **ಆದಿ**

ಪಾದವ ತೊಳೆದ ಗಗನ ರಾಜನು
ದೇವರ ಪಾದವ ತೊಳೆದ ಗಗನ ರಾಜನು ಪ

ಪಾದಪದ್ಮವ ನೋಡಿ ಪದ್ಮಾವತಿಯೂ ನಿಮಗೆ
ಮುದದಿಂದಲೇ ಇತ್ತು ಮೂರ್ತ ಮಾಡಿಸುವೆನೆಂದು
ದೇವರ ಪಾದವ ತೊಳೆದ ಗಗನ ರಾಜನು ೧

ಚಿನ್ನದ ತಂಬಿಗೆ ಉದಕವ
ಧರಣಿ ಚೆನ್ನಾಗಿ ತೊಳೆಯೇ ಮುದ್ದು ಪಾದವ
ಮನೋಹರ ಸ್ತುತಿ ಮಾಡಿ ಮಾನ್ಯ ಶ್ರೀ ವೆಂಕಟೇಶನ
ಪಾದವ ತೊಳೆದ ಗಗನ ರಾಜನು ೨

ಪಟ್ಟೆ ಪೀತಾಂಬರದಿಂದ ವರಿಸುತಾ
ನಮ ಪ್ರೀತಿಯಿಂದಲಿ ಅಳಿಯನ ನೋಡುತಾ
ಚಿನ್ನ ಚೆಲುವ ನಮ್ಮ ಹೆಣ್ಣಿಗೆ ತಕ್ಕವನೆಂದು
ಪಾದವ ತೊಳೆದ ಗಗನರಾಜನು ೩

ಪುಣ್ಯ ಪುರುಷೋತ್ತಮ ಕೇಳುತ್ತಾ
ಧರಣಿ ಚೆನ್ನಾಗಿ ನೋಡುತಾ
ಪೂರ್ವ ಪುಣ್ಯದ ಫಲ ಹಣ್ಣು ನಮಗಾಯಿತೆಂದು ನಮ್ಮಿಷ್ಟಾದಂತೆ
ವೆಂಕಟ ವಿಠ್ಠಲ ದೊರಕಿದನೆಂದು
ಪಾದವ ತೊಳೆದ ಗಗನರಾಜನು ೪

## ೭೧

**ಮಧ್ಯಮಾವತಿ** **ಅಟ್ಟ**

ಪಾಪೋಸು ಹೋದುವಲ್ಲ ಸ್ವಾಮೀ ಎನ್ನ
ಪಾಪೋಸು ಹೋದುವಲ್ಲ ಪ

ಅಪಾರ ದಿನಗಳಿಂದ ಆರ್ಜನೆ ಮಾಡಿದ ಅ

ಉರಗಾದ್ರಿಯಲಿ ಸ್ವಾಮಿ ಪುಷ್ಕರಣಿ ಮೊದಲಾದ
ಪರಿಪರಿ ತೀರ್ಥ ಸ್ನಾನಗಳ ಮಾಡಿ
ಹರಿದಾಸರ ಕೂಡಿ ಗಿರಿರಾಯರ ಮೂರ್ತಿ
ದರುಶನದಲ್ಲಿ ಮೈಮರೆತಿರಲು ಎನ್ನ ೧

ಪರಮಭಾಗವತರ ಹರಿಕಥೆ ಕೇಳಲು
ಪರಮ ಭಕುತಿಯಿಂದ ಕೇಳುತಿರೆ
ಪರಮಪಾಪಿಗಳ ಪಾಲಾಗಿ ಪೋದುವು
ಪರಮ ಪುರುಷನ ಮನಸಿಗೆ ಬಂದೀಗ ೨

ಮಾಯಾದೇವಿ ಎನಗೆ ಮೆಚ್ಚಿ ಕೊಟ್ಟದ್ದಳು
ದಾಯಾದಿಗಳು ನೋಡಿ ಸಹಿಸಲಿಲ್ಲ
ಮಾಯಾರಮಣ ನಮ್ಮ ಪುರಂದರ ವಿಠಲನ
ಮಾಯದಿಂದಲಿ ಮಟ್ಟಮಾಯವಾದವು ಎನ್ನ ೩

## ೭೨

ಬಿಲಹರಿ ಆದಿ

ಪಾಲಿಸಯ್ಯ ಪವನನಯ್ಯ
ಪಾಲವಾರಿಧಿಶಯ್ಯ ವೆಂಕಟರೇಯ ಪ

ಕಾಲಕಾಲಕೆ ಹೃದಯಾಲಯದೊಳು ನಿನ್ನ
ಶೀಲಮೂರುತಿ ತೋರೊ ಮೇಲುಕರುಣದಿ ಅ

ಶ್ರೀಶ ಸಂಸಾರವೆಂಬೊ ಸೂಸುವ ಶರಧಿಯೊ –
ಳೀಸಲಾರೆನೊ ಹರಿಯೆ ಪ ದೂರೆಯೆ
ದಾನನಂತೆಂದಮ್ಯಾಲೆ ಘಾಸಿಗೊಳಿಸುವುದು
ಲೇಸು ನಿನಗಲ್ಲವಯ್ಯ ಹೇ ಜೀಯ
ದೋಷರಾಶಿಗಳೆಲ್ಲ ನಾಶನ ಮಾಡಿಸು
ವಿಶೇಷವಾದ ಜ್ಞಾನ ಲೇಸುಭಕುತಿನಿತ್ತು
ಆಸೆಯ ಬಿಡಿಸನ್ನ ಮೀಸಲಮನಮಾಡಿ
ನೀ ಸುಳಿವುದು ಶ್ರೀನಿವಾಸ ಕೃಪಾಳೊ ೧

ಮೂರು ಗುಣಗಳಿಂದ ಮೂರು ತಾಪಗಳಿಂದ
ಮೂರು ಅವಸ್ಥೆಯಿಂದ ಮುಕುಂದ
ಮೂರು ಐದರಿಂದ ಮೂರು ಏಳರಿಂದ
ಮೂರರ ದಾರಿಗಾಣದೆ ಮೂರಾದೆ
ಮೂರು ಹಿಡಿಸಿ ಮ್ಯಾಲೆ ಮೂರೆರಡೋಡಿಸಿ
ಮೂರು ಮೂರು ಭಕ್ತಿಯ ಮೂರು ಕಾಲಕೆ ಇತ್ತು
ಮೂರು ರೂಪನಾಗಿ ಮೂರುಲೋಕವನೆಲ್ಲ
ಮೂರು ಮಾಡುವ ಬಿಂಬ ಮೂರುತಿ ವಿಶ್ವ ೨

ಕರುಣಾಸಾಗರ ನಿನ್ನ ಸ್ಮರಣೆಮಾತ್ರದಿ ಸಕಲ
ದುರಿತ ಪರಿಹಾರವೆಂದು ನಾ ಬಂದು
ಮರೆಹೊಕ್ಕಮ್ಯಾಲೆನ್ನ ಪೊರೆಯಬೇಕಲ್ಲದೆ
ಜರಿದು ದೂರ ನೂಕುವರೆ ಮುರಾರಿ
ಮರುತಾಂತರ್ಗತ ಗೋಪಾಲವಿಠಲ ಈ
ಶರೀರವೆ ನಿನ್ನ ಚರಣಕರ್ಪಿಸಿದೆನೊ
ಸರಿಬಂದದ್ದು ಮಾಡೊ ಬಿರುದು ನಿನ್ನದು ದೇವ
ಪರಮದಯಾನಿಧೆ ಉರಗಾದ್ರಿವಾಸ ೩

## ೭೩

ಪೊರೆ ಸುರೇಶ ಶ್ರೀಶ ಶ್ರೀನಿವಾಸ
ದುರಿತವಿನಾಶ ಪರಮಪ್ರಕಾಶ ಪ

ಅನುದಿನ ನಿಮ್ಮಯ ನೆನಪಿನ ಘನಸುಖ
ಕರುಣಿಸಿ ಎನ್ನ ಕನಿಕರದೊಡನೆ ೧

ಚಿಂತೆನಿವಾರಣ ಚಿಂತೆನೀಗಿಸಿ ಎನ್ನ
ಸಂತತದಿಂಪೊರೆ ಸಂತರ ಪ್ರಿಯಕರ ೨

ಹರಣಹೋದರು ನಿಮ್ಮ ಚರಣಭಕ್ತಿಯನು
ಮರೆಯದದಟ ಮಿಗೆ ಕರುಣಿಸಿ ಶ್ರೀರಾಮ ೩

## ೭೪

ಪೋಷಿಸೆನ್ನ ವೆಂಕಟೇಶ ಶ್ರೀಶ ಶ್ರೀನಿವಾಸ
ಶೇಷಗಿರಿನಿಲಯ ಶ್ರೀ ಇಂದಿರೇಶ ಈಶ ಪ

ಹೇಸಿಯಿವನೆಂದೆನುತ ದೂಷಣೆಯ ಮಾಡದಿರು
ದೋಷದೂರನೆ ನಿನ್ನ ದಾಸ ನಾನಭವ
ದಾಸಜನರ ಮನದುಲ್ಲಾಸದೇವರು ನೀನು
ದಾಸನ ಆಸೆಯನು ಪೂರೈಸಿ ಸಲಹಯ್ಯ ೧

ಕುನ್ನಿಕುಲದಲಿ ಜನಿಸಿ ಬನ್ನಬಡಲಾರದೆ
ಉನ್ನತೋನ್ನತಮಹಿಮ ನಿನ್ನ ಬೆನ್ನು ಬಿದ್ದೆ
ಭಿನ್ನತಾರದೆ ಎನಗೆ ನಿನ್ನ ದರ್ಶನವಿತ್ತು
ಉನ್ನತಮತಿ ನೀಡಿ ಮನ್ನಿಸಿ ಸಲಹು ೨

ನರರ ಹಂಗನು ಬಿಡಿಸಿ ಕರುಣಿಸೆಲೊ ನಿತ್ಯ ತವ
ಶರಣಜನರುಂಡು ಮಿಕ್ಕ ಪರಮಪ್ರಸಾದ
ಶರಣೆಂದು ಚರಣಕ್ಕೆ ಮರೆವೊಕ್ಕೆ ನೆರೆನಂಬಿ
ತಿರುಪತೀಶನೆ ಭಕ್ತಕರುಣಿ ಶ್ರೀರಾಮ ೩

## ೭೫

ಪ್ರಾತಃಸ್ಮರಾಮಿ ರಮಯಾ ಸಹ ವೇಂಕಟೇಶಂ
ಮಂದಸ್ಮಿತಂ ಮುಖಸರೋರುಹ ಕಾಂತಿರಮ್ಯಮ್
ಮಾಣಿಕ್ಯಕಾಂತಿ ವಿಲಸನ್ಮುಕುಟೋರ್ಧ್ವಪುಂಡ್ರಂ
ಪದ್ಮಾಕ್ಷಲಕ್ಷಮಣಿಕುಂಡಲಮಂಡಿತಾಂಗಮ್ ೧

ಪ್ರಾತರ್ಭಜಾಮಿ ಕರರಮ್ಯ ಸುಶಂಖಚಕ್ರಂ
ಭಕ್ತಾಭಯಪ್ರದಕಟಿಸ್ಥಲದತ್ತ ಪಾಣಿಮ್
ಶ್ರೀವತ್ಸಕೌಸ್ತುಭಲಸನ್ಮಣಿಕಾಂಚನಾಢ್ಯಂ
ಪೀತಾಂಬರಂ ಮದನಕೋಟಿ ಸುಮೋಹನಾಂಗಮ್ ೨

ಪ್ರಾತರ್ನಮಾಮಿ ಪರಮಾತ್ಮಪದಾರವಿಂದಂ
ಆನಂದಸಾಂದ್ರನಿಲಯಂ ಮಣಿನೂಪುರಾಢ್ಯಮ್

ಏತತ್ಸಮಸ್ತಜಗತಾಮಿತಿ ದರ್ಶಯಂತಃ
ವೈಕುಂಠಮತ್ರ ಭಜತಾಂ ಕರಪಲ್ಲವೇನ ೩

ವ್ಯಾಸರಾಜಯತಿಪ್ರೋಕ್ತಂ ಶ್ಲೋಕತ್ರಯಮಿದಂ ಶುಭಂ
ಪ್ರಾತಃಕಾಲೇ ಪಠೇದ್ಯಸ್ತು ಪಾಪೇಭ್ಯೋ ಮುಚ್ಯತೇ ನರಃ

**೭೬**

**ಮಧ್ಯಮಾವತಿ** **ಅಟ್ಟ**

ಬಂದು ನಿಂದಿಹ ನೋಡಿ, ಭೂತಳದಿ ವೆಂಕಟ
ಇಂದಿರೆಯ ಒಡಗೂಡಿ, ಒಪ್ಪುವ ನಿರಂತರ
ಪೊಂದಿ ಭಜನೆಯ ಮಾಡಿ, ಆನಂದಗೂಡಿ ಪ

ವಂದಿಸುತ ಮನದೊಳಗೆ ಇವನಡಿ
ದ್ವಂದ್ವ ಭಜಿಸಲು ಬಂದ ಭಯಹರ
ಇಂದುಧರ ಸುರವೃಂದನುತ ಗೋ
ವಿಂದ ಘನ ದಯಾಸಿಂಧು ಶ್ರೀಹರಿ ಅ

ದ್ವಾರದೆಡಬಲದಲ್ಲಿ ಜಯವಿಜಯರಿಬ್ಬರು
ಸೇರಿ ಸೇವಿಪರಲ್ಲಿ ಸನಕಾದಿನುತ ವೃಂ
ಗಾರ ನಿಧಿ ಅಂಗದಲ್ಲಿ ಮುತ್ತಿನಲಿ ಶೋಭಿಪ
ಹಾರ ಪೊಂದಿಹುದಲ್ಲಿ ವಿಸ್ತಾರದಲ್ಲಿ
ವಾರವಾರಕೆ ಪೂಜೆಗೊಂಬುವ
ಹಾರ ಮಕುಟಾಭರಣ ಕುಂಡಲಧಾರ ಭುಜ ಕೇ
ಯೂರಭೂಷಿತ ಮಾರಪಿತ ಗುಣ ಮೋಹನಾಂಗ
ಚಾರು ಪೀತಾಂಬರ ಕಟಿ ಕರವೀರ ಕ
ಲ್ಹಾರಾದಿ ಪೂವಿನ ಹಾರ ಕೊರಳೊಳು ಎಸೆವ
ತಿರೆ ವದನಾರವಿಂದನ ನಗುತ ನಲಿಯುತ ೧

ಎಲ್ಲ ಭಕುತರಭೀಷ್ಟ ಕೊಡುವುದಕೆ ತಾ ಕೈ
ವಲ್ಯಸ್ಥಾನವ ಬಿಟ್ಟ ಶೇಷಾದ್ರಿ ಮಂದಿರ
ದಲ್ಲಿ ಲೋಲುಪ ದಿಟ್ಟ ಸೌಭಾಗ್ಯಸಿಧಿಗೆದುರಿಲ್ಲ
ಭುಜಬಲಿ ಪುಷ್ಟ ಕಸ್ತೂರಿಯಿಟ್ಟ

ಚೆಲ್ವ ಫಣೆಯಲಿ ಶೋಭಿಸುವ ಸಿರಿ
ವಲ್ಲಭನ ಗುಣ ಪೊಗಳಿದಿಹ ಜಗ ಖುಲ್ಲರೆದೆದಲ್ಲಣ ಪರಾಕ್ರಮ
ಮಲ್ಲಮರ್ದನ ಮಾತುಳಾರಿ ಫಲ್ಗುಣನ ಸಖ ಪ್ರಕಟನಾಗಿಹ
ದುರ್ಲಭನು ಅಘದೂರ ಬಹುಮಾಂಗಲ್ಯ ಹೃದಯನು ಸೃಷ್ಟಿಗೆ
ಉಲ್ಲಾಸ ಕೊಡುತಲಿ ಚಂದದಿಂದಲಿ ೨

ಪದಕ ಕೌಸ್ತುಭಧಾರ ಸರಿಗೆಯ ಕಂಧರ
ಸುದರುಶನದರಧಾರ ಸುಂದರ ಮನೋಹರ
ಪದಯುಗದಿ ನೂಪುರ ಇಟ್ಟಿಹನು
ಸನ್ಮುನಿ ಹೃದಯಸ್ಥಿತ ಗಂಭೀರ ಬಹು ದಾನಶೂರ
ವಿಧಿ ಭವಾದ್ಯರ ಪೊರೆವ ದಾತನು
ತುದಿ ಮೊದಲು ಮಧ್ಯಮ ವಿರಹಿತನು ಉದುಭವಾದಿಗಳೀವ ಕರ್ತನು
ತ್ರಿದಶಪೂಜಿತ ತ್ರಿಭುವನೇಶ ನದುವಿಲಾಸದಿ ಸ್ವಾಮಿತೀರ್ಥದಿ
ಉದಿಸುತಿರೆ ಸಿರಿ ಮಹಿಳೆ ಸಹಿತದಿ ಪದುಮನಾಭ ಪುರಂದರವಿಠ್ಠಲ
ಪ್ರತಿ ಪರುಷ ಬ್ರಹ್ಮೋತ್ಸವದಿ ಮೆರೆಯುತ ೩

## ೭೭

**ಪೂರ್ವಿ** **ಅಟ್ಟ**

ಬಂದೆವಯ್ಯ ಗೋವಿಂದಶೆಟ್ಟಿ ಪ

ಇಂದು ನಿಮ್ಮ ಹರಿವಾಣಪ್ರಸಾದವುಂಟೆನಲಾಗಿ ಅ

ಅಪ್ಪಾಲು ಅತಿರಸ ತುಪ್ಪ ಕಜ್ಜಾಯವು
ಒಪ್ಪುವ ಯಾಲಕ್ಕಿ ಶುಂಠಿ ಮೆಣಸು
ಅಪ್ಪರೂಪವಾದ ಕಜ್ಜಾಯ ರಾಶಿಗಳ
ಛಪ್ಪನ್ನದೇಶಕೆ ಮಾರುವ ಶೆಟ್ಟಿ ೧

ಒಡೆದ ಮಡಕೆಯನ್ನು ಇಡದೆ ನಾಮವಮಾಡಿ
ಕೊಡುವೆ ನೀ ಕಾಸಿಗೆ ಒಂದೊಂದನು
ಒಡಲು ತುಂಬಿ ಮಿಕ್ಕ ಅನ್ನವ ಮಾರಿಸಿ
ಒಡವೆಯ ಗಳಿಸುವ ಕಡುಲೋಭಿಶೆಟ್ಟಿ ೨

ಶೇಷಗಿರಿಯ ಮೇಲೆ ಇಪ್ಪ ತಿಮ್ಮಶೆಟ್ಟಿ
ದೇಶಕೆ ಪ್ರಸಾದವ ನಡೆಸುವ ಶೆಟ್ಟಿ
ಆಶೆಯಿಂದ ಹಣಕಾಸು ಗಳಿಸುವ ಆದಿ
ಕೇಶವ ನಾರಾಯಣನೆಂಬ ಶೆಟ್ಟಿ ೩

## ೭೮

ಮುಖಾರಿ ಆದಿ

ಬಂದೆ ಬಂದೆ ಸ್ವಾಮಿಯೆ ಬಂದೆ ಬಂದೆ ಪ

ಬಂದೆ ಬಂದೆ ಗೋವಿಂದ ಗೋವಳ ಬಾಂಧವ ಭಕ್ತವತ್ಸಲ
ಇಂದಿರೇಶ ಶ್ರೀವೇಂಕಟಾ ನಿನ್ನ ಸಂದರುಶನಕೆ ಸಾಗಿ ನಾನಿಲ್ಲಿ ಅ

ನಡೆದು ನಡೆಸುತ ನುಡಿದು ನುಡಿಸುತ
ಅಡಿಗಡಿಗೆ ಕಾಪಾಡುತ
ಒಡನೆ ಆಡುತ ಬಿಡದೆ ಕ್ಷಣವನು
ಸಡಗರದಿ ಕರೆತರಲು ನಾನಿಲ್ಲಿ ೧

ಒಂದು ರೂಪದಿ ನಿಂದು ಎನ್ನಲಿ
ಚೆಂದದಿಂ ಕರೆತಂದೆ ಇಲ್ಲಿಗೆ
ಒಂದರಿಯೆ ನಿನ್ನ ವಂದಿಸುವ ಬಗೆ
ಬಂದೊದಗೊ ಎನ್ನ ವದನಕೆ ೨

ಆಪ್ತ ಅನಿಮಿತ್ತ ವ್ಯಾಪ್ತ ಸರ್ವತ್ರ
ಗುಪ್ತ ಗುಣಗಣ ಪೂರ್ಣನೆ
ಪ್ರಾಪ್ತ ನೀನೆನಗಾಗಬೇಕೆಂದು
ವ್ಯಾಪ್ತಿ ನಿನ್ನದು ಹುಡುಕುತಲಿ ನಾ ಬಂದೆ ೩

ಬಂದೆ ಬಂದೆ ನೀ ಬಂದಂತೆ
ಕರ ತಂದುದಕೆ ಫಲ ನೀನೆ ಬಲ್ಲೆ
ಸಂದರುಶನ ನಿನಗೆ ನೀ
ಮಾಳ್ಪಂದವನು ನೋಳ್ಪಾತುರದಿ ನಾ ಬಂದೆ ೪

ಏನು ಕೊಡಲಿಲ್ಲ ಏನು ಬೇಡಲಿಲ್ಲ
ಏನು ಪಡೆಯಲೊ ಕರುಣೆಯೆ

ನೀನು ಕೊಟ್ಟ ಸ್ವತಂತ್ರದಾಫಲ
ನಿನಗೆ ಅರ್ಪಿಸಬೇಕೆನುತ ನಾನಿಲ್ಲಿ ೫

ರಕ್ಷಶಿಕ್ಷಕ ಮೋಕ್ಷದಾಯಕ
ಸೂಕ್ಷ್ಮಘನ ಮಹವ್ಯಾಪಕ
ಕುಕ್ಷಿಯೊಳು ಜಗದ್ಭರಿತ ಪೂರಿತ
ಅಕ್ಷಯ ಫಲದಾಯಕಾ ೬

ನಮೋ ನಮೋ ನಾಗಾರಿವಾಹನ
ನಮೋ ನಮೋ ಸುರಸುಪ್ರಸನ್ನನೆ
ನಮೋ ನಮೋ ಗೋಪಾಲ ವಿಠಲ
ನಮಿಪ ಭಕ್ತರ ಸಲಹುವನೆಂದು ೭

೭೯

ತೋಡಿ ಆದಿ

ಬಣ್ಣಿಸಲಳವೆ ನಿನ್ನ ವೆಂಕಟರನ್ನ ಪ

ಬಣ್ಣಿಸಲಳವೆ ಭಕ್ತವತ್ಸಲ ನಿನ್ನ
ಪನ್ನಂಗಶಯನ ಪಾಲ್ಗಡಲೊಡೆಯನೆ ದೇವ ಅ

ಅಸಮ ಸಾಹಸಿ ಸೋಮಕನೆಂಬ ದನುಜನು
ಶಶಿಧರನ ವರದಿ ಶಕ್ರಾದ್ಯರಿಗಳುಕದೆ
ಬಿಸಜಸಂಭವನ ಠಕ್ಕಿಸಿ ನಿಗಮವ ಕದ್ದು
ವಿಷಧಿಯೊಳಡಗಿರಲಾಗ ಬಂದಮರರು
ವಸುಧೀಶ ಕಾಯಬೇಕೆಂದನಲವನ ಮ
ರ್ದಿಸಿ ವೇದಾವಳಿಯ ತಂದು ಮೆರೆದ ದಶ
ದಿಸೆಯೊಳು ಬ್ರಹ್ಮಗಂದು ವೇದವ ಕರು
ಣಿಸಿದೆ ಕಂಜಾಕ್ಷ ಕೇಶವ ದಯಾಸಿಂಧು ೧

ಇಂದ್ರಾದಿ ಸಕಲ ದೇವತೆಗಳು ದೈತ್ಯ
ವೃಂದವೊಂದಾಗಿ ಮತ್ಸರವ ಮರೆದು ಕೂಡಿ
ಬಂದು ನೆರೆದು ಮುರಹರ ನಿನ್ನ ಮತದಿಂದ

ಮಂದರಾದ್ರಿಯ ಕಡಗೋಲಗೈದತುಳ ಫ
ಣೀಂದ್ರನ ತನು ನೇಣಿನಂದದಿ ಬಂಧಿಸಿ
ಸಿಂಧು ಮಥಿಸುತಿರಲು ಘನಾಚಲ
ವಂದು ಮುಳುಗಿಪೋಗಲು ಬೆನ್ನಾಂತು ಮು
ಕುಂದನೆ ಸಲಹಿದೆ ಸುರರು ಪೊಗಳಲು ೨

ಖಳಶಿರೋಮಣಿ ಕನಕಾಕ್ಷನೆಂಬಸುರನು ನಿ
ಮ್ಮೊಳು ಸೆಣಸುವೆನೆಂದು ತವಕದಿಂದಲಿ ಬಂದು
ಬಲದ ಕಡುಹಿನಿಂದಲಿ ಚೋರತನದಿಂದ
ಇಳೆಯ ಕದ್ದು ರಸಾತಳದೊಳಗಿರೆ ನಿನ್ನ
ಪೊಳೆವ ಕೋರೆಗಳಿಂದ ತಿವಿದು ಕೊಂದವನ ಅ
ಪ್ಪಳಿಸಿ ದಿಂಡುಗೆಡಹಿ ಬೇಗದಿ ಅವನ
ಬಲವ ಕೆಡಿಸಿ ಮಡುಹಿ, ಈ ಮಹೀ
ಲಲನೆಯ ಕೈಕೊಂಡೆ ಸುರರನ್ನು ಸಲಹಿ ೩

ಹಗಲಿರುಳಿವಿಲ್ಲ ಕನಕಕಶಿಪುವು ತನ್ನ
ಮಗನ ಹರಿಯ ತೋರೆಂದವನ ಬಾಧಿಸುತಿರೆ
ಚಿಗಿದು ಕಂಭವನೊಡೆದದಧಿಕ ರೋಷಾಗ್ನಿ ಕಾ
ರ್ಬೊಗೆ ಸೂಸಿ ಗಗನ ಮಂಡಲ ಧಗಧಗಧಗಧಗ
ಧಗಿಸೆ ಪ್ರಜ್ವಾಲೆಯುಗುಳೆ ಹಿರಣ್ಯಕನ ಕೂ
ರುಗುರಿಂದೊಡಲ ಸೀಳಿ ರಕ್ತವ ಚೆಲ್ಲಿ
ಬಗೆದು ಕರುಳಮಾಲೆ ಧರಿಸಲು ನರ
ಮೃಗರೂಪ ತ್ರಾಹಿಯೆಂದನು ಶಶಿಮೌಳಿ ೪

ಕುಲಿಶಧರನ ಗೆದ್ದು ಕುವಲಯದಲಿ ಭುಜ
ಬಲ ವಿಕ್ರಮನು ಸೌಭಾಗ್ಯಗಳುನ್ನತಿಯಿಂದ
ಬಲು ವಾಜಿಮೇಧ ಗೈಯಲು ವಟು ವೇಷವ
ತಳೆದು ತ್ರಿಪಾದ ಭೂಮಿಯ ದಾನವ ಬೇಡಿ
ಬಲಿಯ ಹಮ್ಮನು ಮುರಿಯಬೇಕೆಂದವನು ಕೊಟ್ಟ
ನೆಲನ ಈರಡಿ ಮಾಡಿದೆ ಚರಣವನೆತ್ತಿ
ಜಲಜಾಂಡವನೊಡೆದೆ ಉಂಗುಷ್ಠದಿ
ಸುಲಲಿತ ಸುಮನಸ ನದಿಯನ್ನು ಪಡೆದ ೫

ಪೊಡವಿಪರೊಳಗ್ಗಳೆಯ ಕಾರ್ತವೀರ್ಯ
ಕಡುಧೀರ ದೇವದೈತ್ಯರಿಗಂಜದವನ ಬೆಂ
ಬಿಡದೆ ಸಂಗ್ರಾಮದೊಳಧಿಕ ಸಮರ್ಥನ
ಹೊಡೆದು ತೋಳ್ಗಳ ಕುಟ್ಟಿ ಕೆಡಹಿದಾಗಸದಳ
ಮೃಡ ಮುಖ್ಯ ದೇವ ಸಂತತಿ ನೋಡೆ ಕ್ಷತ್ರೇಶ
ಪಡೆಯ ನೆಲಕೆ ಸವರಿ ಮಾತೆಯ ತಲೆ
ಕಡಿದು ತತ್ಪಿತಿಗೆ ತೋರಿ ಪಿಡಿದ ಗಂಡು
ಗೊಡಲಿಯ ಕರದಲಿ ಬಿರುದ ಘನಶೌರಿ ೬

ದಶರಥರಾಜ ಕೌಸಲ್ಯರ ಮಗನಾಗಿ
ಋಷಿ ವಿಶ್ವಾಮಿತ್ರನಧ್ವರವ ರಕ್ಷಿಸಿ ಘನ
ವಿಷಕಂಠ ಧನುವ ಖಂಡಿಸಿ ಜಾನಕಿಯ ತಂದು
ತ್ರಿಶಿರದೂಷಣ ಖರರಳಿದು ವಾಲಿಯನೊಂದು
ನಿಶಿತ ಶಸ್ತ್ರದಿ ಸಂಹರಿಸಿ ಸಾಗರವ ಬಂ
ಧಿಸಿ ಲಂಕೆಯ ದಹಿಸಿ ರಾವಣ ರ
ಕ್ಕಸನನ್ನು ಕತ್ತರಿಸಿ ವಿಭೀಷಣ
ಗೊಸೆದು ಪಟ್ಟವಗಟ್ಟಿ ಮೆರೆದಯೊ ಸಾಹಸಿ ೭

ದೇವಕಿ ವಸುದೇವರಲಿ ಜನಿಸಿ ಲೋಕ
ಪಾವನಗೈದು ಪನ್ನಗನ ಹೆಡೆಯ ಮೆಟ್ಟಿ
ಗೋವಳರ ಸಲಹಿ ಗೋವರ್ಧನ ಗಿರಿಯೆತ್ತಿ
ಮಾವ ಕಂಸನ ಕೊಂದು ಮಲ್ಲರ ಮರ್ದಿಸಿ ಸತ್ಯ
ಭಾಮೆಗೆ ಸುರತರುವನು ಕಿತ್ತು ತಂದಿತ್ತ
ತಾವರೆದಳ ಸುನೇತ್ರ ತ್ರಿಭುವನ
ಪಾವನ ಚರಿತ್ರ ಶ್ರೀ ರುಕ್ಮಿಣಿ
ದೇವಿ ಮನೋಹರ ಸುಲಲಿತಗಾತ್ರ ೮

ದುರುಳ ದಾನವರುಗಳಂದು ಖೇಚರದೊಳು
ಹರಿಹರ ಬ್ರಹ್ಮಾದಿಗಳಿಗಳವಡದ ಮು
ಪ್ಪುರವ ರಚಿಸಿ ಮೂರು ಜಗಕುಪಹತಿ ಮಾಡು
ತಿರೆ ಅನುಪಮ ರೂಪದಿ ನಿಂದು ದೈತ್ಯ ಸ್ತ್ರೀ
ಯರ ಪಾತಿವ್ರತ್ಯವ ಭಂಗಮಾಡಿ ಮು

ಪುರವನಳಿದ ನಿಸ್ಸೀಮ ಅಖಿಳ ಶ್ರುತಿ
ಯರಸಿ ಕಾಣದ ಮಹಿಮ ಸಾಮಜರಾಜ
ವರದ ಸುಪರ್ಣವಾಹನ ಸಾರ್ವಭೌಮ ೯

ಮಣಿಮಯ ಖಚಿತಾಭರಣದಿಂದೆಸೆವ ಲ
ಕ್ಷಣವುಳ್ಳ ದಿವ್ಯ ವಾಜಿಯನೇರಿ ರಣದೊಳು
ಕುಣಿವ ಮೀಸೆ ಕೋರೆದಾಡೆ ಭೀಕರ ಘೋರ
ಬಣಗು ದೈತ್ಯರ ತಲೆ ಕಡಿದು ಎಸೆವ ಭೂತ
ಗಣಕಾಹುತಿಯಿತ್ತು ಭೂಭಾರವಿಳುಹಿದೆ
ರಣಭಯಂಕರ ಪ್ರಚಂಡ ಮೂರ್ಜಗದೊಳ
ಗೆಣೆಗಾಣೆ ನಿನಗುದ್ದಂಡ ಕಲ್ಕಿ ದಿನ
ಮಣಿ ಕೋಟಿ ತೇಜ ದುಷ್ಕೃತ ಕುಲ ಖಂಡ ೧೦

ಚಿತ್ತಜನ್ಹೈಯ್ಯನೆ ಚಿನುಮಯರೂಪ ದೇ
ವೋತ್ತಮ ವರಶಂಖಚಕ್ರ ಗದಾಂಬುಜ
ಉತ್ತಮಾಂಗದ ಮಣಿಮಕುಟ ಕುಂಡಲಪ್ರಭೆ
ವ್ಯಕ್ತಕೌಸ್ತುಭ ಪೀತಾಂಬರ ಕಟಿ ಸೂತ್ರ ಶ್ರೀ
ವತ್ಸಲಾಂಛನ ಕೇಯೂರ ಕಂಕಣ ಭೂಷ
ನಿತ್ಯ ವೈಕುಂಠವಾಸನಾಗಿಹ ಪುರು
ಷೋತ್ತಮ ಶ್ರೀನಿವಾಸ ಪುರಂದರ
ವಿಠಲ ತಿರುಮಲೇಶ ಪಾಹಿ ಸರ್ವೇಶಾ ೧೧

## ೮೦

**ಪೂರ್ವಿ** **ಅಟ್ಟ**

ಬಣ್ಣಿಸಾಲೆಮ್ಮಾ ನಾನೂ ಪ

ಬಣ್ಣಿಸಾಲಮ್ಮ ನಾ ಬಹಳ ಮಹಿಮನ್ನ
ಚಿನ್ಮಯ ನಗಾಧಿಪ ಚಲ್ವ ತಿಮ್ಮಪ್ಪನ ಅ

ಇಳಿಯಾ ಮಾನಸರೊಳು ಈಕ್ಷಿಸಿ ಕೃಪಾಳು
ಒಲಿದು ಕರುಣದಿಂದ ವೈಕುಂಠ ಪುರದಿಂದ
ಇಳಿದು ಮಂಗಳದೇವಿಯನು ಕೂಡಿಕೊಂಡು ವಿ –

ಮಲಿ ಸ್ವಾಮಿ ಪುಷ್ಕರ ಮಹೀತೀರ್ಥದ ತೀರಾ
ದಲಿ ಬೇಕಾದ ಧನ ಧಾನ್ಯಾ ಸಂಪದಾ
ಹಲವು ಕಾಮ್ಯವನೀವ ಹೊಗಳಿದರನು ಕಾವಾ
ಸುಲಭರೊಡೆಯನ ಕಂಡೂ ಹಸಿದ ಕಂ
ಗಳ ಹಬ್ಬ ದಣಿಯಾಲುಂಡೂ ಬಹು ತೋಷಾ
ತುಳುಕುವಾ ಸುಜನವಿಂಡು ಪಾರಂಪಾರಾ ೧

ಪೇಳಲೇನಯ್ಯಾ ನಾ ಪರಶೀಯ ಸೊಬಗು ನಾ
ಆಲಯದಿಂ ಗಡಾ ಜನಿಜನ ಸಂಗಡಾ
ಟೋಳ ಛಪ್ಪರವೊತ್ತಾ ಛತ್ರಚಾಮರ ಹೊತ್ತಾ
ಕಾಳಿ ಶೀಗುರಿ ತಕ್ಕೆ ಕಂಬುಕಾಗಳಲಾಕೆ
ಮೇಳೈಸಿ ಮಹಿಮರು ಮಹದಾನಂದದವರು
ಘೋಳಿಡುವರು ಹರಿ ಗೋವಿಂದ ನೆನವರು
ಕಾಲಾಟಾದಲ್ಲಿವರೂ ಕೀರ್ತಿಪ ಗೀತ ತಾಳ ದಂಡಿಗೆಯವರೂ
ಬೆಳಗೂವಂಥ ಸಾಲ ಪಂಜೀನವರೂ ವಾರಂವಾರ ೨

ವಾಂಛಿತ ಫಲಗಳು ಒದಗಲು ಹರಿಯೊಳು
ವಂಚನೆ ಇಲ್ಲದೆ ಒಂದೊಂದು ಬಗೆಯಾದ
ಕಾಂಚನಾ ಮುಡುಪಿಲಿ ಕಡು ಬದ್ಧಾಂಜಲಿಯಲಿ
ಮಿಂಚುವ ಭಕ್ತಿಲಿ ಮಧುಕರವೃತ್ತಿಲಿ
ಪಂಚಾಬ್ದಾದ್ವಸುಳರು ಪ್ರಾಯದ ಅಬಲೇರು
ಹಿಂಚಾದಾ ವಯಸಾದಾ ಹಿರಿಯರು ಹರುಷದಿ
ಸಂಚಿತ ಹರಿಕೆಯವರೂ ತೊಟ್ಟಿಲು ಮನೆ
ಮುಂಚವ ಹೊತ್ತವರೂ ದೇಶಗಳಿಂದಾ
ಕಾಂಕ್ಷೆಪಿಡಿದು ಬಂದಾರೂ ವಾರಂವಾರ ೩

ಸ್ವಾಮಿ ವರಹಪಾದಾ, ಸರಸಿಜಾಂಬುಸ್ವಾದಾ
ಶಾಮಹಾತ್ಮ್ಯಂಕದಾಶಾತ ಕುಂಭಾಶದಾ
ವ್ಯೋಮನ ವಾಸನಾ ವಿಧಿ ಭವೇಂದ್ರಾಸನಾ
ಕಾಮನ ಪಿತನ್ನಾ ಕಲಿ ಭಯಭೀತನ್ನಾ
ಸೋಮಸೂರ್ಯಾಕ್ಷನ್ನಾ ಸಾಮಜ ಪಕ್ಷನ್ನಾ
ಜೀಮೂತಗಾತ್ರನ್ನಾ ಜಿತಶತ್ರುಸೂತ್ರನ್ನಾ

ನೇಮದಿ ಕಂಡೆರಗೀ ಸ್ವಮಯ್ಯೊಳು
ರೋಮಪುಳಕಿತಾಗೀ ಸದ್‌ಭಕ್ತರ
ಸ್ತೋಮವು ಮುಕ್ತರಾಗಿ ವಾರಂವಾರ ೪

ಗಿರಿಯೊಳಗಮಲಂತರ್ಗಂಗೆ ಪಾಪಾಂತೆ
ವರ ಪಾಂಡು ತೀರ್ಥ ಬಿಲ್ವಾಂಬು ಕಚ್ಛಪ ತೀರ್ಥ
ಶಿರಿ ವರಹ ಮಚ್ಛ ಸಲಿಲ ಪಾವನಲಕ್ಷ್ಮಿ
ಸರ ನಾರದೀಯ ಸರಸ್ವತೀಯ ತೋಯ
ಮೆರವ ತುಂಬುರ ಜಲ ಮೊದಲಾದ ಸ್ಥಳಗಳ
ಸರವ ಸಾನಿಧ್ಯದ ಸ್ವಾಮಿ ಪುಷ್ಕರಣಿಯಾ ನೆರಕೊಂಡು ಪೂತಂಗರೂ
ಸಿರಿಹರಿಪಾದ ಸರಸೀಜರತ ಭೃಂಗರೂ, ಜ್ಞಾನೋನ್ಮತ್ತ
ಭರಿತಾಂಗ ಮತ್ತಾಂಗರೂ ವಾರಂವಾರ ೫

ನಳಿನಾಕ್ಷ ಪದವಾರಿ ನಿತ್ಯ ಸೇವಿಸರಿ
ತುಳಸಿ ತುದಿಯಾ ಪೊನ್ನಾ ತಳಗೀಯದ ಧಾನ್ಯ
ಬಲು ರುಚಿ ಅಪ್ಪಾಲು ಬಕುಳಾನ್ನ ಪೊಂಗಾಲು
ಸಲೆ ಮೃದು ಘಾರಿಗೆ ಶಿಖಿನುಂಡೆಂಣೂರಿಗೆ
ಪುಳಿತಿಕ್ತ ಮಧುಮಿಶ್ರ ಪುಲಸು ಪಾಲಿನ ದೋಸೆ
ಪಲವು ಪರಿಯ ಘೃತ ಪಕ್ವಪಂಚಾಮೃತ
ಪಾಲತ್ರೆಂತೊಳೆ ಮನೋಹರಾ ಪ್ರಸಾದುಂಡು
ಕಳೆವೇರುವರು ಮನೋಹರಾ, ಅಲ್ಲಿಗಲ್ಲಿ
ನಲಿವ ದಾಸರ ಮೋಹರ ವಾರಂವಾರಾ ೬

ಪೂಪಿನಂಗಿಯ ಚನ್ನ ಪುಳಿಕಾಪು ಮಜ್ಜನ
ನವ್ಯೋತ್ಸಹದಲ್ಲಿಯ ನರ ಮುನಿ ಸುರಸಹ
ಸೇವ್ಯಾನಂದನಿಲಯ ಸಾಮಗಾಯನ ಪ್ರೀಯ
ದಿವ್ಯ ರತ್ನಾಭರಣ ಧೀಧಿತ ಸಂಕೀರ್ಣ
ಹವ್ಯಾಸದನುದಿನ ಹನುಮ ಗರುಡ ಯಾನಾ
ಸವ್ಯಾಪಸವ್ಯ ಭವ್ಯಭೂಷಿತ ಸ್ಥಿತ
ಸುವ್ಯಾರೂಢನಮೂರ್ತಿಯಾ ಭೂವೈಕುಂಠ
ಸುವ್ಯಕ್ತವಹ ವಾರ್ತಿಯಾ ಪ್ರಸನ್ವೆಂಕಟ
ಅವ್ಯಾಕೃತನ ಕೀರ್ತಿಯಾ ವಾರಂವಾರಾ ೭

## ೮೧

ಪಂತುವರಾಳಿ ರೂಪಕ

ಬಾ ವೆಂಕಟಶೈಲಾಧಿಪ ಮನ್ಮನಕೆ ತಡಮಾಡುವುದ್ಯಾಕೆ ಪ

ಶ್ರೀವಲ್ಲಭ ನಾ ನಿನ್ನಂಘ್ರಿ ಕಮಲಕೆ ನಮಿಸುವೆ ಪ್ರತಿಕ್ಷಣಕೆ
ನೀವೊಲಿದೆನ್ನ ದಯಾವಲೋಕನದಿ
ಪಾವನಮಾಡಲು ದೇವವರೇಣ್ಯ ಅ

ವೈಕುಂಠಾಧೀಶ ವಿಗತಕ್ಲೇಶ ಚಿತ್ಸುಖಮಯವಪುಷ
ಆಕಾರವತ್ಸರ್ವತ್ರಾವಕಾಶ ಶ್ರೀವೆಂಕಟೇಶ
ಶ್ರೀಕಮಲಭವ ಪಾಕಹಮದನ ದಿ
ವಾಕರಪ್ರಮುಖದಿವೌಕಸವರದ ೧

ಸೋಮಾರ್ಕಾನಲಸಂಕ್ರಮ ಋತುರುಕ್ಷ ಸಿತಾಸಿತಪಕ್ಷ
ನಾಮಾಭಿಧೇಯ ಲೋಕಾಧ್ಯಕ್ಷ ಕಮಲಾಯತಾಕ್ಷ
ಸೋಮಭೂಮ ನಿಸ್ಸೀಮಮಹಿಮತ್ರಿ
ಧಾಮ ರಾಮಘನಶ್ಯಾಮ ಲಲಾಮ ೨

ಮಮ ಸರ್ವಸ್ವಾಮಿ ಮದಂತರ್ಯಾಮಿ ಸರ್ವಾಂತರ್ಯಾಮಿ
ಅಮಿತಾತ್ಮ ನಿರ್ಗುಣ ನಿಷ್ಕಾಮ ಸೇವಿತ ಶ್ರೀಭೂಮಿ
ಶಮಲವಿವರ್ಜಿತ ಅಮಿತಸುಗುಣಪೂ
ರ್ಣಾಮಲಮಹಿಮ ಖಳದಮನ ದಯಾಳೊ ೩

ಪವನಾಂತರಾತ್ಮ ನಿರ್ಮಲಾತ್ಮ ಪರಮಾತ್ಮ ಜ್ಞಾನಾತ್ಮಾ
ಅವಿಕಾರ ಅತಿರೋಹಿತ ಭೂತಾತ್ಮ ಪೂತಾತ್ಮ ಮಹಾತ್ಮಾ
ತ್ರಿವಿಧಜೀವರಿಗೆ ವಿವಿಧ ಫಲಂಗಳ
ತವಕದಿಕೊಟ್ಟವರವರನು ಪಾಲಿಸೊ ೪

ವೇದಸ್ತೇಯಾರಿ ಮಂದರಧಾರಿ ಭೂವರಾಹ ನರಹರಿ
ಭೂದಾನವ ಬೇಡಿದ ಚಾಪಕುಠಾರಿ ರಾವಣಕುಲವೈರಿ
ಯಾದವವಂಶಮಹೋದಧಿಚಂದ್ರಮ
ಸಾಧಿತ ತ್ರಿಪುರ ಖಳೋದರ ಪಾಹಿ ೫

ಸೃಷ್ಟ್ಯಾದಿಕರ್ತ ತ್ರಿಜಗದ್ಭರ್ತ ಲೋಕೈಕಸಮರ್ಥ
ವೃಷ್ಣೀಶ ವೃಂದಾರಕ ರಿಪುಹರ್ತ ಮುಕ್ತರ ಪುರುಷಾರ್ಥ
ಹೃಷ್ಟ ಪುಷ್ಟ ಪರಮೇಷ್ಠಿಜನಕ ಶಿಷ್ಟೇಷ್ಟ
ಹೃಷ್ಟ ಅನಿವಿಷ್ಟ ನಿವಿಷ್ಟ ೭

ದಯದಿಂದ ನೋಡೊ ದೀನೋದ್ಧಾರ ಸದ್ಗುಣಗಂಭೀರ
ಪ್ರಿಯನೀನೆ ಎನಗೆ ಲೋಕೋದ್ಧಾರ ಸೌಂದರ್ಯಸಾರ
ಹಯಮುಖ ಲೋಕತ್ರಯಪಾತ್ರ ಈ
ವಯನಗಮ್ಯ ನಾ ಬಯಸುವೆ ನಿನ್ನ ೮

ಬಹುಮಾತುಗಳ್ಯಾಕೊ ಭವಭಯಹಾರಿ ಬಿನ್ನೈಸುವೆ ಶೌರಿ
ವಿಹಿತಾವಿಹಿತಂಗಳ ನಿನ್ನನು ಮೀರಿ ಮಾಳ್ಪೆನೆ ಕಂಸಾರಿ
ಮಹಿತಕಮಲ ಸದ್ರಹಿತ ಲಕುಮಿ ಭೂ ಸಹಿತ
ಮನದಿ ಸನ್ನಿಹಿತನಾಗಲು ೯

ದಾತ ನೀನಲ್ಲದನ್ಯರನರಿಯೆ ಕಂಡವರನು ಕರೆಯೆ
ಪ್ರೀತ ನೀನಾಗನ್ನೊಳು ಶ್ರೀಹರಿಯೆ ಮೂರ್ಲೋಕದ ದೊರೆಯೆ
ಶ್ರೀತರುಣಿಯಗೂಡೀತನುಸದನಕೆ
ನೀ ತ್ವರಿತದಿ ಜಗನ್ನಾಥವಿಠಲ ೧೦

## ೮೨

ಆನಂದಭೈರವಿ ಆದಿ

ಬಾರಯ್ಯ ಬಾ ಬಾ ಭಕುತರಪ್ರೀಯ ಶ್ರೀನಿವಾಸರಾಯ
ಮಾರಜನಕ ಮುಕ್ತರೊಡೆಯ ದೇವಯ್ಯ ಜೀಯ ಪ

ವಾರಿಜಾಲಯಪತೆ ವಾರಿಜನಾಭನೆ ವಾರಿಜಭವಪಿತ
ವಾರಿಜನೇತ್ರನೆ ವಾರಿಜಮಿತ್ರ ಅಪಾರ ಪ್ರಭಾವನೆ
ವಾರಿಜಾಂಡದಕಾರಣ ದೊರೆಯೆ ಅ

ಸ್ಯಂದನವೇರಿ ಬಾಪ್ಪಾ ರಂಗ ದೇವೋತ್ತುಂಗ
ನಂದನನಂದನ ಅರಿಮದಭಂಗ ಕಾರುಣ್ಯಾಪಾಂಗ

ಸುಂದರ ವಿಗ್ರಹ ಶುಭಾಂಗ ವಿಹಂಗ ತುರಂಗ
ಕಂದವಿರಿಂಚಿಯು ನಂದಿವಾಹನ ಅಮ –
ರೇಂದ್ರ, ಸನಕ ಸನಂದನಾದಿಮುನಿವೃಂದ ಬಂದು ನಿಂದು
ಧಿಂ ಧಿಂ ಧಿಂ ಧಿಮಿಕೆಂದು ನಿಂದಾಡಲು ಆನಂದದಿ ಮನಕೆ ೧

ಜಗಜನ್ಮಾದಿಕರ್ತೃ ಗೋವಿಂದ ಉದರದಿ ಲೋಕವ
ಲಘುವಾಗಿ ಧರಿಸಿ ಮುಕುಂದ ಭಕ್ತರ ಮನಕೆ
ಝಗಝಗಿಸುತ್ತ ಪೊಳೆವಾನಂದ ನಿಗಮಾವಳಿಯಿಂದ
ಅಗಣಿತ ಮುನಿಗಣ ನಗಖಗಮೃಗಶಶಿಗಗನಮಣ್ಯಾದ್ಯರು
ಸೊಗಸಾಗಿ ಬಗೆಬಗೆ ಪೊಗಳುತಲಿ ಬೇಗ ಚಿಗಿ –
ಚಿಗಿದಾಡಲು ಮುಗುಳುನಗೆಯ ಮಹೋರಗಗಿರಿವಾಸ ೨

ತಡಮಾಡಬೇಡಯ್ಯ ಹೇ ನಲ್ಲ ವಾಕು ಲಾಲಿಸು ಎ –
ನ್ನೊಡೆಯ ಶ್ರೀಗೋಪಾಲವಿಠಲ ದೇವ ಪರಾಕು
ಅಡಿಯಿಡು ಭಕ್ತವತ್ಸಲ ಶ್ರೀ ಲಕುಮಿ ನಲ್ಲ
ಮಡುವಿನೊಳಗೆ ಗಜ ಮೊರೆಯಿಡಲಾಕ್ಷಣ ಮಡದಿಗೆ ಹೇಳದೆ
ದುಡುದುಡನೆ ಬಂದು ಹಿಡಿದು ನಕ್ರನ ಬಾಯಿ
ಕಡಿದು ಬಿಡಿಸಿದನೆ ಸಡಗರದಲಿ ರಮೆ ಪೊಡವಿಯೊಡನೆ ಬೇಗ ೩

## ೮೩

ಬಾರಯ್ಯ ವೆಂಕಟರಮಣ ಪ

ಬಾರಯ್ಯ ವೆಂಕಟರಮಣ ನೀನೆನಗೆ
ಧಾರುಣಿಯೊಳು ನಿನ್ನ ಮೂರುತಿ ತೋರುತ ಅ

ಮನವೆಂಬ ಮಂಟಪ ನಿನಗೆ ಹಾಕಿ ಎನ್ನ
ತನುವನೊಪ್ಪಿಸಿ ಕೈಯ ಮುಗಿವೆನಯ್ಯ
ವನಜಜ – ಭವ – ಸುರ ಮುನಿಗಳು ಭಜಿಸುವ
ಘನಮಹಿಮನ ಪಾದಕೆರಗಲೆನ್ನ ಶಿರ ೧

ಲಿಂಗದೇಹವೆಂಬ ಪವಳಿ ಶೃಂಗರಿಸಿ
ಅಂಗವ ನಿನಗೆ ಕಾಣಿಕೆಯ ನೀಡುವೆ

ಮಂಗಳಮೂರುತಿ ಅಂಗನೆ ಸಹಿತ ಭು –
ಜಂಗಶಯನ ಎನ್ನ ಕಂಗಳಿಗುತ್ಸವವೀಯೋ ೨

ಕಡಗ ಕಿರುಗೆಜ್ಜೆ ಪೆಂಡೆಗಳಿಂದಲೊಪ್ಪುವ
ಉಡುಗೆ ಪೀತಾಂಬರ ತರಳಕೌಸ್ತುಭ
ಪಿಡಿದ ಶಂಖ ಚಕ್ರ ಕರ್ಣಕುಂಡಲದಿಂದ
ಕಡಲಶಯನ ಎನ್ನ ಹೃದಯದೊಳಗೆ ನಿಲ್ಲೋ ೩

ಒಡೆಯ ನೀನೆನಗೆ ಅನಾದಿಕಾಲದಿಂದ
ಬಡವನು ನಾನಿನ್ನ ದಾಸನಯ್ಯ
ಕಡುಕರುಣದಿಂದ ದಾಸತ್ವ ನೀಡು ಗ–
ರುಡಗಮನನೆ ವೆಂಕಟೇಶ ಎನ್ನ ಮನಕೆ ೪

ಬರಿಯ ಮನೆಯಲ್ಲವೋ ಪರಿವಾರ ಉಂಟು
ಪರಮಪುರುಷ ನಿನ್ನ ರೂಪಗಳುಂಟು
ಸಿರಿದೇವಿ ಸಹಿತದಿ ಪುರಂದರವಿಠಲನೆ
ಕರುಣದಿಂದಲಿ ಮನ್ಮಂದಿರದೊಳಗೆ ೫

## ೮೪

ಮಧ್ಯಮಾವತಿ ಅಟ್ಟ

ಬಾರೊ ಮನೆಗೆ ಗೋವಿಂದ, ನಿನ್ನಂಘ್ರಿ ಕಮಲವ
ತೋರೊ ಎನಗೆ ಮುಕುಂದ ನಲಿದಾಡು ಮನದಲಿ
ಮಾರಪಿತನೆ ಆನಂದ, ನಂದನ್ನ ಕಂದ ಪ

ಚಾರುತರ ಶರೀರ ಕರುಣಾ
ವಾರಿನಿಧಿ ಭವ ಘೋರನಾಶನ
ವಾರಿಜಾಸನ ವಂದ್ಯ ನೀ–ರಜ
ನಾರ ಸದ್ಗುಣ ಹೇ ರಮಾಪತೆ ಅ

ನೋಡು ದಯದಿಂದೆನ್ನ – ಕರಪದುಮ ಶಿರದಲಿ
ನೀಡು ಭಕ್ತಪ್ರಸನ್ನ – ನಲಿದಾಡು ಮನದಲಿ

ಬೇಡಿಕೊಂಬೆನೊ ನಿನ್ನ – ಆನಂದಘನ್ನ
ಮಾಡದಿರು ಅನುಮಾನವ ಕೊಂ
ಡಾಡುವೆನು ತವ ಮಹಿಮೆಗಳನು
ಜೋಡಿಸುವೆ ಕರಗಳನು ಚರಣಕೆ
ಕೂಡಿಸೋ ತವದಾಸ ಜನರೊಳು ೧

ಹೇಸಿ ವಿಷಯಗಳಲ್ಲಿ – ತೊಳಲಾಡಿ ನಾ ಬಲು
ಕ್ಲೇಶಪಡುವುದು ಬಲ್ಲಿ – ಧನ ಯುವತಿಗಳ ಸುಖ
ಲೇಸು ಎಂಬುದನು ಕೊಲ್ಲಿ – ಆಸೆ ಬಿಡಿಸಿಲ್ಲಿ
ಏಸು ಜನ್ಮದ ದೋಷದಿಂದಲಿ
ಈಸುವೆನು ಇದರೊಳಗೆ ಇಂದಿಗೆ
ಮೋಸವಾಯಿತು ಆದುದಾಗಲಿ
ಶ್ರೀಶ ನೀ ಕೈ ಪಿಡಿದು ರಕ್ಷಿಸು ೨

ನೀನೆ ಗತಿ ಎನಗಿಂದು – ಉದ್ಧರಿಸೊ ಬೇಗನೆ
ದೀನ ಜನರಿಗೆ ಬಂಧು – ನಾ ನಿನ್ನ ಸೇವಕ
ಶ್ರೀನಿವಾಸ ಎಂದೆಂದೂ – ಕಾರುಣ್ಯ ಸಿಂಧೂ
ಪ್ರಾಣಪತಿ ಹೃದಯಾಬ್ಜ ಮಂಟಪ
ಸ್ಥಾನದೊಳಗಭಿವ್ಯಾಪ್ತ ಚಿನ್ಮಯ
ಧ್ಯಾನಗೋಚರನಾಗಿ ಕಣ್ಣಿಗೆ
ಕಾಣಿಸುತ ಶ್ರೀ ರಂಗವಿಠ್ಠಲ ೩

## ೮೫

ಬಾರೋ ವೆಂಕಟೇಶ ಮನೆಗೆ ಕರುಣದಿಂದ
ಬಾಚಿತಬ್ಬಿ ಮುದ್ದನಾಡುವ ಅಂಬೆಗಾಲು ಮಂಡಿಹೊಡುತಾ
ಬಾಯಲಿದ್ದ ಅಮೃತವನ್ನೇ ಜೊಲ್ಲುಸುರಿಸುತಾ
ತಾರಮ್ಮಯ್ಯ ದೂರಿನಾಡುತ ಅಪ್ಪ ತುಪ್ಪ ಚಪ್ಪರಿಸುತ್ತ
ಹತ್ತಿರಕ್ಕೆ ಬಾರೊ ಬಾರೊ ಹೆತ್ತಮಗನನೆಂದೆತ್ತಿ ಕೊಳುವೆ ೧

ಚಿನ್ನಿಕೋಲು ಚೆಂಡನಾಡುತಾ
ಗೆಳೆಯರೊಡನೆ ಗೊಲ್ಲನಾಗಿ ಗೋವಕಾಯುತಾ

ಧನಪತಿಯೊಳು ತಾನು ಸಾಲ ಕೊಂಡ
ಘನಕೀರ್ತಿಯಿಂದ ಶ್ರೀ ಲೋಲ
ವನಿತೆ ಪದ್ಮಾವತಿಪ್ರೀತ ಭಕ್ತ –
ಜನಸುರಧೇನು ಶ್ರೀನಾಥ
ವನಧಿಶಯನ ಮುರಾರಿ ಪರಿ ಚಿ –
ದ್ಘನನಿಭಾಂಗ ಸುಶೀಲ ಕೋಮಲ
ವನಜನಾಭ ನೀಯೆನ್ನ ಕೃಪೆಯೊಳ –
ಗನುದಿನದಿ ಕಾಯೊ ಕೃಪಾಕರ ೫

ಭವನ್ನೈವತ್ತಾರು ದೇಶ ದಿಂದ
ಕಪ್ಪವಗೊಂಬ ಸರ್ವೇಶ
ಅಪ್ಪ ಹೋಳಿಗೆಯನ್ನು ಮಾರಿ ಹಣ
ಒಪ್ಪಿಸಿಕೊಂಬ ಉದಾರಿ
ಸರ್ಪಶಯನ ಕಂದರ್ಪಪಿತ ಭಜಿ –
ಸಿರ್ಪವರ ಸಲಹಿರ್ಪ ಕುಜನರ
ದರ್ಪಹರಸುತ ಕಪ್ಪಕಾಣಿಕೆ
ಒಪ್ಪಿಗೊಂಬ ತಿಮ್ಮಪ್ಪಶೆಟ್ಟಿಯೆ ೬

ಚಾರುಚರಣತೀರ್ಥಪೇಂಟಿ ನಿನ್ನೊ –
ಳ್ಸಾರಿ ಬರುವ ಪುಣ್ಯಕೋಟಿ
ಸೇರಿದೆ ಕೊಡು ಮನೋರಥವ ಲಕ್ಷ್ಮೀ –
ನಾರಾಯಣನೆನ್ನೊಳ್ದಯವ
ತೋರು ನಿರತ ಸಮೀರಭವ ವರ –
ದಾರವಿಂದದಳಾಕ್ಷ ತಿರುಪತಿ
ವೀರ ವೆಂಕಟರಮಣ ಮದ್ಭಹು –
ಭಾರ ನಿನ್ನದು ಪಾಲಿಸೆನ್ನನು ೭

## ೮೭

**ದೇಶಿ** **ಏಕ**

ಬಿಡೆನೋ ನಿನ್ನಂಘ್ರಿ ಶ್ರೀನಿವಾಸಾ ಎನ್ನ
ದುಡಿಸಿಕೊಳ್ಳಲೋ ಶ್ರೀನಿವಾಸಾ ನಿ –

ನ್ನುಡಿಯೋ ಜಿತಪ್ಪೊ ಶ್ರೀನಿವಾಸಾ ನನ್ನ
ನಡೆತಪ್ಪು ಕಾಯೋ ಶ್ರೀನಿವಾಸಾ ಪ

ಬಡಿಯೋ ಬೆನ್ನಲಿ ಶ್ರೀನಿವಾಸಾ ನ –
ನ್ನೊಡಲ ಹೊಯ್ಯ ರಿರೂ ಶ್ರೀನಿವಾಸಾ ನಾ
ಬಡವ ಕಾಣೆಲೋ ಶ್ರೀನಿವಾಸಾ ನಿ –
ನ್ನೊಡಲ ಹೊಕ್ಕೆನೋ ಶ್ರೀನಿವಾಸಾ ೧

ಪಂಜುಹಿಡಿವೆನೋ ಶ್ರೀನಿವಾಸಾ ನಿ –
ನ್ನಂಜಲ ಬಳಿದುಂಬ ಶ್ರೀನಿವಾಸಾ ನಾ
ಸಂಜೆ ಉದಯಕೆ ಶ್ರೀನಿವಾಸಾ ಕಾ –
ಳಂಜಿಯ ಪಿಡಿವೇ ಶ್ರೀನಿವಾಸಾ ೨

ಸತ್ತಿಗೆ ಚಾಮರ ಶ್ರೀನಿವಾಸಾ ನಾ –
ನೆತ್ತಿ ಕುಣಿವೆನೊ ಶ್ರೀನಿವಾಸಾ ನಿನ್ನ
ರತ್ನದ ಹಾವಿಗೆ ಶ್ರೀನಿವಾಸಾ ನಾ
ಹೊತ್ತು ನಲಿವೆನೋ ಶ್ರೀನಿವಾಸಾ ೩

ಹೇಳಿದಂತಾಲಿಪೆ ಶ್ರೀನಿವಾಸಾ ನಿ –
ನ್ನಾಳಿಗಾಳಾಗಿಹೆ ಶ್ರೀನಿವಾಸಾ ಅವ –
ರೂಳಿಗವ ಮಾಳ್ಪೆ ಶ್ರೀನಿವಾಸಾ ನನ್ನ
ಪಾಲಿಸೋ ಬಿಡದೇ ಶ್ರೀನಿವಾಸಾ ೪

ನಿನ್ನ ನಾಮಾ ಹೋಳಿಗೆ ಶ್ರೀನಿವಾಸಾ ಕಳ್ಳ –
ಕುನ್ನಿ ನಾನಾಗಿಹೆ ಶ್ರೀನಿವಾಸಾ ಕಟ್ಟ
ನಿನ್ನವರೊದ್ದರೆ ಶ್ರೀನಿವಾಸಾ ನನ –
ಗಿನ್ನು ಲಜ್ಜೆತಕೆ ಶ್ರೀನಿವಾಸಾ ೫

ಬೀಸಿ ಕೊಲ್ಲಲವರೆ ಶ್ರೀನಿವಾಸಾ ಮುದ್ರೆ
ಕಾಸಿಚುಚ್ಚಲವರೆ ಶ್ರೀನಿವಾಸಾ ಮಿಕ್ಕ
ಘಾಸಿಗಂಜೆನಯ್ಯ ಶ್ರೀನಿವಾಸಾ ಎಂಜ –
ಲಾಸೆಯ ಬಂಟ ನಾ ಶ್ರೀನಿವಾಸಾ ೬

ಹೇಸಿ ನಾನಾದರೆ ಶ್ರೀನಿವಾಸಾ ಹರಿ –
ದಾಸರೊಳು ಪೊಕ್ಕೆ ಶ್ರೀನಿವಾಸಾ ಅವರ
ಭಾಷೆಯ ಕೇಳಿಹೆ ಶ್ರೀನಿವಾಸಾ ಆ –
ವಾಸಿಯ ಸೈರಿಸೊ ಶ್ರೀನಿವಾಸಾ ೭

ತಿಂಗಳವನಲ್ಲ ಶ್ರೀನಿವಾಸಾ ವತ್ಸ –
ರಂಗಳವನಲ್ಲ ಶ್ರೀನಿವಾಸಾ ರಾ –
ಜಂಗಳ ಸವಡಿಪೆ ಶ್ರೀನಿವಾಸಾ ಭ –
ವಂಗಳ ದಾಟುವೆ ಶ್ರೀನಿವಾಸಾ ೮

ನಿನ್ನವ ನಿನ್ನವ ಶ್ರೀನಿವಾಸಾ ನಾ –
ನನ್ಯವನರಿಯೆನು ಶ್ರೀನಿವಾಸಾ ಅಯ್ಯಾ
ಮನ್ನಿಸೊ ತಾಯ್ತಂದೆ ಶ್ರೀನಿವಾಸಾ ಪ್ರ –
ಸನ್ನವೆಂಕಟಾದ್ರಿ ಶ್ರೀನಿವಾಸಾ ೯

## ೮೮

ಬೆಟ್ಟದೊಡೆಯ ಶ್ರೀನಿವಾಸಗೆ ನಿತ್ಯಮಂಗಳಂ
ಲೋಕಮಾತೆಯಾದ ಪದ್ಮಾವತಿಗೆ ನಿತ್ಯಮಂಗಳಂ
ಕೆಂದಾವರೆಯ ಪೋಲುವ ಪಾದಕೆ ಅಂದುಗೆ ಗೆಜ್ಜೆಯು
ಉಂಗುರ [illegible] ರ ವಜ್ರ ಬಂಗಾರ ನಿಟ್ಟಿಗೇ ೧

ಎರಡು ಕರದಿ ಶಂಖ ಚಕ್ರವು ಗದೆಯು ಪದ್ಮವು
ನೊಸಳಿಗೇ ಕಸ್ತೂರಿ ತಿಲಕ ಕುಶಲದಿಂದಲೀ ೨

ಮರವನೇರಿ ವೇಣು ಕೊಳಲ ಪಿಡಿದ ಧೀರನಿಗೆ
ದುರುಳ ಕ್ಷತ್ರಿಯ ಕುಲವನಳಿದ ಉಡುಪಿ ಕೃಷ್ಣನಿಗೇ ೩

ಶೇಷಗಿರಿಯಲ್ಲಿ ನಿಂದು ವಾಸವಾದಗೇ ದಾಸರಿಂದಾ
ಪೂಜೆಗೊಳುವ ವೆಂಕಟೇಶಗೇ ಬೆಟ್ಟದೊಡೆಯ ೪

## ೮೯

ಭಾನುಕೋಟಿ ತೇಜ ಲಾವಣ್ಯ ಮೂರುತಿ
ಶ್ರೀ ವೆಂಕಟೇಶನೆ ನಮೊ ನಮೋ ಶ್ರೀನಿವಾಸ ದಯಾನಿಧೆ ಪ

ಶೇಷಾಚಲನಿವಾಸ ದೋಷದೂರನೆ ಭಕ್ತ–
ಪೋಷಕ ಶ್ರೀಕಾಂತ ನಮೊ ನಮೋ ಶ್ರೀನಿವಾಸ ದಯಾನಿಧೆ ೧

ನೀಲಮೇಘಶ್ಯಾಮ ಪಾಲಸಾಗರಶಯನ ಶ್ರೀ
ಲಕುಮೀಶನೆ ನಮೊ ನಮೋ ಶ್ರೀನಿವಾಸ ದಯಾನಿಧೆ ೨

ಖಗರಾಜವಾಹನ ಜಗದೊಡೆಯನೆ ನಿನ್ನ ಅಗಣಿತ
ಮಹಿಮೆಗೆ ನಮೊ ನಮೋ ಶ್ರೀನಿವಾಸ ದಯಾನಿಧೆ ೩

ಶಂಖಚಕ್ರಧರ ವೆಂಕಟರಮಣ ಅಕಳಂಕ
ಮೂರುತಿ ದೇವ ನಮೊ ನಮೋ ಶ್ರೀನಿವಾಸ ದಯಾನಿಧೆ ೪

ಪನ್ನಂಗಶಯನನೆ ನಿನ್ನಂಥ ದೇವರು ಇನ್ನುಂಟೆ
ಅಜಭವಸುರವಂದ್ಯಾ ಶ್ರೀನಿವಾಸ ದಯಾನಿಧೆ ೫

ಸೃಷ್ಟಿ ಇಲ್ಲದಲೆ ಒತ್ತಟ್ಟಗಿದ್ದವರನ್ನು ಸೃಷ್ಟಿಸಿ
ಜೀವರ ಸಲಹುವೀ ಶ್ರೀನಿವಾಸ ದಯಾನಿಧೆ ೬

ತನುಮನಕರಣಗಳನು ಕೊಟ್ಟು ಅನಿಮಿಷರನು
ಅಭಿಮಾನಿಗಳೆನಿಸಿದೀ ಶ್ರೀನಿವಾಸ ದಯಾನಿಧೆ ೭

ದೀನವತ್ಸಲ ನಿನ್ನಾಧೀನದೊಳಗಿಟ್ಟು ಜ್ಞಾನಕರ್ಮ–
ಗಳ ಮಾಡಿಸುವಿಯೋ ಶ್ರೀನಿವಾಸ ದಯಾನಿಧೆ ೮

ಕ್ಷಣಬಿಡದಲೆ ಭಕ್ತಜನರ ರಕ್ಷಿಸುವಿ ದುರ್ಜನ–
ರಿಗೆ ದುರ್ಲಭನೆನಿಸುವೀ ಶ್ರೀನಿವಾಸ ದಯಾನಿಧೆ ೯

ವೈಷಮ್ಯ ನೈರ್ಘೃಣ್ಯ ಲೇಶವಿಲ್ಲದವರುಪಾಸನ
ದಂತೆ ಫಲಗಳೀವಿ ಶ್ರೀನಿವಾಸ ದಯಾನಿಧೆ ೧೦

ಒಂದೇರೂಪದಿ ಬಹುಮಂದಿಯೊಳಗಿದ್ದು ಬಂಧ–
ಮೋಕ್ಷಪ್ರದನೆನಿಸುವೇ ಶ್ರೀನಿವಾಸ ದಯಾನಿಧೆ ೧೧

ಜ್ಞಾನಿಗಳರಸ ಅಜ್ಞಾನಿಗಳೊಳು ನಾ ಅಜ್ಞಾನಿ
ಸುಜ್ಞಾನವ ಪಾಲಿಸೋ ಶ್ರೀನಿವಾಸ ದಯಾನಿಧೆ ೧೨

ನಂಬಿದೆ ನಾ ನಿನ್ನ ಬಿಂಬಮೂರುತಿ ಎನ್ನ ಡಿಂಬ–
ದೊಳಗೆ ಪೊಳೆ ಅನುದಿನಾ ಶ್ರೀನಿವಾಸ ದಯಾನಿಧೆ ೧೩

ನಿನ್ನ ಹೊರತು ಎನಗನ್ಯರಿಂದೇನಯ್ಯ ನಿನ್ನ ಸ್ತುತಿಪ
ಸುಖಕ್ಕೆಣೆಗಾಣೆ ಶ್ರೀನಿವಾಸ ದಯಾನಿಧೆ ೧೪

ಘನ್ನಮಹಿಮ ಎನಗಿನ್ನೊಂದು ಬಯಕಿಲ್ಲ ನಿನ್ನ
ಧ್ಯಾನದೊಳಿಡು ಮರೆಯದೇ ಶ್ರೀನಿವಾಸ ದಯಾನಿಧೆ ೧೫

ದುರ್ಜನ ಸಂಗ ವಿವರ್ಜಮಾಡಿಸಿ ಸಾಧು ಸಜ್ಜನರ
ಸೇವೆಯೊಳಗಿಡೋ ಶ್ರೀನಿವಾಸ ದಯಾನಿಧೆ ೧೬

ವಸುಜನ್ಮಗಳೀಯೆ ಲೇಸು ಚಿಂತೆಯು ಇಲ್ಲ ದಾಸ–
ನೆಂದೆನಿಸೊ ದಾಸ್ಯವನಿತ್ತು ಶ್ರೀನಿವಾಸ ದಯಾನಿಧೆ ೧೭

ಎನ್ನಪ್ಪ ಎನ್ನಣ್ಣ ಎನ್ನ ಕಾಯ್ವ ದೇವ ನಿನ್ನ ವಿಸ್ಮರಣೆಯ
ಕೊಡದಿರೋ ಶ್ರೀನಿವಾಸ ದಯಾನಿಧೆ ೧೮

ಮನಸಿನ ಚಂಚಲವನು ತೊಲಗಿಸಿ ಪಾದವನಜ–
ದಲ್ಲಿರಿಸಯ್ಯ ಜಿತವಾಗೀ ಶ್ರೀನಿವಾಸ ದಯಾನಿಧೆ ೧೯

ಕರಣಗಳಿಂದ ಆಚರಿಸುವ ವಿಷಯ ಶ್ರೀಹರಿ
ನಿನ್ನ ಸೇವೆಯಾಗಲಿ ಸ್ವಾಮಿ ಶ್ರೀನಿವಾಸ ದಯಾನಿಧೆ ೨೦

ಹರಿಯೆ ಸರ್ವೋತ್ತಮ ಸುರರೆಲ್ಲ ದಾಸರು ತಾರ–
ತಮ್ಯ ಭೇದ ಜ್ಞಾನವನೀಯೊ ಶ್ರೀನಿವಾಸ ದಯಾನಿಧೆ ೨೧

ಬುದ್ಧಿಪೂರ್ವಕ ಗುರುಮಧ್ವಮತವ ತಿಳಿಯದಿದ್ದವನೇ
ಜ್ಞಾನವೃದ್ಧನೋ ಶ್ರೀನಿವಾಸ ದಯಾನಿಧೆ ೨೨

ಗುರುಗಳ ಕರುಣ ಸುಸ್ಥಿರವಾಗಿದ್ದವರಿಗೆ ಹರಿ ನಿನ್ನ–
ನುಗ್ರಹ ಆಗುವದೋ ಶ್ರೀನಿವಾಸ ದಯಾನಿಧೆ ೨೩

ನಿನ್ನವರಲ್ಲದೆ ಅನ್ಯರು ಬಲ್ಲರೆ ಘನ್ನಮತದ
ಸುಖಸವಿಯನೂ ಶ್ರೀನಿವಾಸ ದಯಾನಿಧೆ ೨೪

ನಿನ್ನ ಚಿತ್ತಕೆ ಬಂದದನ್ನ ಚಿತ್ತಕೆ ಬರಲಿ ಅನ್ಯಥ
ಬಯಕೆಯ ಕೊಡದಿರೋ ಶ್ರೀನಿವಾಸ ದಯಾನಿಧೆ ೨೫

ಸ್ತುತಿರತ್ನಮಾಲಾ ಸಂಸ್ತುತಿಸಿ ಹಿಗ್ಗುವರಿಗೆ ಪ್ರತಿ–
ದಿನ ಸುಖ ಅಭಿವೃದ್ಧಿಯೋ ಶ್ರೀನಿವಾಸ ದಯಾನಿಧೆ ೨೬

ಗುರುಗಳು ಮಧ್ವರಾಯರು ಮೂರುಲೋಕಕ್ಕೆ ಧೊರೆ
ಗುರುಶ್ರೀಶವಿಠಲ ನಮೋ ಶ್ರೀನಿವಾಸ ದಯಾನಿಧೆ ೨೭

## ೯೦

**ಸಾರಂಗ** **ಝಂಪೆ**

ಭೂಷಣಕೆ ಭೂಷಣ ಇದು ಭೂಷಣ
ಶೇಷಗಿರಿವಾಸ ಶ್ರೀ ವರವೆಂಕಟೇಶ ಪ

ನಾಲಿಗ್ಗೆ ಭೂಷಣ ನಾರಾಯಣ ನಾಮ
ಕಾಲಿಗ್ಗೆ ಭೂಷಣ ಹರಿಯಾತ್ರೆಯು
ಆಲಯಕೆ ಭೂಷಣ ತುಳಸಿ ವೃಂದಾವನ ವಿ
ಶಾಲ ಕರ್ಣಕೆ ಭೂಷಣ ವಿಷ್ಣುಕಥೆಯು ೧

ದಾನವೇ ಭೂಷಣ ಇರುವ ಹಸ್ತಂಗಳಿಗೆ
ಮಾನವೇ ಭೂಷಣ ಮಾನವರಿಗೆ
ಜ್ಞಾನವೇ ಭೂಷಣ ಮುನಿಯೋಗಿವರರಿಗೆ
ಮಾನಿನಿಗೆ ಭೂಷಣ ಪತಿಭಕ್ತಿಯು ೨

ರಂಗನನು ನೋಡುವುದೇ ಕಂಗಳಿಗೆ ಭೂಷಣ
ಮಂಗಳಾಂಗಗೆ ಮಣಿವ ಶಿರ ಭೂಷಣ
ಶೃಂಗಾರ ತುಲಸಿಮಣಿ ಕೊರಳಿಗೆ ಭೂಷಣ
ರಂಗವಿಠಲ ನಿಮ್ಮ ನಾಮ ಅತಿಭೂಷಣ ೩

## ೯೧

**ಅಸಾವೇರಿ** **ಅಟ್ಟ**

ಮಧ್ವಾಂತರ್ಗತ ಶ್ರೀನಿವಾಸಾ ಕಾಯೊ
ಸಿದ್ಧಮೂರುತಿ ವೆಂಕಟೇಶಾ ಪ

ಇದ್ಧರೆಯೊಳು ನಿನ್ನ ಮೊದ್ದಿದ್ದವರ ಪಾಪ
ಬದ್ಧವಾಗದು ಅನ್ಯೋಪದ್ರವೆ ಮೊದಲಿಲ್ಲ ಅ

ಸಾಕಾರ ಸರ್ವ ಧಾರೀ ಸ್ವಾಮಿ
ಲೋಕ ನಾಯಕನೆ ಉದಾರೀ
ಭೂಕಾಂತ ಭವಭಯ ಹಾರೀ ಜಗ
ದೇಕನೆ ಪರ ಉಪಕಾರೀ
ನಾ ಕರ ಮುಗಿವೆ ಕೃಪಾಕರ ಮೂರ್ತಿ ಇ
ನ್ಯಾಕೆ ನಿರ್ದಯಮಾಡಿ ನೀಕರಿಸುವಿ ಎನ್ನ
ಸಾಕು ನಿನಗೆ ಪರಾಕು ಪೇಳುವ
ದ್ಯಾಕೆ ಭಕುತರ ಸಾಕಲರಿಯೆ
ಸಾಕು ಭವಸುಖವೇಕಪರಿಯಲಿ
ಬೇಕು ಪಾಲಿಸು ಯೇಕ ಭಕುತಿಯ ೧

ಧರೆಗೆ ವೈಕುಂಠದ ಪರಿಯೇ ತೋರಿ
ಮೆರೆಪಿ ಮಹಾತ್ಮ ಶ್ರೀ ಹರಿಯೇ
ಸರಿ ನಿನಗಿದು ಹೊಸ ಪರಿಯೇ ಭಾಗ್ಯ
ಮರಿಯಾದ ಮರೆತೆ ನೀ ಧೊರೆಯೇ
ಸಿರಿಯು ಮಂದಿರವಾಗಿ ಪರಿಪರಿ ರೂಪದಿ
ಕರವ ಜೋಡಿಸಿ ಉಪಚರಿಯ ಮಾಡಲು ಇತ್ತ
ಸರಸಿಜೋದ್ಭವ ಗರುಡ ನರಹರ
ಸುರಪ ಮುಖ ದಿವಿಜರು ಪರಾಕೆನೆ
ಪರಮ ಪದ ಸಂಪದವಿದಲ್ಲದೆ
ಸಿರಿಯ ಭಾಗ್ಯದಿ ಪರವ ನಿನಗೇ ೨

ಮಣಿಮಯ ಖಚಿತ ಕಿರೀಟಾ ಸಾರೆ
ಅನುವಾದ ನಾಮ ಲಲಾಟಾ
ಮಿನುಗುವ ನಗೆವಾರೆನೋಟಾ ದಿನ
ಮಣಿ ಕರ್ಣಕುಂಡಲ ಮಾಟಾ
ಘನ ಶಂಖ ಚಕ್ರ, ಭೂಷಣ ಶ್ರೀವತ್ಸಾಂಕ ಶೋ
ಭನ ಕೌಸ್ತುಭ ಮಣಿಗಣಹಾರ ಶೃಂಗಾರ
ಖಣಿಯು ಕಟಕರ ಕನಕಮಯ ಸುವಸನ
ಕಾಂಚೀದಾಮ ವಪ್ಪಲು
ಪ್ರಣತರಭಯಪ್ರದಕರ ಕುಂಭಿಣಿಗೆ ತೋರುವ
ಅನಘ ವೆಂಕಟನೆ ೩

ನಿಗಮ ಗೋಚರ ನಿತ್ಯಮೋದಾ ವಾದ
ಝುಗಿ ಝುಗಿಸುವ ದಿವ್ಯ ಪಾದಾ
ಯುಗಳಾರಾಧನಿ ಪರರಾದಾವರಿಗೆ
ಅಗಣಿತ ಸುಖವೀವ ಶ್ರೀದಾ
ಗಗನ ಭೂಮಿಪ ಗತಿಪ್ರದ ದಶರಥ ಪಂಚ
ಮೊಗನಾದಿ ಭುವನದೊಳಣುಗ ಮೊದಲಾದ
ಜಗದಿ ಬಹು ತಪಸಿಗಳ ಭಾವದಿ
ಶಿಗದೆ ಮೋಹಾದಿಗಳ ಪಾಶಕೆ
ಮುಗಿದು ಕರಗಳ ಪೊಗಳುವರಿಗೆ
ಬಗೆಬಗೆಯ ಕಾಮಗಳ ಹರಿಸಿದ ೪

ಸ್ವಾಮಿ ಪುಷ್ಕರಿಣಿ ನಿವಾಸಾ ನಾದ
ಕಾಮಿತಪ್ರದನೆ ಲಕ್ಷ್ಮೀಶಾ
ಧೀಮಂತಮಣಿ ದೀನ ಪೋಷಾ ಯನ್ನ
ಯಾ ಮರೆಯದಿರು ನಿನ್ನ ದಾಸಾ
ಸಾಮಗಾಯನಲೋಲ ಸತತ ಸದ್ಗುಣ ಶೀಲ
ಸಾಮಜವರದ ಮಹಾಮಹಿಮನೆ ಸಾರ್ವ
ಭೌಮ ಭವ್ಯ ತ್ರಿಧಾಮ ಸಂತರ ಪ್ರೇಮ
ಪೂರಣಕಾಮ ದಿವಿಜ ಲ
ಲಾಮ ಭೂಧರ ವ್ಯಾಸವಿಠಲ ಯಾಮ
ಯಾಮಕೆ ಯೆನ್ನ ಪಾಲಿಸೋ ೫

## ೯೨

**ರೇಗುಪ್ತಿ** **ಅರೆಝುಂಪೆ**

ಮನ್ನಿಸೊ ಶ್ರೀ ವೆಂಕಟೇಶ ಮಂಜುಗುಣಿ ಪುರವಾಸ ಪ

ಸನ್ನುತ ಸದ್ಗುಣಪೂರ್ಣ ಸುಪ್ರಸನ್ನ ಹಯವದನ ಅ

ದೇಶದೇಶದಿಂದ ಬಂದ ಜನರಿಗೆ ಮುದದಿಂದ
ಲೇಸಿನ ವರವನೀವೆ ನಿರುತ ಕಾವೆ

ಭಾಸುರ ಮೋಹನ ವೇಷ ಭಾನುಕೋಟಿ ಸುಪ್ರಕಾಶ
ಶ್ರೀ ಸತಿಯ ಪ್ರಾಣೇಶ ಶ್ರೀ ಶ್ರೀನಿವಾಸ ೧

ವಾರಿಧಿಯೊಳಗಾಡಿದೆ ಗಿರಿಯ ಬೆನ್ನಲೆತ್ತಿದೆ
ಭಾರವಹ ಧರೆಯ ತಂದೆ ದೈತ್ಯನ ಕೊಂದೆ
ದುರುಳ ಬಲಿಯನು ಮೆಟ್ಟಿ ದೈತ್ಯ ನೃಪರನೆ ಕುಟ್ಟಿ
ತರುಣೆಗಭಯವನಿತ್ತೆ ತರುವ ಕಿತ್ತೆ ೨

ಪುರದ ನಾರಿಯರನು ಪಂಥದಿ ಗೆಲಿದೆ ನೀನು
ವರ ಕಲ್ಕಿಯಾಗಿ ತುರುಗವನೇರಿ ಮೆರೆದೆ
ವರದ ಪ್ರಸನ್ನ ಹಯವದನ ವೆಂಕಟರಾಯ
ಪೊರೆಯೊ ಎಂದೆಂದೂ ಎನ್ನ ಪುರುಷರನ್ನ ೩

## ೯೩

ಮನುಷ್ಯನಾದ ಫಲವೇನು
ಶ್ರೀನಿವಾಸನ ಕಂಡು ಸುಖಿಯಾಗದನಕಾ ಪ

ಭಾನು ಉದಿಸದ ಮುನ್ನೆ ಸ್ವಾಮಿಪುಷ್ಕರಣಿಯಲಿ
ಸ್ನಾನ ಸಂಧ್ಯಾನ ಜಪಗಳನೆ ಮಾಡಿ
ಸಾನುರಾಗದಲಿ ಶ್ರೀವರಹಗೆ ನಮಿಶಿ
ತಾನಖಿಳ ಪುಣ್ಯವನು ಸೂರೆಗೊಳದನಕಾ ೧

ಹಸ್ತದಲಿ ವೈಕುಂಠವೆಂದು ತೋರುವ ವಿಮಾ –
ನಸ್ಥಾಚ್ಯುತನ ಕರ್ಮಗುಣ ನಾಮವ
ಸ್ವಸ್ಥ ಮತಿಯಾಗಿ ಕೊಂಡಾಡಿ ಕುಣಿದಾಡಿ ತಾ
ವಿಸ್ತರದ ಕೈವಲ್ಯ ಪಡೆಯದನಕಾ ೨

ತುಳಸಿಬರ್ಹಕೆ ಪೋಲ್ವ ಆ ಮಹಾ ಪ್ರಸಾದವನು
ಅಲಸದೆ ಸೇವಿಸಿ ಕೃತಾರ್ಥನಾಗಿ
ಹಲವು ದುರಿತಾರಿ ಪ್ರಸನ್ವೆಂಕಟಗಿರಿಯ
ನಿಲಯನೆ ಗತಿಯೊಂದು ಭಜಿಸದನಕಾ ೩

## ೯೪

**ಮೋಹನ** — **ಆದಿ**

ಮೂರುನಾಮಗಳ ಧರಿಸಿದ ಕಾರಣವೇನು
ಸಾರಿ ಪೇಳೆಲೊ ಈಗಲೆ ಪ

ಶ್ರೀರಮಾಪತಿ ಶ್ರೀನಿವಾಸ ವೆಂಕಟರಮಣ
ಯಾರು ಇಟ್ಟರೊ ನಿನಗೆ ಮೂರು ನಾಮಗಳ ಅ

ಶುದ್ಧ ವೈಷ್ಣವರೆಲ್ಲ ಶುದ್ಧ ಮೂರುತಿ ಎಂದು
ಶುದ್ಧ ಪಾದಕೆ ಎರಗಿ ಕರವ ಮುಗಿದು
ಎದ್ದು ನೋಡಲು ನಿನ್ನ ಪಣೆಯೊಳೀಪರಿ ಇರಲು
ಮಧ್ವಮತದ ದೈವವೆಂದು ನಿನ್ನ ಕರೆಯುವರೆ ೧

ಸಾಲದೆ ನಿನ್ನ ಸೌಂದರ್ಯಕ್ಕೆ ಒಂದು ತಿಲಕ
ಪಾಲಸಾಗರಶಾಯಿ ಚೆಲುವಮೂರ್ತಿ
ಕಾಲಕಾಲಕೆ ಬರುವ ಭಕುತಜನಗಳ ವೃಂದ
ದೃಷ್ಟಿ ತಾಕುವುದೆಂಬ ತೋರುವ ಬಗೆಯೊ ೨

ಮೂರು ಲೋಕಗಳಿಹವು ಮೂರು ರೂಪನ ನಾನು
ಮೂರು ಮಾಳ್ಪೆನು ಜಗವ ಮೂರುಗುಣದಿ
ಮೂರು ತಾಪವ ಗೆದ್ದು ಮಾರ್ಗದಿ ಭಜಿಸೆ
ಪಾರುಮಾಡುವೆನೆಂದು ತೋರುವ ಬಗೆಯೊ ೩

ಮೂರೆರಡು ಎರಡೊಂದು ಇಂದ್ರಿಯ ವರ್ಜಿಸಲು
ತೋರುವನು ನಿಜರೂಪ ಭಕ್ತನೆಂದು
ಸಾರುತಿದ್ದರು ವಾಯು ಅರಿಯದೆ ಭಜಿಸಿದಗೆ
ಮೂರು ನಾಮಗಳೆ ಗತಿ ಎನುವ ಬಗೆಯೊ ೪

ಶ್ರೀಲೋಲಕೃಷ್ಣ ಗೋಪಾಲವಿಠಲ ನಿನ್ನ
ಈ ಬಗೆಯ ಲೀಲೆಗಳ ಅರಿವರ್ಯಾರೊ
ವ್ಯಾಸಶಯನ ವೆಂಕಟೇಶನೆ ಎನ್ನ ಮನಕೆ
ಕಾಲಕಾಲಕೆ ನಿನ್ನ ಲೀಲೆಗಳ ತೋರೊ ೫

೯೫

ಪೂರ್ವಿ ತ್ರಿವಿಡಿ

ಯಾಕೆ ನಿನ್ನ ಮನಕೆ ಬಾರೆನೊ ಶ್ರೀವೇಂಕಟೇಶ ಪ

ಯಾಕೆ ನಿನ್ನ ಮನಕೆ ಬಾರೆ ಸಾಕೊ ನಿನ ಧ್ವರಿಯತನ
ಕಾಕುಜನರ ಕಾಯ್ದು ಎನ್ನ ಸಾಕದಿರುವದೇನು ನ್ಯಾಯ ಅ

ನಿನ್ನನೊದ್ದ ದ್ವಿಜನ ನೀನು ಮನ್ನಿಸಿ ಜಗದೊಳಗವನ
ಘನ್ನನೆನಿಸಿ ಪೊರೆದು ಎನ್ನ ಬನ್ನ ಬಡಿಸೋದು ನ್ಯಾಯವೇ ೧

ನೀಚತರ ಕಿರಾತನಘ ಮೋಚನ ಮಾಡಿ ಪೊರೆದಿ
ನಾಚಿಕಿಲ್ಲದೆಂಜಲ್ಹಣ್ಣು ಯಾಚಿಸಿ ತಿಂದ್ಯಲ್ಲೊ ೨

ಹೊಟ್ಟೆಗಶನವಿಲ್ಲದಿರುವೊ ನಷ್ಟದಾರಿದ್ರ್ಯ ದ್ವಿಜನ
ಮುಷ್ಟಿಯವಲಕ್ಕಿ ತಿಂದು ಅಷ್ಟೈಶ್ವರ್ಯ ಕೊಟ್ಟೆಯಲ್ಲೊ ೩

ಶಕ್ರಾದಿ ಸುರವಂದ್ಯ ತ್ರಿವಿಕ್ರಮನೆನಿಸಿ ತ್ರೀ
ವಕ್ರೆ ಗಂಧಕೆ ಒಲಿದು ಕುಬ್ಜೆಯ ಆಕ್ರತದಲಿ ಬೆರೆತಿಯಲ್ಲೊ ೪

ಕನ್ನೆಹಾಲುಗಳ್ಳನೆಂದು ನಿನ್ನ ಒರಳಿಗೆ ಕಟ್ಟಲಾಗ
ಉನ್ನತಾದ ಸುಖವಿತ್ತು ಚೆನ್ನನಾಗಿ ನಡೆದಿಯಲ್ಲೊ ೫

ಇಷ್ಟು ಜನರು ನಿನ್ನ ದಿವ್ಯ ಪೊಟ್ಟೆಮಕ್ಕಳೇನೊ ನಾ
ಬಿಟ್ಟತನಯನೆಂದು ಕರುಣಾ ದೃಷ್ಟಿಯಿಂದ ಪೊರೆಯವಲ್ಯಾ ೬

ದಾತಗುರುಜಗನ್ನಾಥವಿಠಲ ನೀನು
ಪಾತಕಿ ಜನರ ಪೊರೆದ ರೀತಿ ಏನು ನ್ಯಾಯವೋ ೭

೯೬

ಪೂರ್ವಿ ತ್ರಿವಿಡಿ

ಯಾಕೆ ನಿನ್ನ ಮನಕೆ ಬಾರೆನೋ ಹೇ ವೆಂಕಟೇಶ ಪ

ಯಾಕೆ ನಿನ್ನ ಮನಕೆ ಬಾರೆ ಸಾಕೂ ನಿನ್ನ ಧೊರಿಯತನಾ
ಕಾಕು ಬುದ್ಧಿ ಎನಗಿಲ್ಲೋ ಹೇ ವೆಂಕಟೇಶಾ ಅ

ಪದದಿ ಭೃಗುಮುನಿ ನಿನ್ನ ಹೃದಯಕೊದ್ದ ತೆರದಿ ನಾನು
ಬೆದರಿ ನಿನ್ನನೊದೆಯಲಿಲ್ಲೋ ಹೇ ವೆಂಕಟೇಶಾ ೧

ವನದಿ ಬಂದಾಗ ಬೊರೆಬನದಲ್ಲಿಯ ಶಬರಿಯಂಜಲು
ತಿನಿಸಿದ ತೆರ ನಾ ತಿನಿಸಲಿಲ್ಲವೋ ಹೇ ವೆಂಕಟೇಶಾ ೨

ತೊಂಡಪಾರ್ಥ ರಣದಿ ತನ್ನ ಬಂಡಿಬೋವನ ಮಾಡಿದಂತೆ
ಭಂಡಿ ಹೊಡಿ ಎಂದು ನಡೆಸಲಿಲ್ಲವೋ ಹೇ ವೆಂಕಟೇಶಾ ೩

ದಿಟ್ಟ ಗುರುವಿನ ಮನಿಗೆ ಕಟ್ಟಿಗೀ ಹೊರಿಸಿದಂತೆ
ಕಟ್ಟಿಗೆಯ ಹೊರಿಸಲಿಲ್ಲವೋ ಹೇ ವೆಂಕಟೇಶಾ ೪

ಕೆಟ್ಟ ಕಾರ್ಯ ಮಾಡಿದವರು ಇಷ್ಟರೆ ಸರಿ ನಿನಗೆ ನಾನು
ಕೆಟ್ಟ ಕಾರ್ಯ ಮಾಡಲಿಲ್ಲವೋ ಹೇ ವೆಂಕಟೇಶಾ ೫

ದುಷ್ಟನೆಂದು ಜನರು ನಿನ್ನ ಮುಟ್ಟಲಂಜಿ ದೂರಪೋಗೆ
ಮುಟ್ಟಿ ನಿನ್ನ ಭಜಿಸಿದ ಫಲವೇನೋ ಹೇ ವೆಂಕಟೇಶಾ ೬

ದಾತ ಶ್ರೀ ಗುರುಜಗನ್ನಾಥವಿಠಲನೆಂದು ನಾ
ಪ್ರೀತಮನದಿ ಬಂದೆನೋ ವೆಂಕಟೇಶ ೭

## ೯೭

ನಾದನಾಮಕ್ರಿಯ ಅಟ್ಟ

ರಂಗನ ನೋಡಿರೆ ರಾಜಕುವರ ನರ
ಸಿಂಗದೇವ ನಮ್ಮ ದೇವಕಿ ಸುತನ ಪ

ಹಮ್ಮಿನ ತಾಯಿತ ತೋಳ ಬಾಪುರಿಯೊ
ಘಮ್ಮನೆ ಘಲ್ಲೆಂಬ ಗೆಜ್ಜೆಯ ಧ್ವನಿಯೊ
ಸುಮ್ಮಹಿಮನ ಕಿವಿಯಲ್ಲಿ ಚೌಕುಲಿಯೊ
ತಿಮ್ಮರಾಯನಿಟ್ಟ ಸೊಬಗಿನ ಬಗೆಯೊ ೧

ಶುಕ್ಕರವಾರದ ಪೂಜೆಗೊಂಬುವನ
ಸಕ್ಕರೆ ಪಾಲ್ಮೊಸರು ಬೆಣ್ಣೆ ಮೆಲ್ಲುವನ
ಫಕ್ಕನೆ ಸುರರಿಗೆ ಅಮೃತವಿತ್ತವನ
ರಕ್ಕಸಕುಲವೈರಿ ರಾವಣಾಂತಕನ ೨

ಪಾಪವಿನಾಶಿನಿ ಸ್ನಾನವ ಮಾಡಿ
ಪಾಪಗಳೆಲ್ಲವು ಬೇಗ ಬಿಟ್ಹೋಡಿ
ಈ ಪರಿ ದಿನದಿನ ಮೂರುತಿ ನೋಡಿ
ಶ್ರೀಪತಿ ಪುರಂದರವಿಠಲನ ಪಾಡಿ ೩

## ೯೮

**ಘರಜು** **ಅಟ್ಟ**

ರಕ್ಷಿಸೊ ವೆಂಕಟಗಿರಿರಾಜ ರವಿಶತತೇಜ
ಆಶ್ರಿತಕಲ್ಪಭೂಜ ಪ

**ಶ್ಲೋಕ :**

ಶ್ರೀಮಾನ್ಶೇಷಧರಾಧರಾಧಿಪ ಸದಾ ಶ್ರೀಮಾನ್ಸುಸೌಖ್ಯಪ್ರದಾ
ಶ್ರೀಮಾಯಾಜಯಶಾಂತಿಕಾಂತಸ್ವರತಾ ಶ್ರೀವಿಷ್ಣು ಸಿದ್ಧೇಶ್ವರಾ
ಶ್ರೀಮತ್ಪದ್ಮಜಪಾರ್ವತೀಶವಿನುತಾ ಶ್ರೀಪಾದಪದ್ಮದ್ವಯಾ
ಸ್ವಾಮಿನ್ ದೇಹಿ ಸದಾ ತ್ವದೀಯ ಭಜನಂ ಶ್ರೀಕಾಂತ ತ್ವಂ ಪಾಹಿ ಮಾಂ ೧

**ಪದ :**

ಹಾಟಕಮುಖರಿ ಸರಿತ್ತೀರ ಕೃತಮಂದಿರ ವೈಕುಂಠಾಗಾರ
ಕೋಟಿಮನ್ಮಥ ಚಂದ್ರಭಾಸ್ಕರ ದ್ಯುತಿತಿರಸ್ಕಾರ ಶ್ರಿತ ಮೋಹನಾಕಾರ
ಕೂಟಸ್ಥ ಅಖಿಳ ಲೋಕಾಧಾರ ಸಂತತ ಪರಾತ್ಪರ ಮನೋಹರಾ
ಕೈಟಭಮುಖ ಖಳಜಲಧರ ಚಂಡಸಮೀರದೀನಜನಮಂದಾರ ೧

**ಶ್ಲೋಕ :**

ದೇಶಾಕಾಲ ಗುಣಾ ಅತೀತ ಅನಘಾ ದೇವೇಂದ್ರ ಸಂಸೇವಿತಾ
ದಾಶಾರ್ಹಾ ದಶರೂಪರೂಪ ಅಜಿತಾ ದಾಮೋದರಾ ಮಾಧವಾ
ಕಾಶೀಜಾಧವಚಿಚ್ಚಕೋರ ಉಡುಪಾ ಕಾಳೀಫಣಾಮರ್ದನಾ
ಶ್ರೀಶಾಗೀಶ ಅಹೀಶ ಈಶವಿನುತಾ ಶ್ರೀವಿಷ್ಣು ಸರ್ವೇಶ್ವರಾ ೨

**ಪದ :**

ವಟುವೇಷ ಧರಿಸಿ ವಿಪ್ರರ ವೃಂದಾ ವಂಚಿಸಿ ನಿಂದಾ ಸನ್ನುತ ಮುನಿವೃಂದಾ
ನಟನೆಮಾಡುತ ಕುಂಡದೊಳಗಿಂದ ನಲಿಯುತ ಬಂದ ಹವಿರ್ಭೋಕ್ತಾನಂದ

ವಟದಲೆಯೊಳು ಮಲಗಿದ ನಂದನಂದನ ಕಂದ ಮೂಲಕಾರಣ ಗೋವಿಂದ
ಕುಟಿಲ ಕಟುಮತಿ ಖಳಕುಲ ಕೊಂದ ಧೀರ ಮುಚುಕುಂದ ವರದನೆ ಮುಕುಂದ

**ಶ್ಲೋಕ :**

ನಿತ್ಯಾನಂದಮಹೋದಧೇ ನಿರುಪಮಾ ನಿರ್ದೋಷ ಜ್ಞಾನಾತ್ಮಕಾ
ಸತ್ಯಾವಲ್ಲಭ ಸಾತ್ವತಾಂ ಕುಲಪತೇ ಸಾಯುಜ್ಯ ಸಾರೂಪ್ಯದಾ
ಸೂತ್ರಾಧಾರಕ ಹೃದ್ಗುಹಾಲಯ ಸದಾ ಸೂಷುಪ್ತಿ ಜಾಗ್ರತ್ಪ್ರದಾ
ಸತ್ಯೈಶ್ವರ್ಯಬಲಾದಿ ಸರ್ವಭರಿತಾ ಸರ್ವಾಪರೋಕ್ಷೀ ಸದಾ ೩

**ಪದ :**

ವರಾಭಯ ಚಕ್ರದರಧರ ಚತುಷ್ಟಯಕರ ಉರಪೀನ ವಿಸ್ತಾರ
ಸರಿಗೆ ಪದಕವೊಪ್ಪೆ ಕಂಧರ ಕರ ಸಿಂಧೂರ ಕರಪೋಲ್ವ ಕೇಯೂರ
ಬೆರಳಲ್ಲಿ ಮಾಣಿಕ್ಯದುಂಗುರ ತೋಳಬಂಧುರ ಶಾಲಿಗ್ರಾಮದ ಹಾರ
ಸಿರಿವತ್ಸಾಂಕಿತನಾಭಿ ಗಂಭೀರ ಜಗದೋದ್ಧಾರ ಸರ್ವಭುವನಾಧಾರ ೩

**ಶ್ಲೋಕ :**

ಲಕ್ಷ್ಮೀವಕ್ಷಸುಕುಂಕುಮಾಂಕಿತಪದಾ ಲಕ್ಷ್ಮೀವಿಲಾಸಾಸ್ಪದಾ
ಲಕ್ಷ್ಮೀ ಬಾಹುಲತಾಶ್ರಯಾ ಭುಜಯುಗಾ ಲಕ್ಷ್ಮ್ಯಾಸದಾಲಿಂಗಿತಾ
ಲಕ್ಷ್ಮೀ ಅಕ್ಷಸುಪದ್ಮಪದ್ಮಿನಿಪ್ರಿಯಾ ಲಕ್ಷ್ಮೀಮನೋನಾಯಕಾ
ಲಕ್ಷ್ಮೀಚಿತ್ತಚಕೋರಪೂರ್ಣಉಡುಪಾ ಲಕ್ಷ್ಮೀಶ ತ್ವಂ ಪಾಹಿ ಮಾಂ ೪

**ಪದ :**

ಸುಖಮಯ ಮೀನ ಮಂದರಧರ ಧರಾಮನೋಹರ
ನರಮೃಗಾಕಾರ ನಖದಿಂದ ಬ್ರಹ್ಮಾಂಡ ಖರ್ಪರ ಭೇದಿಸಿದ ಧೀರ
ರಾಜ ಕುಲ ಘನ ಈರ ಮಖವ ಕಾಯ್ದ ಮಹ ನೃಪವರ
ಗೋಪೀಜನಜಾರ ನಾನಾ ಲೀಲಾವತಾರ ಮುಖಜವರದ ಮುಪ್ಪುರಹರ
ನುತಮುನಿವರ ಕಲ್ಕಿ ದೀನಮಂದಾರ ೪

**ಶ್ಲೋಕ :**

ರಂಗಾನಂಗಪಿತಾ ರಜೋತ್ತಮಗುಣಾ ರಾಜೀವ ಫುಲ್ಲೇಕ್ಷಣಾ
ಗಾಂಗೇಯಾಂಬರಹಾರನೂಪುರಲಸತ್ ಕಾಂಚೀಲತಾ ಶೋಭಿತಾ

ಸಂಗೀತಪ್ರಿಯಸಾರಸನ್ಮ ನಿಜನಾಸಂಗಾ ಅಸಂಗಾ ಅಜಾ
ಗಂಗಾತಾತ ವಿಹಂಗನಾಥಗಮನಾ ಶೃಂಗಾರಸಾರಾತ್ಮಕಾ ೫

ಪದ :

ಸಟೆಯಿಲ್ಲದಲೆ ನಿನ್ನ ಪಾದವ ಭಜಿಪರ ಭವ ಸಿಂಧುವಿನ ಪ್ರಮಾಣವ
ಕಟಿಯಲ್ಲಿ ಕರವಿಟ್ಟು ತೋರುವ ಭಕ್ತಕೈರವ ಸ್ತೋಮ ಸೋಮನೆನಿಸುವ
ತಟಿತಕೋಟಿಪ್ರಭಾವವ ಧಿಕ್ಕರಿಸುವ ಮುದ್ದು ಮಕುಟ ಕುಂಡಲವ
ಸ್ಫಟಿತಹಾಟಕಮಣಿಕಟಕವ ಹಾರಪದಕವ ನಿಟ್ಟು ಮೆರೆವ ಶ್ರೀದೇವಿ ೫

ಶ್ಲೋಕ :

ನಾನಾಜನ್ಮದಿ ಕಾಯವಾಚಮನಸಾ ಎನ್ನಿಂದಲೀ ಮಾಳ್ಪುದಾ
ಜ್ಞಾನಾಜ್ಞಾನಕೃತಾಖಿಳಕ್ರಿಯಗಳಿಂ ನಿನ್ನನ್ನು ಪ್ರೀತ್ಯಾಗಲೀ
ನಾನಾದ್ರವ್ಯದಿ ಕಾರ್ಯರೂಪಗುಣದೀ ಸರ್ವತ್ರ ಬಿಂಬಕ್ರಿಯಾ
ಜ್ಞಾನಾಮಾತುರವಿತ್ತು ನೀನೆ ಪೊರೆಯೋ ಪ್ರಾಣೇಶ ನಾರಾಯಣಾ ೬

ಪದ :

ವಿಶ್ವತೈಜಸ ಪ್ರಾಜ್ಞತುರ್ಯಾತ್ಮಾ ಅಂತರಾತ್ಮಾ ಪರಮಾತ್ಮ ಜ್ಞಾನಾತ್ಮಾ
ವಿಶ್ವತೋಮುಖ ಗುಣಗಣಭೌಮ ಸಂತತ ಸಾಮವಂದ್ಯನೆ ಸಾರ್ವಭೌಮ
ವಿಶ್ವನಾಟಕ ಋಗ್ಯಜುಸ್ಸಾಮ ಆಗಮಸ್ತೋಮ ಪ್ರತಿಪಾದ್ಯತ್ರಿಧಾಮ
ವಿಶ್ವಾಸದಿಂದಲಿ ತವನಾಮ ಭಜನೆಯ ಕಾಮ ಎನಗೀಯೊ ಶ್ರೀರಾಮ ೬

ಶ್ಲೋಕ :

ಮಂದಾಹಾಸಮುಖೇಂದುಸಂದರುಶನಾದಿಂದಾಘಬೆಂದಪ್ಪುದೋ
ಒಂದೇ ವಂದನ ಮಾಡಲಾಕ್ಷಣ ಸುಖಾಸಂದೋಹ ಸಂದಪ್ಪುದೋ
ನಿಂದೂ ಅರ್ಚಿಸಿ ಸ್ತೋತ್ರಮಾಳ್ಪನು ಮಹಾನಂದಾವನೂ ಬಲ್ಲನೋ
ತಂದೇ ನಿನ್ನಯ ಸುಂದರಾಂಘ್ರಿ ಸತತಾ ಪೊಂದಿಪ್ಪುದೇ ಪಾಲಿಸೋ ೭

ಪದ :

ಮಾಡಲರಿಯೆನು ಸಾಧನವನು ದುಷ್ಟಚಿತ್ತನು ಪಾಪಕರ್ಮದಿರತನು
ಬೇಡುವೆ ಬಹುವಿಧ ಸುಖವನು ಆಶಾಬದ್ಧನು ಇದಕೆ ಗತಿಯೇನು
ಬೇಡಿದುದೆಲ್ಲ ಕೊಡುವೆ ನೀನು ಎಂದು ಬಂದೆನು ಆಶ್ರಿತ ಸುರಧೇನು

ಬೇಡದಂದದಿ ಮಾಳ್ಪ ಧೊರೆ ನೀನು ಇದೇ ವರವನು
ನೀಡಬಹುದ್ದೈಯ ನೀನು - ೭

**ಶ್ಲೋಕ :**

ಅನ್ಯಾವಾರ್ತೆಗೆ ಪೋಗಲೀನದೆ ಮನಾ ನಿನ್ನಂಘ್ರಿಯೋಳ್ ನಿಲ್ಲಿಸೋ
ನಿನ್ನಾವಾರ್ತೆಯ ಕೇಳಿಸೈಯ ಕಿವಿಗೇ ನಿನ್ನನ್ನೆ ಕೊಂಡಾಡಿಸೋ
ನಿನ್ನಾ ಮೂರ್ತಿಯ ತೋರಿಸೈಯ ಮನಕೇ ನಿನ್ನರ್ಚನೇ ಮಾಡಿಸೋ
ನಿನ್ನಂತಾಗಲಿ ಸರ್ವ ಇಂದ್ರಿಯಗಳೂ ನಿನ್ನಾಳ್ಗಳೋಳ್ ಕೂಡಿಸೋ ೮

**ಪದ :**

ಭಜಿಪ ಜನರ ಭಾಗ್ಯೋದಯ ಭಾಗವತಧ್ಯೇಯ ಶುಭಗುಣಗಣನಿಲಯ
ವಿಜಯಸಾರಥಿ ವೀತಾಖಿಳ ಹೇಯ ವಿನಿರ್ಜಿತಮಾಯ
ಏಪ್ತ ಗೋಸುರಪ್ರಿಯ ತ್ರಿಜಗದೀಶನೆ ಅಪ್ರಾಕೃತ ಕಾಯ ಕವಿಜನಗೇಯ
ವೆಂಕಟ ಗಿರಿರಾಯ ನಿಜ ಗುರುಗೋಪಾಲವಿಠಲಯ್ಯ
ನಮೋ ನಮೋ ಜೀಯ ಬೇಗ ಪಿಡಿಯೆನ್ನ ಕೈಯ ೮

## ೯೯

ಭೈರವಿ ಛಾಪು

ರಕ್ಷಿಸೊ ಶ್ರೀಶ ಶ್ರೀನಿವಾಸ ಪ

ರಕ್ಷಿಸೆನ್ನ ಕಮಲಾಕ್ಷ ತ್ರಿಜಗಾ
ಧ್ಯಕ್ಷ ಖಳಜನಶಿಕ್ಷ ಪಾಂಡವ
ಪಕ್ಷ ಕರುಣಾಕಟಾಕ್ಷದಲಿ ನೀ
ಈಕ್ಷಿಸುತ ಪೊರೆ ಪಕ್ಷಿವಾಹನ ಅ

ಕೊಂಚಮತಿಯಲಿ ಕುಜನರ ಸೇರಿ
ಸಂಚರಿಸುತಲಿ ದೀನನಾದೆ
ಪಂಚಶರಸ್ಮರ ವಂಚಿಸುತ ಬಿಡೆ
ಚಂಚಲಾಕ್ಷಿಯರ ಸಂಚುನೋಟದ
ಮಿಂಚಿಗೆನ್ನ ಮನ ಚಂಚಲವು ಪುಟ್ಟಿ
ವಂಚಕ್ಯಮನ್ನಂಚಿಕೆಗೆ ಸಿಲುಕಿದೆ ೧

ಕಿಟ್ಟಗಟ್ಟಿದ ಕಬ್ಬಿಣದಂತೆ
ಕೆಟ್ಟ ಕಲ್ಮಷದ ಕೂಪದಿ ಬಿದ್ದು
ದಿಟ್ಟ ನಿನ್ನಯ ಗುಟ್ಟು ತಿಳಿಯದೆ
ಹೊಟ್ಟೆಗೋಸುಗ ಕೆಟ್ಟು ಕುಜನರ
ತಟ್ಟನೆ ಕಾಲ್ಕಟ್ಟಿ ಬಹುಶ್ರಮ
ಪಟ್ಟು ನಾ ಕಂಗೆಟ್ಟೆ ಪ್ರತಿದಿನ ೨

ಶ್ರೀ ಕಮಲೇಶ ಹೃತ್ಪದ್ಮದಿನೇಶ
ಪ್ರಕಾಶ ಬೇಗನೆಬಂದು
ಯಾಕೆ ತಡ ಎನ್ನ ವಾಕು ಲಾಲಿಸಿ
ಜೋಕೆಯಿಂದಲಿ ನೀ ಕರವ ಪಿಡಿ
ದಾ ಕುಚೇಲನ ಸಾಕಿದ ಪರಿ
ಶ್ರೀಕರ ಜಗನ್ನಾಥವಿಠಲ ೩

## ೧೦೦

ಆನಂದಭೈರವಿ ಅಟ್ಟ

ಲಾಲಿ ಪಾವನಚರಣ ಲಾಲಿ ಅಘಹರಣ
ಲಾಲಿ ವೆಂಕಟರಮಣ ಲಲಿತ ಕಲ್ಯಾಣ ಪ

ವನಜಾಕ್ಷ ಮಾಧವ ವಸುದೇವ ತನಯ
ಸನಕಾದಿ ಮುನಿವಂದ್ಯ ಸಾಧುಜನಪ್ರಿಯ
ಇನಕೋಟಿ ಶತತೇಜ ಮುನಿಕಲ್ಪಭೂಜ
ಕನಕಾದ್ರಿನಿಲಯ ವೆಂಕಟರಾಯ ಜೀಯ ೧

ಜಗದೇಕನಾಯಕ ಜಲಜದಳನೇತ್ರ
ಖಗರಾಜವಾಹನ ಕಲ್ಯಾಣ ಚರಿತ
ಸಗರತನಯಾರ್ಚಿತ ಸನಕಾದಿ ವಿನುತ
ರಘುವಂಶ ಕುಲತಿಲಕ ರಮಣೀಯಗಾತ್ರ ೨

ನಂದಗೋಪ ಕುಮಾರ ನವನೀತ ಚೋರ
ಮಂದಾಕಿನೀ ಜನಕ ಮೋಹನಾಕಾರ

ಇಂದುಧರ ಸತಿಪಿನುತ ವಿಶ್ವಸಂಚಾರ
ನಂದಗೋವಿಂದ ಮುಚುಕುಂದನುತಸಾರ ೩

ಪಕ್ಷಿವಾಹನ ವಿಷ್ಣು ಪಾಹಿ ಪರಮೇಶ
ರಕ್ಷಕೌಸ್ತುಭಭೂಷ ವೈಕುಂಠವಾಸ
ಅಕ್ಷಯ ಫಲದಾತ ಅಖಿಳ ಲೋಕೇಶ
ಲಕ್ಷಣ ಪರಿಪೂರ್ಣ ಲಕ್ಷ್ಮಿಪ್ರಾಣೇಶ ೪

ನರಮೃಗಾಕಾರಿ ಹಿರಣ್ಯಕವೈರಿ
ಕರಿರಾಜ ರಕ್ಷಕ ಕಾರುಣ್ಯ ಮೂರ್ತಿ
ಹರಿ ಆದಿಕೇಶವ ಗುರು ಅಪ್ರಮೇಯ
ಸಿರಿಧರ ಶೇಷಗಿರಿ ವರ ತಿಮ್ಮರಾಯ ೫

## ೧೦೧

ವಂಚನೆಲ್ಲಿಹ್ಯದಯ್ಯ ವೈಕುಂಠಪತಿ
ಗೊಂಚನೆಲ್ಲಿಹ್ಯದಯ್ಯ ಪ

ವಂಚನೆಲ್ಲಿಹ್ಯದು ವಿರಿಂಚಿತಾತನಿಗೆ
ಕಿಂಚಿತ್ತುಧ್ಯಾನಕ್ಕಾಗೊಂಚನಿಲ್ಲದೆ ಬಂದ ಅ

ಚರಣದಾಸರೆಂದು ಪಾಂಡವರ
ತುರಗಕಾಯ್ದ ನಿಂದು
ನರಗೆಬೆಂಬಲನಾಗಿ ತಿರುಗಿದ ಧುರದಲಿ
ಜರ ಮರೆಯಾಗದೆ ಪರಮಕರುಣಾಕರ ೧

ಜಾಗುಮಾಡದಲಿವ ಭಕ್ತರ
ಯೋಗಕ್ಷೇಮ ತಿಳಿವ
ನೀಗದಂಥ ಮಹಭೋಗಭಾಗ್ಯವಿತ್ತು
ಬಾಗಿಲ ಕಾಯ್ದನು ಸಾಗರನಿಲಯ ೨

ಜಾರನೆನಿಸಿಕೊಂಡ ಒಲಿದು
ಚೋರನೆನಿಸಿಕೊಂಡ
ತೋರಿದವರ ಮನಸಾರ ವರವಿತ್ತು ಭೂ
ಭಾರವಿಳುಹಿದ ನಮ್ಮ ಧೀರ ಶ್ರೀ ಗುರುರಾಮ ೩

## ೧೦೨

### ಧ್ರುವ

ವರಮಣಿಗಳ ಕೆತ್ತಿಸಿದ ಮುಕುಟದ ಚಾರು
ತಿರುಮಲಗಿರಿಯ ತಿಮ್ಮರಾಯನ ಕಂಡೆನಾ
ಪೆರೆಯನೊಸಲ ತಿಲಕದ ದಿವ್ಯ ಮಧುಕರ
ಕುರುಳು ಭ್ರೂಲತೆಯ ಶ್ರೀಕಾರದ ಕರ್ಣಯುಗಳ
ಅರಳಿದ ಅರುಣ ಕಮಲದ ತರಳನಯನವ
ವರದಂತಪಂಕ್ತಿ ಎಸೆವ ಅಧರ ಚುಬುಕಾಗ್ರ
ಸ್ಫುರಿತ ಕಂಬು ಕಂಠತ್ರಿರೇಖೆ ಚತುರ್ಭುಜ
ಅರಿಶಂಖ ಕಟಿ ಶೋಭಾಭಯಹಸ್ತವ ಕಂಡೆ
ತರಣಿಯನಂತಕಿರಣ ಜಾನುಜಂಘೆಯ
ಕಿರುಗೆಜ್ಜೆ ಎರಡು ಪಾದಾಂಗುಳಿಯ ನಖದ
ವರವಜ್ರಾಂಕುಶ ಧ್ವಜ ಊರ್ಧ್ವ ರೇಖೆಯಿಂದೊಪ್ಪುವ
ಚರಣ ಮಾಂದಳಿರ ಕಂಡೆ ಒಲಪಿಂದ
ಪರಮ ಪುರುಷ ಗುಣಾತ್ಮ ನೀಲಮೇಘಶ್ಯಾಮ
ಶಿರಿಯರಸು ಪುರಂದರವಿಠಲರಾಯನ ಕಂಡೆ

### ಅಟ್ಟ

ಅಂದುಗೆ ಕಡೆಯ ಪೆಂಡೆಯವು ಮೆರೆವ
ಹೊಂದಿದ ಕಾಂಚೀಧಾಮವ ನಾ ಕಂಡೆ
ಕಂಡು ಪೇಳಲೇನು ಜಾಂಬುನದ ಕಟಿ
ಪೊಂದಿದ ಚಿನ್ನದ ಸೂತ್ರವ ಕಂಡೆನಾ
ಕುಂದದೆ ಹೊಳೆವ ಕೌಸ್ತುಭ ವೈಜಯಂತಿಯನ್ನು ಕಂಡೆ ನಾ
ಇಂದುವಿನಂದದಿ ಮೆರೆವ ಕುಂಡಲ
ಬಂಧುರ ಮಹಿಮ ಬಾಹುಕೀರ್ತಿಯಾ –
ನಂದದಿ ನಿರುಪಮ ತಿರುವೆಂಗಳಪ್ಪಪು –
ರಂದರ ವಿಠಲರಾಯನ ಕಂಡೆನಾ

### ತ್ರಿವಿಡಿ

ತಮನ ಕೊಂದವನೀತ ಮಂದರೋದ್ಧರ ನೀತ
ಭೂಮಿಯ ನೆಗಹಿ ತಂದವನೀತ

ಕುಮತಿ ರಕ್ಕಸರನು ಸೀಳಿ ಬಲಿಯ ಬೇಡಿದನೀತ
ಜಮದಗ್ನಿ ಭವ ಪರಶುನಾಥನೀತ
ಸುಮನಸೇಂದ್ರನ ತನೂಭವ ಸಖನೀತ
ಚಮತ್ಕೃತಿಯಿಂದ ಮೂರೂರು ಗೆಲಿದವನೀತ
ಅಮಲ ಕಲ್ಕಿ ಮೊದಲಾದ ಅನಂತಾವತಾರನೀತ
ಕಮಲೇಶ ಪುರಂದರವಿಠಲನೀತ

ಅಟ್ಟ

ಮಡುವಿನೊಳಗೆ ಗಜರಾಜನ ಕಾಯ್ದನೀತ
ಮಡದಿ ದ್ರೌಪದಿಯಭಿಮಾನ ರಕ್ಷಕನೀತ
ಮಿಡುಕವಜಾಮಿಳನ ಪಾಪ ಪರಿಹರಿಸಿ
ಕಡುಮೆಚ್ಚಿಧ್ರುವಗೆ ಉನ್ನತ ಪದವಿತ್ತನೀತ
ಕಡಲಶಯನನೀತ ಕರುಣಾಂಬುಧಿಯೀತ
ಸಡಗರದ ಪುರಂದರವಿಠಲನೀತ

ಆದಿ

ಶರಣು ಸಕಲ ಜಗತ್ಪಾಲಕ ದೇವ
ಶರಣುವಿರಿಂಚ್ಯಾದಿ ವಂದಿತ ಪಾದ
ಶರಣು ಮುನಿಹೃತ್ಕುಮುದ ಚಂದ್ರ
ಪರಿಪೂರ್ಣ ಗುಣನಿಧಿ ಪರಮಾನಂದ
ಪುರಂದರವಿಠಲ ಪೂರ್ಣ ಕಾಮ

ಜತೆ

ಧರೆಗಿದೇ ವೈಕುಂಠವೆಂದು ತೋರುವಹಸ್ತ
ತಿರುವೆಂಗಳಪ್ಪ ಶ್ರೀ ಪುರಂದರವಿಠಲ

೧೦೩

ಸಾವೇರಿ ಆದಿ

ಪರ ವೈಕುಂಟದಿ ಬಂದವಗೇ ವರ ಗಿರಿಯಲಿ
ಸಂಚರಿಸುವಗೆ ಪರಾಸ ದೇವರನು ಅನುಸರಿಸಿ ಸ್ವಾಮಿ
ಪುಷ್ಕರಣಿ ತೀರದಲಿ ಇರುವವಗೆ ಮಂಗಳಂ ೧

ನರನದಿ ಬೇಟೆಗ ಹೊರಟವಗೆ ನರಸಿಜಾಕ್ಷಿಯ ಕಂಡವಗೆ
ಮರುಳಾಟದಿ ತಾ ಪರವಶನಾಗುತಾ ಕೊರವಿ ವೇಷವ
ಧರಿಸಿದಗೆ ಮಂಗಳಂ ಜಯಮಂಗಳಂ ಜಯಮಂಗಳಂ ೨

ಗಗನರಾಜನ ಪುರಕ್ಕೆ ಪೋದವಗೇ ಬಗೇ ಬಗೇ ನುಡಿಗಳ
ನುಡಿದವಗೆ ಅಗವಾಸಿಗೆ ನಿನ್ನ ಮಗಳನು ಕೊಡುಯೆಂದು
ಗಗನರಾಜನ ಸತಿಗ್ಹೇಳಿದವಗೆ ಮಂಗಳಂ ಜಯ ಮಂಗಳಂ ೩

ತನ್ನ ಕೆಲಸ ತಾ ಮಾಡಿದವಗೆ ಇನ್ನೊಬ್ಬರ
ಹೆಸರ್ಹೇಳವಗೆ ಮುನ್ನ ಮದುವೆ ನಿಶ್ಚಯವಾಗಿರಲು
ತನ್ನ ಬಳಗ ಕರಸಿರುವವಗೆ ೪

ಎತ್ತಿ ನಿಬ್ಬಣ ಹೊರಟವಗೆ ನಿತ್ಯತೃಪ್ತನಾಗಿರುವವಗೆ
ಉತ್ತರಣೆಯ ಪಾಗುರನುಂಡು
ತೃಪ್ತವಾಗಿ ತೇಗಿರುವವಗೆ ೫

ಒದಗಿ ಮುಹೂರ್ತಕ್ಕೆ ಬಂದವಗೆ ಸದಯ
ಹೃದಯನಾಗಿರುವವಗೆ ಮುದದಿಂದಲಿ ಶ್ರೀ
ಪದುಮಾವತಿಯಳ ಮದುವೆ ಮಾಡಿಕೊಂಡ ಮದುಮಗಗೆ ೬

ಕಾಂತೆಯಿಂದ ಸಹಿತಾದವಗೆ ಸಂತೋಷದಿ
ಕುಳಿತಿರುವವಗೆ ಸತತ ಶ್ರೀಮದನಂತಾದ್ರೀಶಗೆ
ಶಾಂತ ಮೂರುತಿ ಸರ್ವೋತ್ತಮಗೆ ೭

## ೧೦೪

ಭೈರವಿ ಧ್ರುವ

ವಸುದೇವ ಅತ್ರಿಸುತಪ ಜಮದಗ್ನಿ ವಿಶಾಲಾ
ದಶರಥ ಪರಾಶರ ಕರ್ದಮ ಶುಭಾ
ವಿಶಜ ಕರ್ದಮನಾರಿ ಯಮಧರ್ಮ ರುಚಿ ವಿಷ್ಣು
ಯಶ ಪ್ರಿಯವ್ರತ ಬ್ರಹ್ಮದೇವ ಗುಂಹ್ಯಾ
ವಸು ನಂಬೋ ದೋಷ ವೇದ ಶಿರ ಆಯುಷ್ಮ ಆರ್ಯಕ
ಬೆಸನುವೆ ಇವರ ತರುವಾಯದಲ್ಲಿ ಮತ್ತೆ
ಪ್ರಸನಿ ದೇವಕಿ ಸತ್ಯವತಿ ರೇಣುಕ ಕೌಸಲ್ಯಾ

ವಿಶಿಚು ವಿಕುಂಠ ಅವಿತಿ ಆಕುತಿ ಅನಸೂಯಾ
ತುಷಿತ ಶಾರ್ವಾದಿ ಮೇರು ಸಂಭೂತಿ ಸರಸ್ವತಿ
ಮಿಸುಣಿಪ ದೇವಹುತಿ ಅಂಬುಧರ ವೈಧೃತ
ಕುಶಲ ಸುಕೃತ ಬ್ರಹತಿ ವೀತಾದ್ಯರು
ವಸುಧಿಯೊಳಗೆ ಏಸು ಪುಣ್ಯ ಮಾಡಿದರೊ
ಎಣಿಸಲಾರರು ಮಹಾಜ್ಞಾನಿಗಳೂ
ಅಸಮಾ ದೈವಾವೆ ನಿನ್ನಾ ವೊಲಿಸಿಕೊಂಡು ಬಿಡದೆ
ಶಿಶುವು ಮಾಡಿಕೊಂಡರು ಆಡಿಸುತ್ತಾ
ಹಸಿವೆ ನೀರಡಿಕೆ ತೊರದು ತಲೆಕೆಳಗಾಗಿ ಬೇವೊ
ಬಿಸಲೊಳು ಕುಳಿತು ತಪಿಸಿದ ಕಾಲಕ್ಕೂ
ಬಿಸಿಜನಾಭನೆ ನಿನ್ನಾ ಸುಳುವು ಕಾಣಾರು ಎಲ್ಲಿ
ಹಸುಳೆಯಾದದೆಂತೊ ಇವರಿವರಿಗೆ
ಬಿಸಿಜಾಕ್ಷ ಲಕುಮಿ ನಿನ್ನ ಮಾತಿಗೆ ಮರುಳಾಗಿ ಮಾ
ನಿಸದಲ್ಲಿ ಕಾಣಳು ಅರಸಿ ಅರಸೀ
ಶಶಿಕೋಟಿ ಲಾವಣ್ಯ ವಿಜಯವಿಠಲ ಶೇಷ
ವಸುಮತಿಧರ ತಿರುವೆಂಗಳೇಶ ೧

## ಮಟ್ಟ

ಬಲರಾಮನು ನಿನಗೆ ಅಣ್ಣನಾದನು ನೋಡಾ
ಫಲ್ಗುಣ ನಿನ್ನ ಸೂತನ ಮಾಡಿಕೊಂಡ
ಕುಲದವರಾಗಿ ಯಾದವ ಜನರೆಲ್ಲ
ನಲಿನಲಿದು ನಿನ್ನಾ ಕೂಡ ಉಂಡರಲ್ಲಾ
ಗೆಳೆಯರೆಂದೆನಿಸಿದ ಗೋಪಾಲಕರಂದು
ಗೆಲವು ಸೋಲಾಟಗಳು ನಿನ್ನನೊಡನಾಡಿದರು
ಇಳಿಯೊಳಗೆ ಇವರ ಸುಕೃತವೇನೆಂಬೆ
ಕಲಕಾಲ ಗುಣಿಸಿ ಎಣಿಕೆ ಮಾಡಿದರಾಗಿ
ನೆಲಯಗಾಣುವರಾರು ನಿನ್ನ ಕಾಂಬುವದಕ್ಕೆ
ಸುಳಿವ ಮಿಂಚಿಗೆ ನರನ ಪ್ರಯತ್ನಗಳುಂಟೆ
ಜಲಜನಾಭನೆ ನೀನೆ ಸ್ವಾಭಾವಿಕತನದಿ
ಒಲಿದಾದಲ್ಲದೆ ಮತ್ತೆ ಒಂದು ಕಾರಣವಲ್ಲ
ಸುಲಭ ಗಿರಿ ವೆಂಕಟ ವಿಜಯವಿಠಲರೇಯ
ಫಳಿಸಿದ ತಪೋಧನವೆ ಭಕ್ತರ ಕುಲಕೋಟಿಗೆ ೨

## ತ್ರಿವಿಡಿ

ಗೋಪಿಕಾ ಸ್ತ್ರೀಯರು ಹದಿನಾರು ಸಾವಿರ
ಭೂಪಾಲಕರ ಮಕ್ಕಳು ಹಗಲಿರುಳು
ಶ್ರೀಪತಿ ನಿನ್ನೊಡನೆ ನೆರದರಂದೂ ಬಿಡದೆ
ವ್ಯಾಪಾರದಲಿ ಮನಸು ತೆಗೆಯದಲೆ
ಭೂಪ ಉಗ್ರಸೇನ ಸಮುಖನ್ನ ಮಾಡಿದ
ಅಪಾರಮಹಿಮ ಅಸುರೂಹವಂದ್ಯನೆ
ದ್ರೌಪದಿ ಸೊಲ್ಲಿಗೆ ನೀಪೋದದಂತೊ
ನಾ ಪೇಳಲಾಪೆನೊ ನಿನ್ನ ಕರುಣ
ರೂಪ ಹೀನಾಳದ ಕುಬುಜೆ ನಿನ್ನ ರಮಿಸಿ
ತಾ ಪ್ರೀತಿಯಾದ ನುಡಿಪೊಂದುವದೆತ್ತ
ಪಾಪರಹಿತ ಪರಿಪೂರ್ಣಸುಖಾತ್ಮಕ
ಈಪರಿ ಇದ್ದವರ ತಪಸಿಗೆ ಭಾಗ್ಯವೇನು
ಭಾಪುರೆ ಇವರಿವರ ತಪಸಿಗೆ ಈ ಫಲವೆ
ವ್ಯಾಪುತಾ ದೈವವೆ ನೀನೆ ಬಲ್ಲೀ
ದೀಪಕ್ಕೆ ಸರ್ವ ಬ್ರಹ್ಮಾಂಡ ಕಾಣಿಸಿದಂತೆ
ನೀ ಪ್ರೇಮದಿಂದ ಮೆಚ್ಚಿದಿಯಲ್ಲಾದೆ
ಸುಪರ್ಣ ಗಿರಿರಾಯಾ ವಿಜಯವಿಠಲ ವೆಂಕಟ
ತಾಪಸಿಗಳಿಗೆ ಮೈದೋರದ ಧೊರಿಯೆ ೩

## ಅಟ್ಟ

ಪಶುವಿಂಡು ಗೋಪಾಲಕರು ನಂದ ವ್ರಜ
ವಸುಧಿ ಎಲ್ಲಾವೆ ಸುಸಾಧನಗೈದಿದರೊ
ಹಸುಗೂಸುಗಳೆಲ್ಲಾ ನಿನ್ನಂತೆ ಮಾತಾಡಿ
ದಿಶಿದಿಶಿಗೆ ಬಾಲಾಟ ಕಲಿತರಲ್ಲೊ
ಮೊಸರು ಪಾಲು ತುಪ್ಪಾ ಬೆಣ್ಣೆ ತುಂಬಿದ ಭಾಂಡಾ
ಋಷಿಕೇಶಾ ನಿನ್ನ ಹಸ್ತಗಳ ಸ್ಪರ್ಶಾ
ಮಿಸಕವಲೆ ಆಯಿತು ಈ ಜಡಗಳ ಪುಣ್ಯಾ
ಶಶಿಧರಗಾದರು ಸೋಜಿಗವಯ್ಯಾ
ಉಸುರಲೇನು ಮುನ್ನೆಗೋಪ ಪಳ್ಳಿಯೊಳಿದ್ದ

ಕಸಕುಪ್ಪಿಸಹವಾಗಿ ಧನ್ಯ ಮಹಾಧನ್ಯ
ಬಿಸಿಜಸಂಭವನ ಲೋಕಕಿಂತಧಿಕ ರಂ
ಜಿಸುವದು ನೀನವತಾರನಾಗೆ
ಬೆಸಸೀದ ಮಾತುಗಳಂತಿರಲಿ ಸರ್ವಕ್ಕು
ಯಶೋದಾ ದೇವಿ ನೋಂಪೀಯಂತೊ ಯಂತೊ
ದಶರಥ ಮೊದಲಾದ ಋಷಿಗಳಲ್ಲಿ ಜ
ನಿಸಿದ ಕಾಲಕೆ ದೇವಾ ನಿನ್ನ ಕೂಡಾಡಿದಾ
ಅಸುಗಳು ಏನು ಪುಣ್ಯ ಮಾಡಿದರೊ
ವೃಷಭಗಿರಿಯ ವಾಸ ವಿಜಯವಿಠಲ ವೆಂಕಟ
ಅಸಮ ದೈವವೆ ನಿನ್ನ ಕರುಣತನ ಎಂತೊ ೪

ಆದಿ

ಇದು ಎಂತಿರಲಿ ಇಂದಿನ ದಿನದಲ್ಲಿ
ಪದುಮನಾಭನೆ ಸಮ್ಮೊಗವಾಗಿ
ಹೃದಯಾಕಾಶಾದಿ ನಿನ್ನ ಮೂರುತಿ ಇಟ್ಟು
ಒದಗಿ ಗಾಯನ ನೃತ್ಯ ನಾನಾಪರಿಸೇವೆ
ಮುದದಿಂದ ಮಾಡುವ ನಿಜಶರಣರ ಪುಣ್ಯ
ಉದಯಾಸ್ತಮಾನವು ಎಣಿಸೆವುಂಟೇ
ಇದೆ ಇದೆ ಸಿದ್ಧವೊ ಕೃತಾದಿಯುಗದಲ್ಲಿ
ಪದೊಪದಿಗೆ ತುಂಬಿಹರೊ ಇಲ್ಲಿ
ವಿಧುಮೊಗಾ ಇವರೆಲ್ಲ ನಾನಾ ತಪಸುಮಾಡಿ
ಚದುರತನದಿಂದ ಒಲಿಸಲಿಲ್ಲ
ಮದನ ಜನಕ ನೀನೆ ಅನುಕಂಪನಾಗಿ ವೊ
ಲಿದೆ ಯಲ್ಲದೆ ಮತ್ತೊಂದು ಇಲ್ಲಾ
ಉದಯಗಿರಿಯವಾಸ ವಿಜಯವಿಠಲ ವೆಂಕಟ
ಅದುಭೂತದೈವಾವೆ ಬಹುವಿಧ ಚರಿತಾ ೫

ಜತೆ

ಮನಸು ಬಂದಂತೆ ಮಹಾಮಹಿಮೆ ತೋರುವ ದೇವ
ಅನಿಮಿಷಾ ಗಿರಿವಾಸ ವಿಜಯವಿಠಲ ವೆಂಕಟ ೬

## ೧೦೫

ಭೈರವಿ ತ್ರಿವಿಡಿ

ವಿಗ್ರಹವನೆ ನಿಲ್ಲಿಸೊ ವೆಂಕಟ ನಿನ್ನ
ಗಗನಾಗ್ರಕ್ಕೆ ಬೆಳೆದು ಗಂಗೆಯ ಪಡೆದ ನಿನ್ನ ಪ

ರನ್ನದ ಮುಕುಟ ಸುವರ್ಣ ಕುಂಡಲ ತೇಜ
ಚನ್ನ ಗಂಡಸ್ಥಳದಿ ತೂಗಿ ಪೊಳೆವ ನಿನ್ನ ೧

ಕೊರಳ ತ್ರಿರೇಖೆ ಕೇಯೂರ ಕೌಸ್ತುಭ ಹಾರ
ಉರದಲ್ಲಿ ಸಿರಿವತ್ಸ ಧರಿಸಿ ಮೆರೆವ ನಿನ್ನ ೨

ಕುಕ್ಷಿಯೊಳಗೆ ಅಕ್ಷಲೋಕವನಡಗಿಸಿ
ಪೇಕ್ಷೆಯಿಂದಲಿ ಸುರರ ರಕ್ಷಿಸಿ ನಗುವ ನಿನ್ನ ೩

ನಖದೊಳನಂತ ಬ್ರಹ್ಮಾಂಡವನಡಗಿಸಿ
ಮಕ್ಕಳಾಟಿಕೆಯಿಂದ ಮರಳು ಮಾಡುವ ನಿನ್ನ ೪

ಉತ್ಪತ್ತಿ ಸ್ಥಿತಿಲಯ ಕಾರಣಕರ್ತ ಜಗ
ತ್ಪತಿ ವಿಜಯವಿಠ್ಠಲ ವೆಂಕಟ ನಿನ್ನ ೫

## ೧೦೬

ಶಂಕರಾಭರಣ ಏಕ

ವೆಂಕಟಪತಿ ಶರಣು ಹಾ ಹಾ
ವೆಂಕಟಪತಿ ಶರಣು ಪ

ಕಮಲಸಂಭವನುತ ಚರಣ ಶುಭ
ಕಮಲಾರಿಕುಲಾಭರಣ
ಕಮಲಸಖಿಸಂತಾರಣ ಕಿರಣ
ಕರುಣಸಂಪೂರಣ ೧

ಶಿರಿ ಭೂದೇವಿಯರ ರಮಣ ದಿವ್ಯ
ಸಾರಸಾಕ್ಷ ಖಗವರಗಮನಾ

ಸುರರಿಪುಗಣಾಸುರದಮನ ಭವ –
ಹರ ಸುರವರ ಸಮನಾಮ ನಮೊ ೨

ಶೇಷಗಿರಿಯ ತಟನಿಲಯ ಫಣ –
ಶೇಷ ಭೂಷಣ ಮಣಿ ವಲಯ
ಪ್ರಸನ್ನ ವೆಂಕಟ ತಿರುಮಲೆಯೊಳಿಪ ಚಲುವಾ
ಸ್ವಸುಖಭೋಕ್ತ ಭಕ್ತರಾಶ್ರಯ ೩

## ೧೦೭

ಸೌರಾಷ್ಟ್ರ ಅಟ್ಟ

ವೆಂಕಟರಮಣ ವೇದಾಂತ ನಿನ್ನಯ ಪಾದ
ಪಂಕಜ ಕಂಡಮೇಲೆ ಮಂಕು ಮಾನವರ ಬೇಡಿಸುವುದು ಉಚಿತವೆ,
ಶಂಖ ಚಕ್ರಾಂಕಿತನೆ ಪ

ಕ್ಷೀರಸಾಗರವ ಪೊಂದಿರ್ದವ ಮಥಿಸಿದ
ನೀರಮಜ್ಜಿಗೆ ಕಾಣನೆ ಚಾರುಕಲ್ಪವೃಕ್ಷದಡಿಯೊಳು ಕುಳಿತಿರ್ದು
ತೋರತಿಂತ್ರಿಣಿ ಬಯಕೆಯೇ ೧

ಸಾರ ಭೂಪಾಲನ ಸೂನುವೆನಿಸಿಕೊಂಡು
ಸೂರೆಗೂಳಿನ ತಿರುಕೇ ನಾರಿ ಲಕ್ಷ್ಮೀಕಾಂತ ನಿನ್ನ ಪೊಂದಿರ್ದಗೆ
ದಾರಿದ್ರ್ಯದಟ್ಟುಳಿಯೇ ೨

ಸುರನದಿಯೊಳು ಮಿಂದು ಸುಖಿಯಾದ ಬಳಿಕಿನ್ನು
ದುರಿತಗಳಟ್ಟುಳಿಯೇ ಪರಮಪುರುಷ ನಿನ್ನ ಪೊಂದಿದ್ದ ದಾಸರ್ಗೆ
ಅರಿಗಳ ಭೀತಿಯುಂಟೇ ೩

ಗರುಡನ ಮಂತ್ರವ ಕಲಿತು ಜಪಿಸುವಗೆ
ಉರಗನ ಹಾವಳಿಯೇ ಹರಿಯಿಕ್ಕೆ ಪಕ್ಕದಿ ಮನೆ ಕಟ್ಟಿದಾತಗೆ
ಕರಿಗಳ ಭೀತಿಯುಂಟೇ ೪

ಪರಮಪುರುಷ ಸುಗುಣಾತ್ಮಕನೆ ನಿನ್ನ
ಮೊರೆಹೊಕ್ಕನಯ್ಯ ಕಾಯೊ ಉರಗಾದ್ರಿ ವಾಸ ಶ್ರೀಪುರಂದರವಿಠ್ಠಲ
ಪರಬ್ರಹ್ಮ ನಾರಾಯಣ ೫

## ೧೦೮

**ಶಂಕರಾಭರಣ** **ಅಟ್ಟ**

ವೇಂಕಟರಮಣನೆ ಬಾರೊ ಶೇಷಾಚಲವಾಸನೆ ಬಾರೊ
ಪಂಕಜನಾಭ ಪರಮ ಪವಿತ್ರ ಶಂಕರಮಿತ್ರನೆ ಬಾರೊ ಪ

ಮುದ್ದು ಮುಖದ ಮಗುವೆ ನಿನಗೆ ಮುದ್ದು ಕೊಡುವೆನು ಬಾರೊ
ನಿರ್ದಯವೇಕೋ ನಿನ್ನೊಳಗೆ ನಾನು ಪೊಂದಿದ್ದೇನು ಬಾರೊ ೧

ಮಂದರಗಿರಿಯನೆತ್ತಿದಾನಂದ ಮೂರ್ತಿಯೆ ಬಾರೊ
ನಂದನ ಕಂದ ಗೋವಿಂದ ಮುಕುಂದ ಇಂದಿರೆಯರಸನೆ ಬಾರೊ ೨

ಕಾಮನಯ್ಯ ಕರುಣಾಳೊ ಶ್ಯಾಮಲವರ್ಣನೆ ಬಾರೊ
ಕೋಮಲಾಂಗ ಶ್ರೀ ಪುರಂದರವಿಠಲನೆ ಸ್ವಾಮಿರಾಯನೆ ಬಾರೊ ೩

## ೧೦೯

**ಸಿಂಧುಭೈರವಿ** **ಆದಿ**

ವೇಂಕಟಾಚಲನಿಲಯಂ ವೈಕುಂಠಪುರವಾಸಂ
ಪಂಕಜನೇತ್ರಂ ಪರಮಪವಿತ್ರಂ
ಶಂಖಚಕ್ರಧರ ಚಿನ್ಮಯರೂಪಂ ಪ

ಅಂಬುಜೋದ್ಭವ ವಿನುತಂ
ಅಗಣಿತಗುಣನಾಮಂ
ತುಂಬುರುನಾರದ ಗಾನವಿಲೋಲಂ
ಅಂಬುಧಿಶಯನಂ ಆತ್ಮಾಭಿರಾಮಂ ೧

ನೌಮಿ ಪಾಂಡವ ಪಕ್ಷಂ
ಕೌರವಮದಹರಣಂ
ಬಾಹು ಪರಾಕ್ರಮಪೂರ್ಣಂ
ಅಹಲ್ಯಾಶಾಪ ಭಯನಿವಾರಣಂ ೨

ಸಕಲ ವೇದ ವಿಚಾರಂ ಸರ್ವಜೀವ ನಿಕರಂ
ಮಕರಕುಂಡಲಧರ ಮದನಗೋಪಾಲಂ
ಭಕ್ತ ಪೋಷಕ ಶ್ರೀಪುರಂದರವಿಠಲಂ ೩

## ೧೧೦

**ಭೂಪಾಳಿ** **ಝಂಪೆ**

ವೆಂಕಟಾಚಲ ನಿಲಯಾ ಎನ್ನ ಒಡೆಯಾ ಪ

ವೆಂಕಟಾಚಲ ನಿಲಯಾ ವಿಧಾತೃ ಸಂತರೊಡೆಯಾ
ಪಂಕಜಮುಖಿರಮಣ ಪಾವನ ಚರಣಾ ಅ

ಉದಯವಾಗದ ಮುನ್ನ ಉದರ ಪೋಷಣೆ ಚಿಂತೆ
ಅದರ ಮೇಲೆ ಧಾನ್ಯಧನದ ಚಿಂತೆ
ಮದನ ಯೌವನದ ಚಿಂತೆ ಮತ್ತೆ ಸತ್ವದ ಚಿಂತೆ
ಹೃದಯದಲಿ ನಿಮ್ಮ ಚಿಂತೆಯನು ಮಾಡದಲೆ ಕೆಟ್ಟೆ ೧

ಮಂದಗಮನೆಯರಾಶೆ ಮೇದಿನಿ ಆಳುವ ಆಶೆ
ನಂದನರ ಆಶೆ ನಾನಾ ಆಶೆಯು
ಬಂಧು ಬಳಗದ ಆಶೆ ಭಾಗ್ಯವುಳ್ಳವನಾಶೆ
ಒಂದು ದಿನ ನಿಮ್ಮಾಶೆಯನು ಮಾಡದಲೆ ಕೆಟ್ಟೆ ೨

ಎದುರುಯಿಲ್ಲವೆಂಬೊ ಗರ್ವ ಎದಿಯ ಬಿಗುವಿನಗರ್ವ
ವದನ ನಿಷ್ಠುರ ಗರ್ವ ವಿದ್ಯಾ ಗರ್ವವು
ಉದಧಿಶಯನ ನಮ್ಮ ವಿಜಯ ವಿಠಲರೇಯಾ
ಮದಗರ್ವದಿಂದ ನಿನ್ನ ನೆನಹು ಮಾಡದೆ ಕೆಟ್ಟೆ ೩

ನಿರ್ದಯನಲ್ಲ ಸಮುದ್ರಶಯನ ಗೋ–
ವರ್ಧನ ಗಿರಿಯನು ಉದ್ಧರಿಸಿದ ಯದು–
ವರ್ಧನ ದನುಜ ವಿಮರ್ದನ ಲಕ್ಷ್ಮಿ ಜ–
ನಾರ್ದನ ವರಶೇಷಾದ್ರಿ ನಿವಾಸ ೪

ವಾರಿಜಾಸನ ಮನೋಜಾ– ಇರ್ವರು ಸುತರು
ಸುರ ತರಂಗಿಣಿ ತನುಜೆ

ಪುರವೇ ವೈಕುಂಠ ಇಂದ್ರಾದ್ಯಮರರು ಕಿಂಕರರು
ಗರುಡವಾಹನ ಉರಗ ಪರಿಯಂಕ ನಿಷ್ಕಳಂಕ
ಸರಿದೊರೆಗಳ ನಾನರಿಯೆನು ವೆಂಕಟ
ಗಿರಿಯಲಿ ಇರುತಿಹ ಕರುಣೆಗಳರಸನೆ
ಮರೆಯದೆ ಸಲಹೋ ಶರಣಾಗತರನು
ಮರುತಾಂತರ್ಗತ ಸಿರಿವಿಜಯವಿಠಲಾ ೫

## ೧೧೧

ಪೂರ್ವಿ ಆದಿ

ವೆಂಕಟಾಚಲ ನಿವಾಸಾ—ಜಗದೀಶ
ಸಂಕಟಾ ಹರಿಸೊ ಶ್ರೀಶಾ ಪ

ಪಂಕಜಾಸನ ಪ್ರಮುಖ ಶಶಾಂಕಸುರವರ ಪೂಜಿತ
ಅಕಳಂಕ ಮಹಿಮ ಖಗಾಂಕ ಚಕ್ರಗದಾ
ಶಂಖ ಶ್ರೀಕರ ಕಂಜಧರ ಪಾಣೇ ಅ

ಲೋಕನಾಥ ಲೋಕಬಂಧು— ದಯಾಸಿಂಧು
ಭಕುತರನಿಮಿತ್ತ ಬಂಧು— ಎಂದೆಂದೂ
ಭಕುತರ ಬೆಂಬಲನು ಎಂದೂ— ಇಂತೆಂದು
ಪಾಕಶಾಸನ ಪೂಜ್ಯ ಪಿನಾಕಿಪಿತ ಸುರಜ್ಯೇಷ್ಠ ವಂದ್ಯ
ಏಕಮೇವ ನೀ ಕೈಬಿಡದೆ ಕರ್ಮ—
ಪಾಕಮಾಡಿಸೋ— ಕಾಲನಾಮಕ ೧

ಬಂಧಕಗಳತಂದೊಡ್ಡೀ— ಭಕುತರ ಮನ
ಒಂದೊಂದುಪರಿ ದೃಢಮಾಡಿ— ಪರಿಯು ನೋಡಿ
ಬಂದ ಬಂಧವ ಹರಿಸಿ— ಹೃದ್ವಾಸೀ
ಹಿಂದುಮುಂದೂ ಕಾಣದ ಮಹ—
ಅಂಧಕಾರಣ್ಯದಲಿ ಸಲಹಿದೆ
ಬಂಧಮೋಚಕನಹುದೋ ಅನಾಥ—
ಬಂಧು ನೀನೆಂದು ನಂಬಿದೇ ೨

ಕರುಣಾಸಾಗರನೇ ನಿನ್ನಾ— ನಾ ನಂಬಿದ
ಸ್ಮರಣೆಯೊಂದನೆ ಪಾಲಿಸೋ ಈ ಜನುಮದೀ

ಪರಮಸಾಧನ ಕಾಣದೇ–ಪರಿತಪಿಸುವೇ
ನಿರುತ ಭವ ಸಂಕೋಲೆಯಾ ಕಡಿದು
ಪೊರೆಯುವುದೋ ಶ್ರೀವೇಂಕಟೇಶನೆ
ಸ್ಮರಿಪರಘ ಪರಿಹರಿಪ ಶ್ರೀ–
ಉರಗಾದ್ರಿವಾಸವಿಠ್ಠಲ ಪ್ರಭೋ ೩

## ೧೧೨

**ಮಧ್ಯಮಾವತಿ** **ಅಟ್ಟ**

ವೆಂಕಟಾಚಲವಾಸ । ವೇದಾಂತ ವೇದ್ಯಾ
ತಂಕ ರಹಿತ ವಿಲಾಸಾ । ವಿಧಿಭವ ಸುರಾರ್ಚಿತ
ಪಂಕಜಾಂಘ್ರಿ ಸುಪೋಷಾ । ಲಕ್ಷ್ಮೀನಿವಾಸಾ ಪ

ಶಂಕಚಕ್ರ ವರಾಭಯಕರ ಶ । ಶಾಂಕವದನ ಕಳಂಕ ರಹಿತನೆ
ಕಿಂಕರನ ಅವಗುಣಗಳೆಣಿಸದೆ । ಪಂಕಜ ಪರಿಪಾಲಕನೆ ಶ್ರೀ ಅ

ಶ್ರೀರಮಣ ಶೃಂಗಾರಾ । ಶುಭಗುಣಭರಿತ ಭವ
ತಾರಕನೆ ತಾತ್ಸಾರಾ । ಮಾಡದಲೆ ತವ ಪರಿ
ಚಾರಕರ ವಿಸ್ತಾರಾ । ಸೇವೆಯನು ಪಾಲಿಸೊ
ವಾರ ವಾರಕೆ ಧೀರಾ । ದೇವಕಿ ಕುಮಾರಾ
ತಾರತಮ್ಯನುಸಾರ ತತ್ವವಿ । ಚಾರದಿಂದಲಿ ವಿವಿಧ ಮೋಹದಿ
ಪಾರಗಾಣಿಸೊ ಪಾರ್ಥಸಾರಥಿ । ಭಾರ ನಿನ್ನದೊ ಭಕ್ತವತ್ಸಲ
ಕೌರವಾಂತಕ ಕಾರುಣಿಕ ಪಂ । ಕೇರುಹೇಕ್ಷ ಪರಾವರಜ್ಞ ಮು
ರಾರಿ ಮುಕ್ತ ವಿಹಾರ ಮುನಿಪರಿ । ವಾರ ಮಾಮನೋಹಾರ ಮೂರುತಿ ೧

ತಾಟಕಾಂತಕ ರಾಮಾ । ತಡಮಾಡದಲೆ ಶಶಿ
ಜೂಟನುಳುಹಿದ ಪ್ರೇಮಾ । ಭವ ಸಾಗರದೊಳು
ಪಾಟುಬಡುವೆನೊ ಕಾಮಾ । ಕ್ರೋಧಾದಿಗಳ ಆ
ರಾಟ ಮಗ್ಗಿಸೊ ಸೋಮಾ । ಸತ್ಕುಲ ಲಲಾಮ
ಹಾಟಕಾಂಬರ ಹನುಮವಂದ್ಯ ವಿ । ರಾಟ ಮೂರುತಿ ವಿಷ್ಣುತುರಿಯ ಲ
ಲಾಟ ಕೆಸೆದನ ಮನ್ನಿಸಿದ ಮಧು । ಕೈಟಭಾರಿ ಮಹಾಮಹಿಮಗುಣ
ಕೂಟದಿಂದಲಿ ಜಗವ ನಿರ್ಮಿಸಿ । ಹಾಟಕೋದರ ಹರ ಮುಖ್ಯರ
ನೀಟು ಸೂತ್ರದಿ ಈಟದಂದದಿ ಚೂಟದಲಿ ಚೆಲ್ಲಾಟವಾಡಿದ ೨

ಜನನಮರಣ ವಿದೂರಾ । ಜಾನಕಿ ಮನೋಹರ
ಪ್ರಣತಜನ ಮಂದಾರಾ । ಪ್ರಾಕೃತರಹಿತ ಚಿ
ದ್ಘನ ಶರೀರ ಅಪಾರಾ । ಕರ್ಮಗಳಿಗೊಪ್ಪಿಸಿ
ದಣಿಸುವರೆ ಯದುವೀರಾ । ಪರತತ್ವಸಾರಾ
ವನಜಜಾಂಡ ವರೂಥಖಿಳ ಸ । ಜ್ಜನ ಶಿರೋಮಣಿ ಸಾತ್ವತಾಂಪತಿ
ಮಣಿದು ಬೇಡುವ ರೊಡೆಯ ಮದ್‌ಹೃದ್ ವನಜ ದಿನಮಣಿ ದಿತಿಸುತಾಂತಕ
ಜನುಮ ಜನ್ಮಾರ್ಜಿತ ಕಲುಷ ಕಾ । ನನವ ಖಂಡಿಸೊ ವ್ಯಾಸವಿಠಲ
ಮನವಚನ ಕಾಯದಲಿ ನಮಿಸುವೆ । ಘನ ಮಹಿಮ ಗಜವರದ ಸುಂದರ ೩

## ೧೧೩

**ತೋಡಿ** **ಆದಿ**

ವೆಂಕಟಾದ್ರಿ ವರದಾ
ಶಂಕರನುತ ಪಾದಾ ಪ

ಶಂಖಾರಿಕರಾಹಿಪರಿ
ಯಂಕ ಶಾಯಿ ಉದಾರೀ
ಕಿಂಕರ ಕೋಶಾ ಸಂಕಟನಾಶಾ
ಪಂಕಜನಾಭಾಸಂಖ್ಯಾತರವಿಭಾ ೧

ಗಜ ಬಂಧನ ನಿವಾರೀ
ಕುಜ ಮಸ್ತಕ ವಿದಾರೀ
ಅಜಮಿಳರಕ್ಷ ನಿಜಜನಪಕ್ಷ
ಕುಜನ ವಿಶಿಕ್ಷಾಂಬುಜಪತ್ರಾಕ್ಷ ೨

ಕಂಸಮಥನಕಾರೀ
ಹಂಸಡಿಬಿಕ ವೈರೀ
ಸಂಶಯಹರ ಗೋಪಾಂಸುಲಿಪ್ತಾಂಗ –
ಮಾಂಶು ಕುಲೇಶಾ ಭವಶರನಾಶಾ ೩

ಭೈಷ್ಮೀಸತ್ಯಾರಮಣ
ಭೂಷಿತಾಖಿಳಾಭರಣ

ದ್ವೇಷಕೃತ ದಮಘೋಷಹರಣ
ಮಾಶೀಘ್ರ ಭೋಕ್ತಾಗ್ರೇಸರ ಶಕ್ತಾ ೪

ಸ್ವಾಮಿ ತೀರ್ಥ ಕರ್ತ
ಕಾಮಿತ ಫಲದಾತಾ
ಸ್ವಾಮಿ ಪ್ರಸನ್ವೆಂಕಟಾಮಲ ಮೂರ್ತಿ
ನಾ ಮೊರೆ ಹೋಗುವೆ ಪ್ರೇಮದ ಪ್ರಭುವೆ ೫

## ೧೧೪

**ಪಂತುವರಾಳಿ** **ಅಟ್ಟ**

ವೆಂಕಟೇಶ ಕಾಯೊ ಕಿಂಕರರವನೆಂದು ಪ

ಪಂಕಜಾನನ ಶಂಕರಾರ್ಚಿತ
ಶಂಖ ಚಕ್ರಗದಾಂಕಿತ ಅ

ವಾಸುದೇವ ನೀನೆ ಶ್ರೀ ಸರಸಿಜಭವ
ವೀಶ ಫಣಿಪ ಮಹೇಶವಾಸವರಾಶೆ ಪೂರೈಸಿ
ಪೋಷಿಸುವ ಜಗದೀಶ ಜೀವನದ ವಾ
ರಾಶಿಜಾತೆ ಪ್ರಾಣೇಶ ರವಿಸಂಕಾಶ ಕರಿವರಕ್ಲೇಶಹ ೧

ಸ್ವಾಮಿತೀರ್ಥನಿವಾಸ ಸ್ವರಮಣ ಭಕುತರ
ಕಾಮಿತಪ್ರದ ಕೈರವದಳಶ್ಯಾಮ ಸುಂದರನೆ
ಹೇಮಶೃಂಗೀವರಧಾಮ ದೀನಬಂಧೋ
ಸಾಮಸನ್ನುತ ಸೋಮಧರ ಸುತ್ರಾಮಸುರಮುಖಸ್ತೋಮನೆ ೨

ತ್ರಿಗುಣಾತೀತ ನರಮೃಗರೂಪ ನಾ ನಿನ್ನ
ಪೊಗಳಬಲ್ಲೆನೆ ನಿಗಮವೇದ್ಯನೆ ಜಗನ್ನಾಥವಿಠಲ
ಸ್ವಗತಭೇದಶೂನ್ಯ ಮುಗಿವೆ ಕರಗಳ ಪನ್ನಗನಗಾಧಿಪ
ಪೊಗರೊಗುವ ನಗೆಮೊಗದ ಸೊಬಗಿನ ಸುಗುಣನೆ ೩

## ೧೧೫

**ಆನಂದಭೈರವಿ** **ಅಟ್ಟ**

ವೇಂಕಟೇಶ ದಯಮಾಡೋ ವೇದವೇದ್ಯನೆ

ಪಂಕಜಾಕ್ಷ ಅಭಯವಿತ್ತು ರಕ್ಷಿಸೆನ್ನ ಬೇಗನೆ ಪ

ಚಿತ್ತ ಚಂಚಲವ ಬಿಡಿಸೋ ಮತ್ತೆ ಕ್ರೋಧವ ಓಡಿಸೊ
ಭ್ರಾಂತಿ ವಿಷಯಂಗಳು ಬೇಡ ಕಂತುಪಿತ ನಾರಾಯಣ ೧

ಸೃಷ್ಟಿ ಮೂರರೊಳಗೆ ನೀನೆ ಕಷ್ಟಬಡಿಸುವರೇನೊ
ನಷ್ಟ ತನ್ನ ನೋಡಬೇಡೊ ದೃಷ್ಟಿಸಿ ನೋಡೊ ದಯಾಳೊ ೨

ಭಾಳ ಅಪರಾಧಿ ನಾನು ನಿನ್ನ ಬಳಿಗೆ ಬಂದ ನಾನು
ಒಲಿದು ಎನ್ನ ರಕ್ಷಿಸಯ್ಯ ಮೇಲುಗಿರಿ ಪುರಂದರವಿಠಲ ೩

## ೧೧೬

ವೆಂಕಟೇಶ ನಮೋ ವೆಂಕಟೇಶ ಪ

ವೈಕುಂಠ ಮಂದಿರವನು ಶೇಷಾಚಲದಲಿ
ಬೇಕೆಂದು ಮಾಡಿದೆ ನೆಲೆ ವಾಸಾ ೧

ಶ್ರೀದೇವಿ ಸಂಗಡಾ ಸ್ವಾಮಿ ಪುಷ್ಕರಿಣಿ ತೀರದಲಿ
ಮೋದದಿ ಕ್ರೀಡಿಸುವ ವಿಲಾಸ ೨

ಗುರು ಮಹಿಪತಿ ಪ್ರಭು ಚರಣವ ನಂಬಿದವರ
ಧರೆಯೊಳು ಪೂರಿಸೋ ಮನದಾಶಾ ೩

## ೧೧೭

ಸಿಂಧುಭೈರವಿ ಆದಿ

ವೇಂಕಟೇಶ ನಿನ್ನ ನಾಮಕ್ಕೆ ಮೊದಲು ನಾಕಕ್ಷರಗಳು ನೋಡೊ ಪ

ಬಿಂಕವಾದ ನಾಲ್ಕು ವೇದಶಾಸ್ತ್ರ ಪುರಾಣಗಳಿದರಿಂದ ಅ

ವೇದ ಪೊಂಬ್ಬನ ಸಾಧಿಸಿ ಗೆದ್ದ ಮೊದಲು ನೀನಲ್ಲವೆ
ವೇಷವ ತಾಳಿದೆ ಶರಧಿಯ ಮಥನ ಲೇಸು ನಿನಗಲ್ಲವೆ

ವೇಗದಿಂದಲಿ ಎತ್ತಿ ದೈತ್ಯನ ಸೀಳಿದೆ ನೀನಲ್ಲವೆ
ವೆಕ್ಕಸ ಇಹ ಪಾತಕನ ಕರುಳು ನಿನಗೆ ಒಂದು ಮಾಲೆಯಾಗಿಲ್ಲವೆ ೧

ಕಮ್ಮ ಮಾಡಿ ಮೂರುತಿಯಲ್ಲಿ ಬಲಿಯ ಹಾಕಿದೆ ಪಾತಾಳಕೆ
ಕಲ್ಮಷ ನುಡಿಯ ಸುತನ ಕೈಯ ಮಾತೆಯ ಕೊಲ್ಲುವುದಕ್ಕೆ
ಕಡನಿಲ್ಲದೆ ವನವಾಸಕ್ಕೆ ಬಂದೆ ಸೀತೆಯ ಹುಡುಕುವುದಕ್ಕೆ
ಕಂಸಮಾವನ ಕೊಂದೆ ತಂದೆತಾಯಿಗಳ ಬಿಡಿಸುವುದಕ್ಕೆ ೨

ಟೀಕಿಮಾಡಿ ಮೂರ್ಪುರ ಸತಿಯರ ವ್ರತವ ಕೆಡಿಸಿಬಿಟ್ಟೆ
ಟಕ್ಕಿಸಿ ಎಡಬಲ ಲಕ್ಷ್ಮಿಯ ತೆಗೆದು ವಕ್ಷಸ್ಥಳದಲಿಟ್ಟೆ
ಟಂಕಿ ಬೆಳ್ಳಿ ಟಂಕಿ ನರಲೋಕಕ್ಕೆ ಉಡುಪಿಗೆ ಮನಸಿಟ್ಟೆ
ಟೇರ್ಕೋಡಿಯಲಿ ಠಾಣವ ಹಾಕಿದೆ ಜಗದಿ ಕುದುರೆಯ ಬಿಟ್ಟೆ ೩

ಶಾಕದ ತುದಿಯಲ್ಲಿ ಶಾಂತಪಾಂಡವರು ದ್ರೌಪದಿ ವನವಾಸ
ಶ್ಯಾಮಸುಂದರ ಶರಣು ಸಜ್ಜನ ಗುರುಚಂದ್ರ ಭಾಸ
ಶಾಮ ಸಹಿತ ಬಹುಮುಕ್ತಿಯ ಪೊಂದಿದ ರುಕ್ಮಾಂಗದ ಪೋಷ
ಶಾಶ್ವತ ಸಲಹುವ ಪುರಂದರವಿಠಲ ಕಲಿಯುಗ ವೇಂಕಟೇಶ ೪

## ೧೧೮

ಆರಭಿ ಆದಿ

ವೆಂಕಟೇಶ ಬೇಡಿಕೊಂಬೆ ಕೃಪೆಯ ಪಾಲಿಸೊ, ಬ್ರಹ್ಮ ಪ

ಶಂಕರಾದಿ ವಂದ್ಯ ಎನಗೆ ಮುಕ್ತಿ ತೋರಿಸೊ ಅ

ನಷ್ಟ ಮೊದಲಾದಂಥ ಕಷ್ಟ ಬಿಡಿಸೋ, ನಿನ್ನ
ಪಟ್ಟದ ರಾಣಿಗೆ ಹೇಳಿ ಪದವಿ ಕೊಡಿಸೊ
ಇಷ್ಟ ಭಕ್ತ ಜನರೊಳು ಎನ್ನ ಸೇರಿಸೊ
ಈ ಸೃಷ್ಟಿಯೊಳು ನಿನ್ನ ದಾಸರ ದಾಸನೆನಿಸೊ ೧

ಉಟ್ಟು ಉಂಡು ಮಿಕ್ಕಿದ್ದೆಲ್ಲ ಎನಗೆ ಹಾಕಿಸೊ ಪೊಂ
ಬಟ್ಟಲೊಳಗಿನ ಹಾಲು ಉಚ್ಛಿಷ್ಟ ಹಾಕಿಸೊ

ವೇಗದಿಂದಲಿ ಎತ್ತಿ ದೈತ್ಯನ ಸೀಳಿದೆ ನೀನಲ್ಲವೆ
ವೆಕ್ಕಸ ಇಹ ಪಾತಕನ ಕರುಳು ನಿನಗೆ ಒಂದು ಮಾಲೆಯಾಗಿಲ್ಲವೆ ೧

ಕಮ್ಮ ಮಾಡಿ ಮೂರುತಿಯಲ್ಲಿ ಬಲಿಯ ಹಾಕಿದೆ ಪಾತಾಳಕೆ
ಕಲ್ಮಷ ನುಡಿಯ ಸುತನ ಕೈಯ ಮಾತೆಯ ಕೊಲ್ಲುವುದಕ್ಕೆ
ಕಡನಿಲ್ಲದೆ ವನವಾಸಕ್ಕೆ ಬಂದೆ ಸೀತೆಯ ಹುಡುಕುವುದಕ್ಕೆ
ಕಂಸಮಾವನ ಕೊಂದೆ ತಂದೆತಾಯಿಗಳ ಬಿಡಿಸುವುದಕ್ಕೆ ೨

ಟೀಕಿಮಾಡಿ ಮೂರ್ಪುರ ಸತಿಯರ ವ್ರತವ ಕೆಡಿಸಿಬಿಟ್ಟೆ
ಟಕ್ಕಿಸಿ ಎಡಬಲ ಲಕ್ಷ್ಮಿಯ ತೆಗೆದು ವಕ್ಷಸ್ಥಳದಲಿಟ್ಟೆ
ಟಂಕಿ ಬೆಳ್ಳಿ ಟಂಕಿ ನರಲೋಕಕ್ಕೆ ಉಡುಪಿಗೆ ಮನಸಿಟ್ಟೆ
ಟೀರ್ಕೋಡಿಯಲಿ ಠಾಣವ ಹಾಕಿದೆ ಜಗದಿ ಕುದುರೆಯ ಬಿಟ್ಟೆ ೩

ಶಾಕದ ತುದಿಯಲ್ಲಿ ಶಾಂತಪಾಂಡವರು ದ್ರೌಪದಿ ವನವಾಸ
ಶ್ಯಾಮಸುಂದರ ಶರಣು ಸಜ್ಜನ ಗುರುಚಂದ್ರ ಭಾಸ
ಶಾಮ ಸಹಿತ ಬಹುಮುಕ್ತಿಯ ಪೊಂದಿದ ರುಕ್ಮಾಂಗದ ಪೋಷ
ಶಾಶ್ವತ ಸಲಹುವ ಪುರಂದರವಿಠಲ ಕಲಿಯುಗ ವೇಂಕಟೇಶ ೪

## ೧೧೮

**ಆರಭಿ** **ಆದಿ**

ವೆಂಕಟೇಶ ಬೇಡಿಕೊಂಬೆ ಕೃಪೆಯ ಪಾಲಿಸೊ, ಬ್ರಹ್ಮ ಪ

ಶಂಕರಾದಿ ವಂದ್ಯ ಎನಗೆ ಮುಕ್ತಿ ತೋರಿಸೊ ಅ

ನಷ್ಟ ಮೊದಲಾದಂಥ ಕಷ್ಟ ಬಿಡಿಸೋ, ನಿನ್ನ
ಪಟ್ಟದ ರಾಣಿಗೆ ಹೇಳಿ ಪದವಿ ಕೊಡಿಸೊ
ಇಷ್ಟ ಭಕ್ತ ಜನರೊಳು ಎನ್ನ ಸೇರಿಸೊ
ಈ ಸೃಷ್ಟಿಯೊಳು ನಿನ್ನ ದಾಸರ ದಾಸನೆನಿಸೊ ೧

ಉಟ್ಟು ಉಂಡು ಮಿಕ್ಕಿದ್ದೆಲ್ಲ ಎನಗೆ ಹಾಕಿಸೊ ಪೊಂ
ಬಟ್ಟಲೊಳಗಿನ ಹಾಲು ಉಚ್ಛಿಷ್ಟ ಹಾಕಿಸೊ

ಬೆತ್ತಲೆ ನೀ ನಿಂತು ಕುತ್ಸಿತ ಅಸುರರ ಸದೆದ್ಯೋ ವೆಂಕಟೇಶ
ಕುತ್ಸಿತ ಅಸುರರ ಮೋಹಿಸುತಳಿದೆಯೊ ವೆಂಕಟೇಶ ೯

ತುರಗನೇರಿ ಕಲ್ಕಿ ಎನಿಸಿಕೊಂಡೆಯೊ ವೆಂಕಟೇಶ
ಉರುಗಾದ್ರಿ ವಾಸ ಗುರುಗೋವಿಂದ ವಿಠಲ ವೆಂಕಟೇಶ ೧೦

## ೧೨೦

**ಯದುಕುಲ ಕಾಂಬೋದಿ ಆದಿ**

ವೆಂಕಟೇಶ ಭವ ಸಂಕಟ ಪರಿಹರಿಸೋ
ನಿನ್ನವರವನೆನಿಸೋ ಪ

ಪಂಕಜಾಕ್ಷ ಅಕಳಂಕ ಮಹಿಮ ಹರಿಯೇ
ಆಶ್ರಿತರಿಗೆ ಧೊರೆಯೇ ಅ

ನಾನಾಜನುಮಗಳಲಿ ತೊಳಲಿ ಬಂದೇ । ನೀನೆ ಗತಿ ಯಂದೇ
ಜ್ಞಾನಾಜ್ಞಾನ ಕೃತಾಖಿಳ ದುಷ್ಕರ್ಮಾ । ಅದರಂತೆ ಸುಕರ್ಮಾ
ನಾನಾ ಬಗೆಯಲಿ ಇರುತಿರೆ ಅನುಭವಿಸೀ। ದುರ್ವಿಷಯವ ಬಯಸೀ
ಹೀನವೃತ್ತಿಯಾಚರಿಸಿ ದಿನವ ಕಳೆದೇ। ಈ ಬಗೆಯಿಂದುಳಿದೆ ೧

ಧಾರುಣಿ ಧನ ವನಿತಾದಿ ವಿಷಯದಲ್ಲೀ। ಕಾಮುಕತನದಲ್ಲೀ
ಚಾರುವರಿಯುತಿಹೆ ಮಾರ್ಗ ಕಾಣೆ ನಾನು। ಉಪಾಯವಿನ್ನೇನು
ಯಾರಿಗೆ ಪೇಳಲಿ ಯನ್ನ ವರ್ತಮಾನಾ। ನೀನೇವೆ ನಿದಾನ
ತೋರಿಸಿ ಎನ್ನನು ಬಿಡದೆ ಪಾಲಿಸಪ್ಪಾ। ಎಣಿಸದಿರು ತಪ್ಪಾ ೨

ಪಾಪಾತ್ಮಕ ನಾನಾದರೇನು ಪೇಳೋ। ಪಾವನ ನೀ ಕೇಳೋ
ಶ್ರೀ ಪದ್ಮಜ ಭವ ಪ್ರಮುಖ ನಿರ್ಜರೇಶಾ। ನಾ ನಿನ್ನ ದಾಸಾ
ನೀ ಪಾಲಿಸದಿರೆ ಗತಿಯೇನೆಲೊ ಮುಂದೇ। ಕಾರುಣ್ಯದಿ ತಂದೇ
ಶ್ರೀಪತಿ ವಿಠಲಾ ಕರವ ಪಿಡಿಯೊ ಬೇಗಾ। ಉದ್ಧರಿಸೊ ಈಗಾ ೩

## ೧೨೧

**ಕಾಂಬೋದಿ ಝಂಪೆ**

ವೆಂಕಟೇಶ ಮಂತ್ರ ಒಂದೇ ಸಂಕಟ
ಪರಿಹರಿಸಿ ಸಂಪದಪಿಯ ಕೊಡುವ ಪ

ಬಲನ ಭೂಸುರಹತ ಪೋಗಾಡಿದ ಮಂತ್ರ
ಬಲಿಯ ಕನಕ ಸ್ತೇಯ ಕಳದ ಮಂತ್ರಾ
ಬಲವಂತ ವೃಷಭನ್ನ ಸಂಹರಿಸಿದ ಮಂತ್ರಾ
ಕಲಿಯುಗದೊಳಗಿದೆ ಸಿದ್ಧಮಂತ್ರಾ ೧

ವೃದ್ಧ ಬ್ರಾಹ್ಮಣಗೆ ಪ್ರಾಯವನು ಕೊಟ್ಟ ಮಂತ್ರಾ
ಶುದ್ಧನ್ನ ಪರಿಶುದ್ಧ ಮಾಳ್ಪಮಂತ್ರಾ
ಉದ್ಧರಿಸಿ ಕಾವ್ಯಸ್ಯೊಂಚಿ ಮಾಡಿದ ಮಂತ್ರಾ
ಶ್ರದ್ಧೆಯನು ಪಾಲಿಸುವ ಸುಲಭ ಮಂತ್ರಾ ೨

ಗುರು ತಲ್ಪಕನ ದೋಷ ನಾಶನ ಮಾಡಿದುಮಂತ್ರಾ
ಹರನ ಸುತ ಬರಲವನ ಪೊರೆದ ಮಂತ್ರಾ
ಸ್ಮರಿಸಲಾಕ್ಷಣ ಒಮ್ಮೆ ಮುಂದೆ ನಿಲುವ ಮಂತ್ರಾ
ಅರಸರಿಗೆ ವಲಿದಿಪ್ಪ ಆದಿಮಂತ್ರಾ ೩

ಅಜ ಭವಾದಿಗಳಿಗೆ ಪಟ್ಟಗಟ್ಟಿದ ಮಂತ್ರಾ
ಗಜ ಮೊದಲಾದವರ ಕಾಯ್ದ ಮಂತ್ರಾ
ರಜ ದೂರವಾಗಿದ್ದ ರಮ್ಯವಾದ ಮಂತ್ರಾ
ಕುಜನ ಕುಲವನಕೆ ಕುಠಾರ ಮಂತ್ರಾ ೪

ಪ್ರಣವ ಪೂರ್ವಕದಿಂದ ಜಪಿಸಲು ವೊಲಿವ ಮಂತ್ರಾ
ಅಣು ಮಹದಲೀ ಪರಿಪೂರ್ಣ ಮಂತ್ರಾ
ಫಣಿಶೈಲ ನಿಲಯ ಸಿರಿ ವಿಜಯ ವಿಠ್ಠಲನ ಮಂತ್ರಾ
ಕ್ಷಣ ಕ್ಷಣಕೆ ಬಲ್ಲವರಿಗೆ ಪ್ರಾಣ ಮಂತ್ರಾ ೫

## ೧೨೨

ವೆಂಕಟೇಶ ವೆಂಕಟನಾಯಕ ವೆಂಕಟರಮಣ ಕೃಪಾಕರ
ಸಂಕಟಹರ ಸಂಶಯ ಹರ ಶುಭಕರ
ವೆಂಕಟನಾಥನೆ ದಯಾಕರಾ ೧

ಭೃಗು ಲಾಂಛನಧರ ಸದಾ ಅಭಯಕರ
ನಗಧರ ಶ್ರೀಕರ ಕೃಪಾಕರ

ಭೃಗು ಗರ್ವಾಪಹಾರ ಮುರಲೀಧರ
ಜಗದೋದ್ಧಾರ ದಯಾಕರಾ ೨

ಆದಿ ವರಾಹ ಅನಾದಿ ಜಗನ್ಮಯ
ಆದಿಪುರುಷ ಹರಿ ಕೃಪಾಕರಾ
ಆದಿ ಮಧ್ಯಾಂತರಹಿತ ಜಗತ್ಪತೇ
ಆದಿಕೇಶವನೆ ದಯಾಕರ ೩

ರಮಾರಮಣ ರಿಪುದೈತ್ಯ ನಿವಾರಣಾ
ರಮಿತ ಗೋಪೀಜನ ಕೃಪಾಕರ
ರಮಣ ರಮಮಾಣ ಅಮಿತ ಭಕ್ತಜನ
ನಮಿತ ಪದಯುಗಳ ದಯಾಕರಾ
ವಾಸುದೇವ ವಾರಿಧಿಶಯನನೆ ಹರಿ
ವಾಸವಾದಿನುತ ದಯಾಕರ
ಕೇಶವ ಕಲಿಮಲನಾಶಕ ಪೋಷಕ
ದಾಸಕೇಶವನುತ ದಯಾಕರಾ ೪

## ೧೨೩

**ಘಂಟಾರವ** **ಅಟ್ಟ**

ವೆಂಕಟೇಶನ ಮಹಿಮೆಯಾ ಹೊಗಳುವಾ
ಕಿಂಕರಾ ಧನ್ಯನಯ್ಯಾ ಪ

ಇಳಿಯ ಭಕ್ತರ ನೋಡಿದ ವೈಕುಂಠದಿಂ
ದಿಳಿದು ಶ್ರೀ ಸಹಿತ ಬಂದು
ಸಲೆ ಸುವರ್ಣ ಮುಖರಿಯಾ, ತೀರದಿ
ಒಲಿದು ನಿಂತನು ತಿಮ್ಮಯ್ಯಾ ೧

ಭೂವರಾಹ ಸ್ವಾಮಿಯ ಸನ್ನಿಧಿಲಿ
ಶ್ರೀವತ್ಸಲಾಂಛನೀಹ
ಶ್ರೀ ವಿಮಾನದ ಸಹಿತ, ದೇವಾದಿ
ದೇವ ತಾನಿಲ್ಲಿ ನಿಂತ ೨

ಸ್ವಾಮಿ ಪುಷ್ಕರಣಿಯೆಂಬ ತೀರ್ಥದ
ನಾಮದಾ ಮಹಿಮೇನೆಂಬೆ

ಆ ಮಹಾ ದುಷ್ಕೃತವು, ಸ್ನಾನದ
ನೇಮದಲ್ಲೋ್ಯಡುವವು ೩

ರಾಜಾಧಿರಾಜ ನಿತ್ಯ, ಉಪಚಾರ
ಪೂಜೆ ಲೋಕಾರ್ಥ ಕೊಳುವ
ಮೂಜಗಕಾನಂದವ ವರ ಕರು
ಣಾಜಲಧಿ ನಿಂದು ಕೊಡುವಾ ೪

ನಿತ್ಯಾ ಸ್ವಾರಿ ಗೈದುವ, ಸುರ ಋಷಿ
ಮೊತ್ತದಿ ಚರಿಪ ದೇವ
ಮತ್ತೆ ಲಕ್ಷ್ಮಿ ಕೂಡ ಮುನಿವದೊಂ
ದರ್ಥಿಯಲಿ ಬುಧರು ನೋಡ ೫

ನುಡಿವ ಸಾವೀರ ಘಂಟೆ ಉಬ್ಬುಬ್ಬಿ
ಹೊಡೆವ ಕೂಡೆ ಜಾಂಗುಟೆ
ಬಡಿವಾ ಕರಡೆ ಭೇರಿಯು, ಮುಂದೆ ಉ
ಘ್ಘಡಿಪ ಸಾಮಗಾನವು ೬

ಚಿತ್ರಾವರ್ಣದ ಸೇವೆಗೆ ಸಾಲ್ಗಳು
ಸುತ್ತಲು ಕೈದೀವಿಗೆ
ಉತ್ತಮ ವಾಹನವೇರಿ ವಿಶ್ವದಾ
ಕರ್ತಾ ಬಂದನು ಉದಾರಿ ೭

ಉದಯಾಸ್ತ ಮಾಲೆಸೇವೆ, ಪುಳಕಾಪು
ಮೊದಲಾದ ದಿವ್ಯ ಸೇವೆ
ಒದಗಿದ ವಸನಂಗಳು, ನೈವೇದ್ಯ
ಮೃದು ಭಕ್ಷ ವರ ಪೊಂಗಲು ೮

ಅತಿರಸ ಮನೋಹರವು, ದಧ್ಯಾನ್ನ
ಅತಿ ರುಚಿ ಅನ್ನವಲವು
ಕ್ಷಿತಿಯ ಮೇಲಿಹ ಭಕ್ತರು, ಶ್ರೀ ಲಕ್ಷ್ಮೀ
ಪತಿಗೆ ಅರ್ಪಿಸುತಲಿಹರು ೯

ಹೂವಿನಂಗಿಯನು ತೊಡುವ ಮೃಗಮದ
ಲಾವಣ್ಯ ತಿಲಕವಿಡುವ

ಕಾವಾಸಂತರ ತೇಜವ, ಗೆಲ್ಲುವ
ಸಾವಿರ ಹೆಸರ ದೇವ ೧೦

ತಪ್ಪದೆ ನುಡಿದಂದನು, ಮುಡಪಿನ
ಕಪ್ಪವೆಣಿಸಿಕೊಂಬನು
ಛಪ್ಪನ್ನ ದೇಶಸ್ಥರು, ಬಂದು ಸ
ಮರ್ಪಣೆ ಮಾಡುವರು ೧೧

ಕೊಟ್ಟ ವಾಕ್ಯಕೆ ತಪ್ಪನು, ವರಾಭಯಾ
ವಿಟ್ಟು ಸಾಕುತಲಿಪ್ಪನು
ಇಷ್ಟಾರ್ಥವಗೈವನು, ವಿಶ್ವದ
ಶಿಷ್ಟರೊಡೆಯ ತಿಮ್ಮನು ೧೨

ಕಿರೀಟ ಕುಂಡಲವಿಟ್ಟನು, ತಿಮ್ಮಯ್ಯಾ
ಕರುಣ ನೋಟದ ಚಲ್ವನು
ಅರಿ ಶಂಖಾವನು ಧರಿಸಿದ
ಹಾರ ಕೇಯೂರ ಕೌಸ್ತುಭದೊಪ್ಪಿದ ೧೩

ತೋಳಬಂದಿಯು ಕಂಕಣ ಮುದ್ರಿಕೆ
ಕೀಲು ಕಡಗಾ ವಡ್ಯಾಣ
ನೀಲ ಮಾಣಿಕ ಪಚ್ಚದ, ಮುತ್ತಿನ
ಮಾಲೆಗಳಿಂದೊಪ್ಪಿದ ೧೪

ಮಣಿಮಯದ ಕವಚ ತೊಟ್ಟು ಗಳದಲಿ,
ಮಿನುಗುವಾಭರಣವಿಟ್ಟು
ಕನಕ ಪೀತಾಂಬರುಟ್ಟು, ಕಟಿಯಲ್ಲಿ
ಅಣು ಘಂಟೆಗಳೆಸೆದವು ೧೫

ರನ್ನದಂದುಗೆನಿಟ್ಟಿಹ ಪಾದಕೆ
ಪೊನ್ನಾವುಗೆ ಮೆಟ್ಟಿಹ
ಘನ್ನ ದೈತ್ಯರ ಸೋಲಿಪ, ಬಿರದಿನ
ಉನ್ನತ ತೊಡರಿನಪ್ಪಾ ೧೬

ದಿನಕೆ ಸಾವಿರ ಪವಾಡ ತೋರುವ
ಜನಕೆ ಪ್ರತ್ಯಕ್ಷ ನೋಡ

ಘನಶಾಮ ತಿರುವೆಂಗಳ, ಮೂರ್ತಿಯ
ಮನದಣಿಯೆ ಹೊಗಳಿರೆಲ್ಲಾ ೧೭

ಭೂವೈಕುಂಠಾವಿದೆಂದು, ಸಾರಿದ
ಭಾವಿಕ ಭಕ್ತ ಬಂಧು
ಶ್ರೀವಾಯುಜಾತ ವಂದ್ಯ ಶ್ರೀವಾಸ
ಗೋವಿಂದ ನಿತ್ಯಾನಂದ ೧೮

ಸೇವಕ ಜನರ ಪ್ರೀಯಾ ಅರುಣರಾ
ಜೀವಲೋಚನ ತಿಮ್ಮಯ್ಯಾ
ದೇವ ಶಿಖಾಮಣಿಯು ಬ್ರಹ್ಮಾದಿ, ದೇವರಿಗೆ
ಕಾವ ಗತಿಯೀವ ದೊರೆಯು ೧೯

ಕಶ್ಚಿಜ್ಜೀವನು ಎನ್ನದೆ ನನ್ನನು
ನಿಶ್ಚಯದಲಿ ಹೊರುವನು
ಆಶ್ಚರ್ಯಚರಿತ ನೋಡಿ, ನಿಜ ಶರಣ
ವತ್ಸಲನ ಬಲು ಕೊಂಡಾಡಿ ೨೦

ಆರಾಶ್ರಯವಿಲ್ಲೆನಗೆ, ದ್ರಾವಿಡ
ವೀರನೇ ಗತಿಯು ಕೊನೆಗೆ
ಭೂರಿ ಪ್ರಸನ್ವೆಂಕಟಪತಿ, ಪಾದಪದ್ಮ
ಆರಾಧಿಸಿರಿ ದಿನಂಪ್ರತಿ ೨೧

## ೧೨೪

**ಖಮಾಚ** ಏಕ

ವೆಂಕಟೇಶ ಶ್ರೀವೆಂಕಟೇಶ ಪಾಲಿಸು
ಕಿಂಕರನ ವೆಂಕಟೇಶ ಪ

ಸುವರ್ಣಮುಖರಿಲಿ ಶಿವನುತಪಾದಾಬ್ಜ
ಸುವರ್ಣಗಿರಿ ವೆಂಕಟೇಶಾ
ನವ್ಯಚಂದನ ಮೃಗನಾಭಿ ಚರ್ಚಿತಗಾತ್ರ
ಅವ್ಯಾಕೃತನೆ ವೆಂಕಟೇಶ ೧

ಹಲವು ಅಪರಾಧಿ ನಾ ಭೂರಿದಯಾಳು ನೀ
ನೆಲೆಗೆ ನಿಲ್ಲಿಸು ವೆಂಕಟೇಶ
ಬಲು ತಮ ತುಂಬಿದಾ ಭವದಿ ಕರುಣಶಶಿ
ಬೆಳಕು ಬೆಳಗು ವೆಂಕಟೇಶ ೨

ತಂದೆ ತಾಯಿ ನೀನೆ ಸಖ ಸಹೋದರ ನೀನೆ
ಹಿಂದೆ ಮುಂದೆ ನೀನೆ ವೆಂಕಟೇಶ
ಹೊಂದಿದ ಬಂಟನ ಕಂದಾಯ ನಡೆಸಯ್ಯ
ಕುಂದನೋಡದೆ ವೆಂಕಟೇಶ ೩

ಸಾಕು ನೀ ಸಾಕದಿದ್ದರೆ ಬಿಡು ನಾ ಬಿಡೆ
ಜೋಕೆ ಬಿರುದು ವೆಂಕಟೇಶ
ನೀ ಕೈ ಜರಿದರೆ ಕಾಕು ಮಾಡುವರೆನ್ನ
ಪೋಕವೃತ್ತರು ವೆಂಕಟೇಶ ೪

ನಂಬಿದೆ ನಂಬಿದೆ ನಂಬಿದೆ ನಿನ್ನ ಪಾದ–
ದಿಂಬಿನೊಳಿಡು ವೆಂಕಟೇಶ
ಬಿಂಬಮೂರುತಿ ಪ್ರಸನ್ವೆಂಕಟೇಶ ಪ್ರತಿ–
ಬಿಂಬಕ್ಕರವು ವೆಂಕಟೇಶ ೫

## ೧೨೫

**ಶಂಕರಾಭರಣ** **ಆದಿ**

ವೇಣುನಾದ ಬಾರೋ ಶ್ರೀ ವೇಂಕಟರಮಣನೆ ಬಾರೊ
ಬಾಣನ ಭಂಗಿಸಿದಂಥ ಭಾವಜನಯ್ಯನೆ ಬಾರೋ ಪ

ಪೂತನಿಯ ಮೊಲೆಯುಂಡ ನವನೀತ ಚೋರನೆ ಬಾರೋ
ಭೀತ ರಾವಣನ ಸಂಹರಿಸಿದ ಸೀತಾನಾಯಕ ಬಾರೋ ೧

ಬಿಲ್ಲ ಮುರಿದು ಮಲ್ಲರ ಗೆದ್ದ ಫುಲ್ಲನಾಭನೆ ಬಾರೋ
ಗೊಲ್ಲತೇರೊಡನೆ ನಲಿವ ಚೆಲುವ ಮೂರುತಿ ಬಾರೋ ೨

ಮಂದರಗಿರಿ ಎತ್ತಿದಂಥ ಇಂದಿರೆ ರಮಣನೆ ಬಾರೋ
ಕುಂದದೆ ಗೋವುಗಳ ಕಾಯಿದ ಪುಂಡರೀಕಾಕ್ಷನೆ ಬಾರೋ ೩

ನಾರಿಯರ ಮನೆಗೆ ಪೋಗುವ ವಾರಿಜನಾಭನೆ ಬಾರೋ
ಈರೇಳು ಭುವನವ ಕಾಯುವ ಮಾರನಯ್ಯನೆ ಬಾರೋ ೪

ಶೇಷ ಶಯನ ಮೂರುತಿಯಾದ ವಾಸುದೇವನೆ ಬಾರೋ
ದಾಸರೊಳು ದಾಸನಾದ ಪುರಂದರವಿಠಲ ಬಾರೋ ೫

## ೧೨೬

ಶರಣಜನರ ಪಾಲ ಹರಿ ದಯಾಸಿಂಧುವೆ ವೆಂಕಟೇಶ
ಮರೆಯದೆ ಸಲಹೆನ್ನ ದೀನಜನಾಪ್ತನೆ ವೆಂಕಟೇಶ ಪ

ಕರಿ ಧ್ರುವ ಪ್ರಹ್ಲಾದ ಪಾಂಚಾಲಿ ಪಾಲನೆ ವೆಂಕಟೇಶ
ದುರುಳರಕ್ಕಸಹರ ಹರಸುರವಿನಮಿತನೆ ವೆಂಕಟೇಶ
ಪರಮಪಾವನ ಸಿರಿಯರ ಸಖಿಜೀವನೆ ವೆಂಕಟೇಶ
ದುರುಳಮಾತ ನೀನಳಿದು ಗೋವಳರ್‍ಪೊರೆದನೆ ವೆಂಕಟೇಶ ೧

ವಸುದೇವ ದೇವಕಿ ಬಸಿರೊಳು ಬಂದನೆ ವೆಂಕಟೇಶ
ಕುಶಲದಿ ವಸುಧೆಲಸಮಮಹಿಮೆ ತೋರ್ದನೆ ವೆಂಕಟೇಶ
ಅಸುರ ಕಂಸನ ಕುಟ್ಟಿ ಗೋಕುಲರಿದನೆ ವೆಂಕಟೇಶ
ಶಶಿಮುಖಿ ಗೋಪಿಯರಾನಂದಲೀಲನೆ ವೆಂಕಟೇಶ ೨

ಮಂದರ ಧರ ಗೋವಿಂದ ಮುಕುಂದನೆ ವೆಂಕಟೇಶ
ಸಿಂಧುಶಯನ ಆ ನಂದನ ಕಂದನೆ ವೆಂಕಟೇಶ
ಇಂದಿರೆಯರ ಬಿಟ್ಟು ಭೂಲೋಕಕ್ಕಿಳಿದನೆ ವೆಂಕಟೇಶ
ಸುಂದರಗಿರಿಯ ಭೂ ವೈಕುಂಠವೆನಿಸಿದನೆ ವೆಂಕಟೇಶ ೩

ಬಣಗರ ಸೊಕ್ಕನು ಕ್ಷಣಕ್ಷಣಕೆ ಮುರಿದನೆ ವೆಂಕಟೇಶ
ಮನಮುಟ್ಟಿ ಬೇಡ್ವರ ಮನದಿಷ್ಟವಿತ್ತನೆ ವೆಂಕಟೇಶ
ಎಣಿಕೆಗೆ ಮೀರಿದ ದ್ರವ್ಯ ಕೂಡಿಟ್ಟನೆ ವೆಂಕಟೇಶ
ಘನಘನಮಹಿಮೆಯ ಭುವನದಿ ತೋರ್ದನೆ ವೆಂಕಟೇಶ ೪

ನಂಬಿದೆ ನಿನ್ನ ಪಾದಾಂಬುಜಗಳನ್ನು ವೆಂಕಟೇಶ
ಬೆಂಬಲವಿರ್ದು ನೀ ಸಂಭ್ರಮದಿ ಸಲಹೆನ್ನ ವೆಂಕಟೇಶ
ನಂಬಿದ ದಾಸರ ಭವಾಂಬುಧಿ ಗೆಲಿಪನೆ ವೆಂಕಟೇಶ
ಅಂಬುಜಮುಖಿ ಸೀತಾಪತಿ ಶ್ರೀರಾಮನ ವೆಂಕಟೇಶ ೫

## ೧೨೭

**ಸುರುಟಿ** **ಆದಿ**

ಶರಣು ವೇಂಕಟರಮಣ ನಿನ್ನ
ಚರಣವ ನಂಬಿದೆ ನಾನು ಪ

ಕರುಣಾಸಾಗರ ಕಾಮಿತ ಫಲವೀವ
ಶರಣ ಭಕ್ತರ ಕಾವ ಗರುಡವಾಹನ ದೇವ ಅ

ಭಕ್ತವತ್ಸಲ ಹರಿಯೆ ನಮ್ಮ
ಭವದುರಿತ ಪರಿಹಾರನೆ
ಅಖಿಲಾಂಡ ಕೋಟಿ ಬ್ರಹ್ಮಾಂಡ ನಾಯಕ
ಶರಣಭಕ್ತರ ಕಾವ ಸುರಮುನಿಗಳ ದೇವ ೧

ಪಾಪವಿನಾಶಿನಿ ತೀರ್ಥ
ನಮ್ಮ ಪಾತಕವ ಪರಿಹರಿಸೆ
ಶ್ರೀವೇಂಕಟಗಿರಿ ಶ್ರೀನಿವಾಸ
ಕೋನೇರಿ ತೀರ್ಥಾಧಿವಾಸ ನಿವಾಸ ೨

ದೇಶಕಧಿಕವಾದ ನಮ್ಮ
ಶೇಷಗಿರಿಯಲಿ ವಾಸ
ಶ್ರೀವೇಂಕಟಗಿರಿ ತಿರುಮಲೇಶ
ದಾಸದಾಸರ ಸಲಹುವ ಪುರಂದರ ವಿಠಲ ೩

## ೧೨೮

ಶರಣು ವೆಂಕಟರಮಣ ಭಕ್ತಸಂಕಟಹರಣ
ಶರಣು ಶೇಷಾದ್ರೀಶ ಪರಿಹೃತನೆ ಭವಪಾಶ
ಶರಣು ಸರ್ವರಿಗಾದ್ಯ ಅಜಭವ ಸುರಾರಾಧ್ಯ
ಶರಣು ವೇದಾಂತವೇದ್ಯ ೧

ಶರಣು ನಿರ್ಜಿತ ದುರಿತನಾಮ ವಿಶ್ವಂಭರಿತ
ಶರಣು ಘನಕಾರುಣಿಯೆ ದೇವಚೂಡಾಮಣಿಯೆ
ಶರಣು ಮಹಿಪತಿ ನಂದನೊಡೆಯ ಪರಮಾನಂದ
ಶರಣು ಶ್ರೀಹರಿ ಮುಕುಂದ ೨

## ೧೨೯

**ಮಧ್ಯಮಾವತಿ** **ಆದಿ**

ಶರಣು ಶರಣು ನಿನಗೆಂಬೆನೊ ವಿಠಲ ಪ

ಕರುಣಾನಿಧಿಯೆಂಬೆ ಕಾಯಯ್ಯ ವಿಠಲ ಅ

ಶಿಶುವಾಗಿ ಜನಿಸಿದ್ಯೊ ಶ್ರೀರಾಮವಿಠಲ
ಶಶಿಧರನುತ ಗೋಪಿಕಂದನೆ ವಿಠಲ
ಅಸುರೆ ಪೂತನಿ ಕೊಂದ ಶ್ರೀಕೃಷ್ಣವಿಠಲ
ಕುಸುಮನಾಭ ಸಿರಿವರ ಮುದ್ದುವಿಠಲ ೧

ಅರಸಿ ರುಕ್ಮಿಣಿಗೆ ನೀ ಅರಸನೊ ವಿಠಲ
ಸರಸಿಜ ಸಂಭವ ಸನ್ನುತ ವಿಠಲ
ನಿರುತ ಇಟ್ಟಿಗೆಮೇಲೆ ನಿಂತ್ಯೊ ನೀ ವಿಠಲ
ಚರಣ ಸೇವೆಯನಿತ್ತು ಕಾಯಯ್ಯ ವಿಠಲ ೨

ಕಂಡೆ ಗೋಪುರ ವೆಂಕಟ ಪ್ರಭು ವಿಠಲ
ಅಂಡಜವಾಹನ ಹೌದೊ ನೀ ವಿಠಲ
ಪಾಂಡುನಂದನ ಪರಿಪಾಲನೆ ವಿಠಲ
ಪುಂಡರೀಕಾಕ್ಷ ಶ್ರೀ ಪುರಂದರವಿಠಲ ೩

## ೧೩೦

**ಆರಭಿ** **ಅಟ್ಟ**

ಶ್ರೀನಿವಾಸನಂಘ್ರಿ ಸೇವೆ ಮಾಡುವ ಬನ್ನಿ
ದೃಢಮತಿಯುಳ್ಳವರು ಪ

ಜ್ಞಾನ ಭಕ್ತಿ ವೈರಾಗ್ಯದಿ ಜ್ಞಾನವೆಮ್ಮನಿರತ ಬರಲು
ಧ್ಯಾನಿಸುವ ಸನ್ನಿಧಿಯಲ್ಲಿ ಸಾನುರಾಗದಿಂದ ಪಾಡಿ ಅ

ಬಂದ ದುರಿತಗಳನೆಲ್ಲ ದಿನ ದಿನ ತಾ –
ನೊಂದು ಗಳಿಗೆ ಹಿಂದು ಮುಂದು ಇಂದು ಹಿತದಿಂದ
ಬಂದು ನಿಂದು ಭಯತೋರಿದಂತ

ನಂದನಂದನ ದಿವ್ಯ ಧಿಮಿ ಧಿಮಿ ಧಿಮಿಕೆಂದು ಕುಣಿವ
ನಿಂದು ಗೆಜ್ಜೆ ಘಲಿ ಘಲಿರೆನ್ನೆ
ಮಂದಿರದೊಳು ಮೋಹಿಸುತ್ತ ೧

ಕಾಮಕ್ರೋಧಾದಿಗಳ ಕಷ್ಟಗಳ ಕಳೆದು ಕೆಡಹಿ ಕಾರುಣ್ಯದಿಂದ
ಹೇಮ ಹೆಣ್ಣಿನ ಹಿತವ ಬಿಡಿಸಿ ರಾಮನಾಮ ವ್ರತ ವಾಕ್ಯಗಳ
ಸೋಮಶೇಖರ ರಾಣಿ ಸಹಿತ ಪಾಮರ ಸಂಘದಲಿಹ
ಪ್ರೇಮ ಬೇಡವೆಂದು ರಾಮನಾಮ ಜಪವನಿತ್ತ ೨

ಮೂರ್ಜಗದ ಮೂಲ ಕಾರಣನ
ಮುನಿಯ ಮನದ ಮಹಾ ನಿಧಿಯ
ಸಾರ್ಜಗದ ಸಭೆಯ ಚೆನ್ನಿಗನ
ಸೇವಿಪುದು ವರವೀವುದಂತೆ
ಶ್ರೀಯನಾಥರ ಶಿಷ್ಯ ಸೇರಿ ಪೂ
ರ್ವಜಿತವಾಗಿರಲೆಂದು ರಾಜಿಸುವ ಪುರಂದರವಿಠಲ ೩

## ೧೩೧

**ಆನಂದಭೈರವಿ** **ಅಟ್ಟ**

ಶ್ರೀನಿವಾಸ ನೀನೆ ಪಾಲಿಸೊ ಶ್ರಿತಜನ ಪಾಲ
ಗಾನಲೋಲ ಶ್ರೀ ಮುಕುಂದನೆ ಪ

ಧ್ಯಾನಮಾಳ್ಪ ಸಜ್ಜನರ ಮಾನದಿಂ ಪರಿಪಾಲಿಸುವ
ವೇಣುಗೋಪಾಲ ಗೋವಿಂದ ವೇದವೇದ್ಯ ನಿತ್ಯಾನಂದ ಅ

ಎಷ್ಟು ದಿನ ಕಷ್ಟಪಡುವುದೋ ಯಶೋದೆ ಕಂದ
ದೃಷ್ಟಿಯಿಂದ ನೋಡಲಾಗದೆ
ಮುಟ್ಟಿ ನಿನ್ನ ಭಜಿಸಲಾರೆ, ಕೆಟ್ಟ ನರಜನ್ಮದವ
ದುಷ್ಟ ಕಾರ್ಯ ಮಾಡಿದಾಗ್ಯೂ ಇಷ್ಟನಾಗಿ ಕೈಯ ಪಿಡಿಯೋ ೧

ಎಂದಿಗೆ ನಿನ್ನ ಪಾದಾಬ್ಜವ, ಪೊಂದುವ ಸುಖ
ಎಂದಿಗೆ ಲಭ್ಯವೊ ಮಾಧವ
ಅಂಧಕಾರಣ್ಯದಲಿ ನಿಂದು ತತ್ತರಿಸುತಿಹೆನೊ
ಅಂದದಿಂ ಭವಾಬ್ಧಿಯೊಳು, ನಿಂದು ನೊಂದೆನೊ ಗೋವಿಂದ ೨

ಅನುದಿನ ಅನೇಕ ರೋಗಗಳ, ಅನುಭವಿಸಿದನೊ
ಘನ ಮಹಿಮನೆ ಕೇಳಯ್ಯ
ತನುವಿನಲ್ಲಿ ಬಲವಿಲ್ಲ, ನೆನೆದ ಮಾತ್ರದಿ ಸಲಹೊ ಯೆನ್ನ
ಹನುಮದೀಶ ಪುರಂದರವಿಠಲನೆ ಕೈಯ ಪಿಡಿದು ೩

## ೧೩೨

ಭೈರವಿ ತ್ರಿಪುಟ

ಶ್ರೀನಿವಾಸನಿಮಿಷಮುನಿ ಶುಭಗಾನಪ್ರಿಯ ಹರೇ
ದೀನನಾಥ ನೀ ಎನ್ನ ಪಾಲಿಸೊ ಪ್ರಾಣಪತಿ ಬಿಡದೆ ದೇವಾ ಪ

ಭೂರಿದುರಿತವು ಬೆನ್ನ ಬಿಡದಿರಲಾರಿಗುಸುರುವೆನೊ
ಘೋರಭವ ಭವಣೆಯ ಅನುಭವ ವಾರಿಗೊಪ್ಪಿಪೆನೊ
ಮಾರಿ ದಹಿಸುವ ಮೂರುತಾಪವದಾರಿಘೇಳುವೆನೊ
ಸಾರಸೇವಕಮಾನಿ ಸಾಲದೇನೋ ನಿನ್ನ ಸೇವಾ ೧

ಪೋಕ ಮನುಜರ ಅನುಸರಣೆಗಳಿಂದ ಕಾನನಗೆಲವು
ಸಾಕು ಸಾಕಲ್ಪರ ಸಖಿತ್ವವು ಸೇವೆಗತ ಸುಖವು
ಏಕಿನಿತು ಕ್ಲೇಶವು ನನಗೆ ನೀ ಸಾಕು ನೂಕುಳುಹು
ಶ್ರೀ ಕಮಲಲೋಚನ ಕರುಣೆ ನಿನ್ನ ಬೇಕು ಊಳಿಗವು ೨

ನೀಚ ಸಂಗವನೊಲ್ಲೆ ಬಲು ದುರ್ವಾಚ್ಯದಲಿ ನೊಂದೆ
ನಾಚಿಕಿಲ್ಲದಲೆ ವಿಷಯದಲಿ ಸಂಕೋಚನಡೆ ತಂದೆ
ಸೂಚಿಸಿನ್ನಾದರು ತವಾಂಘ್ರಿ ಗುಣಾಚರಣೆ ಇಂದೆ
ಯಾಚಕರೊಡೆಯ ಪ್ರಸನ್ವೆಂಕಟ ಗೋಚರನೆ ತಂದ ೩

## ೧೩೩

ಬೇಹಾಗ್ ಆದಿ

ಶ್ರೀನಿವಾಸ ಬರೋ ಮನಕೆ ನೀ ಬೇಗನೆ ಪ

ನೀನು ಕುಣಿಸಿದಂತೆ ನಾನು ಕುಣಿವೆನಲ್ಲ
ದೇನು ಇದಕೆ ಅನುಮಾನ ಮಾಡದಲೆ ೧

ಪಾಪಿಯೆಂಬೆಯ ಎನ್ನ ಶ್ರೀಪತಿ ನಿನ್ನ ನಾಮಕೆ
ಪೋಪದ ಪಾಪಮಾಡಲಾಪೆನೆ ಏನೊ ೨

ಸಿರಿಯಿಂದೊಪ್ಪುತ ನಿನ್ನ ಪರಿವಾರ ಸಹಿತದಿ
ವರದ ಗೋಪಾಲ ವಿಠಲನೆ ವಾರುತೆಗೆ ೩

## ೧೩೪

**ತೋಡಿ** **ಆದಿ**

ಶ್ರೀನಿವಾಸ–ಶ್ರೀನಿವಾಸ–ದೀನರಕ್ಷಕ
ದಾನಿ ನೀನೆಂದು ನಂಬಿದೆ ಪ

ಜ್ಞಾನಗಮ್ಯನೆ ವಾಙ್ಮನೋಮಯ
ಮೌನಿಮಾನಸ ರಾಜಹಂಸ ಅ

ಲೋಕಭರಿತ ಶ್ರೀಕಳತ್ರ–ತ್ರಿಕಕುದ್ಧಾಮದಧಿನಾಥ
ಶ್ರೀಕಮಲಭವಾದಿ ವಂದಿತ
ಮುಕುತಾಮುಕುತ ಜನ ಸಂಸೇವಿತ
ಅಖಿಳಾಗಮಕೆ ಅತೀತ– ಶ್ರೀಕರಪಲ್ಲವ ಪೂಜಿತ
ಅಖಿಳಾಜಾಂಡದಿವ್ಯಾಪ್ತ–ಭಕುತರ ಗತಿಯ ಪ್ರದಾತ ೧

ನಿಗಮವಿತ್ತ–ನಗವಪೊತ್ತ–ಬಗೆದು ಬೇರ ನರ–
ಮೃಗಾಂಗನೇ– ತ್ಯಾಗಿಯೊಳು ಪೋಗಿ–ನೃಪರ
ನೀಗಿಸಿ– ವನವನವಾ ಚರಿಸಿದೆ
ಬಗೆಬಗೆ ಆಟದಿ ಬಾಲ್ಯದಿ ಹಗೆಗಳ ಮಡುಹಿದೆ ಕಾರ್ಯದಿ
ಆಗಮಕರ್ಥ ಮೋಹಿಸಿ–ಜಗದೊಳು ತುರಗವನೇರ್ದೆ ೨

ಅಂತರಾತ್ಮ ಪರಮಾತ್ಮ ಅನಂತಾನಂತರೂಪಾತ್ಮ
ಪ್ರಾಂತಗಾಣದೆ ನಿರಂತರದಿ ನಿಂತು
ಸಿರಿ ನಿತ್ಯ ಮುಕ್ತಳಾದಳೋ
ಕಂತುಪಿತ ಎನ್ನಂತರದಿ ನಿಂತಿಹೆ ನಿರಂತರದಿ
ಕಾಂತ ಶ್ರೀ ವೇಂಕಟೇಶನೆ–ಅಂತರ್ಬಹಿರದಿ ನಿಂತಿಹ ಪ್ರಭೋ ೩

ಅಪ್ರಮೇಯ ಸ್ವಪ್ರಕಾಶ–ಅಪ್ರಾಕೃತಗುಣಗಣಾರ್ಣವ
ಸ್ವಪ್ರಯೋಜನರಹಿತ ಸತತ–

ತ್ವತ್ಪ್ರಸಾದದಿಂದ ಜಗವು
ಕ್ಷಿಪ್ರದಿ ನೃಪಸಂಸ್ತುತಿಸೆ ವಿಪ್ರ ನಮನ ಸಂತೈಸಿದೆ
ಅಪ್ರತಿಹತ ಮಹಿಮನು ಸುಪ್ರೀತನು ಜನರ್ಗೆ ೪

ಪರಮಪುರುಷ– ಪೂರ್ಣಾನಂದ ಪರಮಕರುಣಶರಧಿಯೆ
ಉರಗಾದ್ರಿವಾಸವಿಠ್ಠಲ ಕರಾವಲಂಬನವಿತ್ತು ಸಲಹೆಲೋ
ಪರಿಪರಿ ಎನ್ನ ಪರಾಧನೋಳ್ವರ ಭೋ ಜನದೊಡೆಯ
ಕರುಣವು ತೋರದೆ ನೀನಿರೆ ನರಪಶು ನಾನೆಂತು ಬಾಳ್ವೆನೊ ೫

## ೧೩೫

**ಅಸಾವೇರಿ**

ಶ್ರೀನಿವಾಸಾ ನಿನ್ನಯಾಟ ಏನು ಪೇಳಾಲಿ ಪ

ಜ್ಞಾನಿಗಳು ನಿನ್ನಾ ಗುಣಗಳೇನೂ ತಿಳಿಯಾರೂ ಅ

ನಿತ್ಯತೃಪ್ತನೆನಿಸಿ ನೀನು
ಸತ್ಯಜಗವನುಂಬುವೀ
ಸತ್ಯಸಂಕಲ್ಪನೆನಿಸೀ ನೀ
ಮಿಥ್ಯಮಾತನಾಡುವೀ ೧

ನಾರನೆನಿಸಿ ವ್ರಜದ ಪರ
ನಾರಿಯರ ಕೆಡಸೀದೀ
ಸಾರಜನರಘಾವಳೀ
ಚೋರನೆನಿಸಿದೀ ೨

ಜನನರಹಿತನಾಗಿ ಗೋಪೀ
ತನುಜನೆನಿಸೀದೀ
ಸ್ತನವನಿತ್ತ ಪೂತನಿಯನ್ನು
ಹನನಮಾಡಿದೀ ೩

ದಾನವನಿತ್ತ ಬಲಿಯನೊತ್ತಿ
ಹೀನ ಚೈದ್ಯನ ಪೊರೆದೆಯೋ
ಧ್ಯಾನಮಾಡುವ ಯೋಗಿವರರ
ಕಾನನಕಟ್ಟೀದೀ ೪

ನಿನ್ನ ನಿಂದಿಪ ಜನಕೆ
ಘನ್ನ ಸಂಪದ ನೀಡಿದೀ
ನಿನ್ನ ಸೇವಿಪ ಜನರಾ
ಬನ್ನ ಬಡಿಸೀದೀ ೫

ನೀನೇ ಧ್ವರೀ ಎಂದು ಹೀಗೆ
ನೀನು ಮಾಡುವರೇನೋ
ದೀನಜನರುದ್ಧಾರ ಮಾಡದೆ
ದೀನಭಾವವ ತೋರುವೀ ೬

ಶ್ರೀತರುಣಿ ನಿನ್ನ ರಾಣಿ
ಪೋತ ಪ್ರಾಣನಿರಲು ಕಷ್ಟ
ಯಾತಕೆ ಗುರುಜಗ
ನ್ನಾಥವಿಠಲ ನಿನಗೇ ೭

## ೧೩೬

**ಪಾಡಿ** **ಝಂಪಿ**

ಶ್ರೀನಿವಾಸನ ಕ್ಷೇತ್ರ ಎಂಥಾದೊ
ಮಾನಿಸರಿಗೊಶವಲ್ಲ ಪೊಗಳಿ ಪೇಳುವುದು ಪ

ಮೇಧಾದಿ ಮುನಿ ತನ್ನ ತಪೋಸಿದ್ಧಿಗೆ ಸರ್ವ
ಮೇದಿನಿ ತಿರುಗಿ ಬರುತಲಿ ಇತ್ತಲು
ಸಾಧನಕೆ ಸೌಮ್ಯವಾದ ಭೂಮಿಯ ನೋಡಿ ಇವ
ಮಾಧವನ ಒಲಿಸಿದನುಮಣಿ ಮುಕ್ತಿ ತೀರದಲಿ ೧

ನೆಸಗಿದ ತಪಕೆ ಮೆಚ್ಚಿ ಹರಿ ಒಲಿದ ತೀವ್ರದಲಿ
ಬಿಸಿಜದಳ ಲೋಚನೆ ಲಕುಮಿಯಿಲ್ಲೀ
ಎಸೆವ ಮಂಜರಿ ವೃಕ್ಷದಲಿ ವಾಸವಾಗಿ
ವಸುಧಿಯೊಳು ವಾಸವಾಗಿ ಅಗ್ರದಲಿ ಮೆರೆದನು ೨

ಪರಮೇಷ್ಠಿ ಬಂದು ಈ ಕ್ಷೇತ್ರದಲಿ ನಿಂದು
ಚತುರ ಮೂರ್ತಿಗಳ ಭಜಿಸಿ ವರ ಪಡೆದ

ಧರೆಯೊಳಗೆ ಅವನಾದರೆ
ಬರಲು ನೀನೊಲಿದು ಪರಮ ಗತಿಕೊಡು
ಎಂದು ಸ್ತುತಿಸಿದನು ಹರಿಯ ೩

ಇಲ್ಲಿಗೆ ಬಂದು ಸತ್ಕರ್ಮವನು ಮಾಡಿದಡೆ
ಎಲ್ಲ ಕ್ಷೇತ್ರದಲ್ಲಿ ಮಾಡಿದ ಫಲಕ್ಕಿಂತ
ಎಳ್ಳನಿತು ಮಿಗಿಲೆನಿಸಿ ಪುಣ್ಯ ತಂ
ದುಣಿಸುವದು ಎಲ್ಲೆಲ್ಲಿ ಇದ್ದರು ಸ್ಮರಣೆ ಮಾಡಿರೊ ಜನರು ೪

ಸುಗಂಧ ಪರ್ವತವಾಸ ಪುರುಷೋತ್ತಮ
ನಿಗಮಾದಿಗಳಿಗೆ ಅತಿ ದೂರತರನೋ
ಸುಗುಣನಿಧಿ ವಿಜಯ ವಿಠ್ಠಲರೇಯ ಸರ್ವದ
ಗಗನದಲಿ ಪೊಳೆವನು ಬ್ರಹ್ಮಾದಿಗಳ ಸಹಿತಾ ೫

## ೧೩೭

ಶ್ರೀನಿವಾಸನೆ ಏನು ಬೇಡಲಿ ನಿನ್ನ
ಧ್ಯಾನದೊಳಿರಿಸೆನ್ನ ಪ

ನಾನಾವಿಷಯದಿ ಪೋಗಲೀಸದೆ ಮನಸು
ನಿನ್ನಲ್ಲ ನಿಲಿಸು
ನಾನು ನನ್ನದು ಎಂಬ ದುರಭಿಮಾನ
ದಿಂದಲಿ ಹೀನ
ಯೋನಿ ಎಂಭತ್ತು ನಾಲ್ಕು ಲಕ್ಷಗಳೆತ್ತಿ
ಬಂದೆನು ಸುತ್ತಿ ಸುತ್ತೀ
ಏನು ಹೇಳಲಿ ಇನ್ನು ಆದರ ಸಂಗ
ಬಹು ಮಾನವು ಭಂಗ ೧

ಎಲ್ಲಿ ನೋಡಿದರು ಅಲ್ಲಿ ನಿನ್ನ ರೂಪ
ತೋರಯ್ಯ ಭೂಪ
ಸೊಲ್ಲು ಸೊಲ್ಲಿಗೆ ನಿನ್ನ ದಿವ್ಯನಾಮ
ನುಡಿಸಯ್ಯ ಸುಧಾಮ
ಪುಲ್ಲನಾಭ ನಿನ್ನ ಮಂಗಳ ಕಥೆಗಳನು
ಕೇಳಿಸೋ ಅನುದಿನ

ಎಲ್ಲಕಾಲದಿ ನಿನಗರ್ಪಿತ ಶ್ರೀ ತುಳಸೀ
ಆಘ್ರಾಣಿಸುವೆ ಸುಖಿಸೀ ೨

ಶ್ರೀಶ ನಿನ್ನ ನಿಜದಾಸರ ಸಹವಾಸ-
ದಲ್ಲಿರಿಸೋ ಈಶ
ಏಸುಜನ್ಮಗಳು ಬಂದರೆ ಬರಲಯ್ಯಾ
ಪರಿಹರಿಸೋ ಜೀಯಾ
ಭೂಸುರ ದೇಹವು ಇತ್ತದಕೆ ಪಾರ್ಥ-
ಸಖ ಗುಣ ಪುರುಷಾರ್ಥ
ವಾಸುದೇವ ಗುರುಶ್ರೀಶವಿಠಲ ಸ್ವಾಮಿ
ಸರ್ವಾಂತರ್ಯಾಮಿ ೩

## ೧೩೮

ಭೈರವಿ ಧ್ರುವ

ಶ್ರೀನಿವಾಸನೆ ನಿನಗೇನು ಬಿನ್ನೈಸಲೊ
ಧೇನಿಸಿದರೆ ಎನಗಾಶ್ಚರ್ಯ ತೋರುತಿದೆ
ಅನಾದಿ ಕಾಲದಿಂದ ಸೃಷ್ಟ್ಯಾದಿ ವ್ಯಾಪಾರ
ನೀನೆ ಮಾಡಿಸುವಿ ಎಂದು ಶಾಸ್ತ್ರಸಿದ್ಧ
ಜ್ಞಾನಿಗಳು ಹೀಗೆ ತಿಳಿದು ಪೇಳುವರಯ್ಯಾ
ಈ ನೀತಿ ನೋಡಿದರೆ ಪುಶಿಗಾಣರು
ಹೀನ ಜ್ಞಾನಗಳಿಂದನೇಕ ಭವಣೆ ಬಡುತ
ನಾನಾ ಯೋನಿಗಳಲ್ಲಿ ಸಂಚರಿಸುವ ಈ
ನಡತೆಯ ನೋಡೆ ದಾರಿಂದಲಾಗುವದು
ಶ್ರೀನಾಥ ನೀನೆ ದಯದಿ ತಿಳಿಸಬೇಕು
ತಾನೆ ಮಾಡುವ ಜೀವನೆಂದು ಯೋಚನೆ ಮಾಡೆ
ಅನಾದಿಯಿಂದ ಶಕ್ತಿಶೂನ್ಯ ಅಲ್ಪ ಕಾಣ ತನ್ನ ಸ್ವರೂಪ
ಇನ್ನಾವುದು ಬಲ್ಲನೊ ಜ್ಞಾನ ಪೂರ್ಣ ಸರ್ವಜ್ಞ
ನೀನೇನರಿಯ ಜ್ಞಾನಕರ್ಮೇಂದ್ರಿ ಮೊದಲಾದ
ತತ್ವಗಳನ್ನೆ ಮಾನಿಗಳಿವಕೆ ಬ್ರಹ್ಮರುದ್ರೇಂದ್ರರು
ನಾನಾ ವ್ಯಾಪಾರವ ಮಾಡಿಸಿ ಇವರಿಂಥ
ಹೀನ ಸುಖವು ಉಣಿಸುವರೆಂಬೆನೇ

ಜ್ಞಾನಿಗಳರಸ ನಿನ್ನಾಜ್ಞಾಧಾರಕರವ –
ರೇನು ಮಾಡುವದೆಲ್ಲ ನಿನ್ನ ಸೇವೆ
ಜಾನಕಿಪತಿಯೆ ತ್ರಿಗುಣ ಕಾರ್ಯವೆನಲಿಬೇಕು
ಶ್ರೀನಾರಿ ಇವಕಭಿಮಾನಿ ಸ್ವಾಮೀ
ನೀನೇ ಸರ್ವರಿಗೆ ನಿಯಾಮಕನಾಗಿದ್ದು
ಅನೇಕ ವಿಹಾರ ಮಾಡುತಿಪ್ಪೆ
ನಾನು ನನ್ನದು ಎಂಬೋದೆಲ್ಲಿಂದ ಪುಟ್ಟಿತಯ್ಯಾ
ಈ ನುಡಿ ಬಿಡಿಸಿ ಕಾಯೋರನ್ನ ತೋರೊ
ಧೀನ ವತ್ಸಲ ಗುರುಶ್ರೀಶವಿಠಲ ನಿನ್ನಾ –
ಧೀನದವನೋ ನಾನು ಅನಂತಮೂರುತಿಯೆ ೧

## ಮಟ್ಟ

ಇಂದಿರೇಶನೆ ನಿನ್ನಾನಂದ ಮೂರುತಿಗಳು
ಒಂದರಲ್ಲಿ ಬಿಡದೆ ಸಂದಣಿಸಿಹವಯ್ಯಾ
ಒಂದಾದರು ಕೃತ್ಯ ಅದರಿಂದಾಗಲಾಗದು ಧೊರಿಯೆ
ಮಂದರೋದ್ಧರ ನಿನ್ನ ಬಂಧಕ ಶಕುತಿಗೆ
ವಂದಿಪೆ ಮೂಜಗದ ತಂದೆ ನಿನ್ನಯ ಪಾದ –
ದ್ವಂದ್ವದಿ ಎನ್ನ ಮನಸು ಪೊಂದಿಸೊ ಕ್ಷಣ ಬಿಡದೆ
ನಂದ ನಂದನನೆ ಎನ್ನಿಂದಲಾಗುವ ದೋಷ
ಒಂದು ನೋಡದೆ ದಯಾಸಿಂಧು ಎನ್ನ ಹೃದಯ
ಮಂದಿರದಲ್ಲಿ ನಿಂದು ಸುಂದರ ಮೂರುತಿಯೆ
ಗುರುಶ್ರೀಶವಿಠಲ ಸಂದರುಶನವೀಯೋ ಸರ್ವಸ್ಥಳಗಳಲಿ ೨

## ತ್ರಿವಿಡಿ

ಶ್ರೀಶಾ ಸ್ವಾತಂತ್ರ ನೀನೇಸು ಬಗೆಯಲಿ ನೋಡೆ
ಸಾಸಿವೆಗಳಿನಿತು ಸಂಶಯವಿಲ್ಲ
ಲೇಸು ಎನಗೆ ನೀನು ಎಸು ಜನ್ಮಗಳೀಯಲು
ಈಶಾ ಎಂದಿಗೂ ನೀನು ದಾಸ ನಾನು
ಈ ಸುಜ್ಞಾನವೆ ಕೊಟ್ಟು ನೀ ಸಲಹಲಿಬೇಕು
ವಾಸುದೇವನೆ ಭಕ್ತ ಪೋಷಕನೆ
ಭಾಸುರ ಮೂರುತಿ ಈ ಸಚರಾಚರ

ವಾನ ಸರ್ವದ ಎನ್ನ ಮನಸಿನಲಿ
ಬೇಸರದಲೆ ನೀ ಪ್ರಕಾಶನಾಗಿ
ವಿಷಯದಾಶಿ ಬಿಡಿಸೊ ಗುರುಶ್ರೀಶವಿಠಲ ೩

**ಅಟ್ಟ**

ಕಂತುಪಿತನೆ ನಿನ್ನ ಚಿಂತ್ಯಾದ್ಭುತ ಶಕ್ತಿ
ಅಂತುಗಾಣಳೊ ರಮೆ ಎಂತು ಬಲ್ಲೆನು ನಾನು
ಜಂತುಗಳೊಳು ನೀಚ ಇಂಥ ಅಲ್ಪನ ಮನ
ನಿಂತಲ್ಲಿ ನಿಲಿಸದೆ ಭ್ರಾಂತನ್ನ ಮಾಡಿ ಅನ್ಯ-
ನಂತೆ ನೋಡುವರೆ ಮಹಂತರೊಡೆಯ ಭಗ-
ವಂತ ನಿನ್ನವರವನಂತ ತಿಳಿದು ಸ್ವಾಮಿ
ಸಂತತ ಹರಿ ನಿನ್ನ ಚಿಂತನೆ ಬಿಡದೆನ್ನ
ಅಂತರಂಗದೊಳಿಟ್ಟು ಸಂತರ ಸೇವಿ ನೀ-
ರಂತರ ಇತ್ತು ಸತ್ಪಂಥವ ತೋರೆನ್ನ
ಚಿಂತಿಯ ಬಿಡಿಸಯ್ಯ ಸಂತೋಷ ಮೂರುತಿ
ಗುರುಶ್ರೀಶವಿಠಲ ಇಂತು ಪಾಲಿಸೊ ಜಗದಂತರ್ಯಾಮಿ ೪

**ಆದಿ**

ನೀನೆ ಎನಗೆ ತಾಯಿ, ನೀನೆ ಎನಗೆ ತಂದೆ
ನೀನೆ ಎನಗೆ ಬಂಧು ನೀನೆ ಎನಗೆ ಸಖ
ನೀನೆ ಎನಗೆ ವಿದ್ಯ ನೀನೆ ಎನಗೆ ದ್ರವ್ಯ
ನೀನೆ ಎನಗೆ ಧೊರಿ ನೀನೆ ಎನಗೆ ದಾತ
ನೀನೆ ಎನಗೆ ಸರ್ವ ಸಂಪತ್ತು ಕೃಷ್ಣಯ್ಯಾ
ನೀನೆ ಎನಗೆ ಗುರುಶ್ರೀಶವಿಠಲರೇಯ
ಸ್ವಾಮಿ ಸರ್ವಾಭೀಷ್ಟದಾಯಕನೋ ೫

**ಜತೆ**

ಈರೇಳು ಲೋಕಕ್ಕೆ ಕಾರಣ ನೀನಯ್ಯ
ಪಾರುಗಾಳಿಸೂ ಎನ್ನ ಗುರುಶ್ರೀಶವಿಠಲ ೬

## ೧೩೯

ಶ್ರೀನಿವಾಸನೆ ನಿನ್ನ ಧ್ಯಾನವನ್ನೀಯೋ ಮುನ್ನ ಪ
ಗಾನಲೋಲ ಶುಭ ಶೀಲ ದೀನಜನ ಪರಿಪಾಲ ಅ

ಪಾರ್ಥರಕ್ಷಕ ನೀ ಗತಿಯೆಂದಾರ್ತನಾಗಿ ಬೇಡುವೆ
ನಿರರ್ಥಕನ್ನ ಮಾಡದೆ ನೀ ಸ್ವಾರ್ಥವನ್ನು ಪೂರ್ತಿಗೈಸೊ ೧

ಬಲದಿ ಗೋಪಾಲಕೃಷ್ಣ ಕಲಿವರ ಹನುಮ ಎಡದಿ
ಲಲನೆ ಶ್ರೀ ಭೂವರ ಮಧ್ಯೆ ಕಲಿಯುಗದೊಳು ಮೆರೆವಾ ೨

ವಾಸವಾದಿನುತ ಶ್ರೀನಿವಾಸಮೂರ್ತಿಯೇ ಎನ್ನ
ದೋಷರಾಶಿಗಳನಳಿದ ದಾಸಜನ ಹೃನ್ನಿವಾಸ ೩

## ೧೪೦

ಆದಿ

ಶ್ರೀನಿವಾಸನು ಒಲಿಯನು ಕೇಳೊ
ಜ್ಞಾನೋಪಾರ್ಜನೆ ಮಾಡದಲೆ ಪ

ಏನೇನೊ ಸತ್ಕರ್ಮವ ಮಾಡಲು
ಪ್ರಾಣೇಶಾರ್ಪಣವೆನ್ನದಲೆ ಅ

ಸ್ನಾನವು ಸಂಧ್ಯಾವಂದನ ಜಪತಪ
ಜ್ಞಾನ ಸಾಧನವಿದೆನ್ನದಲೆ
ದಾನಧರ್ಮಗಳು ಈಶನು ಅನು ಸಂ
ಧಾನವ ಮಾಡಿ ಮಾಡದಲೆ ೧

ಕಾಮ ಕ್ರೋಧಲೋಭಾದಿ ದುರಾತ್ಮಕ
ಆ ಮಹಾ ರಿಪುಗಳ ಜಯಿಸದಲೆ
ಪ್ರೇಮದಿ ಶ್ರೀಹರಿ ಭಕುತರ ಚರಣದಿ
ನೇಮದಿ ನಿತ್ಯ ನಮಿಸದಲೆ ೨

ಬಾಲಕ ಸತಿ ಮೊದಲಾದ ಜನರು ಶ್ರೀ
ಲೋಲನ ಸೇವಕರೆನ್ನದಲೆ

ಕಾಲ ದೇಶ ಅಸು ಮೊದಲಾದುವು ಗೋ
ಪಾಲಗೆ ಅಧೀನವೆನ್ನದಲೆ ೩

ಸಾಧು ಸಂಗದಲಿ ತೀರ್ಥಯಾತ್ರೆಗಳ
ಪಾದದಿ ನಡೆದು ನೀ ಮಾಡದಲೆ
ಭೇದಪಂಚಕವು ಜಗದಿ ಅಭೇದವ
ಮಾಧವನಲಿ ನೀ ತಿಳಿಯದಲೆ ೪

ಒಂದು ಕ್ಷಣವು ಬಿಡದಿಂದಿರೇಶ ಗೋ
ವಿಂದನಂಘ್ರಿಯ ನೆನೆಯದಲೆ
ವಂದ್ಯನು ಶ್ರೀ ಪುರಂದರವಿಠಲ
ಬಂಧಕ ಮೋಚಕನೆನ್ನದಲೆ ೫

## ೧೪೧

ಭೈರವಿ ಅಟ್ಟ

ಶ್ರೀನಿವಾಸನು ಬಂದ ಕೋನೇರಿ ತಿಮ್ಮಪ್ಪ
ವಾಣಿಯರಸನಯ್ಯನು ಪ

ವೇಣುಗಾನಲೋಲ ಮೋಸಮಾಡಲು ಬಂದ
ದೀನ ರಕ್ಷಕನಯ್ಯ ಮೋಹನ ಕೃಷ್ಣ ಅ

ಪತಿತವಾಹನ ಬಂದ ಸಚ್ಚಿದಾನಂದನು
ಹಿತಕರನು ಬಂದ ನಿಖಿಳವೇದ
ಪ್ರತಿಪಾದ್ಯನು ಬಂದ ಹಿಗ್ಗುತಲಿನಿಂದ
ಮತಿಗೆಡಿಸಿ ಪೋದನಯ್ಯ ಮುದ್ದುರಂಗಯ್ಯ ಕೃಷ್ಣ ೧

ಉಡುಪಿ ನಿಲಯ ಬಂದ ಉಡುಪನಂತೊಳೆಯುತ
ತಟಯಂತೆ ಮರೆಯಾದ ಕಾಣಬಾರದ ವಸ್ತು
ಉಟ್ಟದ್ದು ತೊಟ್ಟದ್ದು ಇಟ್ಟದ್ದು ನೋಡಲು
ಅಷ್ಟು ಮಾಯವಯ್ಯ ಬಲು ಮಾಯವಯ್ಯ ೨

ಏಸು ಹರುಷವೊ ಏಸು ಕರುಣವೊ
ಕಾಸು ಬಾಳದ ಎನ ಮೇಲೆ ಮುದ್ದು ಕೃಷ್ಣಯ್ಯಗೆ

ವಾಸುಕಿಶಯನನು ತಂದೆ ಪುರಂದರವಿಠಲ
ಶೇಷಾದ್ರಿವಾಸನಯ್ಯ ಕೇಳಣ್ಣಯ್ಯ ೩

## ೧೪೨

ಶ್ರೀರಮಣ ಸರ್ವೇಶ ಸರ್ವಗ
ಸಾರಭೋಕ್ತ ಸ್ವತಂತ್ರ ಸರ್ವದ
ಪಾರಮಹಿಮೋದಾರ ಸದ್ಗುಣಪೂರ್ಣಗಂಭೀರ
ಸಾರಿದವರಘ ದೂರಗೈಸೀ
ಸೂರಿಜನರಿಗೆ ಸೌಖ್ಯನೀಡುವ
ಧೀರವೆಂಕಟರಮಣ ಕರುಣದಿ ಪೊರೆಯೊ ನೀ ಎನ್ನ ೧

ಘನ್ನಮಹಿಮಾಪನ್ನ ಪಾಲಕ
ನಿನ್ನ ಹೊರತಿನ್ನನ್ಯದೇವರ
ಮನ್ನದಲಿ ನಾ ನೆನಿಸೆನೆಂದಿಗು ಬನ್ನಬಡಿಸಿದರು
ಎನ್ನ ಪಾಲಕ ನೀನೆ ಇರುತಿರೆ
ಇನ್ನು ಭವಭಯವೇಕೆ ಎನಗೆ
ಚನ್ನವೆಂಕಟರಮಣ ಕರುಣದಿ ಪೊರೆಯೊ ನೀ ಎನ್ನ ೨

ಲಕುಮಿ ಬೊಮ್ಮ ಭವಾಮರೇಶರು
ಭಕುತಿಪೂರ್ವಕ ನಿನ್ನ ಭಜಿಸೀ
ಸಕಲಲೋಕಕೆ ನಾಥರೆನಿಪರೊ ಸರ್ವಕಾಲದಲಿ
ನಿಖಿಳಜೀವರ ಪೊರೆವೊ ದೇವನೆ
ಭಕುತಿ ನೀಯೆನಗೀಯದಿರಲು
ವ್ಯಕುತವಾಗ್ಯಪಕೀರ್ತಿ ಬಪ್ಪದೊ ಶ್ರೀನಿಕೇತನನೆ ೩

ಯಾಕೆ ಪುಟ್ಟದೊ ಕರುಣ ಎನ್ನೊಳು
ಸಾಕಲಾರೆಯ ನಿನ್ನ ಶರಣನ
ನೂಕಿಬಿಟ್ಟರೆ ನಿನಗೆ ಲೋಕದಿ ಖ್ಯಾತಿ ಬಪ್ಪುವುದೇ
ನೋಕನೀಯನೆ ನೀನೆ ಎನ್ನನು
ಜೋಕೆಯಿಂದಲಿ ಕಾಯೊ ಬಿಡದೆ
ಏಕದೇವನು ನೀನೆ ವೆಂಕಟ ಶೇಷಗಿರಿವಾಸ ೪

ಅಂಬುಜಾಂಬಕ ನಿನ್ನ ಪದಯುಗ
ನಂಬಿಕೊಂಡೀ ಪರಿಯಲಿರುತಿರೆ
ಡೊಂಬೆಗಾರನ ತೆರದಿ ನೀ ನಿರ್ಭಾಗ್ಯ ಸ್ಥಿತಿತೋರೆ
ಬಿಂಬಮೂರುತಿ ನಿನ್ನ ಕರಗತ
ಕಂಬುವರವೇ ಗತಿಯೊ ವಿಶ್ವ
ಕುಟುಂಬಿ ಎನ್ನನು ಸಲಹೊ ಸಂತತ ಶೇಷಗಿರಿವಾಸ ೫

ನಾರಶಿರಿವೈಕುಂಠ ತ್ಯಜಿಸೀ
ಧಾರುಣೀಯೊಳು ಗೊಲ್ಲನಾಗೀ
ಚೋರಕರ್ಮವ ಮಾಡಿ ಬದುಕಿಹದಾರಿಗರಿಕಿಲ್ಲ
ಸಾರಿಪೇಳುವೆ ನಿನ್ನ ಗುಣಗಳ
ಪಾರವಾಗಿರುತಿಹವೊ ಜನರಿಗೆ
ಧೀರ ವೆಂಕಟರಮಣ ಕರುಣದಿ ಪೊರೆಯೊ ನೀ ಎನ್ನ ೬

ನೀರ ಮುಳುಗೀ ಭಾರಪೊತ್ತೂ
ಧಾರುಣೀತಳವಗೆದು ಸಿಟ್ಟಲಿ
ಕ್ರೂರನುದರವ ಶೀಳಿ ಕರುಳಿನ ಮಾಲೆ ಧರಿಸಿದರು
ಪೋರ ವಿಪ್ರ ಕುಠಾರಿ ವನವನ
ಚಾರಿ ಗೋಪ ದಿಗಂಬರಾಶ್ವವ
ಏರಿ ಪೋದರು ಬಿಡೆನೊ ವೆಂಕಟಶೇಷಗಿರಿವಾಸ ೭

ಲಕ್ಷ್ಮಿನಾಯಕ ಸಾರ್ವಭೌಮನೆ
ಪಕ್ಷಿವಾಹನ ಪರಮಪುರುಷನೆ
ಮೋಕ್ಷದಾಯಕ ಪ್ರಾಣಜನಕನೆ ವಿಶ್ವವ್ಯಾಪಕನೆ
ಅಕ್ಷಯಾಂಬರವಿತ್ತಿ ವಿಜಯನ
ಪಕ್ಷಪಾತವ ಮಾಡಿ ಕುರುಗಳ
ಲಕ್ಷ್ಯಮಾಡದೆ ಕೊಂದೆಯೋ ಶ್ರೀಶೇಷಗಿರಿವಾಸ ೮

ಹಿಂದೆ ನೀ ಪ್ರಹ್ಲಾದ ಗೋಸುಗ
ಎಂದು ನೋಡದ ರೂಪಧರಿಸೀ
ಬಂದು ದೈತ್ಯನ ಒಡಲ ಬಗೆದೂ ಪೊರೆದೆ ಬಾಲಕನ
ತಂದೆತಾಯ್ಗಳ ಬಿಟ್ಟು ವಿಪಿನದಿ
ನಿಂದು ತಪಿಸುವ ಪಂಚವತ್ಸರ
ಕಂದನಾ ಧ್ರುವಗೊಲಿದು ಪೊರೆದೆಯೊ ಶೇಷಗಿರಿವಾಸ ೯

ಮಡುವಿನೊಳಗಿಹ ಮಕರಿಕಾಲನು
ಹಿಡಿದು ಬಾಧಿಸೆ ಕರಿಯು ತ್ರಿಜಗ
ದ್ವೊಡೆಯ ಪಾಲಿಸೊ ಎನಲು ತಕ್ಷಣ ಬಂದು ಪಾಲಿಸಿದೆ
ಮಡದಿಮಾತನು ಕೇಳಿ ಬಲುವರಿ
ಬಡವಬ್ರಾಹ್ಮಣ ಧಾನ್ಯಕೊಡಲು
ಪೊಡವಿಗಸದಳ ಭಾಗ್ಯನೀಡಿದೆ ಶೇಷಗಿರಿವಾಸ ೧೦

ಇಂತೆಮಾಡಿದ ಮಹಿಮೆಗಳ ನಾ
ನಂತು ವರ್ಣಿಸಲೇನುಫಲ ಶ್ರೀ
ಕಾಂತ ಎನ್ನನು ಪೊರೆಯೆ ಕೀರುತಿ ನಿನಗೆ ಫಲವೆನಗ
ಕಂತುಜನಕನೆ ಎನ್ನ ಮನಸಿನ
ಅಂತರಂಗದಿ ನೀನೆ ಸರ್ವದ
ನಿಂತು ಪ್ರೇರಣೆ ಮಾಳ್ಪೆ ಸರ್ವದ ಶೇಷಗಿರಿವಾಸ ೧೧

ಶ್ರೀನಿವಾಸನೆ ಭಕ್ತಪೋಷನೆ
ಜ್ಞಾನಿಕುಲಗಳಿಗಭಯದಾಯಕ
ದೀನಬಾಂಧವ ನೀನೆ ಎನ್ನಮನಸದರ್ಥ ಪೂರೈಸೊ
ಅನುಪಮೋಪಜ್ಞಾನ ಸಂಪದ
ವಿನಯಪೂರ್ವಕವಿತ್ತು ಪಾಲಿಸೊ
ಜನುಮ ಜನುಮಕೆ ಮರೆಯ ಬೇಡವೊ ಶೇಷಗಿರಿವಾಸ ೧೨

ಮದವು ಮತ್ಸರ ಲೋಭಮೋಹವು
ಒದಗಬಾರದು ಎನ್ನ ಮನದಲಿ
ಪದುಮನಾಭನೆ ಜ್ಞಾನಭಕ್ತಿ ವಿರಕ್ತಿ ನೀನಿತ್ತು
ಹೃದಯ ಮಧ್ಯದಿ ನಿನ್ನ ರೂಪವು
ವದನದಲಿ ತವ ನಾಮಮಂತ್ರವು
ಸದಯ ಪಾಲಿಸು ಬೇಡಿಕೊಂಬೆನೊ ಶೇಷಗಿರಿವಾಸ ೧೩

ಅಂದನುಡಿ ಹುಸಿಯಾಗಬಾರದು
ಬಂದ ಭಾಗ್ಯವು ಪೋಗಬಾರದು
ಕುಂದು ಬಾರದೆ ನಿನ್ನ ಕರುಣವು ದಿನದಿ ವರ್ಧಿಸಲಿ
ನಿಂದೆ ಮಾಡುವ ಜನರ ಸಂಗವು
ಎಂದಿಗಾದರು ದೊರೆಯ ಬಾರದು
ಎಂದು ನಿನ್ನನು ಬೇಡಿಕೊಂಬೆನೊ ಶೇಷಗಿರಿವಾಸ ೧೪

ಏನು ಬೇಡಲಿ ಎನ್ನ ದೇವನ
ಸಾನುರಾಗದಿ ಎನ್ನ ಪಾಲಿಸೊ
ನಾನವಿಧವಿಧ ಸೌಖ್ಯ ನೀಡುವುದಿಹಪರಂಗಳಲಿ
ಶ್ರೀನಿವಾಸನೆ ನಿನ್ನ ದಾಸಗೆ
ಏನುಕೊರತಿಲ್ಲೆಲ್ಲಿ ನೋಡಲು
ನೀನೆ ನಿಂತೀವಿಧದಿ ಪೇಳಿಸು ಶೇಷಗಿರಿವಾಸ ೧೫

ಆರುಮುನಿದವರೇನು ಮಾಳ್ಪರೊ
ಆರುವೊಲಿದವರೇನು ಮಾಳ್ಪರೊ
ಆರು ನೇಹಿಗರಾರು ದ್ವೇಷಿಗಳಾರುದಾಶಿನರು
ಕ್ರೂರ ಜೀವರ ಹಣಿದು ಸಾತ್ತ್ವಿಕ
ಧೀರ ಜೀವರ ಪೊರೆದು ನಿನ್ನಲಿ
ಸಾರ ಭಕುತಿಯನಿತ್ತು ಪಾಲಿಸೊ ಶೇಷಗಿರಿವಾಸ ೧೬

ನಿನ್ನ ಸೇವೆಯನಿತ್ತು ಎನಗೇ
ನಿನ್ನ ಪದಯುಗ ಭಕ್ತಿ ನೀಡೀ
ನಿನ್ನ ಗುಣ ಗಣ ಸ್ತವನ ಮಾಡುವ ಜ್ಞಾನ ನೀನಿತ್ತು
ಎನ್ನ ಮನದಲಿ ನೀನೆ ನಿಂತೂ
ಘನ್ನ ಕಾರ್ಯವ ಮಾಡಿ ಮಾಡಿಸು
ಧನ್ಯನೆಂದೆನಿಸೆನ್ನ ಲೋಕದಿ ಶೇಷಗಿರಿವಾಸ ೧೭

ಜಯ ಜಯತು ಶಠ ಕೂರ್ಮರೂಪನೆ
ಜಯ ಜಯತು ಕಿಟಿ ಸಿಂಹ ವಾಮನ
ಜಯ ಜಯತು ಭೃಗುರಾಮ ರಘುಕುಲಸೋಮಶ್ರೀರಾಮ
ಜಯ ಜಯತು ಶಿರಿ ಯದುವರೇಣ್ಯನೆ
ಜಯ ಜಯತು ಜನಮೋಹ ಬುದ್ಧನೆ
ಜಯ ಜಯತು ಕಲಿಕಲ್ಮಷಘ್ನನೆ ಕಲ್ಕಿನಾಮಕನೆ ೧೮

ಕರುಣಸಾಗರ ನೀನೆ ನಿಜಪದ
ಶರಣವತ್ಸಲ ನೀನೆ ಶಾಶ್ವತ
ಶರಣಜನಮಂದಾರ ಕಮಲಾಕಾಂತ ಜಯವಂತ
ನಿರುತ ನಿನ್ನನು ನುತಿಸಿ ಪಾಡುವೆ
ವರದ ಗುರುಜಗನ್ನಾಥವಿಠಲ
ಪರಮ ಪ್ರೇಮದಿ ಪೊರೆಯೊ ಎನ್ನನು ಶೇಷಗಿರಿವಾಸ ೧೯

## ೧೪೩

ಶ್ರೀ ವೆಂಕಟೇಶ ಎನ್ನ ಸಲಹಲ್ಯಾಕೆ ಬಳಲುವೆ ಪ

ಬಂದ ದುರಿತ ಪರಿಹರಿಸೊ ಇಂದು ತಾಪವನ್ನು ಬಿಡಿಸೊ
ಮಂದ ಬುದ್ಧಿಯನ್ನೆ ಕೆಡಿಸೊ ಮದನನಯ್ಯ ಮಮತೆಯಿಂದ
ಇಂದು ಎನ್ನ ಮಾತ ಲಾಲಿಸೊ ತಂದೆ
ಕುಂದು ಎಣಿಸದೆನ್ನ ಪಾಲಿಸೊ ೧

ನಕ್ರನ ಬಾಧೆಯೊಳಗೆ ಸಿಲುಕಿ ಗಜವು ನರಳುತಿರಲು ತ್ರಿ
ವಿಕ್ರಮನೆ ಸಲಹೊಯೆಂದ ಕರೆಯಲಾಗ ನಕ್ರನ
ಚಕ್ರದಿಂದ ಹೊಡೆದು ಕೆಡಹಿದೆ ಆ ಗಜಕೆ ಬಂದ
ವಕ್ರವನ್ನು ಬಿಡಿಸಿ ಸಲಹಿದೆ ಎನ್ನ ಮನದ ವಕ್ರವನ್ನು ಬಿಡಿಸಲಾಗದೆ ೨

ತರಳ ಧ್ರುವನು ತನ್ನ ಪಿತನ ತೊಡೆಯ ಮ್ಯಾಲೆ ಬಂದು ಕುಳ್ಳಿರೆ
ತರವೆ ನಿನಗೆ ಎಂದು ಸುರುಚಿ ತವಕದಿಂದ ಎಳೆಯಲವನ
ಭರದಿ ಬಂದು ನಿನ್ನ ಚರಣವ ಭಜಿಸಲವಗೆ
ಸ್ಥಿರಪದವಿಯಿತ್ತೆ ಕರುಣದಿ ನಾನು ನಿನ್ನ ಸ್ಮರಣೆಗೈವೆ ದಿವ್ಯನಾಮವ ೩

ಆರು ಸಲಹುವರು ಎನ್ನ ಪಾರುಗಾಣಿಸುವರ ಕಾಣೆ
ಸೇರಿದೆನೊ ಶೇಷಶಯನ ಶ್ರೀನಿವಾಸ ಎನ್ನನು
ದ್ಧಾರ ಮಾಡಲಾಗದೆ ಸಕಲ ಆರಭಾರ ನಿನ್ನ
ಸೇರಿತಲ್ಲವೆ ಬೇರೆ ವಿಚಾರವಿಲ್ಲದೆ ನಿನ್ನ ನಂಬಿದೆ ೪

ದುಷ್ಟ ದನುಜರನ್ನು ಮುರಿದು ಧಾರುಣಿಯೊಳು ಇರುವೆ ಎನ್ನ
ಕಷ್ಟವ ಬಿಡಿಸಿ ಕಾಯೊ ಕಮಲನಾಭ ಹೆಳವನ
ಕಟ್ಟೆವಾನ ವೆಂಕಟೇಶನೆ ಸಕಲ ಭಾರ
ದೃಷ್ಟಿಯಿಂದ ಪೊರೆವೊ ದೇವನೆ ಕೃಷ್ಣಾ ಸೃಷ್ಟಿಗೊಡೆಯ ಸುಜನ ಪಾಲನೆ ೫

## ೧೪೪

**ಕಲ್ಯಾಣಿ** **ಝಂಪೆ**

ಶ್ರೀ ವೆಂಕಟೇಶನ ಬಿಡಬ್ಯಾಡಿ ಪ

ಹಲವು ದೈವಕೆ ಹಲ್ಲು ತೆರೆಯಾದೆ ಹೊಗಳದೆ
ಛಲ ಮನದಣಿ ಕೊಂಡಾಡಿ ಶ್ರೀ– ೧

ಸುರಭಿಯ ಬಿಟ್ಟು ಕಂಡಾಪಿನಾ ಬೆಂಬೊತ್ತಿ
ತಿರುಗಾಡಿ ಕಣ್ಣದಣಿ ಬೇಡಿ ೨

ಸ್ಥಿರವಲ್ಲಾ ಮಿಕ್ಕವರ ವರಗಳ ಕೇಳದೆ
ಪರಸನ್ನ ವೆಂಕಟಪತಿಯ ಬೇಡಿ ಶ್ರೀ – ೩

## ೧೪೫

ಪಾಡಿ ಝಂಪೆ

ಶ್ರೀ ವೇಂಕಟೇಶಾ ಸಲಹು ವೇಂಕಟೇಶಾ
ಭಾವಿತ ಸೇವಕ ಭವಭಯನಾಶಾ ಪ

ಸುರಾರಿ ಗಜಗಳೆಂಬ ಗಣಕೆ ಕಂಠೀರವ
ಕರಿರಾಜ ಸಂಕಟ ಕಿತ್ತ ದೇವಾ
ಪರಮ ಭಾಗವತರ ಸಮೂಹ ಸಂಜೀವನ
ಪುರಹರ ವರ ಮತ್ತ ವೃಕಾಸುರ ಮಥನಾ ೧

ವನಜಭವ ಸಮೀರರೊಡೆಯ ಶ್ರೀರಮಣ
ಮುನಿ ಹೃದಯಾಲಯ ಪರಿಪೂರಣ
ಫಣಿವರಶಾಯಿ ಪರಾತ್ಪರ ಅಗಣಿತ
ಗುಣಗಂಭೀರ ಸಜ್ಜಗದ ದಾತಾ ೨

ಶುಕಶೌನಕ ಸನಕಾದಿ ದೇವಋಷಿ
ಸಕಲಸುರ ಭೂಸುರ ರಾಜಾಧೀಶಾ
ಭಕುತ ವತ್ಸಲ ಬಾದರಾಯಣ ಹರಿ ಹಯ
ಮುಖ ಪ್ರಸನ್ವೆಂಕಟ ಗಿರಿನಿಲಯ ೩

## ೧೪೬

ಭೈರವಿ ಛಾಪು

ಶ್ರೀಶ ನೀನಹುದೋ ಶೇಷಾಚಲವಾಸ ನೀನಹುದೋ ಪ

ಶೇಷಶಯನ ಸುರೇಶವಂದಿತ
ಶೇಷಜನರನು ಪಾಲಿಸಿ ಬಡ್ಡಿ –

ಕಾಸು ಸೇರಿಸಿ ಗಂಟು ಕಟ್ಟುವ
ಕ್ಯಾಸಕ್ಕಿ ತಿಮ್ಮಪ್ಪ ನೀನೆ ಅ

ತಂದೆ ನೀನಹುದೊ ಕರುಣಾ –
ಸಿಂಧು ನೀನಹುದೊ
ಅಂದು ಧ್ರುಪದನ ನಂದನೆಯ ಎಳೆ
ತಂದು ಘಾಸಿಯ ಮಾಡುತಿರಲು
ಮುಂದೆ ಬಂದು ಅಕ್ಷಯವೆಂದು ಸಲಹಿದ
ಮಂದಹಾಸ ಮುಕುಂದನು ನೀನೆ ೧

ಧೀರ ನೀನಹುದೊ ಜಗದೋ –
ದ್ಧಾರ ನೀನಹುದೊ
ಬಾರಿ ಬಾರಿಗೆ ನಿನ್ನಪಾದ ಸುವಾರಿಜಂಗಳ
ಸೇರಿದ ಭಕ್ತರ ಘೋರ ದುರಿತವ
ದೂರಗೈಸುವ ಮಾರಜನಕ ಅ –
ಪಾರ ಮಹಿಮನೆ ೨

ಧನ್ಯನೀನಹುದೊ ಸುರಮುನಿ
ಮಾನ್ಯ ನೀನಹುದೊ
ಪನ್ನಗಾರಿವಾಹನ್ನ ಧರೆಯೊಳು
ಇನ್ನು ನಿನಗೆದುರ್‍ಯಾರ ಕಾಣೆನೊ ಪ್ರ –
ಸನ್ನನಾಗೆಲೊ ಬಿನ್ನಹ ಕೇಳು ಪ್ರ –
ಪನ್ನವತ್ಸಲ ಶ್ರೀಹಯವದನ ೩

## ೧೪೭

ಶ್ರೀಶ ಶ್ರೀನಿವಾಸ ಎನ್ನ ಧ್ಯಾಸದಿ ನೀ ವಾಸಿಸೈ ಪ

ಹಸನ ಮಾಡೆನ್ನ ಮಸಣ ಮತಿಯು
ಪುಸಿಯು ಎನಿಸದ ಅಸಮ ನಿಮ್ಮ
ಎಸೆವ ಪಾದಕುಸುಮ ಎನ್ನ
ರಸನೆ ಮೇಲ್ಪ್ರಕಾಶಿಸಿ ೧

ಭೃತ್ಯನ ಸಚ್ಚಿತ್ತವೆಂಬ ತಖ್ತೆ
ತೃಪ್ತಿಯಿಂದ್ಹತ್ತಿ ನಿಮ್ಮ

ಸತ್ಯಚರಿತ ಉತ್ತರಿಸಭವ
ಭಕ್ತ ಪ್ರಾಣದಾಪ್ತಬಂಧೋ ೨

ಭೂಮಿತ್ರಯದ ಪ್ರೇಮನಿಲಯ
ಸೀಮೆಯಿಲ್ಲದ ನಾಮಮಹಿಮ
ಸ್ವಾಮಿ ನಿಮ್ಮ ಪ್ರೇಮದಾಸರ
ಕ್ಷೇಮನಿಧಿ ಶ್ರೀರಾಮ ಪ್ರಭೋ ೩

## ೧೪೮

ಪಂತುವರಾಳಿ ಝಂಪೆ

ಶ್ರೀಶೈಲದೊಳಗಿಪ್ಪ ಸ್ವಾಮಿಪುಷ್ಕರಿಣಿ ಇತಿ
ಹಾಸವ ದಿಲೀಪನೃಪ ಬೆಸಗೊಳಲು ಕೇಳಿ ದೂ
ರ್ವಾಸಮುನಿ ಪೇಳ್ದ ಇನಿತೆಂದು ಸಜ್ಜನರಿದನು ಕೇಳಿ
ಸಂತೋಷಿಸುವುದು ಪ

ಮುನಿಕುಲೋತ್ತಮನೆನಿಪ ದೂರ್ವಾಸಋಷಿ ದಿಲೀ
ಪನ ಸದನಕೈದಿರಲು ಕಂಡು ಸಂತೋಷದಲಿ
ವಿನಯೋಕ್ತಿಯಿಂದ ತಲೆವಾಗಿ ಕರಗಳ ಮುಗಿದು
ವಿಜ್ಞಾಪಿಸಿದನು ಋಷಿಗೆ
ಅನಿಮಿಷೇಶ ವೆಂಕಟನಾಮಧೇಯ ಕುಂ
ಭಿಣಿಯೊಳಿಪ್ಪಸ್ನಾನತೀರ್ಥಗಳ ವೈಭವಗ
ಳೆನಗರುಪುವುದು ಎಂದು ಭಕ್ತಿಯಲಿ ಬೆಸಗೊಳಲು
ದೂರ್ವಾಸಪೇಳ್ದುಡಗಿದ ೧

ಕೇಳು ರಾಜೇಂದ್ರ ವೆಂಕಟಪರ್ವತನು ಮೇರು
ಶೈಲಾತ್ಮಜನು ವಾಯುಶೇಷರ ಸುಸಂವಾದ
ಮೂಲದಿಂದೈವತ್ತು ಸಹಸ್ರ ಯೋಜನದ ಸ್ವರ್ಣಮುಖರೀ ತೀರದಿ
ಬೀಳಲ್ಕೆ ನೊಂದು ಪ್ರಾರ್ಥಿಸಿದ ಶೇಷನು ಎನ್ನ
ಮೇಲೆ ಮಲಗಿಪ್ಪ ತೆರದಂತೆ ದಯದಿಂ ನೀನೆ
ಪಾಲಿಸಂದೆನೆ ಬಂದು ನೆಲಸಿದುದರಿಂದ ಗಿರಿ ಶೇಷಾದ್ರಿ
ಯೆನಿಸುತಿಹುದು ೨

ಈ ನಗೋತ್ತಮದಾದಿಮಧ್ಯಾವಸಾನ ಪ್ರ
ಸೂನು ಫಲ ಸಂಯುಕ್ತ ಸಾನುಗಳ ಸುರುಚಿರೋ
ದ್ಯಾನಗಳನುಳಿದು ಲಕ್ಷ್ಮೀ ಸಹಿತ ಸ್ವಾಮಿಪುಷ್ಕರಿಣಿತೀರ್ಥದ ತಟದಲಿ
ಶ್ರೀನಿವಾಸನು ಬಂದು ನಿಂದ ಕಾರಣವೆನಗೆ
ನೀನರುಪುವುದು ಎಂದು ಬಿನ್ನೈಸೆ ಮೂರ್ವಾಸ
ಮೌನಿ ಪೇಳಿದ ಪೂರ್ವದಿತಿಹಾಸ ಇನಿತೆಂದು ನೃಪಗೆ
ಹರುಷೋದ್ರೇಕದಿ ೩

ತೀರ್ಥೋತ್ತಮತ್ವ ಸಾಪೇಕ್ಷೆಯಿಂದಲಿ ಬ್ರಹ್ಮ
ಪತ್ನಿ ಪೂರ್ವದಲಿ ಬ್ರಹ್ಮಾವರ್ತದೇಶದೊಳ
ಗುತ್ತಮಶ್ಲೋಕನಂ ಭಜಿಸುತಿರೆ ತಾಪಸೋತ್ತಮ ಪುಲಸ್ತ್ಯಾಖ್ಯಮುನಿಪ
ತತ್ತೀರದಲಿ ತಪವಗೈವೆನೆಂದೆನುತ ಬರೆ
ಪುತ್ರನೆಂದರಿದು ಮನ್ನಿಸದಿರಲು ಕೋಪದಲಿ
ಇತ್ತ ಶಾಪವ ನೀನಪೇಕ್ಷಿಸಿದ ತಪವು ನಿಷ್ಫಲವೈದಲೆಂದು ನುಡಿದ ೪

ನದ್ಯೋತ್ತಮತ್ವ ಜಾಹ್ನವಿಗಿರಲಿ ಗುಣಗಳಿಂ
ಸ್ವರ್ಧುನಿಯು ನೀಚಳಾದರೆಯು ಸರಿ ಲೋಕಪ್ರ
ಸಿದ್ಧ ತೀರ್ಥಗಳೊಳುತ್ಕೃಷ್ಟಳಾಗಲಿ ವಿಷ್ಣುಪಾದ ಪ್ರಸಾದದಿಂದ
ಉದ್ಧಟೋಕ್ತಿಯ ಕೇಳಿ ವಾಗ್ದೇವಿ ನುಡಿದಳು ಭ
ವದ್ವಂಶರೆಲ್ಲ ರಾಕ್ಷಸರಾಗುದ್ಭವಿಸಿ ವಿ
ಷ್ಣುದ್ವೇಷ ಸಂಪಾದಿಸಲಿ ಎನಲು ಮುನಿವರನು ಪದಕೆರಗಿ ಬಿನ್ನೈಸಿದ ೫

ಅನಭಿಜ್ಞ ಲೋಕೋಪಕಾರ ತಪವೆಂದರಿಯ
ದನುಚಿತೋಕ್ತಿಗಳನಾಡಿದೆ ಮಯಾಕೃತ ದೋಷ
ವೆಣಿಸದೆ ವಿಶಾಪವಿತ್ತೆನ್ನನುದ್ಧರಿಸೆಂದು ಮುನಿವರನು ಸಂಪ್ರಾರ್ಥಿಸೆ
ಪುನರಪಿ ವಿಶಾಪವಿತ್ತಳು ಹಸನ್ಮುಖಿಳಾಗಿ
ಜನಿಸಲಿ ಭವದಂಶಪ್ರಾಂತಕೆ ವರ ವಿಭೀ
ಷಣ ವಿಷ್ಣುದಾಸ ಕಲ್ಪಸ್ಥಾಯಿಯೆಂದು ಭಗವದ್ಧ್ಯಾನಪರಳಾದಳು ೬

ತೀರ್ಥೋತ್ತಮತ್ವ ಸಾಪೇಕ್ಷೆಯಿಂ ವಾಗ್ದೇವಿ
ಮತ್ತು ತಪದಿಂ ಪ್ರೀತಿಗೊಳಿಸಲ್ಕೆ ದೇವದೇ
ವೋತ್ತಮನು ಸನ್ನಿಧಾನಕೆ ಎಯ್ದೆ ಕಂಡು ಬಿನ್ನೈಸಿದಳು ವಾಂಛಿತವನು

ವ್ಯರ್ಥವಾಯಿತು ತಪವು ಬ್ರಹ್ಮಶಾಪದಲಿ
ತೀರ್ಥೋತ್ತಮತ್ವವ ಕರುಣಿಸೆಂದು ಕೇಳ್ದುದಕೆ ಪ್ರ
ತ್ಯುತ್ತರವ ನುಡಿದ ಹರಿ ಬ್ರಹ್ಮಾಣಿಯೊಡನೆ ಇನಿತೆಂದುಕಾರುಣ್ಯಸಿಂಧು ೭

ನದಿಯರೂಪಕೆ ಬ್ರಹ್ಮಶಾಪ ನಿನಗಾಯಿತ
ಲ್ಲದೆ ಸರೋವರಕೆ ಬೇರಿಲ್ಲ ಪುಷ್ಕರಣಿಗಳೊ
ಳಧಿಕಳೆಂದನಿಸಿ ಶೇಷಾಚಲದೊಳಿರು ಪೋಗು ಸ್ವಾಮಿಪುಷ್ಕರಿಣಿಯೆನಿಸಿ
ವಿಧಿಪತ್ನಿ ಶೇಷನುದ್ದಿಶ್ಯ ತತ್ಸನ್ನಿಧಾ
ನದಿ ವಾಸವಾಹೆ ಸಂದೇಹವಿಲ್ಲಿದಕೆ ಸ
ರ್ವದಾ ನಿನ್ನ ಮಹಿಮ ಕೀರ್ತನೆಮಾಳ್ಪ ಸಜ್ಜನರಿಗಖಿಳಾರ್ಥವೀವೆನೆಂದ ೮

ಮೂರೂವರೆಕೋಟಿತೀರ್ಥಗಳು ಭುವನತ್ರಯದೊ
ಳಾರಾಧಿಸಿದರೆನ್ನ ಸ್ವಸ್ವಪಾಪೌಘ ಪರಿ
ಹಾರಗೋಸುಗ ಪೇಳ್ವುದೆನಲು ಪ್ರಾಯಶ್ಚಿತ್ತ ಧನುರ್ಮಾಸ ಸಿತಪಕ್ಷದ
ಈರಾರುದಿನದಲರುಣೋದಯಕೆ ತೀರ್ಥಪರಿ
ವಾರವೈದಿರಿ ಶುದ್ಧರಾಗುವಿರಿ ಎಂದು ತ
ತ್ತೀರದಲಿ ವಾಸವಾದನು ಮಹಾಪ್ರಭು ತೀರ್ಥಪ್ರೇಶೈತ್ವವಾಣಿಗಿತ್ತ ೯

ವಾಣಿದೇವಿಯು ತೀರ್ಥರೂಪಳಾಗಲು ಕೃಷ್ಣ
ವೇಣಿಸಮ ಬಕುಳ ಮಾಲಿಕಿತೀರ್ಥ ಭೂಮ್ಯಾಭಿ
ಮಾನಿತ್ವ ಐದಿದಳು ಶ್ರೀದೇವಿಯಾಜ್ಞದಿಂ ಹರಿಗೆ ನೈವೇದ್ಯ ರಚಿಸಿ
ಪಾನೀಯನಿಧಿಭೋಗ ಪತ್ನಿ ಪೂರ್ವಾದಿ ಸನ್ನಿ
ಧಾನದಲ್ಲಿಪ್ಪೆನೆಂದೆನುತ ಪ್ರಾರ್ಥಿಸೆ ಶೇಷ
ಮಾನಿನಿಗೆ ತೀರ್ಥ ಭೂಮ್ಯಾಧಿಪತ್ಯವನು ಇತ್ತ ಕಮಲಾಕಾಂತನು ೧೦

ಸ್ವಾಮಿಪುಷ್ಕರಿಣಿ ನವತೀರ್ಥ ಮಾನಿಗಳಿಗ ಸು
ಧಾಮಳೆನಿಸುವಳು ತತ್ತನ್ನಾಮಗಳ ಪೇಳ್ವೆ
ಶ್ರೀಮದ್ವರಾಹಧನಪ ಗಾಲ್ವ ಮಾರ್ಕಂಡೇಯ ಅಗ್ನಿಯಮಋಣಮೋಚನಿ
ಈ ಮಹಾ ವಾಯುತೀರ್ಥಗಳ ಸುಸ್ನಾನ ಲ
ಕ್ಷ್ಮೀಮನೋಹರನ ದರುಶನ ತತ್ಪ್ರಸಾದಾನ್ನ
ಈ ಮೂರುಲೋಕದಲಿ ದೊರೆವುದತಿದುರ್ಲಭವುಅಲ್ಪಾಧಿಕಾರಿಗಳಿಗೆ ೧೧

ಕವಿಭಿರೀಡಿತ ಪೂಜ್ಯನೆನಿಸುವನು ಪದ್ಮಸಂ
ಭವನು ಪೂಜಕನೆನಿಪ ನೈವೇದ್ಯಕರ್ತ್ರ್ಯ ಭಾ

ರ್ಗಪಿಯೆನಿಪಳೆಂದೆಂದು ಸೇವಿಸುವ ಜನರೊಳಗೆ ಶರ್ವ ಶಕ್ರಾರ್ಕ ಮುಖ್ಯ
ದಿವಜಗಣವಿಹುದೆಂದು ಚಿಂತಿಸದೆ ಮರೆದು ಮಾ
ನವರೆ ವರ್ತಿಪರೆಂದು ತಿಳಿವವನು ಘೋರ ರವ
ರವನರಕಕ್ಕೈದಿ ಚಂಡಾಲಯೋನಿಯೊಳು ಪುಟ್ಟುವಧರಾತಳದೊಳೆಂದ ೧೨

ಮೇರುನಂದನ ವೆಂಕಟಾದ್ರಿ ಶತಯೋಜನದ
ಮೇರೆಯೊಳು ಪುಣ್ಯತೀರ್ಥಗಳಿಪ್ಪವ(ಲ್ಲಲ್ಲಿ)
ಆರಧಿಕ ಅರುವತ್ತು ಕೋಟಿಸಂಖ್ಯೆಯಲಿ ಮುಖ್ಯಾಮುಖ್ಯಭೇದದಿಂದ
ನೂರೆಂಟುತೀರ್ಥಗಳು ಮುಖ್ಯವೆನಿಸುವವಿದರೊ
ಳಾರುತ್ತಮೊತ್ತಮವುಗಳ ನಾಮ ಪೇಳ್ವೆನು ಕು
ಮಾರಧಾರಕ ಪಾಂಡು ಪಾಪನಾಶನಿ ಸ್ವಾಮಿ ತುಂಬರಾಕಾಶಗಂಗಾ ೧೩

ವಸುರುದ್ರ ಕಣ್ವಾಗ್ನಿ ಮನ್ವಿಂದ್ರ ಯಮ ಸೋಮ
ಬಿಸರುಹಪ್ರಿಯ ನವಪ್ರಜೇಶಾಶ್ವಿನಿಗಳು ಶುಕ
ಪಶುಪ ಯಕ್ಷೇಶ ಯಮ ಭೌಮ ಪಾನೀಯಭದ್ರ ಜಾಡ್ಯಹರಬಾರ್ಹಸ್ಪತಿ
ದಶಪ್ರಚೇತಸ ಗರುಡ ಶೇಷ ವಾಸುಕಿಯು ಹೆ
ಬ್ಬಸುರ ನಾರದ ವೈಶ್ವದೇವ ಸ್ವಾಹ ಸ್ವಧಾ
ಋಷಿ ಹಸ್ತಿ ಜಾಹ್ನವಿ ಕಾವೇರಿ ವಾರುಣಿ ನಾರಾಯಣಾದಿಪಂಚ ೧೪

ಶಿವರೂಪಿ ದೂರ್ವಾಸ ಪೇಳ್ದನಿನಿತೆಂದು ಜಾ
ಹ್ನವಿಯೊಳಬ್ಧಿಸ್ನಾನಫಲ ಧನುರ್ಮಾಸದೊಳು
ನವತೀರ್ಥಯುಕ್ತ ವಾಗ್ದೇವಿಪುಷ್ಕರಣಿಯೊಳು ಶುಕ್ಲಪಕ್ಷದ್ವಾದಶಿ
ದಿವಸದಿ ಶುಚಿರ್ಭೂತನಾಗಿ ಸಂತೋಷದಲಿ
ವಿವರಾಗ್ರಜೋದಯದಿ ಸ್ನಾನವನು ಮಾಡೆ ಐ
ದುವನು ಸಂಶಯವಿಲ್ಲವೆಂದು ನೃಪತಿಗೆ ಪೇಳ್ದ ಶಿಷ್ಯನೆಂದರಿದುದಯದಿ ೧೫

ನಾರದಮುನೀಂದ್ರನುಪದೇಶದಿಂ ದಕ್ಷನ ಕು
ಮಾರಕರು ಸಹಸ್ರ ತಮ್ಮತಮ್ಮಾಶ್ರಮದ
ತೀರದಿ ತೀರ್ಥಗಳ ನಿರ್ಮಿಸಿದ ಕಾರಣದಿ ದಾಕ್ಷಣ್ಯವೆಂದೆನಿಪುವು
ಭೈರವತೀರ್ಥ ಸಿದ್ಧಿಪ್ರದಾಯಕ ಕು
ಮಾರಧಾರಿಕ ಪಶ್ಚಿಮದಲ್ಲಿಹವು ಎಂಟಧಿಕ
ನೂರು ತೀರ್ಥಗಳಿಗಾಸ್ಪದವಾದ ಕಾರಣದಿ ತೀರ್ಥಾದ್ರಿಯೆನಿಸುತಿಹುದು ೧೬

ಭೂತಳಾಧಿಪ ದಿಲೀಪನಿಗೆ ದೂರ್ವಾಸಮುನಿ
ತಾ ತಿಳುಪಿದಿತಿಹಾಸ ಶೌನಕಾದ್ಯರಿಗೆ ವರ
ಸೂತರ್ಷಿಪುಂಗವನು ಪೇಳ್ದ ವೆಂಕಟಶೈಲ ಸ್ವಾಮಿಪುಷ್ಕರಿಣಿ ಮಹಿಮೆ
ಪ್ರೀತಿಯಿಂದಲಿ ತಿಳಿದು ಪಠಿಸುವವರಿಗೆ ಜಗ
ನ್ನಾಥವಿಠಲನು ಮನೋವಾಂಛಿತಗಳಿತ್ತು ಪುರು
ಹೂತಲೋಕದಲ್ಲಿ ಸುಖಬಡಿಸಿ ಪಾಂತಕೆ ತನ್ನ ಪುರವನ್ನೆ ದಿಪ ಕೃಪಾಳು ೧೭

## ೧೪೯

**ಸೌರಾಷ್ಟ್ರ** **ಅಟ್ಟ**

ಸಕಲ ದುರಿತಗಳ ಪರಿಹಾರ ಮಾಡಿದ್ಯೋ ವೇಂಕಟೇಶ ಪ

ಭಕುತಿಗೊಲಿದು ಬಂದು ಭಕ್ತರ ಕಾಯ್ದೆಯೋ ವೇಂಕಟೇಶ ಅ

ಮತ್ಸ್ಯಾವತಾರದಿ ನಾಲ್ಕು ವೇದವ ತಂದ್ಯೋ ವೇಂಕಟೇಶ
ಪೃಥ್ವೀಧರವ ಪೊತ್ತು ಭೃತ್ಯರ ನೀ ಕಾಯ್ದ್ಯೋ ವೇಂಕಟೇಶ ೧

ಧರೆಯನೊಯ್ದನ ಕೋರೆದಾಡೆಯಿಂದಲಿ ಕೊಂದ್ಯೋ ವೇಂಕಟೇಶ
ತರಳಗೊಲಿದು ನೀ ಕಂಭದಿಂದಲಿ ಬಂದ್ಯೋ ವೇಂಕಟೇಶ ೨

ಭೂಮಿದಾನವ ನೀಡಿದವನ ಬಾಗಿಲ ಕಾಯ್ದ್ಯೋ ವೇಂಕಟೇಶ
ಭೂಮಿಪಾಲರನಳಿದು ಭಾರ್ಗವನೆನಿಸಿದ್ಯೋ ವೇಂಕಟೇಶ ೩

ದಶಶಿರನನು ಕುಟ್ಟಿ ಶಶಿಮುಖಿಯಳ ತಂದ್ಯೋ ವೇಂಕಟೇಶ
ಅಸುರೆಯ ಸಂಹರಿಸಿ ಕಂಸನ ಮಡುಹಿದ್ಯೋ ವೇಂಕಟೇಶ ೪

ಅಧಮಜನರಿಗೆ ಬೋಧಿಸಿ ಬತ್ತಲೆ ನಿಂದ್ಯೋ ವೇಂಕಟೇಶ
ಕುದುರೆಯೇರಿ ಕಲ್ಕಿರೂಪವ ತಾಳಿದ್ಯೋ ವೇಂಕಟೇಶ ೫

ಹರಿದಾಸರ ಮೇಲೆ ಒಲಿದು ಬೇಗನೆ ಬಂದ್ಯೋ ವೇಂಕಟೇಶ
ವರದ ಪುರಂದರವಿಠಲ ನಮೋ ನಮೋ ವೇಂಕಟೇಶ ೬

## ೧೫೦

**ಕಾಂಬೋದಿ** **ಅಟ್ಟ**

ಸಪ್ತ ಗಿರಿಯ ವಾಸ । ಶ್ರೀ ವೆಂಕಟೇಶ । ನಿನ್ನ
ಮರ್ತವಗೀವೇ ಬಹುತರ ಕ್ಲೇಶ ಪ

ಅಸ್ಥಿ ತ್ವಕ್ಚರ್ಮಾದಿ ಮಾಂಸ । ಧಾತು
ಸಪ್ತಾವರಣ ಕಾಯದೊಳಗೆ ಆವಾಸ
ಲಿಪ್ತನಾಗದೆ ಇದ್ದು ಶ್ರೀಶ । ಜೀವ
ರಾಪ್ತ ಸಾಧನ ಮಾಡಿ ಮಾಡಿಪೆ ಅನಿಶಾ ೧

ಸಪ್ತವು ದಶದ್ವಯ ಸಹಸಾ । ನಾಡಿ
ಸಪ್ತಾಬ್ಜದೊಳು ಸನ್ನಿವಾಸ
ಭಕ್ತರಿಗೊಲಿವೆಯೊ ಮೇಶ । ನಿನ್ನ
ಗುಪ್ತ ಮಹಿಮೆ ನೀನೆ ತಿಳಿಸೊ ಸರ್ವೇಶ ೨

ಸುಪ್ತಿ ಸ್ವಾಪವು ಮತ್ತೆ ಜಾಗ್ರತ । ತ್ರಯಾ
ವಸ್ಥೆ ಪ್ರೇರಕನಿಹೆ ಗುಣಗಣ ಭರಿತ । ಮತ್ತೆ
ಚತುರಾವಸ್ಥೇಯ ಭೋಕ್ತ । ನಾಗಿ
ಮುಕ್ತಾನಂದದನಿದ್ದು ಮೆರೆವೆ ವಿಧಾತಾ ೩

ಆರ್ತನಾಗುತ ಬೇಡ್ವೆ ಹರಿಯೇ । ನಿನ್ನ
ವ್ಯಾಪ್ತಿ ತೋರೋ ಸರ್ವ ಲೋಕದ ಧೊರೆಯೆ
ಮೂರ್ತಿ ನಿಲ್ಲಲಿ ಮನದಿ ಹರಿಯೇ । ನಿನ್ನ
ಕೀರ್ತಿ ಕೊಂಡಾಡಿಸು ಸತತದಿ ಶೌರೇ ೪

ತಪ್ತ ಕಾಂಚನದಂತೆ ಹೃದಯ । ದಲ್ಲಿ
ದೀಪ್ತನಾಗಿದ್ದರು ಕಾಣದ ಪರಿಯ
ಸುಪ್ತಿಯ ಕಳೆ ತವ ಮೂರ್ತಿಯ । ತೋರೊ
ಗೋಪ್ತ ಗುರು ಗೋವಿಂದ ವಿಠಲಯ್ಯ ೫

## ೧೫೧

**ಮಾರವಿ** **ಆದಿ**

ಸಲಹು ವೆಂಕಟರಮಣ ದಯಾಂಬುಧಿ
ಸಲಹು ವೆಂಕಟರಮಣ ಪ

ಮಸ್ತಕದೊಳೊಪ್ಪುವ ಮಾಣಿಕ ಮುಕುಟದ
ಕಸ್ತೂರಿ ನಾಮದ ಚಲುವಾ

ವಿಸ್ತರ ಕದಪಿಲಿ ಹೊಳೆವ ಕುಂಡಲ ಪ್ರಾ –
ಶಸ್ತ ವದನ ಜಗಜೀವಾ ೧

ಎಳೆನಗೆ ತಿಂಗಳ ಕಾಂತೆಲಿ ಹೃತ್ತಾಪ
ಕಳೆವ ಕರುಣಿ ಸಿರಿಕಾಂತಾ
ಗಳದೊಳು ವನಮಾಲೆ ವೈಜಯಂತಿ ಪದಕಗ –
ಳೊಲಪು ಮಂಗಳಮೂರ್ತಿಮಂತ ೨

ಮುತ್ತಿನಸರ ಸರಪಳಿ ಭುಜಕೀರ್ತಿಯು
ಎತ್ತಿದ ಶಂಖಾರಿ ಪಾಣೀ
ರತ್ನದ ಮೇಲೊಡ್ಯಾಣ ಕಂಕಣ ಮುದ್ರಿ
ಮತ್ತೆ ಅಭಯ ವರದನೇ ೩

ಉಟ್ಟ ಪೊಂದಟ್ಟೆ ಕಟಾರೆ ಕಟ್ಟಿರುವ
ದುಷ್ಟರ ರಣಜಿತ ವೀರ
ಇಟ್ಟ ವಜ್ರದ ಕಾಲಂದಿಗೆ ಪಾವುಗೆ
ಮೆಟ್ಟಿದ ಸುರರ ಮಂದಾರ ೪

ಅಗರು ಚಂದನ ಕಪ್ಪೂರ ಕೇಶರ ಸುರ –
ಭಿಗಳಿಗೆ ಅತಿಪ್ರಿಯ ಅಂಗ
ಮಘ ಮಘಿಸುವ ಮಲ್ಲಿಗೆ ಸಂಪಿಗೆಯ ಮಾ –
ಲೆಗಳ ಪ್ರಸನ್ವೆಂಕಟ ರಂಗಾ ೫

## ೧೫೨

**ಸಾವೇರಿ** **ಆದಿ**

ಸಾಗಿ ಬಾರಯ್ಯ ಭವರೋಗದ ವೈದ್ಯನೆ
ಬಾಗುವೆ ನಿನಗೆ ಚೆನ್ನಾಗಿ ಸ್ತುತಿಸಿ ಇಂದು ಪ

ಭಾಗೀರಥಿ ಪಿತ ಭಾಗವತರ ಸಂ –
ಯೋಗರಂಗ ಉರಗಾಗಿರಿ ವೆಂಕಟ ಅ

ರಥದ ಮಧ್ಯದೊಳಿಪ್ಪ
ರಥಾಂಡಜ ವಾಹನ

ರಥಾಂಗ ಪಾಣಿಯೆ ದಶ
ರಥದ ನೃಪತಿಪಾಲ ವಾ
ರಥಗೆ ಸಾರಥಿಯಾಗಿ
ರಥವ ನಡೆಸಿ ಅತಿ
ರಥ ಮಹಾರಥರ ವಿ
ರಥರ ಮಾಡಿ ಗೆಲಿದೆ
ಪ್ರಥಮ ದೈವ ಮ
ನ್ಮಥ ಪಿತ ದೈತ್ಯರ
ಮಥನ ಭಕ್ತರ ಮನೋ
ರಥ ಪರಿಪೂರ್ಣನೆ
ಸತತ ಸುವರ್ಣನೆ
ಕಥಾ ಶ್ರವಣದಿ ಸ
ತ್ಪಥವ ಪಾಲಿಸುತಿಪ್ಪ ಪ್ರಥಮಾಂಗ ದೊಡೆಯನೆ ೧

ನಿಲ್ಲದೆ ಬರುವದು
ಫುಲ್ಲಾ ಲೋಚನ ಸಿರಿ
ವಲ್ಲಭ ಸರ್ವರಿಗು ಬಲ್ಲಿದನ ಪ್ರತಿ
ಮಲ್ಲ ವಿರೋಧಿಯೆ
ಮೆಲ್ಲ ಮೆಲ್ಲನೆ ಪಾದ
ಪಲ್ಲವ ಪಾಲಿಸುತ್ತ
ಸಲ್ಲಲಿತ ಮಾಗಿ
ಎಲ್ಲ ಕಾಲದಿ ನಮ್ಮ
ನೆಲ್ಲರ ಸಲಹುವ
ಎಲ್ಲಿ ನಿನಗೆ ಸರಿ
ಇಲ್ಲವೊ ನೋಡಲು
ಸಲ್ಲುವುದೋ ಬಿರು
ದಲ್ಲಿ ಗಲ್ಲಿಗೆ ಗುಣ
ಬಲ್ಲವರಾರಯ್ಯ
ಕಲ್ಲು ಕೊನೆಯೊಳಿಪ್ಪ ೨

ಬೊಮ್ಮ ಮೊದಲು ಮನುಜೋ
ತ್ತುಮ್ಮಾರು ಕಡೆಯಾಗಿ

ನಿಮ್ಮ ದಾಸರುಗಳ ಸಂಬಂಧಿಯರ ಪಾದ
ನಮ್ಮಿಕೊಂಡಿಪ್ಪಂಥಾ
ಧಮ್ಮ ನಾನು ಸರ್ವೋ
ತ್ತುಮ್ಮನೆ ಅನೇಕ ಮ
ಹಿಮಾ ಸರ್ವ ಭೂಷಿತ
ರಮ್ಮ ಧರಣಿದೇವಿ
ಇಮ್ಮಹಿಷೇರ ಗೂಡಿ
ಸಮ್ಮುಖವಾಗುತ
ಗಮ್ಮನೆ ಬಾ ಬಾ
ಹಿಮ್ಮೆಟ್ಟದೆ ಶಿರಿ
ವಿಜಯ ವಿಠಲ ಅನು
ಪಮ್ಮ ಮಹಿಮಪರ
ಬೊಮ್ಮ ತಿರುಮಲೇಶ ೩

## ೧೫೩

ಸಾರಿದೆನೊ ನಿನ್ನ ವೆಂಕಟರನ್ನ ಪ

ನೀರಜನಯನನೆ ನಿರ್ಮಲಗುಣಪೂರ್ಣ ಅ

ಅನಾಥನು ನಾನು ಎನಗೆ ಬಂಧು ನೀನು
ನಿನ್ನವನೆಂದು ನೋಡೋ ನೀನಾಗಿ ದಯಮಾಡೊ ೧

ಎನ್ನ ಕುಂದುಗಳನ್ನು ಎಣಿಸಲಾಗದೊ ದೇವ
ಪನ್ನಗಾದ್ರಿವಾಸ ನೀನೆ ನಿರ್ದೋಷ ೨

ದೇಶ ದೇಶದವರ ಪೊರೆವಂತೆ ಪೊರೆಯನ್ನ
ಶೇಷಾಚಲ ಘನ್ನ ಶ್ರೀಶ ಹಯವದನ ೩

## ೧೫೪

ಸಿಂಗನ ಯೇರಿದ ನರಸಿಂಗ ತೋಮರವ ಪಿಡಿದು
ರಂಗ ರಂಗ ವೈಭೋಗದಿಂದ ನಲಿದು ಚತು
ರಂಗ ಬೀದಿಯೊಳು ಮೆರದ ಪ

ಮುತ್ತಿನ ಕಿರೀಟ ಮೇಲೆ
ಯೆತ್ತಿದ ಸತ್ತಿಗೆ ಪೊಳೆಯೆ
ಸುತ್ತ ಮುತ್ತ ಬೊಮ್ಮಾದಿಗಳು ವಾಹನ ರಥ
ಹತ್ತಿ ಬರುವ ಪುರದ ಜನಗಳು ೧

ಸನಕ ಸನಂದನ ಸನತ್ಸುಜಾತ
ಸನತ್ಕುಮಾರ ಮುನಿವರರು ವೇದಘೋ
ಷಣೆ ಉಚ್ಚರಿಸುತ
ಅನಿಮಿಷರಾಗಿ ಇಚ್ಛೈಸುತ ೨

ಗಂಧರ್ವಾದಿ ಗಾಯನ ನಾ
ರಂದನು ಪಾಡುತ ಬಾರೆ
ಇಂದುಮೌಳಿ ಮುಂದೆ ಕುಣಿವುತ ತಕ್ಕಥೈಯ
ಯೆಂದು ತುಂಬುರನು ಹಾಡಿಪಾಡುತ ೩

ವೇಶ್ಯೆಜನರು ರಂಭೆ ವೂ
ರ್ವಶಿ ಪಾತ್ರ ಪಡುತಿರೆ
ದಾಸಾನುದಾಸರು ಪಾಡುತ ಸಲಹೋ ಶ್ರೀನಿ
ವಾಸನೆಂದು ಬೇಡಿಕೊಳುತ ೪

ಮಂಗಳವಾಗಲಿ ಸಾಂಗೋ
ಪಾಂಗದಿಂದಲಿ ಪಪ್ಪೆ ಅಲಮೇ
ಲ್ಮಂಗ ರಮಣ ವಿಜಯವಿಠಲ ತಿರುಪತಿ ತಿರು
ವೇಂಗಳೇಶಾ ಶ್ರೀ ವೆಂಕಟೇಶಾ ೫

## ೧೫೫

ಸ್ತ್ರೀಯರೆಲ್ಲರು ಬನ್ನಿರೆ ಶ್ರೀನಿವಾಸನ ಪಾಡಿರೇ
ಜ್ಞಾನಗುರುಗಳಿಗೊಂದಿಸಿ ಮುಂದೆ ಕಥೆಯ ಪೇಳುವೆ
ಗಂಗಾತೀರದಿ ಋಷಿಗಳು ಅಂದು ಯಾಗವ ಮಾಡ್ದರು
ಬಂದು ನಾರದ ನಿಂತುಕೊಂಡು ಯಾರಿಗೆಂದು ಕೇಳಲು
ಅರಿತು ಬರಬೇಕು ಎಂದು ಆ ಮುನಿಯು ತೆರಳಿದ
—ಭೃಗುಮುನೀಯು ತೆರಳಿದ
ನಂದಗೋಪನ ಮಗನ ಕಂದನ ಮಂದಿರಕಾಗ ಬಂದನು

ವೇದಗಳನೆ ಓದುತಾ ಹರಿಯನೂ ಕೊಂಡಾಡುತಾ
ಇರುವ ಬ್ರೊಮ್ಮನ ನೋಡಿದ ಕೈಲಾಸಕ್ಕೆ ಬಂದನು
ಶಂಭುಕಂಠನು ಪಾರ್ವತೀಯೂ ಕಲೆತಿರುವುದ ಕಂಡನು
ಸೃಷ್ಟಿಯೊಳಗೆ ನಿನ್ನ ಲಿಂಗ ಶ್ರೇಷ್ಠವಾಗಲೆಂದನು
ವೈಕುಂಠಕ್ಕೆ ಬಂದನು ವಾರಿಜಾಕ್ಷನ ಕಂಡನು
ಕೆಟ್ಟ ಕೋಪದಿಂದ ಒದ್ದರೆ ಎಷ್ಟು ನೊಂದಿತೆಂದನು
ತಟ್ಟನೆ ಬಿಸಿನೀರಿನಿಂದೆ ನೆಟ್ಟಗೆ ಪಾದ ತೊಳೆದನು
ಬಂದ ಕಾರ್ಯ ಆಯಿತೆಂದು ಅಂದು ಮುನಿಯು ತೆರಳಿದ
ಬಂದು ನಿಂದು ಸಭೆಯೊಳಗೆ ಇಂದಿರೇಶನ ಹೊಗಳಿದ
ಪತಿಯ ಕೂಡೆ ಕಲಹ ಮಾಡಿ ಕೊಲ್ಹಾಪುರಕ್ಕೆ ಹೋದಳು
ಸತಿಯು ಪೋಗೆ ಪತಿಯು ಹೊರಟು ಗಿರಿಗೆ ಬಂದು ಸೇರಿದ
ಹುತ್ತದಲ್ಲೇ ಹತ್ತು ಸಾವಿರ ವರುಷ ಗುಪ್ತವಾಗೆ ಇದ್ದನು
ಬ್ರಹ್ಮ ಧೇನುವಾದನು ರುದ್ರ ವತ್ಸನಾದನು
ಧೇನು ಮುಂದೆ ಮಾಡಿಕೊಂಡು ಗೋಪಿ ಹಿಂದೆ ಬಂದಳು
ಕೋಟಿ ಹೊನ್ನು ಬಾಳುವೋದು ಕೊಡದ ಹಾಲು ಕರೆವುದು
ಪ್ರೀತಿಯಿಂದಲಿ ತನ್ನ ಮನೆಗೆ ತಂದುಕೊಂಡನು ಚೋಳನು
ಒಂದು ದಿವಸ ಕಂದಗ್ಹಾಲು ಚೆಂದದಿಂದಲಿ ಕೊಡಲಿಲ್ಲ
ಅಂದು ರಾಯನ ಮಡದಿ ಕೋಪಿಸಿ ಬಂದು ಗೋಪನ ಹೊಡೆದಳು
ಧೇನು ಮುಂದೆ ಮಾಡಿಕೊಂಡು ಗೋಪ ಹಿಂದೆ ನಡೆದನು
ಕಾಮಧೇನು ಕರೆದ ಹಾಲು ಹರಿಯ ಶಿರಕೆ ಬಿದ್ದಿತು
ಇಷ್ಟು ಕಷ್ಟ ಬಂದಿತೆಂದು ಪೆಟ್ಟು ಬಡಿಯೆ ಹೋದನು
ಕೃಷ್ಣ ತನ್ನ ಮನದಲ್ಯೋಚಿಸಿ ಕೊಟ್ಟ ತನ್ನ ಶಿರವನು
ಏಳು ತಾಳೆಮರದ ಉದ್ದ ಏಕವಾಗಿ ಹರಿಯಿತು
ರಕ್ತವನ್ನು ನೋಡಿ ಗೋಪ ಮತ್ತೆ ಸ್ವರ್ಗಕ್ಕೇರಿದ
ಕಷ್ಟವನ್ನು ನೋಡಿ ಗೋವು ಅಷ್ಟು ಬಂದು ಹೇಳಿತು
ತಟ್ಟನೆ ರಾಯ ಎದ್ದು ಗಿರಿಗೆ ಬಂದು ಬೇಗ ಸೇರಿದ
ಏನು ಕಷ್ಟ ಇಲ್ಲಿ ಹೀಗೆ ಯಾವ ಪಾಪಿ ಮಾಡಿದ
ಇಷ್ಟು ಕಷ್ಟ ಕೊಟ್ಟಾವಗೆ ಭ್ರಷ್ಟಪಿಶಾಚಿಯಾಗೆಂದ
ಪೆಟ್ಟು ವೇದನೆ ತಾಳಲಾರದೆ ಬೃಹಸ್ಪತೀಯ ಕರೆಸಿದ
ಅರುಣ ಉದಯದಲ್ಲೆದ್ದು ಔಷಧಕ್ಕೆ ಪೋದನು
ಕ್ರೋಢರೂಪಿಯ ಕಂಡನು ಕೂಡಿ ಮಾತನಾಡಿದನು

ಇರುವುದಕ್ಕೆ ಸ್ಥಳವು ಎನಗೆ ಏರ್ಪಾಡಾಗಬೇಕೆಂದ
ನೂರು ಪಾದ ಭೂಮಿ ಕೊಟ್ಟರೆ ಮೊದಲು ಪೂಜೆ ನಿಮಗೆಂದ
ಪಾಕ ಪಕ್ವ ಮಾಡುವುದಕ್ಕೆ ಆಕೆ ಬಕುಳೆ ಬಂದಳು
ಭಾನುಕೋಟಿತೇಜನೀಗ ಬೇಟೆಯಾಡ ಹೊರಟನು
ಮಂಡೆ ಬಾಚಿ ದೊಂಡೆ ಹಾಕಿ ದುಂಡುಮಲ್ಲಿಗೆ ಮುಡಿದನು
ಹಾರ ಪದಕ ಕೊರಳಲ್ಹಾಕಿ ಫಣೆಗೆ ತಿಲಕವಿಟ್ಟನು
ಅಂಗುಲಿಗೆ ಉಂಗುರ ರಂಗಶೃಂಗಾರವಾದವು
ಪಟ್ಟೆನುಟ್ಟು ಕಚ್ಚೆಕಟ್ಟಿ ಪೀತಾಂಬರವ ಹೊದ್ದನು
ಢಾಳು ಕತ್ತಿ ಉಡಿಯಲ್ ಸಿಕ್ಕಿ ಜೋಡು ಕಾಲಲ್ಲಿ ಮೆಟ್ಟಿದ
ಕರದಿ ವೀಳ್ಯವನ್ನೆ ಪಿಡಿದು ಕನ್ನಡೀಯ ನೋಡಿದ
ಕನಕಭೂಷಣವಾದ ತೊಡಿಗೆ ಕಮಲನಾಭ ತೊಟ್ಟನು
ಕನಕಭುಷಣಾವಾದ ಕುದುರೆ ಕಮಲನಾಭ ಏರಿದ
ಕರಿಯ ಹಿಂದೆ ಹರಿಯು ಬರಲು ಕಾಂತೆರೆಲ್ಲ ಕಂಡರು
ಯಾರು ಇಲ್ಲಿ ಬರುವರೆಂದು ದೂರ ಪೋಗಿರೆಂದರು
ನಾರಿಯರಿರುವ ಸ್ಥಳಕ್ಕೆ ಯಾವ ಪುರುಷ ಬರುವನು
ಎಷ್ಟು ಹೇಳೆ ಕೇಳ ಕೃಷ್ಣ ಕುದುರೆ ಮುಂದೆ ಬಿಟ್ಟನು
ಅಷ್ಟು ಮಂದೀರೆಲ್ಲ ಸೇರಿ ಪೆಟ್ಟುಗಳನು ಹೊಡೆದರು
ಕಲ್ಲುಮಳೆಯ ಕರೆದರಾಗ ಕುದುರೆ ಕೆಳಗೆ ಬಿದ್ದಿತು
ಕೇಶ ಬಿಚ್ಚಿ ವಾಸುದೇವ ಶೇಷಗಿರಿಗೆ ಬಂದನು
ಪರಮಾನ್ನ ಮಾಡಿದ್ದೇನೆ ಉಣ್ಣು ಬೇಗ ಎಂದಳು
ಅಮ್ಮ ಎನಗೆ ಅನ್ನ ಬೇಡ ಎನ್ನ ಮಗನೆ ವೈರಿಯೇ
ಕಣ್ಣಿಲ್ಲಾದ ದೈವ ಅವಳ ನಿರ್ಮಾಣವ ಮಾಡಿದ
ಯಾವ ದೇಶ ಯಾವ್ಹೋಳಾಕೆ ಎನಗೆ ಪೇಳು ಎಂದಳು
ನಾರಾಯಣನ ಪುರಕೆ ಪೋಗಿ ರಾಮಕೃಷ್ಣರ ಪೂಜಿಸಿ
ಕುಂಜಮಣಿಯ ಕೊರಳಲ್ಹಾಕಿ ಕೂಸಿನ ಕೊಂಕಳಲೆತ್ತಿದಾ
ಧರಣಿದೇವಿಗೆ ಕಣಿಯ ಹೇಳಿ ಗಿರಿಗೆ ಬಂದು ಸೇರಿದ
ಕಾಂತೆರೆಲ್ಲ ಕೂಡಿಕೊಂಡು ಆಗ ಬಕುಳೆ ಬಂದಳು
ಬನ್ನಿರೆಮ್ಮ ಸದನಕೆನುತ ಬಹಳ ಮಾತನಾಡಿದರು
ತಂದೆತಾಯಿ ಬಂಧುಬಳಗ ಹೊನ್ನು ಹಣ ಉಂಟೆಂದರು
ಇಷ್ಟು ಪರಿಯಲ್ಲಿದ್ದವಗ ಕನ್ಯೆ ಯಾಕೆ ದೊರಕ್ಲಿಲ್ಲಾ
ದೊಡ್ಡವಳಿಗೆ ಮಕ್ಕಳಿಲ್ಲ ಮತ್ತೆ ಮದುವೆ ಮಾಡ್ವೆವು

ಬೃಹಸ್ಪತೀಯ ಕರೆಸಿದ ಲಗ್ನಪತ್ರಿಕೆ ಬರೆಸಿದ
ಶುಕಾಚಾರ್ಯರ ಕರೆಸಿದ ಮದುವೆ ಓಲೆ ಕಳುಹಿದ
ವಲ್ಲಭೇನ ಕರೆವುದಕ್ಕೆ ಕೊಲ್ಹಾಪುರಕೆ ಪೋದರು
ಗರುಡನ ಹೆಗಲನೇರಿಕೊಂಡು ಬೇಗ ಹೊರಟುಬಂದರು
ಅಷ್ಟವರ್ಗವನ್ನು ಮಾಡಿ ಇಷ್ಟದೇವರ ಪೂಜಿಸಿ
ಲಕ್ಷ್ಮೀಸಹಿತ ಆಕಾಶರಾಜನ ಪಟ್ಟಣಕ್ಕೆ ಬಂದರು
ಕನಕಭೂಷಣವಾದ ತೊಡಿಗೆ ಕಮಲನಾಭ ತೊಟ್ಟನು
ಕನಕಭೂಷಣನಾದ ಮಂಟಪ ಕಮಲನಾಭ ಏರಿದ
ಕಮಲನಾಭಗೆ ಕಾಂತಿಮಣಿಯ ಕನ್ಯದಾನವಮಾಡಿದ
ಕಮಲನಾಭ ಕಾಂತೆ ಕೈಗೆ ಕಂಕಣವನ್ನೆ ಕಟ್ಟಿದ
ಶ್ರೀನಿವಾಸ ಪದ್ಮಾವತಿಗೆ ಮಾಂಗಲ್ಯವನೆ ಕಟ್ಟಿದ
ಶ್ರೀನಿವಾಸನ ಮದುವೆ ನೋಡೆ ಸ್ತ್ರೀಯರೆಲ್ಲರು ಬನ್ನಿರೇ
ಪದ್ಮಾವತಿಯ ಮದುವೆ ನೋಡೆ ಮುದ್ದು ಬಾಲೆಯರೆಲ್ಲ ಬನ್ನಿರೇ
ಶಂಕೆಯಿಲ್ಲದೆ ಹಣವ ಸುರಿದು ವೆಂಕಟೇಶನ ಕಳುಹಿದ
ಲಕ್ಷತಪ್ಪು ಎನ್ನಲ್ಲುಂಟು ಪಕ್ಷಿವಾಹನ ಸಲಹೆನ್ನ
ಕೋಟಿ ತಪ್ಪು ಎನ್ನಲ್ಲುಂಟು ಕುಸುಮನಾಭ ಸಲಹೆನ್ನ
ಶಂಕೆ ಇಲ್ಲದೆ ವರವ ಕೊಡುವ ವೆಂಕಟೇಶ ಸಲಹೆನ್ನ
ಭಕ್ತಿ ಯಿಂದಲಿ ಹೇಳ್‌ಕೇಳ್ದವರಿಗೆ ಮುಕ್ತಿ ಕೊಡುವ ಹಯವದನ
ಜಯ ಜಯ ಶ್ರೀನಿವಾಸನಿಗೆ ಜಯ ಜಯ ಪದ್ಮಾವತಿಗೆ
ಬಲಿದಂತಹ ಶ್ರೀಹರಿಗೆ ನಿತ್ಯ ಶುಭ ಮಂಗಳ
ಶೇಷಾದ್ರಿಗಿರಿವಾಸ ಶ್ರೀದೇವಿ ಅರಸಗೆ
ಕಲ್ಯಾಣಮೂರುತಿಗೆ ನಿತ್ಯಜಯಮಂಗಳ

## ೧೫೬

ಭೈರವಿ ಆದಿ

ಸ್ಮರಿಸಿದವರನು ಕಾಯ್ವ ನಮ್ಮ ಸೂರ್ಯನೇಕ ಪ್ರಭಾವ
ಸುರ ಮುನಿಗಳ ಸಂಜೀವ ಶ್ರೀ ವೆಂಕಟ ನಮ್ಮನು ಪೊರೆವ ಪ

ವೈಕುಂಠದಿಂದ ಬಂದು ಶೇಷಾಚಲದಲಿ ನಿಂದು
ಭಕ್ತರ ಪಾಲಿಪೆನೆಂದು ಅಭಯ ದಯಾಕರ ಸಿಂಧು
ಭಕುತಿ ಮುಕುತಿ ಯೀವ ಮತ್ಕುಲದೇವನೆ

ಸಕಲ ಜನಸೇವಿತ ಘನ ಪರಿಪೂರ್ಣನೆ
ವಿಕಸಿತ ಕಮಲನಯನ ಕಂಜನಾಭನೆ
ಪ್ರಕಟಿತ ಶುಭಕೀರ್ತಿಯಿಂದ ಮೆರೆವನೆ ೧

ಜ್ಞಾನಿಗಳ ಗೋಚರನೆ ತನ್ನ ಧ್ಯಾನಿಪರ ಮನೋಹರನೆ
ದಾನವರ ಸಂಹರನೆ ಮಹಾದ್ವೈನ್ಯಾದಿಗಳುದ್ಧರನೆ
ಆನಂದಮಯನೆ ಅನೇಕಾವತಾರನೆ
ಅನುದಿನ ನೆನವರ ಹೃದಯ ಮಂದಿರನೆ
ಘನ ಮಾಣಿಕ ಭೂಷಣ ಶೃಂಗಾರನೆ
ತನುವಿನ ಕ್ಲೇಶ ದುರಿತ ಸಂಹರನೆ ೨

ಜಯತು ದೋಷವಿನಾಶ ಜಯ ಮಹಿಮಾ ವಿಶೇಷ
ಜಯತು ಲಕುಮೀ ಪರಿತೋಷ ಜಯ ಶ್ರೀ ವೆಂಕಟೇಶ
ಜಯ ಕಮಲಜಜನಕನೆ ಜಯ ಜಗದೀಶ
ಜಯ ಗಜವರದ ಪಾಲಿತ ಪುಣ್ಯಘೋಷ
ಜಯತು ಜನಾರ್ಧನ ಜಗನ್ಮೋಹನ ವೇಷ
ಜಯ ರಂಗ ವಿಠಲ ಕರುಣಾವಿಲಾಸ ೩

## ೧೫೭

**ವರಾಳಿ** **ಝಂಪೆ**

ಸ್ವಾಮಿ ಪುಷ್ಕರ ತೀರ ನಿಲಯ ನಮೋ
ಸ್ವಾಮಿ ವರಹ ವೆಂಕಟನಾಯಕಾ
ಸ್ವಾಮಿ ಪಾಹಿ ಪಾಹಿ ತ್ರಾಹಿ
ಸ್ವಾಮಿ ವರಹ ವೆಂಕಟ ನಾಯಕ ಪ

ಯಜ್ಞ ಗಾತ್ರ ವಿಧಿನುತ ಪ್ರಭು ಶ್ರೀ
ಯಜ್ಞ ವರಹ ವೆಂಕಟನಾಯಕಾ
ಯಜ್ಞ ಭೋಕ್ತೃ ಹೇಮಾಂಬಕ ಹರ
ಯಜ್ಞ ವರಹ ವೆಂಕಟನಾಯಕಾ ೧

ಭೂ ಭಯ ದೂರ ಧರಾ ಮನೋಹರ
ಭೂ ವರಹ ವೆಂಕಟನಾಯಕಾ

ಶೋಭಿತ ಬಾಲ ಚಂದ್ರೋ ಪರಮ ಕ್ರೋಧ
ಭೂ ವರಹ ವೆಂಕಟನಾಯಕಾ ೨

ಶ್ವೇತಪಯವದನ ಶ್ವೇತಾಂಬರಧರ
ಶ್ವೇತವಾಹನ ಸಖಿ ಶ್ವೇತ ನಿಭಾ
ಶ್ವೇತಾದ್ರೀಶಾರ್ಚಿತ ಪಾದಕಮಲ
ಶ್ವೇತ ವರಹ ವೆಂಕಟನಾಯಕ ೩

## ೧೫೮

ನಾದನಾಮಕ್ರಿಯ ಏಕ

ಹರೇ ವೆಂಕಟ ಶೈಲ ವಲ್ಲಭ
ಪೊರೆಯಬೇಕು ಎನ್ನ ಪ

ದುರಿತದೂರ ನೀನಲ್ಲದೆ ಧರೆಯೊಳು
ಪೊರವರ ನಾ ಕಾಣೆ ನಿನ್ನಾಣೆ ಅ

ಆರು ನಿನ್ನ ಹೊರತೆನ್ನ ಪೊರೆವರು
ನೀರಜಾಕ್ಷ ಹರಿಯೆ ಅ
ಪಾರ ಮಹಿಮ ಪುರಾಣ ಪುರುಷ
ಘೋರ ದುರಿತಗಳ ದೂರ ಮಾಡಿಸೋ ೧

ಇಂದಿರೇಶ ಅರವಿಂದ ನಯನ ಎನ್ನ
ತಂದೆ ತಾಯಿ ನೀನೆ
ಹೊಂದಿದವರ ಅಘ ವೃಂದ ಕಳೆವ
ಮಂದರಾದ್ರಿಧರನೇ ಶ್ರೀಧರನ ೨

ಮಂಗಳಾಂಗ ಮಹನೀಯ ಗುಣಾರ್ಣವ
ಗಂಗೋದಿತ ಪಾದ
ಅಂಗಜಪಿತ ಅಹಿರಾಜಶಯ್ಯ ಶ್ರೀ
ರಂಗ ವಿಠಲ ದೊರೆಯೇ ಶ್ರೀಹರಿಯೇ ೩

## ೧೫೯

ಮಧ್ಯಮಾವತಿ ಅರೆಝಂಪೆ

ಜಯಮಂಗಳಂ ನಿತ್ಯ ಶುಭಮಂಗಳಂ ಪ

ಶ್ರೀವಾಸುದೇವರಿಗೆ ಸರಸ್ವತಿಯ ಬಲಗೊಂಡು ಶ್ರೀ
ನಿವಾಸ ಮೂರ್ತಿಗೆ ಗೋವಿಂದ ಕೇಶವಗೆ ನಮೊ ಎಂಬೆನು ೧

ಅಲ್ಲಿ ವೈಕುಂಠದಲಿ ಸ್ವಾಮಿನಾರಾಯಣರು ಆದಿಶೇಷನ
ಮ್ಯಾಲೆ ಪವಳಿಸಿರಲೂ
ಬಂದು ಮಮಾಲಕ್ಷ್ಮಿ ತನ್ನ ಚಂದದ ಕರದಲಿ
ಕುಂದದೆ ಪಾದವನು ಒತ್ತುತ್ತಿದ್ದಳು ೨

ಪಾದವನು ಒತ್ತುತ್ತಿರೆ ತಾಯೆ ಭಕ್ತರ ನೆನದು
ಆಗ ಬಂದಳು ನಮ್ಮ ನೆರೆಯೂರಿಗೆ
ಮಣಿಮುಕ್ತ ನದಿತೀರ ಮಂಜುಳೆ ವೃಕ್ಷದ ಕೆಳಗೆ
ನೆಲಸಿದಳು ನಮ್ಮ ಮಹಲಕ್ಷ್ಮಿಯು ೩

ಮೇಧಾವಿ ಮಹರ್ಷಿ ಸ್ನಾನ ಮಾಡಲಿ ಬಂದು
ನಾರೇರ ನಲಿದಾಟ ಕಂಡಾನಾಗ
ಒಣಗಿದ್ದ ಮರ ತಳಿತು ಹರಿವುತಿರೆ ಜಲ ಉಬ್ಬಿ
ವನವೆಲ್ಲ ಮಂಗಳಮಯವಾದುವು ೪

ಆಗ ಹತ್ತಿರ ಬಂದು ದಾರಮ್ಮ ತಾಯೆನಲು
ನಾವು ಪರದೇಶಿಗಳು ಎಂದು ನುಡಿಯೆ
ಜ್ಞಾನದಲಿ ನೋಡಿದನು ತಾಯಿ ಮಹಲಕ್ಷ್ಮಿಯನು
ಭಾಗ್ಯವನು ಮಾಡಿದೆನು ಮನೆಗೆ ಬನ್ನಿ ೫

ನಿನ್ನ ತಪಸನು ಸಲಿಸ ಬಂದೆ ನಾ ಮಗಳಾಗಿ
ಇನ್ನು ಸಂದೇಹ ಬೇಡನ್ನತಂದೆ
ಬರಬೇಕು ಆಶ್ರಮಕೆ ಎಂದು ನುಡಿದನು ಋಷಿ
ಸಂತೋಷ ಹರುಷದಲಿ ನಡೆ ತಂದನು ೬

ಮಗಳನ್ನು ಕುಟೀರ ದ್ವಾರದಲಿ ಕರೆತರಲು
ಮಡದಿಯರೆಲ್ಲ ಆರತಿಯೆತ್ತಲು
ನಿಧಿಯು ತನ್ನಕೈಯ್ಯ ಸೇರಿತು ಎನುತಲಿ
ಅಗಣಿತ ಹರುಷದಲಿ ಮುಳುಗಿದ್ದನು ೭

ಅಲ್ಲಿ ವೈಕುಂಠದಲಿ ಸ್ವಾಮಿಕಂಗಳ ತೆರೆದು
ಹೃದಯದಲ್ಲಿದ್ದ ಲಕ್ಷ್ಮಿಯ ಕಾಣದೆ
ಕಂಗೆಟ್ಟು ಹರಿಯೆದ್ದು ಪಂಚೈದುರೂಪನಾಗಿ
ರಾಜ್ಯರಾಜ್ಯದ ಮೇಲೆ ಅರಸ ಬಂದ ೮

ರಾಜ್ಯ ರಾಜ್ಯದ ಮೇಲೆ ದೇವೀನು ಕಾಣದೆ
ಕುದಲೀ ನಾರ್ಕ್ಷೇತ್ರಕ್ಕೆ ಬಂದು
ಕಾವೇರಿಗೆ ಒಲಿದು ಸ್ಥಿರವಾಗಿ ವರವಿತ್ತು
ನಾರಾಯಣ ಬಂದ ನೆರೆಯೂರಿಗೆ ೯

ಬ್ರಹ್ಮಣರೂಪಿಲಿ ಋಷಿಯ ಮನೆಗೆ ಬಂದು
ದೀಪನವಾಗಿದೆಯೆಂದು ನುಡಿಯೆ
ಆ ಋಷಿ ಆದರಿಸಿ ಕಂದಮೂಲಾದಿ ಫಲಗಳ
ಬಡ್ಡಿಸಿ ಉತ್ಸಾಹದಿ ನಲಿಯುತ್ತಿದ್ದ ೧೦

ಆರೋಗಣೆಮಾಡಿ ಕೈಗೆ ನೀರನು ಬೇಡೆ
ಮೇಧಾವಿ ಮಹರ್ಷಿ ನೀರು ಕೊಡಲು
ಯಾರ ಕೈಯ್ಯಲಿ ನೀರು ಪಿಡಿವೋನು ನಾನಲ್ಲ
ಕೊಡಗೂಸು ಕೊಡಬೇಕು ವ್ರತವೆಂದನು ೧೧

ಕೊಡಗೂಸು ಮಹಲಕ್ಷ್ಮಿ ಗಿಂಡ್ಯಾಗ ನೀರು ಕೊಡೆ
ಕಡುಬೇಗದಿಂದಲೆ ಕೈಯ್ಯಪಿಡಿದ
ಅಯ್ಯೋ ಬ್ರಾಹ್ಮಣ ಕೈಯ್ಯಪಿಡಿದನೆಂದು ಕೂಗೆ
ತಡೆಯದೆ ಶಾಪವನು ಕೊಡಲಿ ಬಂದ ೧೨

ಶಾಪವನು ಕೊಡಲಿ ಬರೆ ಶಂಕಚಕ್ರವ ತೋರೆ
ಸ್ವಾಮಿ ಎಂದು ಅರಿತು ನಮಸ್ಕರಿಸಿ
ಸ್ತೋತ್ರವನೆ ಮಾಡಿದನೆ ಆತ ನಾರಾಯಣನೆ
ಸ್ವಾಮಿ ಇತ್ತಲಿ ಬಂದ ಭಾಗ್ಯವೇನು ೧೩

ನಿನ್ನ ಮಗಳನು ಬೇಡಿಬಂದೆ ನಾ ಹರುಷದಲಿ
ಸಂತೋಷದಿಂದಲೆ ಕೊಡಬೇಕು ಮಗಳ

ಎನ್ನ ಜಾಮಾತನ ಮಾಡಿಕೊ ಎನುತಲೂ
ಸಂತೋಷ ಹರುಷದಲಿ ಕೊಡುವೆನೆಂದ ೧೪

ಎನ್ನ ಪಟ್ಟಣದಲಿ ಸ್ಥಿರವಾಗಿ ನೆಲಿಸಿದರೆ
ಎನ್ನ ಮಗಳೇ ಮೇಲು ಪಟ್ಟವಾಗಿ
ಎನ್ನೂರು ನಾಚ್ಯಾರಗುಡಿಯೆಂದು ಹೆಸರಾಗೆ
ನಂಬಿಕೆ ಕೊಟ್ಟರೆ ಕೊಡುವೆ ಮಗಳ ೧೫

ಕೊಟ್ಟೆನಾ ನಂಬಿಕೆ ಉತ್ತರೋತ್ತರವಾಗಿ
ನಿಶ್ಚತಾಂಬೂಲ ಮಾಡು ಮಾವ ಎನಲು
ನಿಶ್ಚಿತಾರ್ಥವ ಮಾಡಿ ಅಷ್ಟವರ್ಗವು ಮಾಡಿ
ಮುಹೂರ್ತವನು ನೋಡಿ ಮಗಳ ಧಾರೆಯೆರೆದ ೧೬

ಬ್ರಹ್ಮರುದ್ರಾದಿಗಳು ಮೊದಲು ಭೂಮವ ಮಾಡಿ
ಇಂದ್ರಾದಿದೇವಕ್ಕಳೆಲ್ಲ ಕೂಡಿ
ನಾಕಬಲಿ ಮಾಡಿ ನಾಲ್ಕು ಲೋಕವು ಕೂಡಿ
ನಾಚ್ಯಾರು ಗುಡಿಯಲಿ ನೆಲಸಿಪ್ಪರು ೧೭

ಅನಿರುದ್ಧ ಪ್ರದ್ಯುಮ್ನ ಪರ ವಾಸುದೇವರು
ಚತುರಮುಖ ಬ್ರಹ್ಮನೂ ಸಂಕರುಷಣಾ
ಸ್ಥಳ ವೊಳ್ಳೆದಂದೆಂದು ಸ್ಥಿರವಾಗಿ ನೆಲೆಸಿದರು
ತಡೆಯದೆ ಜನರೆಲ್ಲ ನೋಡಿ ಬನ್ನಿ ೧೮

ಏಕಸಿಂಹಾಸನದಿ ಲಕ್ಷ್ಮೀನಾರಾಯಣರು
ಏಕಚಿತ್ತದಲಿ ನೆಲೆಗೊಂಡಿಪ್ಪರು
ಲೋಕನಾಯಕಿ ಲಕ್ಷ್ಮಿ ವರಗಳನೆ ಕೊಡುವಳು
ಲೋಕಲೋಕದ ಜನರು ನೋಡ ಬನ್ನಿ ೧೯

ಕರ್ಪೂರವು ಕೈರಗುಳಿಗೆ ಕಳಿಯ ಅಡಿಕೆಯು
ಅಚ್ಚಬಿಳಿ ಎಲೆಯ ತಾಂಬೂಲಗಳನು
ಅಪ್ಪನಾರಾಯಣಗು ಮಿತ್ರೆಮಹಲಕ್ಷ್ಮಿಗು
ಅರ್ಥಿಲಿ ಮೇಧಾವಿ ಕೊಡುತ್ತಿದ್ದನು ೨೦

ಮುತ್ತಿನ ಪಲ್ಲಕ್ಕಿಗಳನೆ ತಂದಿಳುಹಿದರು
ಅಷ್ಟಮಂಗಳ ವಾದ್ಯಗಳು ಮೊರೆಯಲು

ಮತ್ತೆ ಬ್ರಹ್ಮಾದಿ ಸುರರೆಲ್ಲರು ಹರುಷದಲಿ
ಅಷ್ಟಬೀದಿವೊಳಗೆ ಮೆರೆಸಲಿ ಹೊರಟರು ೨೧

ಚರಣದಂದಿಗೆ ಗಜ್ಜೆ ಹೊಳೆವ ಕಾಂಚಿಧಾಮ
ಹೊಳೆವ ಪೀತಾಂಬರ ಪೊನ್ನುಡುದಾರವು
ನೊಸಲ ಕಸ್ತೂರಿ ತಿಲಕ ಗೊಂಡ್ಯ ಮುಡಿಗೆ ತಕ್ಕ
ಎಸಳು ಮಲ್ಲಿಗೆ ಸಂಪಿಗೆ ಒಪ್ಪಿತು ೨೨

ನೊಸಲ ಕಸ್ತೂರಿ ತಿಲಕ ಕಿರೀಟ ಕುಂಡಲ
ಶಂಖ ಚಕ್ರವನೊಪ್ಪಿ ಧರಿಸಿಪ್ಪನು
ತುಳಸಿಯ ವನಮಾಲೆ ವೈಜಯಂತಿ ಕೊರಳಲಿ
ಶ್ರೀನಿವಾಸ ಗೊಪ್ಪಿತು ಶ್ರೀವತ್ಸದಿ ೨೩

ಪಾವಡ ಹಾಕೋರು ಚಾಮರ ಬೀಸೋರು
ವಾರಣದ ಸತ್ತಿಗೆ ದೀವಟಗೆಯು
ಸ್ವಾಮಿ ಗರುಡನ್ನೇರಿ ಮೆರೆವಾಗ ನೋಡಿದರೆ
ಸಾಯುಜ್ಯ ಪದವಿಯ ಕೊಡುವ ಹರಿಯು ೨೪

ಇತ್ತೆರದಿ ಚಾಮರ ಮುತ್ತಿನ ದೀವಟಗೆ
ಅರ್ಥಿಲಿ ಸೂಳೇರು ನಾಟ್ಯವಾಡೆ
ಭಕ್ತವತ್ಸಲ ನಮ್ಮ ಹಯವದನನ ಮೇಲೆ
ಪುಷ್ಪವೃಷ್ಟಿಗಳನ್ನ ಕರೆದರಾಗ ೨೫

## ೧೬೦

ಜಯಮಂಗಳಂ ನಿತ್ಯ ಶುಭಮಂಗಳಂ ಪ

ತೊಳಸದಕ್ಕಿಯ ತಿಂಬ ಕಿಲುಬುತಳಿಗೆಯಲುಂಬ
ಕೊಳಗದಲಿ ಹಣಗಳನು ಅಳೆದುಕೊಂಬ
ಇಲ್ಲ ತನಗೆಂದು ಸುಳ್ಳು ಮಾತಾಡಿದರೆ
ಎಲ್ಲವನು ಕಸುಕೊಂಬ ಕಳ್ಳದೊರೆಗೆ ೧

ತನ್ನ ನೋಡುವೆನೆಂದು ಮುನ್ನೂರು ಗಾವುದ ಬರ
ತನ್ನ ಗುಡಿಯು ಪೊಕ್ಕ ಜನರಿಗೆಲ್ಲ

ಹೊನ್ನು ಹಣ ಕಸುಕೊಂಡು ತನ್ನ ದರುಶನ ಕೊಡದೆ
ಬೆನ್ನೊಡೆಯ ಹೊಡೆಸುವ ಅನ್ಯಾಯಕಾರಿಗೆ ೨

ಗಿಡ್ಡಹಾರುವನಾಗಿ ಒಡ್ಡಿ ದಾನವ ಬೇಡಿ
ದುಡ್ಡು ಕಾಸುಗಳಿಗೆ ಕೈಯ ನೀಡಿ
ಅಡ್ಡಬಿದ್ದ ದಾಸರಿಗೆ ವಿಡ್ಡೂರಗಳ ಕಳೆದು
ದೊಡ್ಡವರ ಮಾಳ್ಪ ಸಿರಿ ವಿಜಯವಿಠಲರೇಯಗೆ ೩

# ಶ್ರೀಪಾದರಾಜರು

ಕ್ರಿ.ಶ.ಸು. ೧೪೦೪–೧೫೦೨

ಬೆಂಗಳೂರು ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ಅಬ್ಬೂರಿನಲ್ಲಿ ಶ್ರೀಪಾದರಾಜರು ಬಾಲ್ಯ ಕಳೆದರೆಂದು ಗ್ರಹಿಸಲು ಅನೇಕ ಐತಿಹ್ಯಗಳಿವೆ. ಶ್ರೀಪಾದರಾಜರ ಪೂರ್ವಾಶ್ರಮದ ಹೆಸರು ಲಕ್ಷ್ಮೀನಾರಾಯಣ. ಬಾಲಕನಾಗಿದ್ದಾಗಲೇ ಚಾಣಾಕ್ಷತೆಯನ್ನು ವ್ಯಕ್ತಪಡಿಸಿದ್ದ ಹಲವಾರು ಉದಾಹರಣೆಗಳುಂಟು.

ಒಮ್ಮೆ ಸ್ವರ್ಣವರ್ಣತೀರ್ಥರು ಅಬ್ಬೂರಿನ ಕಡೆ ಪ್ರಯಾಣ ಮಾಡುತ್ತಾ ಬಂದು, ಅಲ್ಲೇ ದನಗಾಹಿಯಾಗಿದ್ದ ಲಕ್ಷ್ಮೀನಾರಾಯಣನನ್ನು ಕುರಿತು,'' ಇನ್ನು ಎಷ್ಟು ದೂರವಿದೆ ಅಬ್ಬೂರು'' ಎಂದಾಗ ''ಇದೋ ಇಲ್ಲಿ ನನ್ನನ್ನು ನೋಡಿ, ಮನೆಗೆ ಹಿಂದಿರುಗುತ್ತಿರುವ ದನಕರುಗಳನ್ನು ನೋಡಿ, ಪಶ್ಚಿಮದಿಕ್ಕಿನಲ್ಲಿ ಮುಳುಗುತ್ತಿರುವ ಸೂರ್ಯನನ್ನು ನೋಡಿ, ಈಗಲಾದರೂ ಅಬ್ಬೂರು ಎಷ್ಟು ದೂರವಿದೆ ಎಂಬುದು ವೇದ್ಯವಾಯಿತೇ?'' ಎಂದು ನುಡಿದನು.

ಹೀಗೆ ಇವನು ತೋರಿದ ಅಸಾಧಾರಣವಾದ ಬುದ್ಧಿಶಕ್ತಿಯನ್ನು ನೋಡಿದ ಸ್ವರ್ಣವರ್ಣ ತೀರ್ಥರು ಬಾಲಕನ ತಂದೆ ತಾಯಿಗಳಾದ ಶೇಷಗಿರಿ ಮತ್ತು ಗಿರಿಯಮ್ಮನವರ ಒಪ್ಪಿಗೆ ಪಡೆದು ಅವರನ್ನು ಶ್ರೀರಂಗಕ್ಕೆ ಕರೆದೊಯ್ದರು. ಗಿರಿಯಮ್ಮನವರ ಅಕ್ಕನ ಮಗನೂ ಪೀಠಾಧಿಪತಿಯಾಗಿದ್ದು ಗೊತ್ತಿದ್ದರಿಂದ ಮಗನು ವಿಖ್ಯಾತನಾಗಲು ತಾನೇಕೆ ಅಡ್ಡಿಯಾಗಬೇಕೆಂದು ಕರೆಗೆ ಒಪ್ಪುತ್ತಾರೆ.

ಬಾಲಕನಾದ ಲಕ್ಷ್ಮೀನಾರಾಯಣನಿಗೆ ಬ್ರಹ್ಮೋಪದೇಶವನ್ನು ಮಾಡಿ, ತಕ್ಕ ವ್ಯಾಸಂಗಕ್ಕೂ ವ್ಯವಸ್ಥೆ ಮಾಡಿ ಸಂನ್ಯಾಸದೀಕ್ಷೆಯನ್ನು ಕೊಟ್ಟು ತಮ್ಮ ಸಂಸ್ಥಾನದ ಉತ್ತರಾಧಿಕಾರಿಯಾಗುವಂತೆ ಮಾಡಿದರು.

ಶ್ರೀಪಾದರಾಜರು ಶ್ರೀರಂಗದಲ್ಲೇ ಹಲವಾರು ವರ್ಷಗಳನ್ನು ಕಳೆದ ನಂತರ ಮುಳಬಾಗಲಿಗೆ ಬಂದಾಗ ಇಲ್ಲಿನ ವಾತಾವರಣಕ್ಕೆ ಮಾರುಹೋದರು. ಆಗ ಮುಳಬಾಗಿಲು ವಿಜಯನಗರದ ಆಡಳಿತಕ್ಕೆ ಒಳಪಟ್ಟು ಮೂಡಬಾಗಿಲಿನಂತೆ ಕಂಗೊಳಿಸುತ್ತಿದ್ದ ಈ ಪ್ರದೇಶ ದ್ವೈತದರ್ಶನವನ್ನು ಕಲಿಸುವ ಕೇಂದ್ರವೂ ಆಯಿತು.

ಶ್ರೀಪಾದರಾಜರು ಕನ್ನಡ ಮತ್ತು ಸಂಸ್ಕೃತ ಭಾಷೆಯಲ್ಲಿ ವಿದ್ವಾಂಸರಾಗಿದ್ದು ಸಂಸ್ಕೃತದಲ್ಲಿ ವಾಗ್ವಜ್ರವೆಂಬ ಗ್ರಂಥವನ್ನು ರಚಿಸಿದುದಾಗಿ ತಿಳಿದು ಬರುತ್ತದೆ. ಕನ್ನಡದಲ್ಲಿಯೂ ಹಲವಾರು ಕೀರ್ತನೆಗಳನ್ನು ರಚಿಸಿದ್ದಾರೆ. ಶ್ರೀರಂಗ ಕ್ಷೇತ್ರ ಮಹಾತ್ಮೆಯನ್ನು ತಿಳಿಸುವ ''ಕಂಗಳಿದ್ದೇತಕೋ ಕಾವೇರಿರಂಗನ ನೋಡದ'' ಮತ್ತು ತಿರುಪತಿ ಶ್ರೀ ನಿವಾಸನನ್ನು ಕುರಿತು ''ಭೂಷಣಕೆ ಭೂಷಣ ಇದು ಭೂಷಣ'' ಮುಂತಾದ ಹಲವಾರು ಕೀರ್ತನೆಗಳನ್ನು ರಂಗವಿಠಲ ಅಂಕಿತದಿಂದ ರಚಿಸಿದ್ದು ಸಾಕಷ್ಟು ಪ್ರಸಿದ್ಧದಾಗಿವೆ.

## ವ್ಯಾಸರಾಯರು

---

ಕ್ರಿ.ಶ.ಸು.೧೪೪೭–೧೫೩೯

ಬ್ರಹ್ಮಣ್ಯತೀರ್ಥರ ಅನುಗ್ರಹದಿಂದ ಬಲ್ಲಣಸುಮತಿ–ಲಕ್ಷ್ಮೀದೇವಿ ದಂಪತಿಗಳಿಗೆ ಹುಟ್ಟಿದ ಕಿರಿಯ ಮಗುವಿನ ಹೆಸರು ಯತಿರಾಜ. ಆರನೆಯ ವಯಸ್ಸಿನಲ್ಲಿ ಬ್ರಹ್ಮಣ್ಯತೀರ್ಥರು ಸನ್ಯಾಸ ದೀಕ್ಷೆಯಿತ್ತು ವ್ಯಾಸತೀರ್ಥರೆಂದು ಕರೆದು ಆಶೀರ್ವದಿಸಿದರು. ಸಾಳುವ ನರಸಿಂಹನಾದಿಯಾದಿ ಆರು ಜನ ವಿಜಯನಗರದ ಅರಸರಿಗೆ ರಾಜಗುರುವಾಗಿದ್ದರು. ಕೃಷ್ಣದೇವರಾಯನಂತಹವರಿಗೆ ಕುಹುಯೋಗ ಅಂದರೆ ರಾಹು–ಸೂರ್ಯ–ಶನಿ–ಅಂಗಾರಕ ಗ್ರಹಗಳು ವಿಷಘಳಿಗೆಯಲಿ ಚಂಡಾಲತ್ವವನ್ನು ಪಡೆದು ಶೂನ್ಯ ಚಂದ್ರತಿಥಿಯಾದ ಅಮಾವಾಸ್ಯೆಯಲ್ಲಿ ಮಕರ ರಾಶಿಯಲ್ಲಿ ಸಂಧಿಸುವುದು. ಎಷ್ಟೋ ವರ್ಷಗಳಿಗೊಮ್ಮೆ ಸಂಧಿಸುವ ಘಟನೆ. ಇದರಿಂದ ರಾಜ್ಯನಾಶ, ರಾಜನಾಶ, ಪ್ರಳಯಗಳಂತಹವು ಈ ಸಂಧಿಗೆ ಫಲವು. ಈ ಸಮಯದಲ್ಲಿ ಕೃಷ್ಣದೇವರಾಯನ ರಾಜ್ಯವನ್ನು ವ್ಯಾಸರಾಯರಿಗೆ ದಾನ ಮಾಡಿದರು. ಕುಹುಯೋಗ ಘಟಿಸಿದಾಗ ತಮ್ಮ ಕಾಷೀಶಾಠಿಯನ್ನು ತೆಗೆದೊಗೆದು ಜಾಜ್ವಲ್ಯಮಾನವಾದ ಜ್ವಾಲೆಗೆಸೆದರು. ಶಾಠಿಯು ದಗ್ಧವಾಗಿ ಜ್ವಾಲೆ ಶಾಂತವಾಯಿತು.

ಹೀಗೆ ವಿಜಯನಗರದ ಉನ್ನತಿಗೆ, ಕರ್ನಾಟಕದ ಅಭ್ಯುದಯಕ್ಕೆ ಕಾರಣೀಭೂತರಾದರು. ಮಧ್ವಾಚಾರ್ಯರ ಮಹಾಪೀಠದಲ್ಲಿ ಕೂತು ಮಹಾ ಗ್ರಂಥಗಳನ್ನು ರಚಿಸಿ ಮಧ್ವಮತದ ಪುನರುದ್ಧಾರ ಮಾಡಿದರು. ಸಂಸ್ಕೃತ, ಕನ್ನಡ ಭಾಷೆಗಳೆರಡರಲ್ಲೂ ಅಸಾಮಾನ್ಯ ಪಂಡಿತರೆನಿಸಿದ್ದರು.

ಸಂಸ್ಕೃತದಲ್ಲಿ ತರ್ಕ ತಾಂಡವ, ನ್ಯಾಯಾಮೃತ ಚಂದ್ರಿಕಾ ಮುಂತಾದ ಉದ್ಗ್ರಂಥಗಳನ್ನು ರಚಿಸಿ ಚಂದ್ರಿಕಾಚಾರ್ಯರೆಂದೇ ಪ್ರಖ್ಯಾತರಾದರು. ಇವರ ಕಾಲದಲ್ಲಿ ಮಧ್ವಮತ ಪ್ರಸಾರವೂ ಹರಿದಾಸರುದೀಕ್ಷೆ ಪಡೆದು ದಾಸಕೂಟಕ್ಕೆ ನಾಂದಿಯಾಯಿತು. ದಾಸಕೂಟದ ಮೇಲ್ವಿಚಾರಕರಾಗಿ ಹರಿದಾಸ ಪಂಥಕ್ಕೆ ಒಂದು ನಿರ್ದಿಷ್ಟಸ್ವರೂಪವನ್ನು ತಂದು ಕೊಟ್ಟರು. ಶಾಸ್ತ್ರೀಯ ಸಂಗೀತಕ್ಕೆ ಇವರ ಕೊಡುಗೆಯನ್ನು ''ಸಂಗೀತ ವಿದ್ಯಾ ಸಂಪ್ರದಾಯ ಪ್ರವಾರ್ತಕ'' ರೆಂದೇ ತುಳಜಾಜಿ ತಮ್ಮ

'ಸಂಗೀತ ಸಾರಾಮೃತ' ದಲ್ಲಿ ಸ್ಮರಿಸಿದ್ದಾರೆ. ಇವರು ಕೀರ್ತನೆಗಳನ್ನು ಕೃಷ್ಣ, ಶ್ರೀಕೃಷ್ಣ, ಸಿರಿಕೃಷ್ಣ, ಮುದ್ದುಕೃಷ್ಣ ಎಂಬ ಅಂಕಿತದಲ್ಲಿ ರಚಿಸಿರುವುದರ ಜೊತೆಗೆ ಗ್ರಂಥರಚನೆ, ಹರಿದಾಸ ಸಾಹಿತ್ಯವರ್ಧನೆ ಕರ್ನಾಟಕ ಸಂಗೀತ ಸಂಪ್ರದಾಯ ಪ್ರವರ್ತನೆಗೆ ಇವರ ಕೊಡುಗೆ ಅಪಾರ. ಆರು ಮಂದಿ ವಿಜಯನಗರ ಸಾಮ್ರಾಟರಿಗೇ ಗುರುಗಳಾಗಿದ್ದರೆಂದಮೇಲೆ ಇವರ ಬಗ್ಗೆ ವಿವರಣೆ ಬೇಕಿಲ್ಲ.

## ವಾದಿರಾಜರು

ಕ್ರಿ.ಶ.ಸು. ೧೪೮೦ – ೧೬೦೦

**ಕುಂ**ದಾಪುರ ತಾಲ್ಲೂಕಿನ ಕುಂಭಾಸಿಯ ಸಮೀಪ ಹೂವಿನ ಕೆರೆ ವಾದಿರಾಜರ ಜನ್ಮಸ್ಥಳ. ರಾಮಾಚಾರ್ಯ ಮತ್ತು ಸರಸ್ವತಿದೇವಿ ವಾದಿರಾಜರ ತಂದೆ ತಾಯಿಗಳು. ವಾದಿರಾಜರ ವಿದ್ಯಾ ಗುರುಗಳು ವಾಗೀಶ ತೀರ್ಥರಾದರೂ ಅವರು ಕೆಲಕಾಲ ವಿದ್ಯಾನಿಧಿ ತೀರ್ಥರಲ್ಲಿಯೂ ಶಿಷ್ಯವೃತ್ತಿಯನ್ನೂ ಹೊಂದಿದ್ದರು.

ಇವರ ಪೂರ್ವಾಶ್ರಮದ ಹೆಸರು ವರಾಹ. ಬಾಲಕ ವರಾಹನಿಗೆ ಉಪನಯನ ಮಾಡಿದ ತಂದೆ ತಾಯಿಗಳು ವಾಗೀಶತೀರ್ಥರ ಬಳಿ ಶಿಷ್ಯವೃತ್ತಿಗಾಗಿ ಕಳುಹಿಸಿದರು. ದೀಕ್ಷಾಸ್ವೀಕಾರದ ಬಳಿಕ ಪರ್ಯಟನ ಕೈಗೊಂಡು ಹಲವಾರು ಕ್ಷೇತ್ರಗಳನ್ನು ಸಂದರ್ಶಿಸಿ, ಕ್ಷೇತ್ರ ಮಹಿಮೆಯನ್ನು ವರ್ಣಿಸಿದ್ದಾರೆ. ಶಾಸ್ತ್ರಗಳಲ್ಲಿ ಪರಿಶ್ರಮವಿರುವಂತೆ ಸಂಸ್ಕೃತ, ತೆಲಗು, ಕನ್ನಡ ಭಾಷೆಯಲ್ಲೂ ಅಪಾರ ಪಾಂಡಿತ್ಯ ಪಡೆದಿದ್ದರು.

ಶ್ರೀವಾದಿರಾಜರು 'ಹಯವದನ' ಅಂಕಿತದಲ್ಲಿ ನೂರಾರು ಕೃತಿಗಳನ್ನು ರಚಿಸಿರುವುದಲ್ಲದೆ ಸಂಸ್ಕೃತದಲ್ಲಿ ಸುಮಾರು ಎಪ್ಪತ್ತುಗ್ರಂಥಗಳನ್ನು ರಚಿಸಿದ್ದಾರೆ. ಅವುಗಳಲ್ಲಿ 'ಯುಕ್ತಿ ಮಲ್ಲಿಕಾ' ಅತ್ಯುತ್ತಮ ಗ್ರಂಥವೆನಿಸಿದೆ.

ಕನ್ನಡ ಹರಿದಾಸ ಸಾಹಿತ್ಯದ ಆದ್ಯ ಪ್ರವರ್ತಕರಾದ ಶ್ರೀಪಾದರಾಜರು, ಸಂಸ್ಕೃತದ ಭ್ರಮರ ಗೀತವನ್ನಾಧರಿಸಿ ದೀರ್ಘವಾದ ಕೀರ್ತನೆಯನ್ನು ರಚಿಸಿದ್ದಾರೆ. ಶ್ರೀವಾದಿರಾಜರು ಎಲ್ಲರೂ ತಿಳಿಯಲು 'ಭ್ರಮರ ಗೀತ' ವೆಂಬ ಅಭಿನವ ನಾಟಕ ಚರಿತ್ರವನ್ನು ರಚಿಸಿ ಕೊಟ್ಟಿದ್ದಾರೆ.

ಶ್ರೀವಾದಿರಾಜರು ತಮ್ಮ ಕೊನೆಗಾಲವನ್ನು ಸೋದೆಯಲ್ಲೇ ಕಳೆದರು. ಶ್ರೀವೇಣುಗೋಪಾಲ ದೇವರು, ಲಕ್ಷ್ಮೀದೇವಿ ಮತ್ತು ತ್ರಿವಿಕ್ರಮ ದೇವರುಗಳ ಮೂರ್ತಿಯನ್ನು ಪ್ರತಿಷ್ಠಾಪಿಸಿದರು ಹಲವಾರು ಶಿಷ್ಯರನ್ನು ತಯಾರು ಮಾಡಿ ಸುಮಾರು ೧೬೦೦ರಲ್ಲಿ ವೃಂದಾವನಸ್ಥರಾದರು.

# ಪುರಂದರದಾಸರು

ಕ್ರಿ.ಶ.ಸು.೧೪೮೪–೧೫೬೪

***ದಾಸರೆಂದರೆ ಪುರಂದರ ದಾಸರಯ್ಯ ।***

***ವಾಸುದೇವ ಕೃಷ್ಣನ್ನ ಸೂಸಿ ಪೂಜಿಸುವಾ ॥***

ಎಂದು, ಗುರುವರ್ಯರೂ, ಸ್ವರೂಪೋದ್ಧಾರಕರೂ ಆದ ಶ್ರೀ ವ್ಯಾಸರಾಯ ಸ್ವಾಮಿಗಳು ತಮ್ಮ ಶಿಷ್ಯನಾಗಿದ್ದ ಪುರಂದರದಾಸರ ಗುಣಕಥನ ಮಾಡಿರುವುದು ವಿಶಿಷ್ಟ ಸಂಗತಿಯಾಗಿದೆ.

ಹಲವಾರು ದಾಸರುಗಳು ಭಾಗವತಧರ್ಮದ ಪುನರುದ್ಧಾರ ಮಾಡಿದ್ದರೂ ಪುರಂದರ ದಾಸರನ್ನು ಸ್ಮರಿಸದಿದ್ದರೆ, ಪುರಂದರದಾಸರ ದೇವರ ನಾಮಗಳನ್ನು ಹಾಡದಿದ್ದರೆ ಅದು ಪೂರ್ಣವಾಗುವುದಿಲ್ಲ. ಭಾಗವತ ಧರ್ಮೋಪದೇಶಕ್ಕೆ ವ್ಯವಸ್ಥಿತವಾದ ಮಾರ್ಗವನ್ನು ತೋರಿಸಿಕೊಟ್ಟವರು ಪುರಂದರ ದಾಸರು.

ಕ್ರಿ.ಶ.೧೪೦೬ರ ಸುಮಾರಿನಲ್ಲಿ ಜನಿಸಿದ ಪುರಂದರದಾಸರ ಮೊದಲ ಹೆಸರು ಶ್ರೀನಿವಾಸನೆಂದು. ವಯೋಧರ್ಮಪನ್ನನುಸರಿಸಿ ಚೌಲೋಪನಯನಗಳಾದಂತೆ ಕನ್ನಡ, ಸಂಸ್ಕೃತ ಭಾಷೆಯ ವಿದ್ಯಾಭ್ಯಾಸವೂ ಆಯಿತು. ಈ ಶ್ರೀನಿವಾಸ ನಾಯಕರಲ್ಲಿ ಔದಾರ್ಯವಿದ್ದರೂ ವಿನಯಾದಿಗುಣಗಳಿಗೇನು ಕಡಿಮೆಯಿರಲಿಲ್ಲ. ದೈವದ್ವೇಷವಿರದಿದ್ದರೂ ದೈವಭಕ್ತಿ ಇರಲಿಲ್ಲ. ದ್ರವ್ಯಲೋಭವೆಂಬುದು ಅವರ ಹುಟ್ಟುಗುಣವಾಗಿತ್ತು. ಯಾಚಕರನ್ನು ಕಂಡರೆ ಆವರಿಗಾಗುತ್ತಿರಲಿಲ್ಲ. ಹೆಂಡತಿಯಾದರೂ ಅಷ್ಟೇ ಅಳೆದು ಕೊಟ್ಟಷ್ಟು ಪದಾರ್ಥಗಳನ್ನು ಮಾತ್ರ ಬಳಸಬೇಕಾಗಿತ್ತು. ಆದರೆ ಈ ಹೆಂಡತಿ ಸರಸ್ವತಿಬಾಯಿಯೋ ನಾಯಕರ ಎಲ್ಲಾ ಗುಣಗಳಿಗೂ ವಿರುದ್ಧ ಗುಣವುಳ್ಳವಳು. ನಿರಂತರ ಪುರಾಣ ಶ್ರವಣಾದಿಗಳಿಂದ ಆಸ್ತಿಕ ಶಿರೋಮಣಿ ಆಗಿದ್ದಳು.

ವೃದ್ಧ ಬ್ರಾಹ್ಮಣವೇಷಧಾರಿಯಾಗಿ ಬಂದ ಭಗವಂತನು ಶ್ರೀನಿವಾಸನಾಯಕರನ್ನು ಪರೀಕ್ಷೆಗೆ ಒಡ್ಡಿ ಕಡೆಗೆ, ಹೆಂಡತಿಯ ಬಾಯಿಂದ ''ಸರ್ವಸ್ವವನ್ನೂ ತ್ಯಾಗ ಮಾಡಿ, ಹರಿದಾಸನಾಗಿ ಬಂದರೆ ದರ್ಶನ ಕೊಡುವೆನು'' ಎಂಬುದಾಗಿ ನುಡಿದಿರುವನು ಎಂದು ಸರಸ್ವತಿಬಾಯಿ ಹೇಳಿದಾಗ, ಭಗವಂತನ ಆಜ್ಞಾನುಸಾರ ಸರ್ವಸ್ವವನ್ನೂ ದಾನ ಮಾಡಿದ ಶ್ರೀನಿವಾಸನಾಯಕರು ಹರಿಕೀರ್ತನೆ ಮಾಡುತ್ತಾ ಸಕಲಾರ್ಥಸಿದ್ಧಿಯನ್ನು ಪಡೆದರು.

ಹೀಗೆ ಪುರಂದರ ದಾಸರು ಹರಿದಾಸವೃತ್ತಿಯನ್ನವಲಂಬಿಸಿದ ಮೇಲೆ ೧೫೬೫ರಲ್ಲಿ ತಮ್ಮ ಎಂಬತ್ತೈದನೆ ವಯಸ್ಸಿನಲ್ಲಿ ತೀರಿಕೊಳ್ಳುವವರೆವಿಗೂ 'ಪುರಂದರ ವಿಠಲ' ಎಂಬ ಅಂಕಿತದಲ್ಲಿ ಕನ್ನಡದಲ್ಲಿ ಎಡೆಬಿಡದೆ ಹಾಡುಗಳನ್ನು ತಾವೇ ರಚಿಸಿ ಹಾಡಿದ್ದಾರೆ.

## ಕನಕದಾಸರು

ಕ್ರಿ.ಶ.ಸು.೧೫೦೮–೧೬೦೬

**ಕ**ನಕದಾಸರು ಹುಟ್ಟಿದ ಸ್ಥಳದಬಗ್ಗೆ, ಕುಲದ ಬಗ್ಗೆ ಜಿಜ್ಞಾಸೆಗಳಿದ್ದರೂ ಸ್ಥೂಲವಾಗಿ ಅವರದು ಧಾರವಾಡ ಜಿಲ್ಲೆಯ ಬಾಡ ಜನ್ಮಸ್ಥಳವಾದರೆ ವಿಹಾರ ಸ್ಥಳ ವಿಜಯನಗರ ಮತ್ತು ವಾಸಸ್ಥಳ ಕಾಗಿನೆಲೆ ಎಂದೇ ಎಲ್ಲರೂ ಪರಿಗಣಿಸುತ್ತಾರೆ. ವಿಜಯನಗರ ಸಾಮ್ರಾಜ್ಯದ ಗಡಿನಾಡ ಕೋಟೆಯಾದ ಬಾಡಾದಲ್ಲೇ ಶಿಕ್ಷಣ ದೊರೆತಿದೆ. ನಂತರ ಇದೇ ವಿಜಯ ನಗರದ ಸಾಮಾಜ್ರ್ಯಕ್ಕೆ ರಕ್ಷೆಯಾಗಿ, ಅದರ ಅಭ್ಯುದಯಕ್ಕೆ ಮೀಟುಗೋಲಾಗಿ ತಮ್ಮೆಲ್ಲ ಶಕ್ತಿಯನ್ನು ವ್ಯಯಿಸುತ್ತಾರೆ. ಕೃಷ್ಣ ದೇವರಾಯನ ಕಾಲದಲ್ಲಿ ವ್ಯಾಸರಾಯರ ಕೃಪೆಗೆ ಪಾತ್ರರಾದ ನಂತರ ಮನಸ್ಸು ಸಾಹಿತ್ಯ ಮತ್ತು ಆಧ್ಯಾತ್ಮ ಸಾಧನೆಯಕಡೆ ವಾಲುತ್ತದೆ. ಯುಕ್ತಿ ಶ್ರೀ ಕೈ ಬೀಸಿ ಕರೆದಾಗ ವೀರ ಶ್ರೀಯ ಕರೆಗೆ ಸಹಜವಾಗಿಯೇ ಉಪೇಕ್ಷೆ ಬೆಳೆಯುತ್ತದೆ. ಮುಸ್ಲಿಮ್ ದಾಳಿಯಿಂದ ರಕ್ಷಿಸಲು ಬಾಡದಲ್ಲಿದ್ದ ಆದಿಕೇಶವ ವಿಗ್ರಹವನ್ನು ಕಾಗಿನೆಲೆಗೆ ಸಾಗಿಸಿ ವ್ಯಾಸರಾಯರ ಸಮ್ಮುಖದಲ್ಲಿ ಪ್ರತಿಷ್ಠಾಪಿಸುತ್ತಾರೆ.

ಇವರು ರಚಿಸಿರುವ ಕೃತಿಗಳು ಮೋಹನ ತರಂಗಿಣಿ, ನಳ ಚರಿತ್ರೆ, ರಾಮಧಾನ್ಯ ಚರಿತ್ರೆ, ಹರಿಭಕ್ತಸಾರ ಮತ್ತು ಮುಂಡಿಗೆಗಳು ಇವರು ಪರಿವ್ರಾಜಕನಾಗಿ ತಿರುಪತಿ, ಮುಳಬಾಗಿಲು, ಮಳೂರು, ಶ್ರೀರಂಗ ಪಟ್ಟಣ, ಸೋಸಲೆ, ಮೇಲುಕೋಟೆ, ಬೇಲೂರು, ಉಡುಪಿ ಮುಂತಾದ ಪವಿತ್ರ ಕ್ಷೇತ್ರಗಳನ್ನು ಸಂಚರಿಸುತ್ತಾ, ತಮ್ಮ ಪ್ರಭಾವಕ್ಕೆ ಬಿದ್ದ ಜನರಿಗೆ ಉಪದೇಶಮಾಡುತ್ತಾ ದೇಶ ಪರ್ಯಟನ ಮಾಡುತ್ತಾ ಹಲವಾರು ಕೀರ್ತನೆಗಳನ್ನು **ಆದಿಕೇಶವ** ಅಂಕಿತದಲ್ಲಿ ರಚಿಸಿದ್ದಾರೆ.

## ಮಹಿಪತಿದಾಸರು

ಕ್ರಿ.ಶ.ಸು.೧೬೪೦–೧೭೧೦

**ಮ**ಹಿಪತಿದಾಸರು ಹುಟ್ಟಿದ್ದು ಬಾಗಲಕೋಟೆಯಲ್ಲಿ. ತಂದೆ ಕೋನೇರಿ ರಾಯರು. ಮಹಿಪತಿರಾಯರ ಅಣ್ಣನ ಹೆಸರು ಗುರುರಾಯ. ಉಪನಯನದ ವಯಸ್ಸಿಗೆ ಬಂದ ಮಗನಿಗೆ ಬ್ರಹ್ಮೋಪದೇಶ ಮಾಡಿಸಿ ವಿದ್ಯಾಭ್ಯಾಸವನ್ನೂ ಪ್ರಾರಂಭಿಸಿದರು. ಬೇರೆ ಬೇರೆ ವಿದ್ವಾಂಸರಿಂದ

ಹಲವಾರು ಶಾಸ್ತ್ರಗಳನ್ನು ಕಲಿತು ದೊಡ್ಡವಿದ್ವಾಂಸರೆನಿಸಿದರು. ಆಗಿನ ಕಾಲಕ್ಕೆ ತಕ್ಕಂತೆ ಸಂಸ್ಕೃತ, ಕನ್ನಡ, ಹಿಂದಿ, ಮರಾಠಿ, ಉರ್ದು ಮತ್ತು ಪರ್ಶಿಯನ್ ಭಾಷೆಗಳಲ್ಲಿಯೂ ಪ್ರಾವೀಣ್ಯತೆ ಪಡೆದರು. ಜೊತೆಗೆ ಪುರಾಣ-ಪ್ರವಚನ ಮಾಡುವುದೆಂದರೆ ರಾಯರಿಗೆ ಬಹು ಇಷ್ಟವಾದ ಕೆಲಸವಾಗಿದ್ದು ಇವರ ಪ್ರವಚನ ಕೇಳಲು ಹಲವಾರು ಜನ ಸೇರುತ್ತಿದ್ದರು.

ಇವರ ತಂದೆ ಕೋನೇರಿ ರಾಯರು ವಿದ್ಯಾಪಾರಂಗತರಾಗಿದ್ದರಿಂದ ಆದಿಲ್ ಶಹನು ಕೂಡ ಮನ್ನಣೆ ಕೊಡುತ್ತಿದ್ದನು. ಒಮ್ಮೆ ಆದಿಲ್‌ಶಹನ ಮಂತ್ರಿ ಖವಾಸ್ ಖಾನನು ಅರಮನೆಗೆ ಹೋಗುತ್ತಿದ್ದಾಗ ನೆರೆದಿದ್ದ ಜನರನ್ನುದ್ದೇಶಿಸಿ ಏನೆಂದು ವಿಚಾರಿಸಲು, ಮಹಿಪತಿರಾಯರ ಪ್ರವಚನವೆನ್ನಲು, ತಾನು ನಿಂತು ಕೇಳಿ, ಸಂತೋಷಪಟ್ಟು ತಮ್ಮ ಮನೆಯಲ್ಲೂ ಪ್ರವಚನ ಮಾಡಬೇಕೆಂದು ಬಿನ್ನವಿಸಿಕೊಂಡಾಗ, ಉರ್ದು ಮತ್ತು ಪಾರ್ಸಿ ಭಾಷೆಯಲ್ಲಿ ಖಾನರ ಮನೆಯಲ್ಲಿಯೂ ಪ್ರವಚನ ಮಾಡಿದರು.

ಇದರಿಂದ ಖಾನರಿಗೆ ಮಹಿಪತಿರಾಯರೆಂದರೆ ಎಲ್ಲಿಲ್ಲದ ಗೌರವ ಭಾವನೆ ಬೆಳೆಯಿತು. ಒಮ್ಮೆ ಸೂಫಿ ಪಂಗಡದ ಶಹನುಂಗನೆಂಬುವನಿಂದ ಜ್ಞಾನೋದಯವಾಗಿ ಶಹನುಂಗನ ಆದೇಶದಂತೆ ಭಾಸ್ಕರ ಸ್ವಾಮಿಗಳ ಬಳಿ ಶಿಷ್ಯರಾಗಿ **ಮಹಿಪತಿ** ಎಂಬ ಅಂಕಿತದಿಂದ ಹಲವಾರು ಕೀರ್ತನೆಗಳನ್ನು ರಚಿಸಿದ್ದಾರೆ.

ಇವರಿಗೆ ದೇವರಾಯ ಮತ್ತು ಕೃಷ್ಣ ರಾಯರೆಂಬ ಇಬ್ಬರು ಮಕ್ಕಳು ಜನಿಸಿದರು. ದೇವರಾಯರು ಬೀದರಶಾಹಿ ಸೈನ್ಯದಲ್ಲಿ ಸೇರಿ ಸೈನ್ಯಾಧಿಕಾರಿಯಾದರೆ ಕೃಷ್ಣರಾಯರು ತಂದೆಯಂತೆಯೇ ಆಧ್ಯಾತ್ಮಿಕದ ಕಡೆ ಒಲಿದು ತಂದೆ ಮಹಿಪತಿ, ಮಹಿಪತಿಸುತ, ಮಹಿಪತಿ ತನಯ ಮುಂತಾದ ಅಂಕಿತದಲ್ಲಿ ನಾವಿರಾರು ಕೀರ್ತನೆಗಳನ್ನು ರಚಿಸಿದರು. ಕನಕ-ಪುರಂದರರ ನಂತರ ವಿಜಯದಾಸರವರೆಗೆ ತಂದೆಮಕ್ಕಳಿಬ್ಬರು ಹರಿದಾಸ ಸಾಹಿತ್ಯವನ್ನು ಜೀವಂತಗೊಳಿಸಿದ್ದ ಕೀರ್ತಿಗೆ ಪಾತ್ರರಾಗಿದ್ದಾರೆ.

## ಪ್ರಸನ್ನ ವೆಂಕಟದಾಸರು

**ಕ್ರಿ.ಶ.ಸು.೧೬೮೦ – ೧೭೫೨**

ವಿಜಯದಾಸರ ಸಮಕಾಲೀನರಾದ ಪ್ರಸನ್ನ ವೆಂಕಟದಾಸರು ಹರಿದಾಸರಲ್ಲಿ ಪ್ರಮುಖರಾದವರಲ್ಲೊಬ್ಬರು. ಇವರು ಕ್ರಿ.ಶ. ಸುಮಾರು ೧೬೮೦–೧೭೫೨ರಲ್ಲಿ ಇದ್ದಿರಬಹುದು ಎಂದು ಭಾವಿಸಲಾಗಿದೆ. ಇವರ ತಂದೆ ಕಾಖಂಡಕಿ ನರಸಪ್ಪಯ್ಯನವರು ಮತ್ತು ತಾಯಿ ಲಕ್ಷ್ಮೀಬಾಯಿ. ವೆಂಕಟೇಶ ಎನ್ನುವುದು ಇವರ ಪೂರ್ವಾಶ್ರಮದ ಹೆಸರು. ಇವರಿಗೆಬಾಲ್ಯದಲ್ಲಿ ವಿದ್ಯಾಭ್ಯಾಸ ಸರಿಯಾಗಿ ದೊರೆಯದಿದ್ದುದರಿಂದ ಹೊರಗಿನ ಕೆಲಸಗಳ ಜೊತೆಗೆ ಅತ್ತಿಗೆಗೂ ಮನೆ

ಕೆಲಸದಲ್ಲಿ ಸಹಾಯಕರಾಗಿದ್ದರು. ಅಣ್ಣ ಸುತ್ತಮುತ್ತಲಿನ ಹಳ್ಳಿಗಳಲ್ಲೆಲ್ಲಾ ಪುರಾಣ, ಪುಣ್ಯಕಥೆ ಹೇಳುತ್ತಾ ಬಹಳ ಜನಪ್ರಿಯ ವ್ಯಕ್ತಿಯಾಗಿದ್ದರು.

ಅತ್ತಿಗೆಯ ನಿಷ್ಠೂರ ನುಡಿಗಳಿಗೆ ನೊಂದ ವೆಂಕಟೇಶನು ತಿರುಪತಿಗೆ ಹೋಗುತ್ತಾನೆ. ಅಲ್ಲಿ ಹರಿದಾಸರ ಪ್ರೇರಣೆ ಮತ್ತು ಶ್ರೀನಿವಾಸನ ಅನುಗ್ರಹದಿಂದ ಹರಿದಾಸರಾಗಿ ಮಾರ್ಪಾಡಾಗುತ್ತಾರೆ. ನಂತರ ಗುರುಗಳ ಶೋಧನೆಗೆ ತೊಡಗಿ ಮುದ್ಗಲ ಜನಾರ್ಧನಾಚಾರ್ಯ ಎಂಬುವರ ಶಿಷ್ಯರಾಗಿ ಸಂಸ್ಕೃತ, ಭಾಗವತ, ಪುರಾಣ, ದ್ವೈತ ಸಿದ್ಧಾಂತಗಳಲ್ಲಿ ಪಾಂಡಿತ್ಯಗಳಿಸಿ ಬಾಗಲಕೋಟೆಗೆ ಮರಳುತ್ತಾರೆ.

ಹರಿಭಕ್ತರೂ, ಉಭಯ ಭಾಷಾ ಪಂಡಿತರು ಆಗಿದ್ದ ಪ್ರಸನ್ನ ವೆಂಕಟದಾಸರು ಪ್ರಸನ್ವೆಂಕಟ ಎಂಬ ಅಂಕಿತದಲ್ಲಿ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಕೃಷ್ಣನ ಜನನದಿಂದ ಮೊದಲಾಗಿ ಗೋಕುಲದಲ್ಲಿ ಬೆಳೆದದ್ದು, ಕೃಷ್ಣನನ್ನು ಕೊಲ್ಲಲು ಕಂಸನು ಮಾಡುವ ವ್ಯರ್ಥ ಪ್ರಯತ್ನವು ಕಂಸ ವಧೆ–ಕೃಷ್ಣನ ಮಾತಿನಂತೆ ಅಕ್ರೂರನು ಹಸ್ತಿನಾವತಿಗೆ ಹೋಗಿ ಪಾಂಡವರ ಸ್ಥಿತಿಗತಿಗಳನ್ನು ವಿಚಾರಿಸಿಕೊಂಡು ಬರುವವರೆಗೆ, ಇವರು ರಚಿಸಿರುವ ಭಾಗವತದಲ್ಲಿ 'ಶ್ರೀಪ್ರಸನ್ನ ವೆಂಕಟರ ಭಾಗವತ' ಎಂದೇ ಪ್ರಸಿದ್ಧಿಗೊಂಡಿದೆ.

## ವಿಜಯದಾಸರು

ಕ್ರಿ.ಶ. ಸು. ೧೬೮೨ – ೧೭೫೫

ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನ 'ಚೀಕಲಪರಿ' ಎಂಬ ಗ್ರಾಮದಲ್ಲಿ ಶ್ರೀನಿವಾಸಪ್ಪ ಮತ್ತು ಕೂಸಮ್ಮನೆಂಬ ದಂಪತಿಗಳಿಗೆ ಹುಟ್ಟಿದ ಮಗುವು ದಾಸಪ್ಪ.

ತಂದೆತಾಯಿಗಳು ಕಡು ಬಡತನದಲ್ಲಿ ಬೇಯುತಿದ್ದುದರಿಂದ ದಾಸಪ್ಪನಿಗೆ ಸಕಾಲದಲ್ಲಿ ವಿದ್ಯಾಭ್ಯಾಸವೂ ದೊರೆಯಲ್ಲಿಲ್ಲ. ಜೊತೆಗೆ ದಿನವೂ ಹೊಟ್ಟೆ ತುಂಬಿಕೊಳ್ಳಲು ಆಗದಿದ್ದುದರಿಂದ ಅಲ್ಲಿ ಇಲ್ಲಿ ಅಲೆದಾಡಬೇಕಾಯಿತು.

ಹೀಗೆ ಒಮ್ಮೆ ಆದವಾನಿಯ ತಹಸೀಲ್ದಾರರು ತಮ್ಮ ಮಗನಿಗೆ ಮದುವೆ ಮಾಡುತ್ತಾರೆಂದು ತಿಳಿದ ದಾಸಪ್ಪನೂ, ನಾಲ್ಕಾರು ದಿವಸ ಮೃಷ್ಟಾನ್ನ ಭೋಜನ ದೊರೆತೀತೆಂದು ಅಲ್ಲಿ ಹೋದರೆ, ಕಟ್ಟುಮಸ್ತಾಗಿದ್ದ ಇವನ ಶರೀರ ನೋಡಿದ ತಹಸೀಲ್ದಾರರು ಊಟದಿಂದೆಬ್ಬಿಸಿ ಗಂಧ ತೇಯಲು ಕಳುಹಿಸಿದರಂತೆ. ಹೀಗೆ ದುಡಿದರೂ ಹೊಟ್ಟೆಗೆ ಅನ್ನದೊರೆಯದೆ ತಮ್ಮ ಮೇಲೆ ತಮಗೇ ಜಿಗುಪ್ಸೆ ಹುಟ್ಟಿ ಕಾಶಿಯ ಕಡೆ ಹೊರಡುತ್ತಾರೆ. ಹೊಟ್ಟೆಗಾಗಿ ಅಹನ್ಯಹನಿ ಕಾಲಾಕ್ಷೇಪ ಮಾಡುತ್ತಾ ಧ್ಯಾನ ಮಾಡುತ್ತಿದ್ದಾಗ ಸ್ವಪ್ನದಲ್ಲಿ ಪುರಂದರರ ರೂಪದಿಂದ ಬಂದ ಶ್ರೀಹರಿಯು ವ್ಯಾಸ ಕಾಶಿಗೆ ಕರೆದೊಯ್ದು ವೇದವ್ಯಾಸರ ದರ್ಶನಮಾಡಿಸಿದರಂತೆ. ಸ್ವಪ್ನದಲ್ಲೇ ದಾಸ ರೂಪಿ ಭಗವಂತನಿಗೂ,

ವೇದವ್ಯಾಸರಿಗೂ ನಮಸ್ಕರಿಸಿ ಎದ್ದು ಕುಳಿತರಂತೆ.

ಈ ಘಟನೆ ನಡೆದ ನಂತರ ದಾಸಪ್ಪನ ದೃಷ್ಟಿಯೇ ಬದಲಾಯಿತು. ಆಡಿದ ಮಾತು ಹಾಡಾಯಿತು. ಜಪಿಸುತ್ತಾ ಕುಳಿತಿದ್ದರೂ ಜನ ಹಿಂಡು ಹಿಂಡು ಬಂದು ವಂದಿಸಿ ಕಾಣಿಕೆಯನ್ನು ಅರ್ಪಿಸುತ್ತಿದ್ದರು.

ಹೀಗೆ ದಾಸಪ್ಪನು ವಿಜಯದಾಸರಾಗಿ ಭಾಗವತಧರ್ಮ ಪ್ರಚಾರ ಕೈಗೊಂಡು ಮೋಹನದಾಸರಾದಿಯಾಗಿ ಹಲವಾರು ಶಿಷ್ಯರೊಡನೆ ಉಪದೇಶ ಮಾಡುತ್ತಾ ದೇಶಪರ್ಯಟನೆ ಮಾಡಿದರು.

ಪುರಂದರದಾಸರ ನಂತರ ಅತಿ ಹೆಚ್ಚು ಸುಳಾದಿಗಳನ್ನು ರಚಿಸಿದವರೆಂದರೆ ವಿಜಯದಾಸರೆ. ಈ ಸುಳಾದಿಗಳು ಅರ್ಥವತ್ತಾಗಿ, ನೀತಿಬೋಧಕವಾಗಿ, ತತ್ವಪುಂಜವಾಗಿವೆ.

## ಕಲ್ಲೂರು ಸುಬ್ಬಣ್ಣಾಚಾರ್ಯರು

ಕ್ರಿ.ಶ.ಸು.೧೭೭೦–೧೭೭೫

ಕಲ್ಲೂರು ಎಂಬುದು ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿಗೆ ಸೇರಿದ ಪ್ರಸಿದ್ಧ ಸ್ಥಳ. ಕುಲಕರ್ಣಿ ಮತ್ತು ಸತ್ಕುಲ ಪ್ರಸೂತಳಾದ, ಪತಿಭಕ್ತಿ ಪಾರಾಯಣಳಾದ ಪತ್ನಿಗೆ ಜನಿಸಿದ ಮಗುವಿಗೆ ಸುಬ್ಬಣ್ಣ ಎಂದು ನಾಮಕರಣ ಮಾಡಿದರು.

ಬೆಳೆಯುತ್ತಿದ್ದ ಮಗುವಿಗೆ ಕಾಲ ಕಾಲಕ್ಕೆ ಚೌಲ, ಅಕ್ಷರಾಭ್ಯಾಸ, ಉಪನಯನಾದಿಗಳು ನಡೆದುವು. ವಿದ್ಯಾಭ್ಯಾಸವೂ ಸಾಂಗವಾಗಿ ನಡೆದು ಸುಬ್ಬಣ್ಣನು ಮಧ್ವಶಾಸ್ತ್ರ ಪಾರಾಂಗತ ಮತ್ತು ಶ್ರೀಮನ್ನ್ಯಾಯಸುಧಾ ಗ್ರಂಥದಲ್ಲಿಯೂ ಅದ್ವಿತೀಯ ಪಂಡಿತನೆನಿಸಿದನು.

ಮುಂದೆ ವಿಜಯದಾಸರ ಆಜ್ಞಾನುಸಾರ ಪಂಗನಾಮ ತಿಮ್ಮಣ್ಣಯ್ಯನವರ ಪಾದದಲ್ಲಿ ಶಿರವನ್ನಿಟ್ಟು ಸಾಷ್ಟಾಂಗ ನಮಸ್ಕಾರ ಮಾಡಿದಾಗ ಅವರಿಗೂ ಆಶ್ಚರ್ಯವಾಯಿತು. ಜ್ಞಾನಿ, ಮಧ್ವಶಾಸ್ತ್ರ ಪಾರಂಗತ, ಸುಧಾ ಪ್ರವಚನಕಾರ, ಒಂದೆರಡುಸಾರೆ ಸುಧಾ ಮಂಗಳಕ್ಕೂ ಹೋಗಿ ಇವರ ಪ್ರವಚನವನ್ನು ಕೇಳಿದ್ದಾರೆ. ಇಷ್ಟೆಲ್ಲಾ ಇರುವಾಗ ತಮ್ಮಲ್ಲಿ ಶರಣಾಗತಿಗೆ ಬಂದ ಕಾರಣವೇನೆಂದು ಯೋಚಿಸುತ್ತಿರುವಾಗ 'ವಿಜಯದಾಸ'ರೆ ಕಳುಹಿಸಿದ್ದಾರೆ ಎಂದಾಗ ತಮ್ಮ ಜ್ಞಾನದೃಷ್ಟಿಯಿಂದ ಎಲ್ಲವನ್ನು ಕಂಡುಕೊಂಡರು.

ಮಾರನೆಯ ದಿನ ತಿಮ್ಮಣ್ಣಯ್ಯನವರು (ವೇಣುಗೋಪಾಲ ದಾಸರು) ತಮ್ಮ ನಿತ್ಯಾಹ್ನಿಕಗಳನ್ನು ತೀರಿಸಿ, ದೇವತಾರ್ಚನೆ, ಮಹಾನೈವೇದ್ಯ, ಮಹಾಮಂಗಳಾರತಿ ಮುಗಿಸಿ ಸುಬ್ಬಣ್ಣನನ್ನು ಹತ್ತಿರ ಕರೆದು ತಮ್ಮ ಅಮೃತ ಹಸ್ತವನ್ನು ಆತನ ಶಿರಸ್ಸಿನಲ್ಲಿಟ್ಟು ವಿಜಯದಾಸರನ್ನು

ಸಸದು ವ್ಯಾಸವಿಠಲ ಎಂಬ ಅಂಕಿತವನ್ನು ನೀಡಿದರು. ಇವರು ವ್ಯಾಸವಿಠಲ ಅಂಕಿತದಲ್ಲಿ ಕೀರ್ತನೆಗಳನ್ನು ರಚಿಸಿದ್ದಾರೆ.

## ಶ್ರೀ ಗೋಪಾಲದಾಸರು

ಕ್ರಿ.ಶ.ಸು.೧೭೨೨–೧೭೬೨

ಶ್ರೀ ಗೋಪಾಲದಾಸರು ಕ್ರಿ.ಶ. ೧೭೨೧ರಲ್ಲಿ ರಾಯಚೂರು ಜಿಲ್ಲೆಯ, ದೇವದುರ್ಗಾ ತಾಲ್ಲೂಕಿನ ಮಸರುಕಲ್ಲು ಎಂಬ ಹಳ್ಳಿಯಲ್ಲಿ ಜನಿಸಿದರು. ತಂದೆ ಮುರಾರಿ, ತಾಯಿ ವೆಂಕಮ್ಮ. ದಾಸರ ಪೂರ್ವಾಶ್ರಮದ ಹೆಸರು ಭಾಗಣ್ಣ. ತಂದೆಯ ಕಾಲಾನಂತರ ಆಸ್ತಿ ಎಲ್ಲವೂ ಕರಗುತ್ತಾ ಬಂದು ಜೀವನ ಸಾಗಿಸುವುದೇ ದುಸ್ತರವೆನಿಸಿ, ತಾಯಿ ತನ್ನ ನಾಲ್ಕು ಮಕ್ಕಳನ್ನು ಕರೆದುಕೊಂಡು ಉತ್ತನೂರಿಗೆ ಬಂದಳು.

ತಾಯಿ ವೆಂಕಮ್ಮ ಆ ಗ್ರಾಮದ ಉಪಾಧ್ಯಾಯರ ಬಳಿ ನಾಲ್ವರು ಮಕ್ಕಳಿಗೂ ವಿದ್ಯಾಭ್ಯಾಸಕ್ಕೆ ಏರ್ಪಾಡು ಮಾಡಿದಳು. ಧರ್ಮೋಪನಯನದ ನಂತರ ಎರಡು ವರ್ಷ ಕಾಲ ಗಾಯತ್ರಿ ಉಪಾಸನೆ ಮಾಡಿದ ನಂತರ ತನಗೆ ದೊರೆತ ಅಲೌಕಿಕ ಶಕ್ತಿಯಿಂದ ಎಲ್ಲರಿಗೂ ಭವಿಷ್ಯ ಹೇಳತೊಡಗಿದಾಗ ಬಂದ ಆದಾಯದಿಂದ ಜೀವನವು ಸ್ವಲ್ಪ ಉತ್ತಮ ಸ್ಥಿತಿಗೆ ತಲುಪಿತು.

ಪುರಂದರದಾಸರ ಶಿಷ್ಯರಾಗಿದ್ದ ವಿಜಯದಾಸರಿಂದ ಅಂಕಿತ ಪಡೆದ ಗೋಪಾಲದಾಸರು **ಗೋಪಾಲವಿಠಲ** ಎಂಬ ಅಂಕಿತದಿಂದ ಹಲವಾರು ಕೀರ್ತನೆಗಳನ್ನು ರಚಿಸಿದರು. ಗೋಪಾಲದಾಸರು ಹಂಪೆ, ಕೊಲ್ಲಾಪುರ, ಅಹೋಬಲ, ಉಡುಪಿ, ಶ್ರೀಮುಷ್ಣ, ತಿರುಪತಿ, ಮಂತ್ರಾಲಯ ಮುಂತಾದ ಕ್ಷೇತ್ರಗಳನ್ನು ಸಂದರ್ಶಿಸಿ ಹಲವಾರು ಕೀರ್ತನೆಗಳನ್ನು ರಚಿಸಿದ್ದಾರೆ.

ಶ್ರೀ ಗೋಪಾಲದಾಸರು ಇತರೇ ಹರಿದಾಸರಂತೆ ಕೀರ್ತನೆ, ಸುಳಾದಿ, ಉಗಾಭೋಗ– ಈ ಪ್ರಕಾರಗಳಲ್ಲಿ ಹಾಡುಗಳನ್ನು ರಚಿಸಿ ತಮ್ಮ ಭಕ್ತಿ ಭಾವವನ್ನು ತೋರಿಸಿದ್ದಾರೆ. ಇದರ ಜೊತೆಗೆ ಮಧ್ವಮತದ ತತ್ವವನ್ನು ಪ್ರಚಾರಮಾಡಿದ್ದಾರೆ.

ಶ್ರೀ ಗೋಪಾಲದಾಸರ ಕೃತಿಗಳಲ್ಲಿ ಸಾಮಾಜಿಕ ಪ್ರಜ್ಞೆಗಿಂತ ತತ್ವ ಪ್ರಚಾರವೇ ಮುಖ್ಯವಾಗಿದೆ. ತಮ್ಮ ಜೀವನಾನುಭವದಿಂದ ಉಪದೇಶದ ಮಾತುಗಳನ್ನಾಡುತ್ತಾರೆ. ''ನಂಬಿ ನೀ ಕೆಡದಿರು ಇಹಲೋಕ ಸುಖವೆಂಬ ಕಂಬಳಿಯೊಳ ಬುತ್ತಿ; ಪರಗತಿ ಸಾಧನೆಗೆ ನಿಜಗತಿಯೊಂದೇ ಸಾಧನ; ಮನುಜ ಜನ್ಮ ಮಹಾ ಸುಕೃತ ಫಲ''ಮುಂತಾದ ಉಪದೇಶ ವಾಣಿಯನ್ನು ಕೀರ್ತನೆಗಳಲ್ಲಿ ಕಾಣಬಹುದು.

ಶ್ರೀ ಗೋಪಾಲದಾಸರು ಹೀಗೆ ಉಗಾಭೋಗ, ಸುಳಾದಿ, ಕೀರ್ತನೆ ಈ ಮೂರು ಪ್ರಕಾರಗಳಲ್ಲಿಯೂ ಕೃತಿ ರಚಿಸಿದ್ದಾರೆ.

## ಜಗನ್ನಾಥದಾಸರು

ಕ್ರಿ.ಶ.ಸು.೧೭೨೮-೧೮೦೯

**ಹ**ರಿಕಥಾಮೃತಸಾರವೆಂಬ ಮಧ್ವ ಶಾಸ್ತ್ರ ಗ್ರಂಥವನ್ನು ರಚಿಸಿರುವ ಜಗನ್ನಾಥದಾಸರು ಹುಟ್ಟಿದ್ದು ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನ ಬ್ಯಾಗವಟ್ಟಿದಲ್ಲಿ. ತಂದೆ ನರಸಿಂಹದಾಸರು ತಾಯಿ ಲಕ್ಷ್ಮೀಬಾಯಿ. ಇವರ ಲೌಕಿಕ ನಾಮ ಶ್ರೀನಿವಾಸಾಚಾರ್ಯ.

ಶ್ರೀನಿವಾಸನು ಬೆಳೆದಂತೆ ಅವನ ವಿದ್ಯಾಭ್ಯಾಸವೂ ಬೆಳೆಯಿತು. ಸಂಸ್ಕೃತ, ಕನ್ನಡ ಭಾಷೆಗಳಲ್ಲಿ ಕ್ರಮಪಾಠ ನಡೆದು ಸೀನಪ್ಪನು ಮಹಾಪಂಡಿತನೆನಿಸಿದನು. ಪಾಂಡಿತ್ಯ ಮಾತ್ರವಲ್ಲದೆ ಸೀನಪ್ಪನಲ್ಲಿ ಕವಿತಾಶಕ್ತಿಯು ದೈವದತ್ತವಾಗಿತ್ತು. ಸಂಸ್ಕೃತದಲ್ಲಿ ಮತ್ತು ಕನ್ನಡದಲ್ಲಿ ನಿಂತ ಹಾಗೆ ಶ್ಲೋಕಗಳನ್ನು ರಚಿಸಿ ಹೇಳುತ್ತಿದ್ದನು. ಇದರಿಂದ ಸೀನಪ್ಪನ ಬಗ್ಗೆ ಜನರಿಗೆ ಬಹಳ ಆದರ ಬೆಳೆಯತೊಡಗಿತು.

ಇವನ ಪಾಂಡಿತ್ಯ ತಿಳಿದ ಮಂತ್ರಾಲಯ ಮಹಾಪೀಠದ ವರದೇಂದ್ರ ತೀರ್ಥ ಪಾದಂಗಳವರು ಸೀನಪ್ಪನನ್ನು ಕರೆದು ನೀನು ಮಹಾಕವಿಯಾಗಿರುವಿಯಂತೆ, ನಿನ್ನ ವಾಣಿಯನ್ನು ನಮಗಿಷ್ಟು ಪರಿಚಯ ಮಾಡು ಎಂದದ್ದೇತಡ 'ವರದೇಂದ್ರಪಂಚರತ್ನ' ಎಂಬ ಹೆಸರಿನಿಂದ ಐದು ಶ್ಲೋಕಗಳನ್ನು ವಿವಿಧ ವೃತ್ತಗಳಲ್ಲಿ ರಚಿಸಿ ಶ್ರೀಗಳಿಗೆ ಅರ್ಪಿಸಿದನು. ಸೀನಪ್ಪನ ಪಾಂಡಿತ್ಯವನ್ನು ನೋಡಿದ ಗುರುಗಳೂ ಬೆರಗಾದರು. ಗುರುಗಳ ಸನ್ನಿಧಿಯಲ್ಲಿಯೇ ಪಾಠವನ್ನು ಪ್ರಾರಂಭಿಸಿ, ನ್ಯಾಯಸುಧೆಯಲ್ಲಾಗಲೀ, ವ್ಯಾಸತ್ರಯದಲ್ಲಾಗಲೀ ಶ್ರೀನಿವಾಸನಿಗೆ ಸದೃಶರು ಮತ್ತೊಬ್ಬರಿಲ್ಲವೆನಿಸಿದರು.

ಇಷ್ಟೆಲ್ಲಾ ವಿದ್ವತ್ ಇದ್ದರೂ ಹರಿದಾಸರೆಂದರೆ ಆಗುತ್ತಿರಲಿಲ್ಲ. ವಿಜಯದಾಸರನ್ನು ಕಂಡರೆ ಗೇಲಿಮಾಡುತ್ತಿದ್ದರು. ಈ ಕೂಸಿಮಗ ದಾಸನಿಗೆ ಅಪರೋಕ್ಷವೇ? ಇವನ ಕನ್ನಡ ಪದಗಳು ಶಾಸ್ತ್ರಾರ್ಥವೇ? ಇವನ ಕುಣಿತ ಶ್ರೀಹರಿಪ್ರೀತಿಯೇ? ಎಂದು ವಿಜಯದಾಸರನ್ನು ದೂಷಣೆಗಾರಂಭಿಸಿದರು. ಆದರೂ ವಿಜಯದಾಸರೇನು ಇದರಿಂದ ವಿಚಲಿತರಾಗಲಿಲ್ಲ. ಆದರೂ ಭೋಜನಕ್ಕೆ ಹೇಳಿ ಕಳುಹಿಸಿದರೆ 'ಹೊತ್ತು ತಡೆದು ಊಟ ಮಾಡಿದರೆ ಹೊಟ್ಟೆ ಶೂಲಿ ಬರುತ್ತದೆ ಆದ್ದರಿಂದ ನನ್ನ ಊಟವಾಯಿತೆಂದು ತಿಳಿಸಿರಿ' ಎಂದು ಕರೆದವರ ಕೈಲಿ ಹೇಳಿ ಕಳುಹಿಸಿದಾಗ ವಿಜಯದಾಸರು 'ಹಾಗೇ ಆಗಲೀ' ಎಂದದ್ದೇತಡ ಹೊಟ್ಟೆಶೂಲಿ ಪ್ರಾರಂಭವಾಗಿ ಕಡೆಗೆ ವಿಜಯದಾಸರ ಅಪ್ಪಣೆಯಂತೆ ಗೋಪಾಲದಾಸರಿಂದ ರೋಗ ನಿವಾರಣೆಯಾದುದಲ್ಲದೆ ಅವರೇ ತಮ್ಮ ಆಯಸ್ಸಿನ ನಲವತ್ತು ವರ್ಷಗಳನ್ನು ದಾನ ಮಾಡಿದರಂತೆ. ಇದರಿಂದ ದೊರೆತ ಆಯಸ್ಸನ್ನು ಗ್ರಂಥರಚನೆ, ದೇಶಸಂಚಾರ, ಧರ್ಮಪ್ರಚಾರಗಳಲ್ಲಿ ಕಳೆದರು.

## ಗುರುಶ್ರೀಶ ವಿಠಲರು

ಕ್ರಿ.ಶ.ಸು.೧೭೪೫– ೧೮೪೦

ರಾಯಚೂರು ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಕನಕಗಿರಿ (ಕನಕಾಚಲ)ಯು ಪ್ರಸಿದ್ಧ ನರಸಿಂಹ ಕ್ಷೇತ್ರ. ಈ ಕ್ಷೇತ್ರದಲ್ಲಿ ಜನಿಸಿದ ಗುರು ಶ್ರೀಶ ವಿಠಲರ ಪೂರ್ವಾಶ್ರಮದ ಹೆಸರು ನರಸಿಂಹನೆಂದೆ.

ಲೌಕಿಕ ವಿದ್ಯೆಯೊಡನೆ ವೇದಾಂತವನ್ನು ಅಭ್ಯಸಿಸಿದ ನರಸಿಂಹ ಬಹು ಚತುರನಾದ ಬಾಲಕನಾಗಿದ್ದನಷ್ಟೇ ಅಲ್ಲದೆ ದೇವರಲ್ಲಿ ಅತ್ಯಂತ ಭಕ್ತಿಯುಳ್ಳವನಾಗಿದ್ದನು. ವಯೋಧರ್ಮಕ್ಕನುಗುಣವಾಗಿ ಧರ್ಮೋಪನಯನಾದಿಕಾರ್ಯಗಳಾದ ನಂತರ ಲೌಕಿಕವಾಗಿ ಬಳುವಳಿಯಾಗಿ ಬಂದಿದ್ದ ಕರ್ಣೀಕ ವೃತ್ತಿಯನ್ನು ತೊರೆದು ಜಗನ್ನಾಥದಾಸರ ಶಿಷ್ಯನಾಗಿ ನರಸಿಂಹದಾಸರೆನಿಸಿದರು.

ನಂತರ ಜಗನ್ನಾಥದಾಸರು ಹುಂಡೇಕಾರದಾಸರಲ್ಲಿಗೆ ತೆರಳುವಂತೆ ಆಶೀರ್ವದಿಸಿ ಕಳುಹಿಸಿದ ನಂತರ ಹುಂಡೇಕಾರದಾಸರಲ್ಲಿ ಶಿಷ್ಯವೃತ್ತಿಯನ್ನು ಪ್ರಾರಂಭಿಸಿ **ಗುರುಶ್ರೀಶವಿಠಲ** ಎಂಬ ಅಂಕಿತವನ್ನು ಗುರುಗಳಿಂದ ಪಡೆದು ಗುರುಶ್ರೀಶವಿಠಲದಾಸರೆಂದೇ ಪ್ರಸಿದ್ಧರಾದರು.

ಗುರುಶ್ರೀಶವಿಠಲದಾಸರು ಇತರೇ ದಾಸರುಗಳಂತೆ ಹಲವಾರು ಸುಳಾದಿ, ಉಗಾಭೋಗ, ಕೀರ್ತನೆಗಳನ್ನು ರಚಿಸಿರುವರಾದರೂ ದೊರೆತಿರುವುದು ಕಡಿಮೆಯೆ. ಇವುಗಳಜೊತೆಗೆ 'ಪ್ರಮೇಯಮಾಲ' ಎಂಬ ಚಿಕ್ಕ ಗ್ರಂಥ ದೊರೆತಿದೆ. ಇವರ ನಂತರ ಹರಿದಾಸಪಂಥವನ್ನು ಮುನ್ನಡೆಸಿದ ಶಿಷ್ಯರಲ್ಲಿ ಪ್ರಮುಖರಾದವರೆಂದರೆ ವೆಂಕಟವಿಠಲದಾಸರು, ಲಕ್ಷ್ಮೀಪತಿದಾಸರು ಮತ್ತು ಲಕ್ಷ್ಮೀಶವಿಠಲದಾಸರು.

## ಗದ್ವಾಲ್ ಶ್ರೀಪತಿದಾಸರು

ಕ್ರಿ.ಶ.ಸು ೧೭೯೮–೧೮೭೦

ಹಿಂದೆ ಹೈದರಾಬಾದ್ ಆಶ್ರಿತ ಸಂಸ್ಥಾನಕ್ಕೆ ಸೇರಿದ ಗದ್ವಾಲ್ ಎಂಬುದು ಒಂದು ಪುಣ್ಯ ಕ್ಷೇತ್ರ. ಈ ಪ್ರದೇಶವನ್ನು ರಾಜಾರಾಮಭೂಪಾಲನೆಂಬುವನು ಆಳುತ್ತಿದ್ದು ಹೈದರಾಬಾದ್

ನಿಜಾಮನಿಗೆ ಪೊಗದಿ ಹಣ ಕೊಡಲಾಗದಾಗಿದ್ದರಿಂದ ನವಾಬನು ದಂಡೆತ್ತಿ ಬಂದನು. ಆಗ ಕೆಲವು ಆಪ್ತರು ರಾಜಾರಾಮ ಭೂಪಾಲನಿಗೆ ಹತ್ತಿರವಿದ್ದ ಯತಿಶ್ರೇಷ್ಠರಾಗಿದ್ದ ವ್ಯಾಸತತ್ವಜ್ಞರಲ್ಲಿ ಪ್ರಾರ್ಥಿಸುವಂತೆ ಬೋಧಿಸಿದರು.

ಆದರಂತೆ ತುಂಗಾ, ಕೃಷ್ಣಾ ನದಿಗಳ ಪ್ರವಾಹ ಉಕ್ಕೇರಿ ಮಲಗಿದ್ದ ನವಾಬನ ಸೈನ್ಯವನ್ನು ಕೊಚ್ಚಿಕೊಂಡು ಹೋಯಿತಂತೆ.

ಇಂಥ ಸ್ಥಳದಲ್ಲಿ ಹುಟ್ಟಿದ ಶ್ರೀಪತಿದಾಸರ ತಂದೆತಾಯಿಗಳ ವಿಚಾರವಾಗಲೀ, ಇವರ ಪೂರ್ವ ನಾಮವಾಗಲೀ ತಿಳಿದುಬರುವುದಿಲ್ಲ. ಹುಡುಗನು ಬೆಳೆದು ದೊಡ್ಡವನಾದಂತೆಲ್ಲಾ ಚೌಲ, ಅಕ್ಷರಾಭ್ಯಾಸ, ವಿದ್ಯಾಭ್ಯಾಸ, ಉಪನಯನಾದಿಗಳು ವೇದೋಕ್ತ ಸಂಸ್ಕಾರಗಳು ಜರುಗಿದವು. ಗದ್ವಾಲಿ ವಿದ್ವನ್ಮಣಿಗಳಿಗೆ ಆಶ್ರಯತಾಣವಾಗಿದ್ದರಿಂದ ಊರಿನಲ್ಲಿಯೇ ಶಾಸ್ತ್ರ ವ್ಯಾಸಂಗಗಳು ನಡೆದು ಮಧ್ವ ಶಾಸ್ತ್ರ ಪಾರಂಗತ ರೆನಿಸಿದರು.

ಶ್ರೀಪತಿದಾಸರು ಗುರುಮುಖೇನ **ಶ್ರೀಪತಿವಿಠಲ** ಅಂಕಿತ ಪಡೆದು ಅನೇಕ ಕೀರ್ತನೆಗಳನ್ನು ರಚಿಸಿದ್ದಾರೆ. ಇದರ ಜೊತೆಗೆ ದೈವಾಂಶ ಸಂಭೂತರಾಗಿದ್ದರಿಂದ ಇವರ ಮನೆಯಲ್ಲಿ ಹಲವಾರು ಪವಾಡಗಳು ನಡೆದಿತ್ತಂತೆ. ಇವರು ಹಲವಾರು ಪುಣ್ಯಕ್ಷೇತ್ರಗಳನ್ನು ಸಂದರ್ಶಿಸಿ ಆ ಕ್ಷೇತ್ರಗಳನ್ನು ಕುರಿತು ಕೀರ್ತನೆಗಳನ್ನು ರಚಿಸಿದ್ದಾರೆ.

## ಧಾರವಾಡದ ದೀಪದ ಅಣ್ಣಯ್ಯಾಚಾರ್ಯರು

**ಕ್ರಿ.ಶ.ಸು.೧೮೦೦–೧೮೭೫**

ಜನಿಸಿದ್ದು ಧಾರವಾಡದ ಮಂಗಳವಾರ ಪೇಟೆ. ಇವರ ತಂದೆತಾಯಿಗಳು, ಹುಟ್ಟು–ಬೆಳವಣಿಗೆ, ವಿದ್ಯಾಭ್ಯಾಸಗಳ ವಿವರವು ದೊರೆಯದಿದ್ದರೂ ಸುಮಾರು ಕ್ರಿ.ಶ.೧೮೦೦ರಲ್ಲಿ ಜನಿಸಿದರೆಂದು ಹೇಳಬಹುದು.

ಇವರ ಮುಂದಿನ ಪೀಳಿಗೆಯವರು ಆಸಕ್ತಿವಹಿಸದೆ ಇದ್ದುದರಿಂದ ಗ್ರಂಥವೆಲ್ಲವೂ ಹುಳು ತಿಂದು ಓಡಾಡುವ ಸ್ಥಳದಲ್ಲಿ ಎಸೆದರೆ ಅಪವಿತ್ರವಾದೀತೆಂದು ನದಿಗೆ ಎಸೆದರಂತೆ. ಹಿಂದೆ ಈ ರೀತಿ ನಡೆದ ಹಲವಾರು ಉದಾಹರಣೆಗಳುಂಟು.

ಇವರಿಗೆ ತಿರುಪತಿಯ ಶ್ರೀನಿವಾಸನೆ ಮನೆದೇವರಾಗಿದ್ದರಿಂದ ಹಲವಾರು ಬಾರಿ ಶ್ರೀನಿವಾಸನ ಯಾತ್ರೆಗೆ ಶಿಷ್ಯರೊಡಗೂಡಿ ಹೊರಡುತ್ತಿದ್ದರು. ಸಾಮಾನು, ಪ್ರವಚನ ಗ್ರಂಥಗಳನ್ನು ಕುದುರೆಯ ಮೇಲೆ ಹೊರೆಸಿಕೊಂಡು 'ಯಾಯವಾರ' ಮಾಡುತ್ತಾ ಹೊರಡುತ್ತಿದ್ದರು. ಜೊತೆಯಲ್ಲಿರುತ್ತಿದ್ದ ವಸ್ತುಗಳೆಂದರೆ ಭವನಾಶಿ, ತಾಳ–ಗೆಜ್ಜೆ, ದೇವರ ಪೆಟ್ಟಿಗೆ ಮತ್ತು ಗಾಜಿನ ಮುಚ್ಚಳವಿರುವ ಲಾಂದ್ರ.

ಪ್ರತಿವರ್ಷವೂ ಹೋಗುತ್ತಿದ್ದವರಿಗೆ ವಯಸ್ಸಾಗಿ ಅರ್ಧ ದಾರಿಯಲ್ಲಿಯೇ ದೇಹಾಯಾಸವಾಗಿ, ನಿತ್ರಾಣರಾಗಿ ಮುಂದೆಹೋಗಲಾರದೆ ವಿಶ್ರಮಿಸಿದಾಗ, ರಾತ್ರಿ ಶ್ರೀನಿವಾಸನೇ ಕನಸಿನಲ್ಲಿ ಬಂದು, ''ನಾನೇ ನಿನ್ನ ಬಳಿಗೆ ಬರುತ್ತೇನೆಂದು'' ಹೇಳಿದಂತಾಯಿತು. ಅಂದೇ ರಾತ್ರಿ ಮಹಾಂತನ ಕನಸಿನಲ್ಲಿಯೂ ಶ್ರೀನಿವಾಸನು ನಿರ್ದೇಶನ ನೀಡಿದಾಗ, ಮಾರನೆಯ ದಿನ ಮಹಂತನು ಆಪ್ತರನ್ನು ಕಳುಹಿಸಿ ಶ್ರೀನಿಧಿವಿಠಲರು ಯಾರೆಂದು ವಿಚಾರಿಸಿ ಮರ್ಯಾದೆಯೊಡನೆ ಕರೆಸಿಕೊಂಡರಂತೆ.

ದಾಸರು ತಮ್ಮ ಅವಸಾನಕಾಲದಲ್ಲಿ 'ಪ್ರಾಣದೇವರು ರಥಾರೂಢರಾಗಿ' ಉತ್ಸವ ಹೊರಡುತ್ತಾರೆಂದು ಹೆಂಡತಿಗೆ ಹೇಳಿದಾಗ ಅರ್ಥವಾಗದೆ ಅವರ ಮುಖ ನೋಡಿದಾಗ ''ಪ್ರಾಣದೇವರು ನನ್ನ ದೇಹದಿಂದ ದ್ವಾದಶಿ ದಿನ ಹೊರಡುತ್ತಾರೆ'' ಎಂದಾಗ ಹೆಂಡತಿಗೆ ಕಣ್ಣೀರು ತಡೆಯದಾಯಿತು. ಆದರೂ ದೇಹ ನಶ್ವರವಲ್ಲವೆ ಎಂದು ಸಮಾಧಾನಗೊಳಿಸಿ, ದ್ವಾದಶಿ ಪಾರಾಯಣೆ ಮಾಡುವಂತೆ ಮಕ್ಕಳಿಗೆ ತಿಳಿಸಿದ ದಾಸರು ನಾರಾಯಣ, ನಾರಾಯಣ ಎನ್ನುತ್ತಿದ್ದಂತೆ, 'ಛಟ್' ಎಂಬ ಶಬ್ದದಿಂದ ಬ್ರಹ್ಮರಂಧ್ರದ ಮೂಲಕ ಪ್ರಾಣದೇವರು ಹೊರಟು ಹೋದರು.

ಇವರು ಹಲವಾರು ಕೀರ್ತನೆಗಳನ್ನ ರಚಿಸಿದ್ದಾರೆ. ಅದರಲ್ಲೂ ತಿರುಪತಿ ಶ್ರೀನಿವಾಸ ಆರಾಧ್ಯದೈವವೇ ಆಗಿದ್ದು ಇವರ ರಚನೆಗಳು 'ಶ್ರೀನಿಧಿವಿಠಲ' ಎಂಬ ಅಂಕಿತದಿಂದ ಕೂಡಿವೆ.

ಶ್ರೀ ವೆಂಕಟೇಶನ ಸನ್ನಿಧಿಯಲ್ಲಿ ಬ್ರಹ್ಮದೇವರು ಹತ್ತಿಸಿದ ದೀವಿಗೆಯಿಂದ ತಮ್ಮ ಲಾಂದ್ರದ ಒಳಗಿನ ದೀವಿಗೆಯನ್ನು ಹೊತ್ತಿಸಿಕೊಂಡು ನಂದಿಹೋಗದಂತೆ ಊರಿನವರೆಗೂ ತಂದು ತಮ್ಮ ದೇವಗೃಹದಲ್ಲಿ ಸ್ಥಾಪಿಸಿ ನಂದಾದೀವಿಗೆಯೋಪಾದಿಯಲ್ಲಿ ನೋಡಿಕೊಳ್ಳುತ್ತಿದ್ದರಂತೆ. ಈ ಕಾರಣದಿಂದಲೇ 'ದೀಪದ ಅಣ್ಣಯ್ಯಾಚಾರ್ಯ'ರೆಂದೇ ಪ್ರಸಿದ್ಧರಾಗಿದ್ದರು.

## ಹರಪನಹಳ್ಳಿ ವೆಂಕಟದಾಸರು

---

**ಕ್ರಿ.ಶ.ಸು.೧೮೦೦–೧೮೯೦**

**ಹ**ರಪನಹಳ್ಳಿ ಬಳ್ಳಾರಿ ಜಿಲ್ಲೆಗೆ ಸೇರಿದ ಒಂದು ತಾಲ್ಲೂಕಿನ ಕೇಂದ್ರ. ಇಲ್ಲಿ ಅನೇಕ ಹರಿದಾಸರು ಅವತರಿಸಿ ಕನ್ನಡ ಸಾಹಿತ್ಯಕ್ಕೆ ಅದರಲ್ಲೂ ಹರಿದಾಸ ಸಾಹಿತ್ಯಕ್ಕೆ ವಿಶೇಷ ಸೇವೆ ಸಲ್ಲಿಸಿದ್ದಾರೆ.

ಇವರ ಹುಟ್ಟು ಬೆಳವಣಿಗೆ ವಿದ್ಯಾಭ್ಯಾಸದ ಬಗ್ಗೆ ಮಾಹಿತಿಗಳು ದೊರೆಯದಿದ್ದರೂ ಇವರು ರಚಿಸಿರುವ ಎಂಟು ಕೀರ್ತನೆಗಳಿಂದಲೇ ಶ್ರೀ ಮಧ್ವಶಾಸ್ತ್ರ ಪಾರಂಗತರಾಗಿದ್ದರೆಂಬುದು ತಿಳಿದುಬರುತ್ತದೆ.

ಇವರು ಅಂಕಿತೋಪದೇಶ ಹೊಂದುವುದಕ್ಕಿಂತ ಮುಂಚಿನಿಂದಲೂ ಹರಿಕಥಾದಿಗಳನ್ನು ಮಾಡುತ್ತಾ ಭಾಗವತಾದಿ ಶ್ಲೋಕಗಳನ್ನು ಉದಾಹರಿಸುತ್ತ ಭಕ್ತ್ಯುದ್ರೇಕವಾಗುವಂತೆ ಮಾಡುತಿದ್ದರಂತೆ.

''ನಾನಪರಾಧಿ ಖರೇ ಪರಂತು ನೀನುದ್ಧರಿಸೊ ದಯಾಳು '' ಎಂಬ ಕೀರ್ತನೆಯಲಿ ಜೀವನದಲ್ಲಿ ತಮಗಾದ ಅನುಭವವನ್ನು ಹೇಳಿಕೊಂಡಿದ್ದಾರೆ. ಹೀಗೆ ಸಂಸಾರದಲ್ಲಿ ಹಲವಾರು ವರ್ಷಗಳು ಹೆಣಗಿದ ನಂತರ ವೈರಾಗ್ಯ ಪ್ರಾಪ್ತಿಯಾಗಿ ವಿದ್ಯುಕ್ತವಾಗಿ ಅಂಕಿತೋಪದೇಶದ ಆಸೆಯಿಂದ ಗದ್ವಾಲಿಗೆ ಹೋಗಿ ನೆಲೆಸಿ ಅಲ್ಲಿ ಗುಣ ಕೀರ್ತನೆ ಮಾಡಿ ಗುರುಗಳಿಂದ ಅಂಕಿತ ಪಡೆದು ತಂದೆ ಶ್ರೀಪತಿವಿಠಲರಾದರು.

ಇವರು ಪಂಢರಾಪುರ, ಮಂತ್ರಾಲಯ, ಉಡುಪಿ, ತಿರುಪತಿ ಮುಂತಾದ ಪುಣ್ಯಕ್ಷೇತ್ರಗಳನ್ನು ಸಂದರ್ಶಿಸಿ ಹಲವಾರು ಕೀರ್ತನೆಗಳನ್ನು ರಚಿಸಿ ಹಾಡಿ ಹೊಗಳಿ ಧನ್ಯರಾಗಿದ್ದಾರೆ.

## ಹರಪನಹಳ್ಳಿ ಭೀಮವ್ವ

ಕ್ರಿ.ಶ.ಸು.೧೮೨೩–೧೯೦೩

ಹರಿದಾಸ ಸಾಹಿತ್ಯ ಪರಂಪರೆಯಲ್ಲಿ ಸ್ತ್ರೀಯರ ಹೆಸರು ಕೇಳಿಬರುವುದು ವಿರಳವೆಂದೇ ಹೇಳಬಹುದು. ಹೆಳವನಕಟ್ಟೆ ಗಿರಿಯಮ್ಮನ ನಂತರ ಹರಪ್ಪನಹಳ್ಳಿ ಭೀಮವ್ವನನ್ನು ಹೆಸರಿಸಬಹುದು. ಈಕೆ ಹುಟ್ಟಿದ್ದು ಬಳ್ಳಾರಿ ಜಿಲ್ಲೆಯ ಹೊಸಕೋಟೆ ತಾಲ್ಲೂಕಿನ ನಾರಾಯಣದೇವರಕೆರೆ ಎಂಬ ಹಳ್ಳಿಯಲ್ಲಿ. ಆದರೆ ಈಗ ಆ ಹಳ್ಳಿ ತುಂಗಭದ್ರಾ ಅಣೆಕಟ್ಟಿನ ನೀರಿನಿಂದ ಮುಳುಗಡೆಯಾಗಿದೆ.

ಭೀಮವ್ವ ಬೆಳೆದದ್ದೇ ಸದಾ ಹರಿದಾಸರ ಸ್ಮರಣೆ ಮಾಡುತ್ತಿದ್ದ ವಾತಾರವರಣದಲ್ಲೇ. ಚಿಕ್ಕಮಗುವಾಗಿದ್ದ ಭೀಮವ್ವನೂ ಇದರಿಂದ ಪ್ರೇರಿತಳಾಗಿ ಹಾಡುವುದರಲ್ಲಿ ಜೊತೆಗೂಡುತ್ತಿದ್ದಳು. ಇದರ ಜೊತೆಗೆ ಭೀಮವ್ವನಿಗೆ ಅತೀತ ಪ್ರಜ್ಞೆ ಇದ್ದು ಹಲವಾರು ಪವಾಡಗಳನ್ನು ಮಾಡಿ ತೋರಿಸಿದಳೆಂಬ ವಿಚಾರಗಳು ಕರ್ಣಾಕರ್ಣಿಯಾಗಿ ಇಂದಿಗೂ ಉಳಿದುಬಂದಿದೆ.

ವಿದ್ಯಾಭ್ಯಾಸದ ದೃಷ್ಟಿಯಿಂದ ನೋಡಿದರೆ ಆಕೆ ನಿರಕ್ಷರಕುಕ್ಷಿ ಎಂದೇ ಹೇಳಬಹುದು. ಹನ್ನೊಂದು ವರ್ಷದವಳಾದಾಗಲೇ ಅಂದಿನ ಸಂಪ್ರದಾಯದಂತೆ ಬಾಲ್ಯದಲ್ಲೇ ವಿವಾಹವಾಯಿತು. ಆದರೆ ಒಬ್ಬ ಮಗ, ಒಬ್ಬ ಮಗಳು ಹುಟ್ಟಿದ ಬಹುಕಾಲದ ನಂತರ ಅಂದರೆ ಆವಳ ೩೬ನೇ ವಯಸ್ಸಿನಲ್ಲಿ ವಿಧವೆಯಾದಳು. ಹೀಗೆ ಚಿಕ್ಕವಯಸ್ಸಿನಲ್ಲೇ

ವೈಧವ್ಯಪ್ರಾಪ್ತಿಯಾದದ್ದೇ ಕಾರಣವಾಗಿ ಭಕ್ತಿಸಾಧನೆಯಕಡೆ ಇವಳ ಮನಸ್ಸು ಹರಿದು ಸ್ವಪ್ನದಲ್ಲಿ ಬೀಜಾಕ್ಷರವನ್ನು ನಾಲಗೆಯ ಮೇಲೆ ಕೃಷ್ಣಸರ್ಪವೊಂದು ತನ್ನ ನಾಲಗೆಯಿಂದ ಬರೆದಂತಾಗಿ ಅಂದಿನಿಂದಲೇ ಹಾಡುಗಳನ್ನು ರಚಿಸತೊಡಗಿದಳು. ಹೀಗೆ ಇವಳು ಹಾಡುಗಳನ್ನು **ಭೀಮೇಶಕೃಷ್ಣ** ಎಂಬ ಅಂಕಿತದಲ್ಲೇ ರಚಿಸಿದ್ದಾಳೆ. ಇವಳ ಹಾಡುಗಳಲ್ಲಿ ತನ್ನ ಜೀವನದಲ್ಲಿ ದೊರೆತ ದೈವಿಕಾನುಭವಗಳನ್ನೇ ಹಾಡುಕಟ್ಟಿ ಹಾಡಿದ್ದಾಳೆ. ಬೇರೆಲ್ಲ ಹರಿದಾಸರಂತೆ ಭೀಮವ್ವನೂ ಸುಳಾದಿ, ಉಗಾಭೋಗ, ಕೀರ್ತನೆಗಳನ್ನು ರಚಿಸಿದ್ದಾಳೆ.

## ಗುರುಜಗನ್ನಾಥದಾಸರು

ಕ್ರಿ.ಶ.ಸು. ೧೮೩೭–೧೯೬೦

**ಗು**ರುಜಗನ್ನಾಥ ದಾಸರು ಹುಟ್ಟಿದ್ದು ಆದವಾನಿ ತಾಲ್ಲೂಕಿಗೆ ಸೇರಿದ 'ಕೋಶಿಗಿ' ಯಲ್ಲಿ ೧೮೩೭ರಲ್ಲಿ. ತಂದೆ ವೆಂಕಟಗಿರಿಯಾಚಾರ್ಯ. ತಾಯಿ ಸೀತಮ್ಮ. ಇವರ ಪೂರ್ವನಾಮ ಸ್ವಾಮಿರಾಯ.

ಸ್ವಾಮಿರಾಯನು ಬೆಳೆಯುತ್ತಾ ಉಢಾಳನಾಗೇ ಬೆಳೆದನು. ಒಂದು ಸಾರೆ ಒಬ್ಬ ಗೃಹಸ್ಥನು ''ನೀನು ನನ್ನ ಮಗನಾಗಿದ್ದರೆ ಸೀಳಿ ಹಾಕುತ್ತಿದ್ದೆ, ನಿನ್ನಿಂದ ಏನು ಪ್ರಯೋಜನ. ಒಂದು ಕಲ್ಲಾದರೂ ಆಗಿದ್ದರೆ ಮನೆ ಕಟ್ಟೋದಾಗಲಾದರೂ ಉಪಯೋಗವಾಗುತ್ತಿತ್ತು'' ಎಂದು ಕೋಪದಿಂದ ಬೈದದ್ದೇ ಸ್ವಾಮಿರಾಯನಲ್ಲಿದ್ದ ಸುಪ್ತಚೇತನವನ್ನು ಬಡಿದೆಬ್ಬಿಸಿದಂತಾಗಿ ವಿದ್ಯಾಭ್ಯಾಸ ಮಾಡಬೇಕೆಂದು ಸೋದರ ಮಾವನ ಮನೆಗೆ ಹೊರಟನು.

ಬಾಲ್ಯದಲ್ಲಿ ಉಢಾಳತನ, ಸಂಸಾರದಲ್ಲಿ ರತಿ, ಮಧ್ಯದಲ್ಲಿ ವಿವೇಚನೆ ಇವು ಸಾಮಾನ್ಯವಾಗಿ ಎಲ್ಲ ಹರಿದಾಸರಲ್ಲೂ ಕಾಣಿಸಿಕೊಳ್ಳುವ ಗುಣ. ಅದರಂತೆ ಸ್ವಾಮಿರಾಯರ ಬದುಕಿನಲ್ಲೂ ಆಯಿತು. ಊರಿನಲ್ಲಿ ಮಾವನೂ, ಸಿಕ್ಕದೆ ಹೋದಾಗ ನಿರಾಶನಾಗದೆ ವಾಯುದೇವರಲ್ಲೆ ಶರಣುಹೋಗಿ, ಕಠಿಣವಾದ ಸೇವೆಯಿಂದ ದೇಹವನ್ನು, ಮನಸ್ಸನ್ನೂ ಪವಿತ್ರಗೊಳಿಸಿಕೊಂಡಾಗ ವಾಯುದೇವರು ಸ್ವಪ್ನದಲ್ಲಿ ಬಂದು ಬೀಜಾಕ್ಷರ ಬರೆದು ಮಂತ್ರಾಲಯದೆಡೆಗೆ ಹೋಗುವಂತೆ ಸೂಚಿಸಿದಂತಾಯಿತಂತೆ. ಪ್ರಾಣೇಶನ ಗುಣಗಳನ್ನು ಪಾಡಿ, ವರಕವಿಯಾಗಿ, ಸ್ವಾಮಿರಾಯ ಸ್ವಾಮಿರಾಯಚಾರ್ಯರಾದರು.

ಸ್ವಪ್ನದಲಿ ಗೋಪಾಲದಾಸರಿಂದ 'ಗುರುಜಗನ್ನಾಥ ವಿಠಲ' ಎಂಬ ಅಂಕಿತ ಪಡೆದು, ಈ ಅಂಕಿತದಿಂದ ಪದ ಪದ್ಯ, ಸುಳಾದಿ, ಸಂಸ್ಕೃತ, ವೇದಾಂತ ಗ್ರಂಥಗಳ ರಚನೆ ಮಾಡಿದ್ದಾರೆ.

# ಉರಗಾದ್ರಿ ವಾಸವಿಠಲ ದಾಸರು

**ಕ್ರಿ.ಶ.ಸು. ೧೮೭೧–೧೯೬೪**

ಉರಗಾದ್ರಿವಾಸವಿಠಲದಾಸರ ಲೌಕಿಕ ನಾಮ ಶ್ರೀನಿವಾಸ. ಇವರು ಹುಟ್ಟಿದ್ದು ೦೬.೦೨.೧೮೭೧ರಂದು ಶಿವಮೊಗ್ಗ ಜಿಲ್ಲೆಯ ಹೊಳೆಹೊನ್ನೂರಿನಲ್ಲಿ. ಒಂಬತ್ತನೆ ವಯಸ್ಸು ತುಂಬುವವರೆವಿಗೂ ಇವರ ವಿದ್ಯಾಭ್ಯಾಸ ಪ್ರಾರಂಭವೇ ಆಗಲಿಲ್ಲ.

ಅನಂತರ ಅನೇಕ ಎಡರು ತೊಡರುಗಳೊಡನೆಯೇ ತಂದೆಯನ್ನು ಕಳೆದುಕೊಂಡರು. ಬಹು ದಾರಿದ್ರ್ಯ ಪರಿಸ್ಥಿತಿಯಲ್ಲಿ ಬಂಧುಗಳ ಮನೆಯಲ್ಲಿದ್ದುಕೊಂಡು, ಮೈಸೂರಿನಲ್ಲಿ ಲೋಯರ್ ಸೆಕೆಂಡರಿ ಪರೀಕ್ಷೆ ಪಾಸು ಮಾಡಿದ್ದಲ್ಲದೆ, ನಾರ್ಮಲ್ ಸ್ಕೂಲ್ ಅಧ್ಯಾಪಕ ತರಬೇತಿ ಪಡೆದು ಹೊಸನಗರ ತಾಲ್ಲೂಕಿನ ಕಳೂರು ಕಟ್ಟೆಯ ಪ್ರಾಥಮಿಕ ಶಾಲೆಯಲ್ಲಿ ಅಧ್ಯಾಪಕರಾಗಿ ತಮ್ಮ ಶಿಕ್ಷಕವೃತ್ತಿಯನ್ನು ಪ್ರಾರಂಭಿಸಿದರು.

ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಹಲವಾರು ನಾಟಕಗಳನ್ನು ರಚಿಸಿ, ಶಾಲೆಯ ರಂಗಸ್ಥಳದ ಮೇಲೆ ತಂದು ಅನೇಕರ ಪ್ರಶಂಸೆಗೆ ಪಾತ್ರರಾದರು. ಹೀಗೆ ಪ್ರಾರಂಭಿಸಿ ಕವಿತಾ ರಚನೆಯಲ್ಲೂ ತೊಡಗಿದ್ದಲ್ಲದೆ ಚಿತ್ರಕಲೆ, ಸಂಗೀತಕಲೆ, ಶಿಲ್ಪಕಲೆಯಲ್ಲೂ ಅಪಾರ ಪರಿಶ್ರಮಪಡೆದಿದ್ದರು.

ಹೀಗೆ ಕವಿತೆಗಳನ್ನು ರಚಿಸಲು ಪ್ರಾರಂಭಿಸಿ **ವೆಂಕಟೇಶವಿಠಲ** ಎಂಬ ಅಂಕಿತದಲ್ಲಿ ಹಲವಾರು ಕೃತಿಗಳನ್ನು ರಚಿಸಿದರು. ಉದ್ಯೋಗದಿಂದ ನಿವೃತ್ತರಾದ ನಂತರ ಪರಮಪ್ರಿಯ ಶ್ರೀ ಸುಬ್ಬರಾಯದಾಸರಿಂದ ವಿದ್ಯುಕ್ತವಾಗಿ **ಉರಗಾದ್ರಿವಾಸವಿಠಲ** ಎಂಬ ಅಂಕಿತವನ್ನು ಪಡೆದರು.

ಈ ಅಂಕಿತ ಪ್ರದಾನದ ಮೇಲೆಯೇ ಒಂದು ಕೃತಿ ರಚನೆಯನ್ನು ಮಾಡಿದರು. ಗುರು ಮುಖೇನ ಅಂಕಿತ ದೊರೆತ ನಂತರ ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಅದರಲ್ಲೂ ಮನೆದೈವ ಶ್ರೀನಿವಾಸನ ಮೇಲೂ ಹಲವಾರು ಕೃತಿ ರಚನೆಮಾಡಿದ್ದಾರೆ.

ಹಿರಿಯಸಾಧನಾ ಜೀವಿಯಾಗಿ, ಹರಿದಾಸರಾಗಿ ತೊಂಭತ್ತು ಮೂರು ವರ್ಷಗಳ ಕಾಲ ಜೀವಿಸಿದ್ದು ೧೯೬೪ರಲ್ಲಿ (೩೦.೧೧.೧೯೬೪) ಶ್ರೀಹರಿಪದವನ್ನೈದಿದರು.

# ಗುರುಗೋವಿಂದ ವಿಠಲದಾಸರು

ಕ್ರಿ.ಶ.ಸು.೧೮೯೪–೧೯೮೩

ವಿಜಯದಾಸರು ಮತ್ತು ವೇಣುಗೋಪಾಲದಾಸರ ಪೀಳಿಗೆಯಲ್ಲಿ ಬಂದ ದಾಸ ಶ್ರೇಷ್ಠರಾದ ಗುರುಗೋವಿಂದವಿಠಲದಾಸರು ಪರಮಪ್ರಿಯ ಶ್ರೀ ತಂದೆ ಮುದ್ದು ಮೋಹನದಾಸರ ಶಿಷ್ಯರು. ಹರಿದಾಸರ ಪರಂಪರೆಯನ್ನು ವ್ಯಾಪಕವಾಗಿಯೂ, ಸಮೃದ್ಧವಾಗಿಯೂ ಬೆಳೆಸಿದ ಕೀರ್ತಿ ಗುರು ಗೋವಿಂದ ವಿಠಲ ದಾಸರದು.

ಗುರುಗೋವಿಂದವಿಠಲದಾಸರು ಹುಟ್ಟಿದ್ದು ಮೈಸೂರಿನಲ್ಲಿ (೧೮೯೪) ತಂದೆ ರಘುನಾಥರಾವ್, ತಾಯಿ ಲಕ್ಷ್ಮೀ ಬಾಯಿ, ಇವರ ಪೂರ್ವ ನಾಮ ಗೋವಿಂದ ರಾವ್.

ಚಿಕ್ಕ ವಯಸ್ಸಿನಲ್ಲಿ ತಂದೆಯನ್ನು ಕಳೆದುಕೊಂಡ ಗೋವಿಂದ, ತಾಯಿಯೊಡನೆ ಆಶ್ರಯ ಹುಡುಕುತ್ತಾ ಹೊರಟಾಗ ಆಶ್ರಯ ನೀಡಿದವರು ನವರತ್ನ ರಾಮರಾಯರು. ಓದಿನಲ್ಲಿ ಬುದ್ಧಿವಂತನಾದ ಹುಡುಗನನ್ನು ಇಂಜನಿಯರಿಂಗ್ ಓದಲೂ ದೂರದ ಮದರಾಸಿಗೆ ಕಳುಹಿಸಲೊಪ್ಪದಿದ್ದರಿಂದ ಪಿ. ಡಬ್ಲ್ಯೂ. ಡಿ ಇಲಾಖೆಗೆ ಸೇರಿದರು.

ಹೀಗೆ ಲೌಕಿಕದಲ್ಲಿದ್ದರೂ ಪಾರಮಾರ್ಥಿಕ ಚಿಂತನೆಯಿಂದ ಪರಮೋಚ್ಛ ಸ್ಥಿತಿ ತಲುಪಿದರು. 'ಗುರು ಕೃಪಾ ಗ್ರಂಥಮಾಲೆ' ಸ್ಥಾಪಿಸಿ ದಶೋಪನಿಷತ್ತುಗಳನ್ನು ಸರಳ, ಸುಂದರವಾದ ಪದ್ಯ ರೂಪದಲ್ಲಿ ಕನ್ನಡ ಭಾಷೆಗೆ ಅನುವಾದಿಸಿದಷ್ಟೇ ಅಲ್ಲದೆ, 'ಹರಿಭಕ್ತಿವಿಜಯ' ಎಂಬ ಹೆಸರಿನಲ್ಲಿ ಹಲವಾರು ಹರಿದಾಸರ ಜೀವನ ಚರಿತ್ರೆಯನ್ನು ಗದ್ಯರೂಪದಲ್ಲಿ ಬರೆದರು.

'ಸ್ವಪ್ನ ಬೃಂದಾವನಾಖ್ಯಾನ'ವನ್ನು ಕನ್ನಡ ತಾತ್ಪರ್ಯ ಸಹಿತ ಪ್ರಕಟಿಸಿ, ವಾದಿರಾಜ ಸ್ವಾಮಿಗಳ ಕೃಪೆಗೆ ಪಾತ್ರರಾದರು. ಮೈಸೂರಿನ ತಮ್ಮ ಸ್ವಗೃಹದಲ್ಲೇ ಪಾಂಡುರಂಗ ಮತ್ತು ಮುಖ್ಯಪ್ರಾಣರನ್ನು ಪ್ರತಿಷ್ಠಾಪಿಸಿ ಮನೆಯನ್ನೇ ದೇವಮಂದಿರವನ್ನಾಗಿಸಿದರು.

ಹಲವಾರು ಕೀರ್ತನೆಗಳನ್ನು 'ಗುರುಗೋವಿಂದ ವಿಠಲ' ಎಂಬ ಅಂಕಿತದಲ್ಲಿ ರಚಿಸಿದಲ್ಲದೆ ಹರಿದಾಸಪಂಥಕ್ಕೆ ವೇಗ, ಓಘವನ್ನು ನೀಡಿ ದಾಸ ಪಂಥೀಯರಿಗೆ ಒಂದು ಸಶಕ್ತವಾದ ದನಿಯನ್ನು ಕೊಟ್ಟ ಮಹನೀಯರು.

# ಹೆಳವನಕಟ್ಟೆ ಗಿರಿಯಮ್ಮ

**೧೮ನೇ ಶತಮಾನದ ಪೂರ್ವಾರ್ಧ**

**ಈ**ಕೆ ಹುಟ್ಟಿದ್ದು ಧಾರವಾಡ ಜಿಲ್ಲೆಯ ರಾಣೆ ಬೆನ್ನೂರು. ತಂದೆ ಭೀಷ್ಮಪ್ಪ ಜೋಯಿಸರು ಎಂದುದಷ್ಟೆ ತಿಳಿದು ಬರುವ ಅಂಶ. ಬದುಕಿದ್ದ ಕಾಲವೂ ಖಚಿತವಾಗಿ ತಿಳಿದು ಬರುವುದಿಲ್ಲ.

ಈಕೆಯು ತನ್ನ ಹಾಡುಗಳಲ್ಲಿ,

'ಸದಾನಂದ ಸುಮತೀಂದ್ರ ಹೃದಯ ಪಂಕಜ ಭೃಂಗ' ಎಂದು ಮಂತ್ರಾಲಯದ ಶ್ರೀ ಸುಮತೀಂದ್ರ ಸ್ವಾಮಿಗಳನ್ನು ಸ್ಮರಿಸಿರುವುದು;

ಲವಕುಶರ ಕಾಳಗದ ಆರಂಭದಲ್ಲಿ, ಉತ್ತರಾದಿಮಠದ ಸತ್ಯಬೋಧರನ್ನು (ಕ್ರಿ.ಶ.೧೭೪೪–೧೭೮೩) ನೆನೆದಿರುವುದು;

ಚಂದ್ರಹಾಸನ ಕಥೆಯಲ್ಲಿ, ಲಕ್ಷ್ಮೀಶ ಕವಿ ತನ್ನ ಜೈಮಿನಿಭಾರತದಲ್ಲಿ ಹೇಳಿರುವ ಚಂದ್ರಹಾಸನ ಕಥೆಯನ್ನೇ ಚರಿತ ಮಾಡಿ ವರ್ಣಿಸುವೆ ಎಂದು ಹೇಳಿಕೊಂಡಿರುವುದರಿಂದ, ಲಕ್ಷ್ಮೀಶನು ಜೈಮಿನಿಭಾರತವನ್ನು ಬರೆದ ನಂತರದಲ್ಲಿ ತನ್ನ ಚಂದ್ರಹಾಸನ ಕಥೆ ಬರೆದಿದ್ದಾಳೆ ಎನ್ನುವುದು ಖಚಿತ.

ಹೀಗೆ ಈ ಆಧಾರಗಳ ಮೇಲೆ ಆಕೆ ಬಹುಮಟ್ಟಿಗೆ ೧೮ನೇ ಶತಮಾನದ ಪೂರ್ವಾರ್ಧದಲ್ಲಿ ಬದುಕಿದ್ದಳು ಎಂದು ಭಾವಿಸ ಬಹುದಾಗಿದೆ. ಆದರೂ ಈಕೆಯ ಜೀವನದ ಬಗ್ಗೆ ಹಲವಾರು ವರ್ಣರಂಜಿತ ಕಥೆಗಳು ಜನಜನಿತವಾಗಿವೆ. ಬಾಲ್ಯದಿಂದಲೇ ಆಕೆಗೆ ಭಕ್ತಿ ವೈರಾಗ್ಯಗಳು ಅವಳ ವ್ಯಕ್ತಿತ್ವದಲ್ಲಿ ರೂಪುಗೊಂಡಿದ್ದು, ಪವಾಡ ಸದೃಶ ಜೀವನ ಅವಳದು.

ಮನೆಯ ಪರಿಸರದಲ್ಲಿ ನಡೆಯುತ್ತಿದ್ದ ಪುರಾಣ, ಪುಣ್ಯಕಥೆಗಳ ಶ್ರವಣ, ವಾಚನಗಳಿಂದ ಶ್ರೀಮಂತವಾದ ಅವಳ ಬುದ್ಧಿ, ಮನಸ್ಸುಗಳು ಸಕ್ರಿಯವಾಗಿ ಅವಳಿಂದ ಕಾವ್ಯ ರಚನೆಮಾಡಿಸಿರಬಹುದು. ಅದರಲ್ಲೂ ಅವಳು ಆರಿಸಿಕೊಂಡಿರುವ ವಸ್ತುಗಳು ರಾಮಾಯಣ, ಮಹಾಭಾರತದಿಂದ ಆಯ್ದ ವಸ್ತುಗಳೇ ಆಗಿವೆ.

ಹೀಗೆ ಹೆಳವನಕಟ್ಟೆ ಗಿರಿಯಮ್ಮನು ಹೆಳವನಕಟ್ಟೆರಂಗ ಎಂಬ ಅಂಕಿತದಲ್ಲೇ ಹಲವಾರು ಹಾಡುಗಳನ್ನು ರಚಿಸಿದ್ದಾಳೆ.

# ಶ್ರೀ ರಾಮದಾಸರು

**೧೮ನೇ ಶತಮಾನದ ಉತ್ತರಾರ್ಧ**

ಮುಸಲ್ಮಾನರಾಗಿ ಹುಟ್ಟಿದರೂ ಹರಿದಾಸ ಪಂಥದಿಂದ ಆಕರ್ಷಿತರಾಗಿ ಅದೇದಾರಿಯಲ್ಲಿ ನಡೆದು ಜೀವನದ ಸಾಫಲ್ಯವನ್ನು ಹೊಂದಿದವರಲ್ಲಿ ಬಡೇಖಾನರು ಒಬ್ಬರು. ಇವರು ಬಾಳಿದ ಕಾಲದ ಬಗ್ಗೆ ಜಿಜ್ಞಾಸೆಗಳಿದ್ದರೂ ೧೮ನೇ ಶತಮಾನದ ಉತ್ತರಾರ್ಧವೆಂದೇ ಹೇಳಲಾಗಿದೆ.

ಇವರು ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಜೋಳದಡಗಿ ಗ್ರಾಮದಲ್ಲಿ ಜನಿಸಿದವರು. ತಂದೆ ಖಾಜಾ ಸಾಹೇಬರು, ತಾಯಿ ಪೀರಮ್ಮ. ಕನ್ನಡವನ್ನು ಓದಲು ಬರೆಯಲು ಕಲಿತಿದ್ದರೂ ಬಡತನದಿಂದ ವಿದ್ಯಾಭ್ಯಾಸ ಮುಂದುವರಿಸಲಾಗದೆ ಅಂಗಡಿಯ ಕೆಲಸಕ್ಕೆ ಸೇರಿದರು. ನಂತರ ಖಾಸಗಿ ಶಿಕ್ಷಕರಾಗಿಯೂ ದುಡಿದು ಹುಸೇನಮ್ಮ ಎಂಬುವರನ್ನು ಮದುವೆಯಾದರು. ಈ ಕೆಲಸವೂ ಸರಿಬೀಳದೆ ಕೆಲಸ ಹುಡುಕುತ್ತಾ ಹೊರಟವರಿಗೆ ರಾಮಾವಧೂತರೆಂಬ ಸಾಧು ಒಬ್ಬರ ಪ್ರಭಾವಕ್ಕೆ ಒಳಗಾಗಿ ಅವರೊಡನೆಯೇ ನಾಲ್ಕಾರು ವರ್ಷ ಕಳೆದಾಗ ಮನಸ್ಸು ಪರಮಾತ್ಮನ ಚಿಂತನೆ, ಆಧ್ಯಾತ್ಮಿಕದತ್ತ ಹರಿಯತೊಡಗಿತು. ಆದರೂ ಹೆಂಡತಿ ಮಕ್ಕಳನ್ನು ನೋಡಲು ಹೋಗಿ ಹಿಂದಿರುಗಿ ಬಂದಾಗ ರಾಮಾವಧೂತರ ಸಾನಿಧ್ಯ ಪುನಃ ದೊರೆಯದೆ ನಿರಾಶರಾಗಿ ಆಧ್ಯಾತ್ಮಿಕ ಚಿಂತನೆ ಗಾಢವಾಗತೊಡಗಿತು. ಹೆಂಡತಿಯನ್ನು ತವರಿಗೆ ಕಳುಹಿಸಿಬಿಟ್ಟರು.

ಕೆಲವು ದಿನಗಳ ತರುವಾಯ ದೇವದುರ್ಗ ತಾಲ್ಲೂಕಿನ ಲಿಂಗದ್ಹಳ್ಳಿ ಗ್ರಾಮದ ಅಲ್ಲಮ್ಮ ಎಂಬುವರನ್ನು ಹೆಂಡತಿಯಾಗಿ ಸ್ವೀಕರಿಸಿದರು.

ಮುಂದೆ ಹರಿಪ್ರೇರಣೆಯಿಂದ 'ರಾಮ', 'ಶ್ರೀರಾಮ', ಅಂಕಿತದಲ್ಲಿ ಕೀರ್ತನೆಗಳನ್ನು ರಚಿಸುತ್ತಾ ಪಂಢರಾಪುರ, ತಿರುಪತಿ, ಮೊದಲಾದ ತೀರ್ಥ ಕ್ಷೇತ್ರಗಳನ್ನು ಸಂದರ್ಶಿಸಿ ಸುಮಾರು ೮೦೦ ಕೀರ್ತನೆಗಳನ್ನು ರಚಿಸಿ, ಶ್ರೀರಾಮದಾಸರೆಂದೇ ಖ್ಯಾತರಾದರು.

ರಾಮದಾಸರು ಎಷ್ಟು ವರುಷ ಕಾಲ ಬದುಕಿದ್ದರೆಂಬುದಕ್ಕೆ ಖಚಿತ ಮಾಹಿತಿ ದೊರೆಯದಿದ್ದರೂ ಅವರ ಸಮಾಧಿ ಇರುವ ಲಿಂಗದ್ಹಳ್ಳಿಯ ಬಳಿ ಈಗಲೂ ಮಾರ್ಗಶಿರ ಬಹುಳ ದಶಮಿಯಂದು ಅವರ ಭಕ್ತ ವೃಂದದವರು ವಿಶೇಷವಾದ ಆರಾಧನೆಯನ್ನು ಆಚರಿಸಿಕೊಂಡು ಬರುತ್ತಿದ್ದಾರೆ.

## ಪಾವಂಜೆ ಲಕ್ಷ್ಮೀನಾರಣಪ್ಪಯ್ಯ

**ಪಾ**ವಂಜೆ ಲಕ್ಷ್ಮೀನಾರಣಪ್ಪಯ್ಯನವರು ದಾಸ ಸಾಹಿತ್ಯಕೆ ಉತ್ತಮ ಕೊಡುಗೆ ನೀಡಿದ್ದಾರೆ. ದಕ್ಷಿಣಕನ್ನಡದ ಮುಲ್ಕಿಯ ಬಳಿಯ ಆತ್ತೂರು ಎಂಬಲ್ಲಿ ಸ್ಥಾನಿಕ ಬ್ರಾಹ್ಮಣ ಸಮಾಜದ ವೆಂಕಟಕೃಷ್ಣಯ್ಯನವರ ಸುಪುತ್ರರಾದ ಪಾವಂಜೆ ಲಕ್ಷ್ಮೀನಾರಣಪ್ಪಯ್ಯನವರು ಮುಂದೆ ಪಾವಂಜೆ ಹರಿದಾಸರೆಂದೇ ಖ್ಯಾತರಾದರು. 'ಶಿವದ್ವಿಜ' ರೆಂದು ಹೇಳಿಕೊಂಡಿರುವ ಅವರು ಶೈವಬ್ರಾಹ್ಮಣರು. ಕಾಶಿಯ ವೈಷ್ಣವ ಮಠಾಧೀಶರಾಗಿದ್ದ ಗೌಡಸಾರಸ್ವತ ಬ್ರಾಹ್ಮಣ ಸಮಾಜದ ಧರ್ಮಗುರುಗಳಾಗಿದ್ದ ಭುವನೇಂದ್ರರ ಶಿಷ್ಯರಾದಮೇಲೆ ಇವರು ವೈಷ್ಣವಮತ ಸ್ವೀಕಾರಮಾಡಿ ಅನೇಕ ಕೀರ್ತನೆಗಳನ್ನು ರಚಿಸಿದ್ದಾರೆ. ಕನಕಪುರಂದರ ಮುಖ್ಯ ದಾಸರಂತೆ 'ಗುಣವೆನಗಿನಿತಿಲ್ಲ ಜನರ ವಿಡಂಬನಕೆ ದಾಸನಾದರು ಘನಕೃಪಾರ್ಣವನೆ ಕರುಣಿಸಬಾರದೇ' ಎನ್ನುವ ಇವರು ಹರಿ ಸರ್ವೋತ್ತಮನೆಂದು ಧರೆಗೆ ಸಾರುತ್ತಾ ಬಂದು, ಪರವೈಷ್ಣವ ಮತವ ಸ್ಥಿರಮಾಡಿ ಧರಣಿಯೊಳಗೆ ತಾತ್ಪರ್ಯ ನಿರ್ಣಯವೆಂಬ ಪರಮಗ್ರಂಥವಗೈದ 'ಗುರು ಮಧ್ವಾಚಾರ್ಯ' ರನ್ನು ಸ್ತುತಿಸಿದ್ದಾರೆ.

**ಶುಭಂ**

ಹರಿದಾಸರ ಪದ–ಪದ್ಯಗಳು ಸಾಧಕನ ಮಾರ್ಗದ ದೀವಟಿಗೆಗಳಿದ್ದಂತೆ. ಅವು ಸಾಮೂಹಿಕ ಬದುಕಿಗೆ ಜೀವಂತ ಶಕ್ತಿಯಾಗಿ ಭಕ್ತಿ ಪಂಥದ ಸಂಘಟನೆಗೆ ಬಹುದೊಡ್ಡ ಸಾಧನವಾಯಿತು. ಸರಳ ಕನ್ನಡ ಕೀರ್ತನೆಗಳ ಮೂಲಕ ಹರಿದಾಸರು ಸುಜ್ಞಾನವೆಂಬ ಅಮೃತದ ಗುಟುಕುಗಳನ್ನು ಕುಡಿಸಿ ಹೊಸದೊಂದು ಸಜ್ಜನ ಸಮಾಜದ ನಿರ್ಮಾಣಕ್ಕೆ ಕಾರಣರಾದರು. 'ಈಸಬೇಕು ಇದ್ದು ಜೈಸಬೇಕು' ಎಂದು ಧೈರ್ಯಸ್ಥೈರ್ಯಗಳ ಉತ್ಸಾಹೀ ಬದುಕಿನತ್ತ ಜನರನ್ನು ತಿರುಗಿಸಿದರು. 'ಮಾನವ ಜನ್ಮ ದೊಡ್ಡದು ಇದ ಹಾನಿ ಮಾಡಲಿಬೇಡಿ ಹುಚ್ಚಪ್ಪಗಳಿರಾ' ಎಂದು ಮಾನವ ಜೀವನದ ಮಹತ್ವ, ಸಾರ್ಥಕತೆಯನ್ನು ಮನನ ಮಾಡಿಕೊಟ್ಟರು.

ದಾಸರು ನುಡಿದದ್ದೆಲ್ಲ ನರಹರಿಯ ಹಾಡು. ಅವರು ನಡೆದದ್ದೆಲ್ಲಾ ತೀರ್ಥಯಾತ್ರೆ. ಅವರ ದೃಷ್ಟಿಯಲ್ಲಿ ಮದಮತ್ಸರಗಳ ಬಾಳು ನಿರರ್ಥಕ. ಹರಿಸ್ಮರಣೆಯ ಬದುಕೊಂದೇ ಸಾರ್ಥಕ.

(ಪ್ರಸ್ತಾವನೆಯಿಂದ)

ವಿಜಯ ಪ್ರಕಾಶನ
೬೮೫, ೧೩ನೇ ಅಡ್ಡ ರಸ್ತೆ
೨ನೇ ಹಂತ, ಗಿರಿನಗರ
ಬೆಂಗಳೂರು – ೫೬೦ ೦೮೫.

ಬೆಲೆ : ರೂ.೭೫/–
ದೂರವಾಣಿ :೬೭೨೨೭೩೧